# ನರ್ಮದಾಶಂಕರ

ಗುಲಾಬದಾಸ್ ಬ್ರೋಕರ್



K
891.471 809 2
N 167 R

K
891.471 809
2
N 167 R

ಭಾರತೀಯ ಸಾಹಿತ್ಯದ ನಿರ್ಮಾಣಕಾರರು

# ನರ್ಮದಾಶಂಕರ

ಮೂಲ ಲೇಖಕರು :

**ಗುಲಾಬದಾಸ್ ಬ್ರೋಕರ್**

ಅನುವಾದಕರು :

**ಹೆಚ್. ಎಸ್. ಪಾಟಿಲ್**

ಸಾಹಿತ್ಯ ಅಕಾದೆಮಿ

*Narmadashankara.*—Kannada translation by H. S. Patil Gulabdas Broker's monograph in English, Sahi Akademi, New Delh
SAHITYA AKADEMI
REVISED PRICE Rs. 15-00

© Gulabdas Broker

© Kannada Translation: Sahitya Akademi.

First Published: 1985.

K
891.471 809 2
N 167 R

ಸಾಹಿತ್ಯ ಅಕಾದೆಮಿ

ಪ್ರಧಾನ ಕಾರ್ಯಾಲಯ:
ರವೀಂದ್ರ ಭವನ, ೩೫, ಫಿರೋಜಶಾಹ ರಸ್ತೆ, ನವದೇಹಲಿ–೧೧೦೦೦೧.

ಪ್ರಾದೇಶಿಕ ಕಾರ್ಯಾಲಯಗಳು:
೨೯, ಎಲ್ಡಾಮ್ಸ್ ರಸ್ತೆ, ತೇನಾಂಪೇಟೆ, ಮದ್ರಾಸ್–೬೦೦೦೧೮.
ಬ್ಲಾಕ್ V-B, ರವೀಂದ್ರ ಸರೋಬರ್ ಸ್ಟೇಡಿಯಮ್, ಕಲಕತ್ತಾ–೭೦೦೦೨೯.
೧೭೨, ಮುಂಬಯಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್,
ಮುಂಬಯಿ–೪೦೦೦೧೪.

Library IIAS, Shimla
K 891.471 809 2 N 167 R
00117248

ನಾಲ್ಕು ರೂಪಾಯಿಗಳು.

Indian ... SHIMLA
117248
10.12.04

ಮುದ್ರಣ: ಶ್ರೀ ರಾಘವೇಂದ್ರ ಪ್ರಿಂಟರ್ಸ್, ಮೈಸೂರು–೫೭೦೦೦೪.

ಈ ಮಹಾವ್ಯಕ್ತಿಯನ್ನು

ಕುರಿತ ಅಧ್ಯಯನಕ್ಕೆ

ನನ್ನನ್ನೇ ಮೊದಲಿಗೆ

ಪರಿಚಯಿಸಿದ

**ಶ್ರೀಮತಿ ಸೋಫಿಯಾ ವಾಡಿಯಾ**

ಅವರಿಗೆ

# ನರ್ಮದಾಶಂಕರ

೧೯ ನೆಯ ಶತಮಾನದ ಮಧ್ಯದಷ್ಟರ ಭಾರತದಲ್ಲಿ ಬ್ರಿಟಿಷ್ ಅಧಿಕಾರವು ಪ್ರಬಲವಾಗಿ ಸ್ಥಾಪಿತವಾಗುವ ಮೊದಲು ಭಾರತೀಯರು ಬದುಕಿದ್ದ ಸ್ಥಿತಿಯು ಚಿಂತಾಜನಕವಾಗಿತ್ತು, ಕೆಲವಾರದಲ್ಲಿ ಹೃದಯದ್ರಾವಕವಾಗಿತ್ತು. ಅಜ್ಞಾನವು ಅಪರಿಮಿತವಾಗಿದ್ದು ಶಿಕ್ಷಣವು ಎಷ್ಟೂ ಇರಲಿಲ್ಲ. ಜನರ ಮನೋಭಾವವು ಕೂಡ ಊಳಿಗಮಾನ್ಯವಾಗಿತ್ತು, ಮಧ್ಯಯುಗೀನವೆನಿಸಿತ್ತು. ಅವರ ಸಾಮಾಜಿಕ ಜೀವನವು ಕ್ಷೀಣದೆಸೆಯನ್ನು ತಲುಪಿತ್ತು. ಸ್ತ್ರೀಯರಿಗೆ ಪ್ರಪಂಚದಲ್ಲಿ ದ್ವಿತೀಯ ಸ್ಥಾನವು ಕೂಡ ಸಿಗುತ್ತಿರಲಿಲ್ಲವೆಂದೇ ಅವರು ಶುಷ್ಕವಾದ ಜೀವನವನ್ನು ನಡೆಯಿಸುತ್ತಿದ್ದರು ; ದಿನವಿಡೀ ದುಡಿತ ಮತ್ತು ದಣಿವುಗಳಲ್ಲಿ ಜೀವಿಸುತ್ತಿದ್ದರು. ಕೊಳಚೆ ಮತ್ತು ಬೇನೆಗಳು ಎಲ್ಲ ಕಡೆಗೆ ತಾಂಡವವಾಡುತ್ತಿದ್ದವು. ಮೂಢನಂಬಿಕೆಗಳು ಎಲ್ಲರನ್ನು ತನ್ನ ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದಿತ್ತು. ಆಗ್ಗೆ ಉದಾರಮತದ ಅಥವಾ ವಿದ್ಯಾವಂತ ದೃಷ್ಟಿಯ ಅಸ್ತಿತ್ವವೇ ಇರಲಿಲ್ಲ.

ಆಗಿನ ಕಾಲದ ಗುಜರಾತದಲ್ಲಿ ಸೂರತವು ಪ್ರಮುಖವಾದ ನಗರವಾಗಿತ್ತು. ಆದರೆ ಅಲ್ಲಿಯೂ ಇದೇ ಪರಿಸ್ಥಿತಿಯು ಗೋಚರಿಸುತ್ತಿತ್ತು. ನಗರದಲ್ಲಿ ಇರುಳ-ಗತ್ತಲೆಯು ಹಬ್ಬಿದನಂತರ ಯಾರಿಗೂ ತಮ್ಮ ಮನೆಯನ್ನು ಬಿಟ್ಟು ಹೊರಗೆ ಹೋಗುವುದು ಕಠಿಣವಾಗಿತ್ತು. ಯಾರಿಗಾದರೂ ಹೊರಗೆ ಹೋಗಬೇಕಾಗಿದ್ದರೆ ಅವರು ತಮ್ಮ ಕೈಯಲ್ಲಿ ಹೊತ್ತಿಸಿದ ಮಶಾಲೆಯೊಂದನ್ನು ಹಿಡಿದುಕೊಂಡು ಹೊರಡಬೇಕಾಗಿತ್ತು. ಒಂದು ವೇಳೆ ಆ ಪಂಜು ಆರಿಹೋದರೆ, ಹಾಗೆ ಅನೇಕ ಬಾರಿ ಆಗುವದೂ ಇದ್ದಿತು, ಯಾಕೆಂದರೆ ಆ ದೀಪಕ್ಕೆ ರಕ್ಷಣೆಯನ್ನು ಕೊಡುವ ಯಾವ ಆಶ್ರಯವೂ ಅಲ್ಲಿ ಇರಲಿಲ್ಲ ಮತ್ತು ಸುತ್ತುಕಡೆಗೆ ಗಾಳಿಯು ಬೀಸುತ್ತಿದ್ದ ಕಾರಣ, ಹೊರಗೆ ಬಂದ ಪ್ರತಿಯೊಬ್ಬ ವ್ಯಕ್ತಿಯನ್ನು ಹೆದರಿಕೆಯು ಆವರಿಸುತ್ತಿತ್ತು ಮತ್ತು ಬಳಿಯಲ್ಲಿದ್ದ ಗಿಡ-ಮರಗಳಲ್ಲಿ ಭೂತ-ಸಂಚಾರವಿದ್ದಿತು. ಅತ್ತಿತ್ತದ ದಾರಿಗಳಲ್ಲೆಲ್ಲ ದೆವ್ವಗಳ ಅಧಿಷ್ಠಾನವಿದ್ದಿತು. ಇಪ್ಪತ್ತನೆಯ ಶತಕದ ಆಯ್.ಸಿ.ಎಸ್. ಅಧಿಕಾರಿಯಾಗಿದ್ದ ವಿನಾಯಕ ನಂದಶಂಕರ ಮೆಹತಾ ಅವರು, ೧೮೬೮ ರಲ್ಲಿ ಗುಜರಾತಿಯ ಮೊದಲ ಕಾದಂಬರಿಯನ್ನು ಬರೆದ ಅವರ ತಂದೆಯವರಾದ ನಂದಶಂಕರ ಮೆಹತಾ ಅವರ ಜೀವನಚರಿತ್ರೆಯಲ್ಲಿ ಸೂರತ ನಗರದಲ್ಲಿ ೧೯ ನೆಯ ಶತಮಾನದ ಆದಿಭಾಗದಲ್ಲಿದ್ದ ಸ್ಥಿತಿಗತಿಗಳನ್ನು ತಮ್ಮ ಕೃತಿಯಾದ ' ನಂದಶಂಕರ ಜೀವನ ಚಿತ್ರ ' ವೆಂಬ ಗ್ರಂಥದಲ್ಲಿ ವಿಶದವಾಗಿ ಚಿತ್ರಿಸಿದ್ದಾರೆ. ಆ ಹೊತ್ತಗೆಯ ೨೮-೨೯ ನೆಯ ಪುಟಗಳಲ್ಲಿ ಈ ಮಾತುಗಳಿವೆ :

"ರಾತ್ರಿಯು ಅಂಧಕಾರಮಯವೂ ಭಯಾನಕವೂ ಆಗಿದೆ. ಆಗಸದ ತುಂಬೆಲ್ಲ ಮನಸೂನ ಮಳೆಯ ಮೋಡಗಳು ಕರಾಳವಾಗಿಯೂ ದಟ್ಟವಾಗಿಯೂ ಹರಡಿ ಕೊಂಡಿವೆ; ಅದರಿಂದ ನಕ್ಷತ್ರಗಳ ಮಿಣುಕು ಪ್ರಕಾಶವು ಕೂಡ ಮಂದವಾಗಿದೆ. ದೇಶದಲ್ಲಿ ಇನ್ನು ನಗರ-ಸಭೆಗಳ ಸ್ಥಾಪನೆಯಾಗದ ಕಾರಣ ಮುಖ್ಯ ಬೀದಿಗಳಲ್ಲಿ ಕೂಡ ದೀಪಗಳ ಸೌಕರ್ಯವಿಲ್ಲ. ಆ ಮಾರ್ಗಗಳು ಕೂಡ ತಗ್ಗು-ದಿನ್ನೆಗಳಿಂದ ಕೂಡಿದ್ದು ಅನೇಕ ಕಡೆ ಒಡೆದುಹೋಗಿವೆ. ಒಬ್ಬ ತರುಣ ಹುಡುಗನು ಇಂತಹ ಒಂದು ದಾರಿಯಲ್ಲಿ ಕೈಯೊಳಗೆ ಕಂದೀಲನ್ನು ಹಿಡಿದುಕೊಂಡು ರಭಸದಿಂದ ಹೊರಟಿದ್ದಾನೆ. ಎಲ್ಲ ಕಡೆಗಳಲ್ಲಿ ರಾಕ್ಷಸ-ಭೂತ-ಪಿಶಾಚಿಗಳಿಂದ ತುಂಬಿದುದಾಗಿದೆ-ವಾತಾವರಣ. ಹೀಗೆ ಆತನು ತುಸು ಧೈರ್ಯದಿಂದ ಸಾಗಿದಂತೆ ಕಂಡರೂ, ಅವನ ಹೃದಯದ ಬಡಿತವು ವೇಗಪೂರ್ಣವಾಗಿದೆ ಮತ್ತು ಅವನ ನಡಿಗೆಯ ದ್ರುತಗತಿಯು ಆತನು ಆದಷ್ಟು ತೀವ್ರವಾಗಿ ಮನೆಯನ್ನು ಸೇರಬೇಕೆಂಬ ಮನೀಷೆಯನ್ನು ತಿಳಿಯಪಡಿಸುತ್ತದೆ. ಆ ಸಮಯದಲ್ಲಿ ಆತನ ಹಿಂಬದಿಯಿಂದ ಒಂದು ದನಿಯು ತೇಲಿಬರುತ್ತದೆ. "ದಯೆಯಿಟ್ಟು ಒಂದುಕ್ಷಣ ಮಾತ್ರ ತಡೆಯಿರಿ." ಅದು ಒಬ್ಬ ಸ್ತ್ರೀಯ ಧ್ವನಿಯಾಗಿತ್ತು. ಆ ಯುವಕನಿಗೆ ಆಶ್ಚರ್ಯ, ಗಾಬರಿ! ಆತನ ಧೈರ್ಯವು ಒಮ್ಮೆಲೆ ಕುಂದಿದಂತಾಗುತ್ತದೆ. "ಅಯ್ಯೋ ದೇವರೆ! ಅದು ಹೆರಿಗೆಯ ಮೊದಲು ಸತ್ತು ಹೋದ ಒಬ್ಬ ಹೆಂಗಸಿನ ಭೂತವಾಗಿರಬಹುದು." ಅವನ ಅವಯವಗಳೆಲ್ಲ ಮುರುಟಿಕೊಳ್ಳುತ್ತವೆ. ಅತ್ಯಂತ ಪರಿಶ್ರಮದಿಂದ ಆತನು ಎದೆಗುಂದದೆ ಗಾಯತ್ರೀ ಮಂತ್ರವನ್ನು ತನ್ನಲ್ಲಿಯೆ ಜಪಿಸುತ್ತ, ಆತನು ಆ ದನಿಯು ಬಂದ ಕಡೆ ನಡೆಯುತ್ತಾನೆ. ಅಲ್ಲಿ ಒಬ್ಬ ತರುಣ ಸ್ತ್ರೀಯು ಒಂದು ಕಟ್ಟಡದ ಹೊರಭಾಗದಲ್ಲಿ ಆರಿದ ದೀಪವೊಂದನ್ನು ಹಿಡಿದು ನಿಂತಿದ್ದು ಕಂಡರು. "ನನ್ನ ದೀಪವು ನಂದಿಹೋಗಿದೆ. ದಯೆಯಿಟ್ಟು ನಿಮ್ಮ ದೀಪದ ಕುಡಿಯಿಂದ ನನ್ನ ಬತ್ತಿಯನ್ನು ಹೊತ್ತಿಸಿರಿ" ಎಂದು ಆಕೆಯು ಬಿನ್ನವಿಸಿಕೊಂಡಳು. ಆ ದೀಪವು ಗಾಳಿಯಿಂದ ಆರಿಹೋಗಬಾರದೆಂದು ಆಕೆಯು ತನ್ನ ಸೀರೆಯಿಂದ ಅದನ್ನು ಮರೆಮಾಡುತ್ತಾಳೆ. ಆ ಹುಡುಗನು ತನ್ನ ಲಾಂದರಿನ ಮುಚ್ಚಳವನ್ನು ತೆಗೆದು ಆಕೆಯ ದೀಪವನ್ನು ಹೊತ್ತಿಸುತ್ತಾನೆ. ಆದರೆ ಅಷ್ಟರಲ್ಲಿ ಬಿರುಗಾಳಿಯ ಅಲೆಯೊಂದು ಬೀಸಿದ ಪರಿಣಾಮವಾಗಿ ಆ ಎರಡೂ ದೀಪಗಳು ಶಾಂತ ಆಗುತ್ತವೆ. ಅಲ್ಲಿಯವರೆಗೆ ಆ ತರುಣನು ಹೇಗೋ ಧೈರ್ಯದಿಂದ ಇದ್ದವನು ಆ ಕ್ಷಣ ಒಮ್ಮೆಲೆ ಭಯಗ್ರಸ್ತನಾಗಿ ಓಡಿಹೋಗುತ್ತಾನೆ."

ಇದೊಂದೆ ಮೂಢನಂಬಿಕೆಯಲ್ಲಿ ತಾಳಿದ ಉದಾರಹಣೆಯಾಗಿರಲಿಲ್ಲ. ರೇಲ್ವೆಗಳ ಸಂಚಾರವು ಮೊದಲು ಆರಂಭವಾದಾಗ ಜನತೆಗೆ ತಮ್ಮನ್ನು ಉಕ್ಕಿನ ಸರಪಳಿಗಳಿಂದ ಬಿಕಿದು ಕಟ್ಟುವ ಮಹಾರಾಕ್ಷಸ ಅದು ಎಂದು ಭಾಸವಾಗಿತ್ತು. ನರ್ಮದೆಯಂತಹ ಪವಿತ್ರ ನದಿಗೆ ಸೇತುವೆಯೊಂದನ್ನು ಕಟ್ಟಿದಾಗ್ಗೆ, ಧರ್ಮಭ್ರಷ್ಟವಾದ ಬ್ರಿಟಿಶ್ ಸರಕಾರವು ತಮ್ಮ ಅಮೋಘವಾದ ನದೀ-ದೇವತೆಯ ಪಾವಿತ್ರ್ಯವನ್ನು ಭಂಗಗೊಳಿಸುತ್ತಲಿದೆ

ಎಂದು ಅವರು ತಿಳಿದಿದ್ದರು. ಅಂತೆಯೆ ಆ ಸೇತುವೆಯ ಉದ್ಘಾಟನೆಯಾಗುವ ಕಾಲಕ್ಕೆ ಏನೊ ಒಂದು ಯಾಂತ್ರಿಕವಾದ ದೋಷದಿಂದ, ಆ ಸೇತುವೆಯನ್ನು ದಾಟ ಬೇಕಾಗಿದ್ದ ಎಂಜಿನು ನಡುವೆ ನಿಂತಿತೆಂದು ಅವರಿಗೆ ಅತ್ಯಂತ ಸಂತೋಷವಾಗಿತ್ತು. ಅವರೆಲ್ಲ ಒಕ್ಕೊರಲಿನಿಂದ ಕೂಗಿಕೊಂಡರು. "ತನ್ನ ಉದ್ವೇಗವನ್ನು ದೇವಿಯು ವ್ಯಕ್ತಪಡಿಸಿದ್ದಾಳಷ್ಟೆ!" ಆದರೆ ಆ ಎಂಜಿನು ಮತ್ತೆ ಮುಂದುವರಿದಾಗ ಅವರು ಮೂಕಸ್ತಂಭರಾದರು. ಒಮ್ಮೆಲೆ ತದ್ವಿರುದ್ಧವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ಇದೇನು ರಾಕ್ಷಸವಲ್ಲ; ಇದೊಂದು ಬಗೆಯ ದೈವೀಶಕ್ತಿಯಿರುತ್ತದೆ. ನಾವೆಲ್ಲರೂ ಅತ್ತ ಹೋಗಿ ಅದರ ಪೂಜೆಯನ್ನು ಮಾಡೋಣ" ಎಂದುಕೊಂಡರು ಅವರು. ಅವರು ನಿಜವಾಗಿಯೂ ಅದರ ಹತ್ತಿರ ಹೋಗಿ ಅದಕ್ಕೆ ಹೂವಿನ ಮಾಲೆಯನ್ನು ಹಾಕಿ, ಕುಂಕುಮ ತಿಲಕವನ್ನಿಟ್ಟರು. (ಮೇರಿ ಕಾರ್ಪೆಂಟರ್ ಅವರ ಕೃತಿ "ಭಾರತದಲ್ಲಿ ಆರು ತಿಂಗಳು" (೧೮೬೮) ಪು. ೨೭-೨೮).

ಈ ಬಗೆಯ ಮೂಢನಂಬಿಕೆಯ ಜೀವನದಲ್ಲಿ ಯಾರಾದರೂ ಸ್ವೈರವೃತ್ತಿಯಿಂದ ಇದ್ದು ಜನತೆಯ ಅಜ್ಞಾನದ ದುರ್ಲಾಭವನ್ನು ಪಡೆದರೆ ಆಶ್ಚರ್ಯವೇನೂ ಆಗ ಬೇಕಾಗಿಲ್ಲ. ಇಂತಹ ಕೆಲಸಕ್ಕೆ ಕೃಷ್ಣಪರಮಾತ್ಮನ ಸಾಕ್ಷಾತ್-ಮೂರ್ತಿಗಳೆಂದು ಯಾವ ಬಗೆಯ ಸಂಕೋಚವೂ ಇಲ್ಲದೆ ಸದಾ ಸಾರುತ್ತಿರುವ ಪುರೋಹಿತರಿಗಿಂತ ಯಾರು ಹೆಚ್ಚು ಅರ್ಹರು? ಅವರಲ್ಲಿ ಕೆಲವರಂತೂ ಅತ್ಯಂತ ಭ್ರಷ್ಟ ಯಜಮಾನನಿ ಗಿಂತ ಹೆಚ್ಚಿನ ಸೌಕರ್ಯಗಳನ್ನು ಅನುಭವಿಸುತ್ತಿದ್ದರು. ಅವರು ಜನರಿಗೆ ನೈತಿಕತೆ ಯನ್ನು ಬೋಧಿಸುತ್ತಿದ್ದರೂ ಸ್ವತಃ ಅತ್ಯಂತ ಹೀನವಾದ ಜೀವನವನ್ನು ನಡೆಯಿಸು ತ್ತಿದ್ದರು ಮತ್ತು ಆ ನಡತೆಗೆ ಶಾಸ್ತ್ರಾಧಾರಗಳನ್ನು ಕೂಡ ತೋರಿಸುತ್ತಿದ್ದರು. ಅವರ ಮತದ ಅನುಯಾಯಿಗಳು ಅವರ ಬೇಡಿಕೆಗಳನ್ನೆಲ್ಲ ವಿಧೇಯರಾಗಿ ಪೂರೈಸುತ್ತಿದ್ದರು ಮತ್ತು ಧರ್ಮಾಂಧ ಸ್ತ್ರೀಯರು ಪುರೋಹಿತರ ಪ್ರಲೋಭನಗಳಿಗೆ ಮರುಳಾಗಿ ಅವರಿಂದ ತಾವು ಧನ್ಯರಾದೆವೆಂದು ಭಾವಿಸುತ್ತಿದ್ದರು. ಈ ರೀತಿಯ ಅಧಿಕಾರ ಸ್ಥಾನದಲ್ಲಿದ್ದ ಅವರ ವರ್ಗಕ್ಕೆ ಯಾವ ಬಗೆಯ ವಿರೋಧವನ್ನು ಮಾಡುವದು ದುಸ್ತರವಾಗಿತ್ತಲ್ಲದೆ, ಪುರೋಹಿತರು ಕೂಡ ಸಮಾಜದ ಸುಧಾರಣೆಯ ಪ್ರಸ್ತಾಪವು ಬಂದಾಗ್ಗೆ ಅದಕ್ಕೆ ವಿಮುಖರಾಗುತ್ತಿದ್ದರು. ಎಲ್ಲ ಬಗೆಯ ಸ್ತ್ರೀ ಶಿಕ್ಷಣವನ್ನು ಅವರು ಅಲ್ಲಗಳೆಯುತ್ತಿದ್ದರಷ್ಟೆ ಅಲ್ಲದೆ, ಒಬ್ಬ ಹುಡುಗಿಯು ತುಸು ಓದು-ಬರೆಹಗಳ ಕಡೆಗೆ, ಹೊಸ ಬಾಳಿನ ಪ್ರಭಾವದಲ್ಲಿ, ಪ್ರಯತ್ನವನ್ನು ನಡೆಯಿಸಿದರೆ ಪುರೋಹಿತರು ಅಂತಹ ಹುಡುಗಿಯರಿಗೆ ಜೀವನದಲ್ಲಿ ವೈಧವ್ಯವು ಪ್ರಾಪ್ತವಾಗುವದು ಎಂದು ಗಂಭೀರವಾಗಿ ಸಾರುತ್ತಿದ್ದರು. ಆಗಿನ ಸಮಾಜ-ಜೀವನದಲ್ಲಿ ವೈಧವ್ಯವೆಂದರೆ ಅದೊಂದು ಶಾಪವೆನಿಸಿತ್ತು; ಜನರಿಗೆ ತಮ್ಮ ಹೆಣ್ಮಕ್ಕಳು ಅಥವಾ ಅಕ್ಕತಂಗಿಯರು ವಿಧವೆಯರಾಗುವದೊಂದು ದಾರುಣವಾದ ಅನುಭವವೆನಿಸಿತ್ತು ಎಂಬ ಕಾರಣದಿಂದ ಅವರಿಗೆ ತಮ್ಮ ಹೆಂಗಸರಿಗೆ ಯಾವ ಬಗೆಯ ವಿದ್ಯಾದಾನವೂ ಬೇಡವೆನಿಸಿತ್ತು.

ಅಂದು ಜಾತೀಯ ಭಾವನೆಯು ತೀವ್ರವೆನಿಸಿತ್ತು. ಆಆ ಜಾತಿಬಾಂಧವರಲ್ಲಿ ಅದು ಪ್ರಬಲವಾಗಿ ಬೇರೂರಿತ್ತು. ತಮ್ಮ ಜಾತಿಯ ಸಂಪ್ರದಾಯದಲ್ಲಿ ಒಂದಿಷ್ಟು ಭಂಗವನ್ನು ಯಾರಾದರೂ ತಂದರೆ, ಅವರು ಅತ್ಯಂತ ಕಷ್ಟಕ್ಕೆ ಗುರಿಯಾಗುತ್ತಿದ್ದರು. ತಮ್ಮ ಸಮಾಜದ ರೀತಿ-ನೀತಿಗಳ ವಿರುದ್ಧವಾಗಿ ಯಾರು ನಡೆದರೂ ಅವರಿಗೆ ಅತಿ ಕಠಿಣವಾದ ಶಿಕ್ಷೆಯಾಗುತ್ತಿತ್ತು. ಸಮಾಜದಲ್ಲಿ ಬಹಿಷ್ಕಾರ ಹೊಂದಿದವರಂತೂ ತೀರ ನಿಮ್ನವರ್ಗದವರಿಗೂ ಬಹಳ ಅವಮಾನವೆನಿಸುವಂತೆ ಪಶ್ಚಾತ್ತಾಪ ಮತ್ತು ಪರಿಶುದ್ಧಿಯ ಕ್ರಮಗಳ ಮೂಲಕ ತಿರುಗಿ ತಮ್ಮ ಸಮಾಜಕ್ಕೆ ಬರಬೇಕಾಗುತ್ತಿತ್ತು.

ಶಿಕ್ಷಣಕ್ರಮವಂತೂ ನಿಂತುಹೋಗಿತ್ತು. ಕೇವಲ ಸ್ವಲ್ಪ ಪ್ರಾಥಮಿಕ ಶಾಲೆಗಳು ಅಸ್ತಿತ್ವದಲ್ಲಿದ್ದರೂ ಅಲ್ಲಿ ಕೂಡ ಪ್ರಾರಂಭಿಕ ರೀತಿಯಲ್ಲಿ ಪ್ರಾಥಮಿಕ ವಿಷಯಗಳ ಪಾಠಗಳು ನಡೆಯುತ್ತಿದ್ದವು. ಹೊಸ ಆಡಳಿತದ ನಿಯಮಗಳ ಪ್ರಕಾರ ಶಿಕ್ಷಕರು ಬಹಿರಂಗವಾಗಿ ಪೃಥ್ವಿಯು ಗೋಲಾಕಾರವಾಗಿದೆ ಎಂದು ಬೋಧಿಸುತ್ತಿದ್ದರೂ ವೈಯಕ್ತಿಕವಾಗಿ ಅವರು ವಿದ್ಯಾರ್ಥಿಗಳಿಗೆಲ್ಲ ಅದೆಲ್ಲ ಸುಳ್ಳು ಮತ್ತು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಹೇಳಬೇಕಾದ ಮಾತು ಎಂದು ತಿಳಿಸುತ್ತಿದ್ದರು. "ಪೃಥ್ವಿಯು ನಿಜವಾಗಿಯೂ ದುಂಡಾಗಿದ್ದು, ಅದು ಸರಿಯುತ್ತಿದ್ದರೆ ನಮ್ಮ ಮನೆಗಳೆಲ್ಲ ನೆಲಸಮ ಆಗುತ್ತಿದ್ದವು" ಎಂದು ಅವರು ಹೇಳುತ್ತಿದ್ದರು. (ಮಹಿಪತಿರಾಮ ಅವರ 'ದಯಾರಾಮಚರಿತ್ರ', ಪು. ೮).

ಪಾಠಶಾಲೆಗಳಲ್ಲಿ ಕಲಿಸುತ್ತಿದ್ದ ವ್ಯಾಕರಣವು ಕೂಡ ಪ್ರಾಥಮಿಕ ಮಟ್ಟದಲ್ಲಿಯೆ ಇದ್ದು, ಅಲ್ಲಿ ಭಾಷೆ ಮತ್ತು ಸಾಹಿತ್ಯಗಳ ಉಪಯುಕ್ತ ಬೋಧನೆಯು ನಡೆಯುತ್ತಿರಲಿಲ್ಲ. ವಸ್ತುಸ್ಥಿತಿಯ ದೃಷ್ಟಿಯಿಂದ ನೋಡಿದರೆ, ನಿಜವಾದ ಗುಜರಾತೀ ಭಾಷೆಯ ಗದ್ಯವು ಅಸ್ತಿತ್ವದಲ್ಲಿಯೆ ಇರಲಿಲ್ಲ; ಹಾಗೆ ನೋಡಿದರೆ ಗುಜರಾತಿಯಲ್ಲಿ ಮಧ್ಯಯುಗದಲ್ಲಿ ಕೂಡ ಸಮೃದ್ಧವಾದ ಕಾವ್ಯ ರಚನೆಯಾಗಿತ್ತು. ಗುಜರಾತೀ ಭಾಷೆ ಮತ್ತು ಸಾಹಿತ್ಯಗಳ ಅಧ್ಯಯನಕ್ಕೆ ಯಾರೂ ಯಾವ ಮಹತ್ವವನ್ನೂ ಕೊಟ್ಟಿರಲಿಲ್ಲ; ಯಾಕೆಂದರೆ ಸಮಾಜದ ಗಣ್ಯರು ಅದರ ಬಗ್ಗೆ ಗೌರವವನ್ನು ತಳೆದಿರಲಿಲ್ಲ. ಅವರ ದೃಷ್ಟಿಯಿಂದ ವ್ರಜಭಾಷೆ, ಸಂಸ್ಕೃತ ಮತ್ತು ಪರ್ಶಿಯನ್‌ಗಳನ್ನು ಕಲಿಯುವುದೇ ಉಚ್ಚಶಿಕ್ಷಣದ ದ್ಯೋತಕವೆನಿಸಿತ್ತು.

ಈ ವಿಷಯವಾಗಿ ಇನ್ನೂ ಅನೇಕ ಮಾತುಗಳನ್ನು ಬರೆಯಬಹುದು; ಆದರೆ ಭಾರತದಲ್ಲಿ, ವಿಶೇಷವಾಗಿ ಗುಜರಾತದಲ್ಲಿ ೧೯ ನೆಯ ಶತಮಾನದ ಮಧ್ಯಕಾಲದಷ್ಟರಲ್ಲಿ ಬ್ರಿಟಿಷರ ಅಧಿಕಾರವು ಸಬಲವಾಗಿ ಸ್ಥಾಪಿತವಾಗುವ ಮುಂಚೆ, ಸಾಮಾನ್ಯವಾಗಿ ಸ್ಥಿತಿಯು ಹೀಗೆ ಇದ್ದಿತು ಎಂದು ಸ್ವಲ್ಪದರಲ್ಲಿ ಹೇಳಬಹುದು. ಆ ಶತಕದ ಮೊದಲನೆಯ ಪಾದದನಂತರ ಪರಿಸ್ಥಿತಿಯಲ್ಲಿ ಸಾವಕಾಶವಾದರೂ, ಸ್ಥಿರವಾಗಿ ಪರಿವರ್ತನವುಂಟಾ

ಯಿತು. ಇದಕ್ಕೆ ಕಾರಣವೆಂದರೆ ಬ್ರಿಟಿಷರ ಆಗಮನದಿಂದ ಸಮಾಜದಲ್ಲಿ ಹೊಸ ವಿಚಾರಗಳು, ಜೀವನ ಮತ್ತು ಚಿಂತನಗಳ ಹೊಸ ವಿಧಾನಗಳು, ದೇಶದ ಸಾಮಾಜಿಕ ವಲಯಗಳಲ್ಲಿ ಬರುತ್ತಿದ್ದ ಹೊಸ ಹೊಸ ಜನರು ತಾವು ಕೆಲಮಟ್ಟಿಗೆ ಅಳವಡಿಸಿ ಕೊಂಡ ವಿಚಾರಗಳ ಪ್ರಭಾವವು ಆಗಿತ್ತು. ಇಂತಹ ವ್ಯಕ್ತಿಗಳಲ್ಲಿ ಒಂದು ಪ್ರಮುಖವಾದುದು ದುರ್ಗಾರಾಮ ಮೆಹತಾಜಿ ಅವರದಾಗಿತ್ತು (೧೮೦೯-೧೮೭೮). ಅವರು ಒಬ್ಬ ಚಿಕ್ಕ ಉಪಾಧ್ಯಾಯರಾಗಿದ್ದರೂ ಹಿರಿಯ ಜೀವಿಯಾಗಿದ್ದರು. ಇನ್ನೊಬ್ಬರು ಕವಿ ದಲಪತರಾಮ ದಾಹ್ಯಾಭಾಯಿಯವರಾಗಿದ್ದರು (೧೮೨೦-೧೮೯೮). ಅವರು ಸಾಮಾಜಿಕ ಸ್ಥಿತಿಯಲ್ಲಿ ಕೆಲವು ಬದಲಾವಣೆಗಳನ್ನು ಮೊದಲು ಮಾಡಿದ್ದರು ಮತ್ತು ಅದರಿಂದ ಜನತೆಯು ತಮ್ಮ ಬಾಳಿನಲ್ಲಿ ಕವಿದ ಅಪಮಾನ ಮತ್ತು ಅಜ್ಞಾನಗಳ ಕತ್ತಲೆಯಿಂದ ಹೊರಗೆ ಬರಬೇಕೆಂದು ಮೆಲ್ಲನೆ ಕಣ್ಣು ತೆರೆಯಿತು. ಹೊಸ ವಿಧಾನದಂತೆ ಶಿಕ್ಷಣ ಕ್ರಮವು ಆಗ್ಗೆಯೆ ಆರಂಭವಾಗಿದ್ದು ಆ ಕ್ಷೇತ್ರವು ಒಬ್ಬ ಧೀರ ವ್ಯಕ್ತಿಯು ತನ್ನ ಕಲ್ಪನೆ ಮತ್ತು ಕ್ರಿಯಾಶೀಲತೆಗಳಿಂದ ಮುಂದೆ ಬಂದು, ಆ ಪರಿಸ್ಥಿತಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಇಡಿಯ ವಾತಾವರಣವನ್ನು ಕ್ರಾಂತಿ ಗೊಳಗಾಗುವಂತೆ ಹೆಣಗಲಿಕ್ಕೆ ಅತ್ಯಂತ ಅನುಕೂಲವಾಗಿತ್ತು.

ಇಂತಹ ವ್ಯಕ್ತಿಯು ಬರಲಿಕ್ಕೆ ತಡಹಿಡಿಯಲಿಲ್ಲ. ಅವರು ಗುಜರಾತದ ಸೂರತ ನಗರದಲ್ಲಿ ೧೮೩೩ನೆಯ ವರ್ಷದ ಆಗಸ್ಟ್ ೨೪ನೆಯ ದಿನಾಂಕ ಜನಿಸಿದರು. ಅವರ ಹೆಸರೇ ನರ್ಮದಾಶಂಕರ ಲಾಲಶಂಕರ ದವೆ.

## ೨

ನರ್ಮದಾಶಂಕರನು ಸೂರತದಲ್ಲಿ ಜನಿಸಿದ್ದರೂ ಅವನ ಬಾಲ್ಯ ಜೀವನವು ಹೆಚ್ಚಾಗಿ ಸೂರತ ಮತ್ತು ಮುಂಬಯಿಗಳ ನಡುವೆಯೆ ಕಳೆಯಿತು. ಅವನು ಮೊದಲು ಪಾಠಶಾಲೆಯನ್ನು ಸೇರಿದುದೂ ಮುಂಬಯಿಯಲ್ಲಿಯೆ. ಅದು ಆದುದು ಹೀಗೆ.

ಅವರ ತಂದೆಯವರಾದ ಲಾಲಶಂಕರ ದವೆಯವರು ಸೂರತದ ಒಂದು ಸಾಮಾನ್ಯ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಜಾತಿಯಿಂದ ನಾಗರ-ಬ್ರಾಹ್ಮಣ ರಾಗಿದ್ದುದರಿಂದ ತುಸು ವಿದ್ಯಾಭ್ಯಾಸದ ಪರಂಪರೆಯಲ್ಲಿ ಬೆಳೆದಿದ್ದರು. ಅವರಿಗೆ ಗುಜರಾತಿಯಲ್ಲಂತೂ ಸ್ವಾಭಾವಿಕವಾಗಿಯೆ ಪರಿಣತಿಯಿದ್ದಿತಲ್ಲದೆ ಸಂಸ್ಕೃತವನ್ನು ಕೆಲಮಟ್ಟಿಗೆ ತಿಳಿದವರಾಗಿದ್ದರು. ಅವರ ಹಸ್ತಾಕ್ಷರ ಮಾತ್ರ ಅಪ್ರತಿಮವಾಗಿತ್ತು.

ಆಗಿನ ಕಾಲದಲ್ಲಿ ಎಲ್ಲ ಮುದ್ರಣವು ಕಲ್ಲಚ್ಚಿನಲ್ಲಿ ಜರುಗುತ್ತಿದ್ದ ಕಾರಣ ಸುಂದರವಾದ ಹಸ್ತಾಕ್ಷರವಿದ್ದ ಜನರಿಗೆ ಆಗ್ಗೆ ಅತ್ಯಂತ ಮನ್ನಣೆಯಿದ್ದಿತು. ಕ್ಯಾಪ್ಟನ್ ಜರ್ವಿಸ್‌ನು ಆಗ್ಗೆ ಮುಂಬಯಿಯಲ್ಲಿ ಕೆಲವು ಪಠ್ಯಪುಸ್ತಕಗಳ ರಚನೆಯಲ್ಲಿ ತೊಡಗಿದ್ದು,

ಲಕ್ಷಣವಾದ ಕೈಬರೆಹವಿದ್ದ ಯಾರಾದರೂ ಆತನಿಗೆ ಸಹಾಯಕ್ಕಾಗಿ ಬೇಕಾಗಿದ್ದರು. ಅಂತೆಯೆ ಆತನು ಸೂರತದಲ್ಲಿ ನ್ಯಾಯಾಧೀಶನಾಗಿದ್ದ ಜಾನ್ಸನ್ ಎಂಬುವನಿಗೆ ಪತ್ರ ಬರೆದು ಗುಜರಾತಿಯಲ್ಲಿ ಶುದ್ಧವಾಗಿಯೂ ಸುಂದರವಾಗಿಯೂ ಬರೆಯಬಲ್ಲವರಿಗಾಗಿ ಕೇಳಿಕೊಂಡನು. ಅಂತಹವರಿಗೆ ಆತನು ಮುಂಬಯಿಯಲ್ಲಿ ಒಂದು ಕೆಲಸವನ್ನು ಕೊಡುವಂತಿತ್ತು. ಆ ಉದ್ದೇಶದಿಂದ ಜಾನ್ಸನ್‌ನು ಸೂರತದಲ್ಲಿ ಒಂದು ಸಾರ್ವಜನಿಕ ಪರೀಕ್ಷೆಯನ್ನು ನಡೆಯಿಸುವುದಾಗಿ ಸಾರಿದ್ದನು. ಮಿಕ್ಕ ಅನೇಕ ಜನರಂತೆ ಲಾಲಶಂಕರ ದವೆಯೂ ಕೂಡ ಆ ಪರೀಕ್ಷೆಗಾಗಿ ಕುಳಿತುಕೊಂಡನು. ಆ ಕೆಲಸಕ್ಕೆಂದು ಆಯ್ಕೆಯಾದ ಹತ್ತು ಜನರಲ್ಲಿ ಅವನ ಹೆಸರೂ ಬಂದಿತು. ಆದರೆ ಅದೊಂದು ಕ್ಲಿಷ್ಟವಾದ ಸಮಸ್ಯೆಯಾಯಿತು. ಅವನ ತಂದೆಯ ಆರೋಗ್ಯ ಸರಿಯಾಗಿರಲಿಲ್ಲ ಮತ್ತು ಆತನು ಹಾಸಿಗೆಯನ್ನು ಹಿಡಿದಿದ್ದ ಕಾರಣ, ಆತನ ತಾಯಿಯು ತನ್ನ ಮಗನು ಕೆಲಸಕ್ಕಾಗಿ ದೂರದ ಮುಂಬಯಿಗೆ ಹೋಗಬೇಕೆಂದು ಬಯಸಲಿಲ್ಲ. ಆಗಿನ ಕಾಲದ ಪರಿಸ್ಥಿತಿಯಲ್ಲಿ ಆ ಕೆಲಸಕ್ಕೆ ಕೊಡಮಾಡಿದ ಮುವ್ವತ್ತು ರೂಪಾಯಿಗಳ ತಿಂಗಳ ಸಂಬಳವು ಆಕರ್ಷಕವಾಗಿದ್ದರೂ ಆತನ ತಾಯಿಯು ಅದಕ್ಕೆ ಒಪ್ಪಿಗೆಯನ್ನು ಕೊಡದಿದ್ದ ಕಾರಣ ಆತನು ಆ ಕೆಲಸವನ್ನು ನಿರಾಕರಿಸುವ ಸ್ಥಿತಿಯಲ್ಲಿದ್ದನು. ಆ ಸಮಯದಲ್ಲಿ ಆತನ ತಂದೆಯ ಸಹೋದರನ ಮಗನೊಬ್ಬನು ಮುಂದೆ ಬಂದನು. ಆತನು ಆ ಕುಟುಂಬಕ್ಕೆ ಆರು ಸಾವಿರ ರೂಪಾಯಿಯಷ್ಟು ದೊಡ್ಡ ಹಣವನ್ನು ಸಾಲವಾಗಿ ಕೊಟ್ಟಿದ್ದನು ಮತ್ತು ಈ ತರುಣನು ಮನೆಯವರೆಗೆ ಬಂದ ಕೆಲಸವನ್ನು ಬಿಟ್ಟುಕೊಟ್ಟರೆ ತನ್ನ ದುಡ್ಡನ್ನು ತಿರುಗಿ ಪಡೆಯುವ ಬೇರೆ ಯಾವ ಲಕ್ಷಣವನ್ನು ಆತನು ಕಾಣಲಿಲ್ಲ. ಅವನು ಆ ಪರಿವಾರದ ಮೇಲೆ ಸಿಡುಕು ಮಾಡಿ, ಅವರನ್ನೆಲ್ಲ ಮೂದಲಿಸಿದನು. ಅವರೆಲ್ಲರೂ ಅತ್ತ ತಮ್ಮ ಮನೆಗೆ ಹೋದರು. ಇತ್ತ ಆ ಯುವಕನು ಆ ಕೆಲಸವನ್ನು ಕೈಕೊಳ್ಳುವಂತೆ ನಿರ್ಧರಿಸಿದನು.

ಅಂತು ನರ್ಮದಾಶಂಕರನು ಪಾಠಶಾಲೆಗೆ ಹೋಗಬೇಕಾದವಯಸ್ಸನ್ನು ತಲುಪುವಷ್ಟರಲ್ಲಿ ಲಾಲಶಂಕರನು ಮುಂಬಯಿಯಲ್ಲಿದ್ದನು. ಆತನನ್ನು ಒಂದು ಚಿಕ್ಕ ವಿದ್ಯಾಲಯಕ್ಕೆ ಕಳಿಸಲಾಯಿತು ಮತ್ತು ಆತನು ಕೆಲವು ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿದನಲ್ಲದೆ, ತನ್ನ ಅಭ್ಯಾಸವನ್ನು ಮೆಚ್ಚಿಕೊಂಡಿದ್ದನು. ಆದರೆ ಆತನ ವಿದ್ಯಾಕ್ರಮವು ಸರಿಯಾಗಿ ಸಾಗಲಿಲ್ಲ; ಯಾಕೆಂದರೆ ಆಗಾಗ್ಗೆ ಅವನು ಮುಂಬಯಿ ಮತ್ತು ಸೂರತಗಳ ನಡುವೆ ಅಲೆದಾಡಬೇಕಾಗಿತ್ತು. ಸೂರತದಲ್ಲಿ ಆತನು ಅಕ್ಷರಜ್ಞಾನದ ವರ್ಗವನ್ನು, ವರ್ಣಮಾಲೆಯ ಅಕ್ಷರವೊಂದನ್ನು ಸರಿಯಾಗಿ ಉಚ್ಚರಿಸಲಾರದ ಕಾರಣ, ದಾಟದಾದನು. ಆದರೆ ಒಮ್ಮೆ ಆ ತೊಡಕನ್ನು ಮೀರಿದ ನಂತರ ಆತನ ಅಧ್ಯಯನವು ಸೂರತ ಮತ್ತು ಮುಂಬಯಿಯೆರಡರಲ್ಲಿಯೂ ಸುಗಮವಾಗಿ ಸಾಗಿತು. ಪಾಠಶಾಲೆಯಲ್ಲಿ ಆತನು ಕೆಲವು ಪಾರಿತೋಷಕಗಳನ್ನು ಪಡೆದನು ಮತ್ತು ಭೂಗೋಲ ಹಾಗೂ ಜ್ಯೋತಿಶ್ಶಾಸ್ತ್ರಗಳ ವ್ಯಾಸಂಗದಲ್ಲಿ ಅಭಿರುಚಿಯುಳ್ಳವ

ನಾಗಿದ್ದನು. ಮುಂದೆ ಅವನ ಕೆಲವು ಕವನಗಳಲ್ಲಿ ಪ್ರತಿಬಿಂಬಿತವಾದ ಅಮಿತ ಆನಂದವನ್ನು ಆತನು ಆ ಅಭ್ಯಾಸದಿಂದ ಪಡೆದನು. ಕೆಲಜನ ಮಹಾರಾಷ್ಟ್ರೀಯ ಬ್ರಾಹ್ಮಣರಿಂದ ಅವನು ಹಲವು ವೇದಗಳ ಅಧ್ಯಯನವನ್ನು ಕೈಗೊಂಡರೂ ಅದರಿಂದ ಅವನಿಗೆ ಹೆಚ್ಚು ಪ್ರಯೋಜನವೇನೂ ಆಗಲಿಲ್ಲ. ಅಂತು ಮುಂದೆ ಅವನು ತೊಡಗಿದ ಶಾಸ್ತ್ರಗಳ ವ್ಯಾಸಂಗಕ್ಕೆ ಈ ಅವಧಿಯಲ್ಲಿ ಬಂಧುರವಾದ ಬುನಾದಿಯು ನಿರ್ಮಿತವಾಯಿತು.

ಅವನ ಹನ್ನೊಂದನೆಯ ವರ್ಷದವರೆಗೆ ಈ ಎಲ್ಲ ಶಾಲೆಗಳಲ್ಲಿ ಅವನ ವಿದ್ಯಾರ್ಜನೆಯು ನಡೆಯಿತು. ಆಗ್ಗೆ ಅವನಲ್ಲಿ ಜ್ಞಾನಸಾಧನದ ವಿಷಯವಾಗಿ ಅತ್ಯಂತ ಉತ್ಸಾಹವೂ, ಬಹುಮಾನಗಳನ್ನೂ ಮತ್ತು ಪಾರಿತೋಷಕಗಳನ್ನು ಪಡೆಯು ವಲ್ಲಿ ಹೆಚ್ಚಿನ ಅರ್ಹತೆಯೂ, ಅಗಾಧವಾದ ಒಂದು ಬಗೆಯ ಮುಖಹೀನ ಸ್ವಭಾವವೂ ತಲೆದೋರಿದವು. ಅವನ ಈ ಬಗೆಯ ಸಂಕೋಚವು ಚಿಕ್ಕತನದಲ್ಲಿ ಕೇವಲ ವಿದ್ಯಾರ್ಜನೆಯ ವಿಷಯವಾಗಿಯಷ್ಟೆ ಹರಡಿಕೊಂಡಿರದೆ ಉಳಿದ ಕ್ಷೇತ್ರಗಳನ್ನೂ ಅದು ವ್ಯಾಪಿಸಿಕೊಂಡಿತ್ತು. ಜನರ ಎದುರಿನಲ್ಲಿ ಆತನು ಮಾತನಾಡುತ್ತಿರಲಿಲ್ಲವಾದರೂ ಯಾವುದೊಂದು ಕಾರ್ಯವನ್ನೂ ಉತ್ತಮರೀತಿಯಲ್ಲಿ ಕೈಕೊಳ್ಳುವುದು ಅವನಿಗೆ ವಾಡಿಕೆಯಾಗಿತ್ತು. ಆ ಕೆಲಸವು ತಾನೆಣಿಸಿದಂತೆ ಆಗದಿದ್ದರೆ, ಅವನು ಜಗಳಾಡು ತ್ತಿರಲಿಲ್ಲ ಅಥವಾ ಗುಲ್ಲನ್ನು ಎಬ್ಬಿಸುತ್ತಿರಲಿಲ್ಲ; ಆದರೆ ಮುಖದ ಮೇಲೆ ಅಸಂತೋಷದ ಛಾಯೆಯನ್ನು ಹರಡಿಕೊಂಡು ಅವನು ಒಂದು ಮೂಲೆಯಲ್ಲಿ ತುಟಿ ಬಿಚ್ಚದೆ ಕುಳಿತಿರು ತ್ತಿದ್ದನು. ಆಗಿನ ದಿನಗಳಲ್ಲಿ ಅವನನ್ನು ಕಿರಿಯದವರಾರಾದರೂ ಎದುರಿಸಿದರೆ, ಅವನು ನಾಚಿಕೊಂಡು ಅವರಿಂದ ದೂರವಾಗಿ ತಾಯಿಯ ಹಿಂಬದಿಯಲ್ಲಿ ಅಡಗಿ ಕೊಳ್ಳುತ್ತಿದ್ದನು. ಆತನ ತಾಯಿಯು ಮಾತ್ರ ಅತ್ಯಂತ ಧೈರ್ಯದ ಮಹಿಳೆ ಯಾಗಿದ್ದಳು. ಒಮ್ಮೆ ಒಬ್ಬ ತೋರಿಕೆಯ ಸಾಧುವು ತನ್ನ ಗಂಡನ ಮುಂದೆ ಬಾಯೊಳಗಿಂದ ಹೊಗೆಯನ್ನು ಹೊರಡಿಸುವದೇ ಮೊದಲಾದ ಯುಕ್ತಿಗಳನ್ನು ನಡಿಸಿ, ಅವನ ಮೇಲೆ ಪ್ರಭಾವ ಬೀರಿದಾಗ್ಗೆ ಆಕೆಯ ಪತಿಯು ಆ ಸಾಧುವಿಗೆ ಬಟ್ಟೆ-ಬರೆ ಗಳನ್ನು ಕೊಟ್ಟು ಅವನನ್ನು ಸಂತೋಷಗೊಳಿಸಬೇಕೆಂದು ಹೇಳಿದಾಗ್ಗೆ ಆಕೆಯು ಆ ವೇಷದ ವ್ಯಕ್ತಿಯನ್ನು ಓಡಿಸಿಬಿಟ್ಟಿದ್ದಳು. ಆಕೆಗೆ ಆ ಸಾಧುವಿನ ಆಟವೆಲ್ಲ ತಿಳಿದು ಆಕೆಯು ಅವನನ್ನು ಹೆದರಿಸಲಾಗಿ ಅವನು ಓಡಿಯೆ ಹೋಗಿದ್ದನು— ಜೀವದಿಂದ ಉಳಿಯಬೇಕೆಂದು! ತನ್ನ ಆತ್ಮಚರಿತ್ರೆಯಲ್ಲಿ ಈ ಘಟನೆಯನ್ನು ವಿಶದವಾಗಿ ವರ್ಣಿಸಿದ ನರ್ಮದಾಶಂಕರನು ಮುಂದೆ ತನ್ನ ಬಾಳಿನಲ್ಲಿ ಧಾರ್ಮಿಕ ಮತ್ತು ಇತರ ವೇಷಧಾರಿಗಳನ್ನು ಎದುರಿಸುವಾಗ್ಗೆ ಈ ಸನ್ನಿವೇಶದಿಂದ ಕಲಿತ ಪಾಠದಿಂದ ಬಹುವಾಗಿ ಪ್ರಯೋಜನವನ್ನು ಪಡೆದಿರಲಿಕ್ಕೆ ಸಾಕು.

ಅಂದಿನ ಪರಂಪರೆಗೆ ಅನುಗುಣವಾಗಿ ನರ್ಮದಾಶಂಕರನು ತನ್ನ ಹನ್ನೊಂದನೆಯ ವಯಸ್ಸಿನಲ್ಲಿ ಸೂರತದ ಸೂರಜರಾಮಶಾಸ್ತ್ರಿಯವರ ಮಗಳನ್ನು ಮದುವೆಯಾದನು.

ಅವನ ಪತ್ನಿಯಾದವಳು ತಕ್ಕ ವಯಸ್ಸನ್ನು ತಲಪುವವರೆಗೆ ತಾಯಿಯ ಮನೆಯಲ್ಲಿಯೆ ಇದ್ದುದರಿಂದ ಅವನ ಜೀವನದಲ್ಲಿಯಾಗಲಿ, ವ್ಯವಸಾಯದಲ್ಲಿಯಾಗಲಿ ಯಾವ ಬಗೆಯ ಪರಿಣಾಮವೂ ಆಗಲಿಲ್ಲ. ಮದುವೆಯಾಗಿದ್ದರೂ ಕೂಡ ಆ ಯುವಕನು ತನ್ನ ಶಿಕ್ಷಣವನ್ನು ಕ್ರಮವಾಗಿ ಮುಂದುವರಿಸಿದನು.

ದೇಶೀಯ ಶಾಲೆಯಲ್ಲಿ ಅವನು ತನ್ನ ಶಿಕ್ಷಣವನ್ನು ಮುಗಿಸಿದ ತರುವಾಯ ಆತನು ತಾನು ಹನ್ನೊಂದು ವರ್ಷ ಮತ್ತು ನಾಲ್ಕು ತಿಂಗಳ ವಯಸ್ಸಿನಲ್ಲಿ ಇಂಗ್ಲಿಶ್ ಪಾಠಶಾಲೆಯೊಂದನ್ನು ಸೇರಿದನು. ಈ ವಿದ್ಯಾಲಯದಲ್ಲಿ ಕೆಲ ಅಧ್ಯಾಪಕರು ಶಿಷ್ಯ ವೃತ್ತಿಗಳಿಗಾಗಿ ಸ್ಪರ್ಧಿಸುತ್ತಿದ್ದ ವಿದ್ಯಾರ್ಥಿಗಳಿಗಾಗಿ ವಿಶಿಷ್ಟ ವರ್ಗಗಳನ್ನು ನಡೆಯಿಸು ತ್ತಿದ್ದರು. ಇದರಿಂದ ಅವನಿಗೆ ಅತ್ಯಂತ ಲಾಭವಾಯಿತು. ಯಾಕೆಂದರೆ ಶ್ರೀ ಗಹಾಮ್ ಮತ್ತು ಶ್ರೀ ರೀಡ್ ಎಂಬ ಶಿಕ್ಷಕರು ಕಲಿಸುತ್ತಿದ್ದ ವಿಷಯಗಳಲ್ಲಿ ಆತನು ಯಾವಾಗಲೂ ಪರೀಕ್ಷೆಗಳಲ್ಲಿ ಮೊದಲನೆಯ ಸ್ಥಾನದಲ್ಲಿ ಇರುತ್ತಿದ್ದುದರಿಂದ ಅವನು ಆ ಶಿಕ್ಷಕರ ಮೆಚ್ಚಿನಶಿಷ್ಯನಾಗಿದ್ದನು. ವಿದ್ಯಾರ್ಥಿ ದೆಸೆಯಲ್ಲಿ ಆತನಲ್ಲಿ ಮೂಡಿದ ಆತ್ಮವಿಶ್ವಾಸದ ನಿದರ್ಶನವೊಂದನ್ನು ಆತನ ಆಗಿನ ಜೀವನದಲ್ಲಿ ಘಟಿಸಿದ ಒಂದು ಸನ್ನಿವೇಶವು ತಿಳಿಸುತ್ತದೆ. ಶ್ರೀ ಬ್ಲ್ಯಾಕ್‌ವೆಲ್ ಎಂಬ ಶಿಕ್ಷಕರೊಬ್ಬರು ತಮ್ಮ ವರ್ಗದಲ್ಲಿ ಗಣಿತವನ್ನು ಬೋಧಿಸುತ್ತಿದ್ದರು. ನರ್ಮದಾಶಂಕರನು ಬೀಜಗಣಿತ ಪ್ರಮೇಯವನ್ನು ಸರಿಯಾಗಿ ಬಿಡಿಸಿದ್ದರೂ ಅದಕ್ಕೆ ಆತನು ಬಳಸಿದ ರೀತಿಯು ಶಿಕ್ಷಕರು ಬೋಧಿಸುದುದೇ ಆಗಿರಲಿಲ್ಲ. ಉಪಾಧ್ಯಾಯರು ಆ ಪ್ರಮೇಯವನ್ನು ಸರಿಯಾಗಿ ಬಿಡಿಸಿಲ್ಲ ಎಂದು ಅದನ್ನು ನಿರಾಕರಿಸಿದರು. ಆದರೆ ಈ ತರುಣನು ತಾನು ಮಾಡಿದುದು ಸರಿ ಮತ್ತು ತಮ್ಮ ಶಿಕ್ಷಕರು ಹೇಳಿದುದು ತಪ್ಪು ಎಂದು ಭಾವಿಸಿದನು ಮತ್ತು ಮೇಲಿನ ಹುದ್ದೆಯಲ್ಲಿದ್ದ ಶ್ರೀ ಮ್ಯಾಕ್‌ಡೂಗಲ್ ಎಂಬವರಲ್ಲಿ ಅರಿಕೆಯನ್ನು ಮಾಡಿಕೊಂಡನು. ಆ ಸದ್‌ಗೃಹಸ್ಥನಿಗೆ ಈ ಬಾಲಕನು ಮಾಡಿದುದು ಸರಿ ಮತ್ತು ಅವನ ಅಧ್ಯಾಪಕರ ದಾರಿಯು ತಪ್ಪು ಎಂಬುದು ತಿಳಿದು ಆ ಬಗ್ಗೆ ವಿಶದವಾಗಿ ಅವರು ವ್ಯಕ್ತಗೊಳಿಸಿದರು. ಈ ಸನ್ನಿವೇಶದಿಂದ ಆ ತರುಣನ ಮನಸ್ಸಿನಲ್ಲಿ ತುಂಬ ಆತ್ಮವಿಶ್ವಾಸವು ಮನೆಮಾಡಿತು.

ನರ್ಮದಾಶಂಕರನು ಈ ವಿದ್ಯಾಲಯದಲ್ಲಿ ಅಯ್ದು ವರ್ಷಗಳವರೆಗೆ ಓದಿ ಪರೀಕ್ಷೆಯಲ್ಲಿ ಮೂರನೆಯ ಸ್ಥಾನವನ್ನು ಪಡೆದು ಕ್ಲೆಯರ್ ಶಿಷ್ಯವೃತ್ತಿಯನ್ನು ಗಳಿಸಿದನು. ಆ ಅವಧಿಯಲ್ಲಿ ಅವನು ಕಾವ್ಯ ಮತ್ತು ಬೀಜಗಣಿತ, ಚರಿತ್ರೆ ಮತ್ತು ಭೂಮಿತಿ ವಿಷಯಗಳಲ್ಲಿ ಹೆಚ್ಚಿನ ಸಂತೋಷವನ್ನು ಸವಿಯುತ್ತಿದ್ದನು. ತನ್ನ ಅಭ್ಯಾಸದಲ್ಲಿ ಅತ್ಯಂತ ಆಸಕ್ತಿ ಮತ್ತು ಶ್ರಮವನ್ನು ವಹಿಸುತ್ತಿದ್ದುದರಿಂದ ಆತನು ತನ್ನ ಕರ್ತವ್ಯದಲ್ಲಿ ದುರ್ಲಕ್ಷ್ಯದಿಂದ ಇರುತ್ತಿದ್ದನು ಎಂದು ಯಾರೂ ಆತನನ್ನು ದೂಷಿಸುತ್ತಿರಲಿಲ್ಲ. ತದ್ವಿರುದ್ಧವಾಗಿ ಆತನು ಒಂದು ಪರೀಕ್ಷೆಯಲ್ಲಿ

ಹದಿನಾರು ರೂಪಾಯಿಗಳ ಬೆಲೆಯ ಪುಸ್ತಕಗಳನ್ನು ಸಂಪಾದಿಸಿ, ಆ ಹಣದಿಂದ ಕಾವ್ಯದ ಗ್ರಂಥಗಳನ್ನು ಕೊಂಡುಕೊಂಡನು ; ಜೊತೆಗೆ ಇತಿಹಾಸ ಮತ್ತು ಭೂಮಿತಿಯ ಪುಸ್ತಕಗಳನ್ನು ತಂದನು. ಮುಂದಿನ ಬಾಳಿನಲ್ಲಿ ಆತನಿಗೆ ಇವೆಲ್ಲ ವಿಷಯಗಳಲ್ಲಿ ಆಸ್ಥೆಯುಳ್ಳ ತನ್ನ ಜೀವನವನ್ನು ರೂಪಿಸಿಕೊಳ್ಳಲು ಇವೆಲ್ಲ ಗ್ರಂಥಗಳು ಪ್ರಮುಖ ಪಾತ್ರವನ್ನು ವಹಿಸಿರಲಿಕ್ಕೆ ಸಾಕು.

ಇದೇ ಸಮಯದಲ್ಲಿ ಅವನು ತನ್ನ ರೀತಿ-ನೀತಿಗಳಲ್ಲಿ ಹೆಚ್ಚಿನ ಶಿಸ್ತನ್ನು ಅಳವಡಿಸಿಕೊಂಡಿಬೇಕು. ತನ್ನ ಬದುಕಿನ ಒಂದು ದಿನವನ್ನು ಆತನು ಹೀಗೆ ವರ್ಣಿಸುತ್ತಾನೆ :

"ನಾನು ಪ್ರತಿದಿನ ಬೆಳಗಿನ ನಾಲ್ಕು ಗಂಟೆಗೆ ನನ್ನ ತಂದೆಯ ಸಂಗಡ ಏಳುತ್ತಿದ್ದೆನು. ಹಿಂದಿನ ರಾತ್ರಿಯಲ್ಲಿ ನಾನು ಸಿದ್ಧಗೊಳಿಸಿಕೊಂಡ ಪಾಠಗಳನ್ನು ಆಗ್ಗೆ ನೋಡಿಕೊಳ್ಳುತ್ತಿದ್ದೆನು. ಅನಂತರ ನಾನು ಸಂಸ್ಕೃತವನ್ನು ಓದಿಕೊಂಡು ಆ ಭಾಷೆಯನ್ನು ಕಲಿಸುತ್ತಿದ್ದ ಶ್ರೀ ಅಂಬಾಶಂಕರ ಅವರ ಪಾಠಗಳಿಗಾಗಿ ಹೋಗುತ್ತಿದ್ದೆನು. ಅಲ್ಲಿಂದ ನಾನು ಎಂಟು ಗಂಟೆಗೆ ತಿರುಗಿ ಬಂದು ಪ್ರಾತರ್ವಿಧಿಗಳನಂತರ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದೆನು. ಒಂಬತ್ತೂವರೆಗೆ ನಾನು ತಂದೆಯವರ ಸಂಗಡ ಊಟ ಮಾಡುತ್ತಿದ್ದೆನು. ಹತ್ತೂವರೆ ಗಂಟೆಗೆ ಪಾಠಶಾಲೆಯತ್ತ ತೆರಳುತ್ತಿದ್ದೆನು. ಸಂಜೆಯ ಅಯ್ದು ಗಂಟೆಗೆ ಅಲ್ಲಿಂದ ಬಂದು ಮಾಳಿಗೆಯ ಮೇಲೆ ಶುದ್ಧ ಹವೆಗಾಗಿ ನಾನು ಹೋಗುತ್ತಿದ್ದೆನು. ಆ ಮೇಲೆ ದೀಪಗಳು ಹತ್ತುತ್ತಲೇ ನಾನು ಪುಸ್ತಕಗಳನ್ನು ತೆಗೆದುಕೊಂಡು ಅಧ್ಯಯನದಲ್ಲಿ ತೊಡಗುತ್ತಿದ್ದೆನು. ಎಂಟೂವರೆ ಗಂಟೆಗೆ ಊಟವನ್ನು ಮುಗಿಸಿ ನಾನು ಮತ್ತೆ ಹತ್ತೂವರೆವರೆಗೆ ಅಭ್ಯಾಸವನ್ನು ಮುಂದುವರಿಸುತ್ತಿದ್ದೆನು. ಶ್ರಾವಣ ಮಾಸದಲ್ಲಿ ನಾನು ಶಿವಮಂದಿರಕ್ಕೆ ಹೋಗುತ್ತಿದ್ದೆನು, ಮತ್ತು ಗೋಕುಲಾಷ್ಟಮಿ, ಶಿವರಾತ್ರಿಯಂತಹ ಹಬ್ಬದ ದಿನಗಳಲ್ಲಿ ನಾನು ಅಲ್ಪಪ್ರಮಾಣದ ಉಪವಾಸವನ್ನು ಕೈಗೊಳ್ಳುತ್ತಿದ್ದೆನು."

ಈ ರೀತಿಯ ಶಿಸ್ತಿನಲ್ಲಿ ಅವನು ಬೆಳೆದುದರಿಂದ ಅವನಲ್ಲಿ ಕಠಿಣ ಪರಿಶ್ರಮವನ್ನು ಕೈಗೊಳ್ಳುವ ಶಕ್ತಿಯುಂಟಾಯಿತು. ಆದರೆ ಬದುಕಿನಲ್ಲಿ ನರ್ಮದಾಶಂಕರನು ಕೆಲವು ವೈಶಿಷ್ಟ್ಯಗಳಿಗಾಗಿ ಹೆಸರು ಪಡೆದ ವಿಷಯವಾಗಿ ಯಾವ ಲಕ್ಷಣಗಳೂ ಮೊದಲು ಕಂಡುಬರುವದಿಲ್ಲ. ಪಾಠಶಾಲೆಗೆ ಹೋಗುವಾಗ್ಗೆ ಆತನು ಕಾಲೀದೇವಿಯ ಗುಡಿಯ ಮುಂದಿನಿಂದ ಪ್ರತಿಸಲ ಹೋಗುತ್ತಿದ್ದರೂ ಅವನಲ್ಲಿ ಮೂರ್ತಿಭಂಜಕ ಗುಣವು ಅಡಗಿಕೊಂಡಿರಲಿಕ್ಕೆ ಸಾಕು. ದೇವಿಯ ಸಮ್ಮುಖದಲ್ಲಿ ಪ್ರತಿದಿನ ಅಲ್ಲಿಂದ ಆತನು ಹೋಗುವಾಗ್ಗೆ, ನಮಸ್ಕಾರದ ಜೊತೆಯಲ್ಲಿ ಈ ಮಾತುಗಳನ್ನು ಗುಣಗುಣಿಸುತ್ತಿದ್ದನು. "ನಾನು ಪಾಪಿ. ದೇವಿ, ನನ್ನನ್ನು ಕ್ಷಮಿಸಿ, ಒಳ್ಳೆಯವನಾಗುವಂತೆ ನನ್ನನ್ನು ಕರುಣಿಸು." ಹಾಗೆಯೆ ಆತನು ಮೃದುವಾಗಿ ತನ್ನ ಗಲ್ಲಗಳನ್ನು ಬಡಿದುಕೊಳ್ಳುತ್ತಿದ್ದನು. ಒಂದು ದಿನ ಅಲ್ಲಿಯೆ ಕೆಲವು ಪೆಟ್ಟಿಗೆಗಳನ್ನು ಮಾಡುತ್ತಿದ್ದ

ವ್ಯಕ್ತಿಯೊಬ್ಬನು, ಅದನ್ನು ನೋಡಿ, ಅಣಕದಲ್ಲಿ ಆತನು ತನ್ನ ಗಲ್ಲಗಳನ್ನು ಹೆಚ್ಚಿನ ಶಕ್ತಿಯಿಂದ ಬಡಿದುಕೊಳ್ಳಬೇಕು ಎಂದು ನುಡಿದನು. ಇದರಿಂದ ಅವನಿಗೆ ಅತ್ಯಂತ ನಾಚಿಕೆಯೆನಿಸಿತು. ಆ ಮೇಲೆ ಪ್ರತಿದಿನ ಆತನು ಮೊದಲು ಸುತ್ತಲೂ ನೋಡಿ, ಯಾರೂ ತನ್ನನ್ನು ನೋಡುತ್ತಿರುವದಿಲ್ಲ ಎಂಬುದನ್ನು ತಿಳಿದುಕೊಂಡು, ಯಾರ ಭಯವೂ ಇಲ್ಲ ಎಂಬುದನ್ನು ಗೊತ್ತುಪಡಿಸಿಕೊಂಡು, ಒಂದು ಕೈಯಿಂದ ಮೆಲ್ಲನೆ ಗಲ್ಲವನ್ನು ತಟ್ಟಿಕೊಂಡು ಇನ್ನೊಂದರಿಂದ ಅದನ್ನು ಮುಚ್ಚಿಕೊಳ್ಳುತ್ತಿದ್ದನು. ಪರೀಕ್ಷೆಯಲ್ಲಿ ಹೆಚ್ಚಿನ ಯಶಸ್ಸನ್ನು ಪಡೆಯುವ ಉದ್ದೇಶದಿಂದ ತಾನು ಹಾಗೆ ಮಾಡುತ್ತಿಲ್ಲ ಎಂದು ಹೇಳುತ್ತಿದ್ದರೂ, ಅದೊಂದು ಏನೊ ಆತನಿಗೆ ಅಭ್ಯಾಸ ವಾಗಿತ್ತು. ಈ ಬಗೆಯ ಅಸಾಧಾರಣವಾದ ನಡತೆಯ ವಿಷಯವಾಗಿ ಆಧುನಿಕ ಮನೋವಿಜ್ಞಾನಿಗಳು ವಿವರಣೆಗಳನ್ನು ಕೊಡಬಹುದು.

ಆದರೆ ಕ್ರಿಸ್ತಶಕದ ೧೮೫೦ ನೆಯ ವರ್ಷದ ಸೆಪ್ಟಂಬರ್ ತಿಂಗಳಲ್ಲಿ ನರ್ಮದಾ ಶಂಕರನ ಮನಸ್ಸಿನಲ್ಲಿ ತಲೆದೋರಿದ ಭಾವನೆಯನ್ನು ಸಹಜವಾಗಿಯೆ ತಿಳಿದುಕೊಳ ಬಹುದು—ಆಧುನಿಕ ಮನೋವಿಜ್ಞಾನಿಯು! ಆ ಸಮಯಕ್ಕೆ ಆತನು ಹೇಳುವಂತೆ ಅವನಲ್ಲಿ ಸ್ಪಷ್ಟವಾದ ಪರಿವರ್ತನೆಯೊಂದು ಸಂಭವಿಸಿತು. ಅವನು ದುಃಸಂಗದಲ್ಲಿ ಇರದಿದ್ದರೂ, ಉದ್ರೇಕದ ಪುಸ್ತಗಳನ್ನು ಓದುತ್ತಿರದಿದ್ದರೂ ಜೀವನದ ಅವನ ಆ ಸ್ಥಿತಿಯಲ್ಲಿ ಅವನ ಮನೋಭಾವದಲ್ಲಿ ಏನೊ ಸ್ಥಿತ್ಯಂತರವು ಗೋಚರಿಸಿತು. ತನಗೆ ಹೆಂಗಸರ ವಾಸನೆಯು ತಗುಲಿತು ಎಂದು ಅವನು ಹೇಳುತ್ತಾನೆ. ಸದ್ದಿಲ್ಲದೆ ಅವನು ತಮ್ಮ ಕಟ್ಟಡದಲ್ಲಿ ಸ್ತ್ರೀಯರು ಆಡುತ್ತಿದ್ದ ಮಾತುಗಳನ್ನು ಕೇಳವದು ಮತ್ತು ಆ ಮೂಲಕ ಉದ್ವಿಗ್ನನಾಗುವದು ಆರಂಭವಾಯಿತು. ಅವನು ಪ್ರೇಮದ ಕತೆ ಗಳನ್ನು ಓದತೊಡಗಿದನು ಮತ್ತು ಸಾಹಸದ ಸಂಗತಿಗಳಲ್ಲಿ ಆಸಕ್ತನಾದನು. ಇಷ್ಟೆ ಅಲ್ಲದೆ ಸ್ತ್ರೀಯರ ಸಹವಾಸಕ್ಕಾಗಿ ಅವನು ಕನವರಿಸತೊಡಗಿದನು. ಇಂತಹ ವಿಚಾರ ಗಳಿಂದ ಅವನು ಮುಕ್ತನಾಗಲಿಲ್ಲವಾದರೂ ಸ್ವಭಾವದಿಂದ ಮುಗ್ಧನಾದ ಆತನು ಮುಂದುವರಿದು ಯಾವ ಪರಿಚಯವನ್ನೂ ಮಾಡಿಕೊಳ್ಳಲಿಲ್ಲ. ಶಾಂತವಾಗಿ, ಏಕಾಂತ ವಾಗಿ ಅತ್ಯಂತ ದುಃಖಿತನಾದನು; ಆದರೆ ಆ ಸ್ಥಿತಿಯಿಂದ ಪಾರಾಗುವ ಯಾವ ದಾರಿಯೂ ಆತನಿಗೆ ಕಾಣಲಿಲ್ಲ.

ಆದರೆ ವಿಧಿಯು ಅವನ ನೆರವಿಗೆ ಬಂದಿತು. ೧೮೫೦ ನೆಯ ವರ್ಷದ ನವೆಂಬರ್ ೨೩ ನೆಯ ದಿನಾಂಕ ಸೂರತದಲ್ಲಿ ಅವನ ತಾಯಿಯು ತೀರಿಕೊಂಡಳು. ಅದೊಂದು ಅವನಿಗೆ ದೊಡ್ಡ ಆಘಾತವಾಯಿತು. ಗಂಟೆಗಟ್ಟಲೆ ಆತನು ತನ್ನ ಕೋಣೆಯ ಕಿಟಿಕಿಯಲ್ಲಿ ಮೂಗನಂತೆ ಕುಳಿತುಕೊಂಡಿರುತ್ತಿದ್ದನು ಮತ್ತು ದಿನದ ವಿವಿಧ ಸಮಯಗಳಲ್ಲಿ ಬದಲಾಗುತ್ತಿರುವ ಆಕಾಶದ ಬಣ್ಣಗಳನ್ನು ನೋಡುತ್ತಿದ್ದನು. ಎಷ್ಟೋ ಹೊತ್ತು ಈ ಪ್ರಪಂಚವನ್ನು ತೊರೆಯುವ ವಿಚಾರಗಳು ಅವನನ್ನು ಆವರಿಸುತ್ತಿದ್ದವು

ಮತ್ತು ಅವನು ನಿಸರ್ಗದ ಕವನಗಳ ಸಾಲುಗಳನ್ನು ಉಚ್ಚರಿಸುತ್ತಲಿದ್ದನು. ಅಭ್ಯಾಸದಲ್ಲಿ ಅವನಿಗೆ ತಿಲಮಾತ್ರ ಆಸಕ್ತಿಯು ಉಳಿಯಲಿಲ್ಲ ಮತ್ತು ಎಷ್ಟೋ ದಿನಗಳವರೆಗೆ ಆತನು ಕಾಲೇಜಿನ ಪಾಠಗಳಿಗಾಗಿ ಹೋಗಿರಲಿಲ್ಲ. ಏನು ಮಾಡ ಬೇಕೆಂಬುದು ಅವನಿಗೆ ತಿಳಿದಿರಲಿಲ್ಲ.

ಅಂತಹ ಸನ್ನಿವೇಶದಲ್ಲಿ ಎರಡು ಘಟನೆಗಳು ರೂಪುಗೊಂಡವು. ಸೂರತದಿಂದ ಆತನ ಮಾವನು ಪತ್ರ ಬರೆದು ತನ್ನ ಮಗಳು ದೊಡ್ಡವಳಾದ ಸಂಗತಿಯನ್ನು ತಿಳಿಸಿ ನರ್ಮದಾಶಂಕರನು ಸೂರತಕ್ಕೆ ಹೋಗಿ ಅಲ್ಲಿ ತನ್ನದಾದ ಒಂದು ಮನೆಯಲ್ಲಿ ಸಂಸಾರ ವನ್ನು ಆರಂಭಿಸಬೇಕು ಎಂದು ಹೇಳಿದ್ದನು. ಇತ್ತ ನರ್ಮದಾಶಂಕರನ ತಂದೆಯು ಈತನು ಮುಂಬಯಿಯಲ್ಲಿ ನೆಲಸಿದರೆ ತಂದೆ-ಮಗ ಇಬ್ಬರೂ ಕೂಡಿಯೆ ಇರಬಹುದು ಎಂದು ಬಯಸಿದ್ದನು. ಆದರೆ ಆಗ್ಗೆ ನರ್ಮದಾಶಂಕರನಿಗೆ ಕಾಲರಾ ಬೇನೆಯಿಂದ ಬಳಲಬೇಕಾದ ಕಾರಣ ಸೂರತವು ಮಾತ್ರ ಹೆಚ್ಚು ಪ್ರಶಸ್ತವಾದ ಸ್ಥಳ ಎಂಬ ನಿರ್ಣಯವಾಯಿತು. ಈ ಸೂಚನೆಗೆ ನರ್ಮದಾಶಂಕರನು ಒಮ್ಮೆಲೆ ಒಪ್ಪಲಿಕ್ಕೆ ಕಾರಣ ಸ್ತ್ರೀಸಂಗಕ್ಕಾಗಿ ಅವನ ಮನಸ್ಸು ವಿವಶವಾದುದು. ಸೂರತದಲ್ಲಿ ಯಾವುದಾದ ರೊಂದು ಕೆಲಸವನ್ನು ಕೈಕೊಳ್ಳಬೇಕೆಂದು ಆತನು ಕಾಲೇಜನ್ನು ಬಿಟ್ಟುಕೊಟ್ಟನು. ಅವನ ಬ್ರಿಟಿಶ್ ಅಧ್ಯಾಪಕರು ಅವನಿಗೆ ಮೂರು ಉತ್ಕೃಷ್ಟವಾದ ಶಿಫಾರಸು-ಪತ್ರ ಗಳನ್ನು ಕೊಟ್ಟರು. ಅದರಲ್ಲಿ ಶ್ರೀ ಆರ್ ಟಿ. ರೀಡ್, ಎ.ಬಿ., ಅವರು ಕೊಟ್ಟ ಪತ್ರದಲ್ಲಿ ಚರಿತ್ರೆ ಮತ್ತು ಸಾಮಾನ್ಯ ಸಾಹಿತ್ಯದ ಹಂಗಾಮೀ ಪ್ರಾಧ್ಯಾಪಕರಾದ ಅವರು ಹೀಗೆ ಬರೆಯುತ್ತಾರೆ :

ಎಲ್‌ಫಿನ್‌ಸ್ಟನ್ ಸಂಸ್ಥೆಯ ಕಾಲೇಜ ವಿಭಾಗದಲ್ಲಿ ವಿದ್ಯಾರ್ಥಿಯಾಗಿದ್ದ ನರ್ಮದಾಶಂಕರ ಲಾಲಶಂಕರನು ಇಂಗ್ಲಿಶ್ ಸಾಹಿತ್ಯ ಮತ್ತು ಇತಿಹಾಸಗಳಲ್ಲಿ ಕಳೆದ ಒಂದೂವರೆ ವರ್ಷ ನನ್ನ ಅಧ್ಯಾಪನದಲ್ಲಿ ಇದ್ದನು. ಅವನ ಸಾಧನೆ ಮತ್ತು ಉದ್ಯಮಗಳ ವಿಷಯವಾಗಿ ಹೆಚ್ಚು ಹೇಳುವದು ಅಸಾಧ್ಯವೆನಿಸಬಹುದು. ಇಂಗ್ಲಿಶ್ ಭಾಷೆಯಲ್ಲಿ ಅವನಿಗಿದ್ದ ಜ್ಞಾನವು, ಅವನ ಮಟ್ಟಕ್ಕೆ ಅಗಾಧವಾಗಿದೆ ಮತ್ತು ಆತನು ಪ್ರಾಚೀನ ಮತ್ತು ಅರ್ವಾಚೀನ ಚರಿತ್ರೆಯಲ್ಲಿ ಅದ್ಭುತವಾದ ಪ್ರಗತಿಯನ್ನು, ಅದರಲ್ಲಿಯೂ ಭಾರತದ ಇತಿಹಾಸದ ಅಧ್ಯಯನದಲ್ಲಿ ಸಾಧಿಸಿದ್ದಾನೆ. ೧೮೫೦ (೧೮೫೦) ರ ಜೂನ್ ತಿಂಗಳ ಪರೀಕ್ಷೆಯಲ್ಲಿ ಆತನು ತನ್ನ ವರ್ಗದಲ್ಲಿ ಮೂರನೆಯ ಕ್ರಮಾಂಕವನ್ನು ಪಡೆದು ಕ್ಲೆಯರ್ ಅಥವಾ ಮೊದಲ ವರ್ಷದ ಶಿಷ್ಯವೃತ್ತಿಯನ್ನು ಗಳಿಸಿ ಅತ್ಯಂತ ಸಮಾಧಾನಕರವಾದ ರೀತಿಯಲ್ಲಿ ಕಾರ್ಯವನ್ನು ಕೈಕೊಂಡಿದ್ದಾನೆ ; ಈಗ ಈತನು ಮುಂಬಯಿಯನ್ನು (ತಾತ್ಪೂರ್ತಿಕ ಎಂದು ನನ್ನ ಭಾವನೆ) ಬಿಡಬೇಕಾಗಿ ಬಂದುದಕ್ಕಾಗಿ ನನಗೆ ತೀರ ವಿಷಾದವಾಗಿದೆ.

ಅವನು ನಿಶ್ಚಿತವಾಗಿಯೂ ಮೇಧಾವಿಯಾದ ವಿದ್ಯಾರ್ಥಿಯಾಗಿದ್ದು ಅವನ ನಡತೆಯು ನನಗೆ ತಿಳಿದಮಟ್ಟಿಗೆ ಅತ್ಯಂತ ಅನುಕರಣೀಯವಾಗಿದೆ.

ಎಲ್‌ಫಿನ್‌ಸ್ಟನ್ ಸಂಸ್ಥೆ, ೧೪ ನೆಯ ಫೆಬ್ರವರಿ ೧೮೫೧.

ಇಂತಹ ಮಹತ್ವಪೂರ್ಣವಾದ ಕಾಗದಪತ್ರಗಳೊಂದಿಗೆ ಆತನು ತನ್ನ ಜನ್ಮಸ್ಥಳವಾದ ಸೂರತಕ್ಕೆ ಒಮ್ಮೆಲೆ ಹೊರಟನು.

೩

ಸುರತಕ್ಕೆ ಹೊರಡುವ ಮೊದಲು ಮುಂಬಯಿಯಲ್ಲಿ ನರ್ಮದಾಶಂಕರನೇನು ಸುಮ್ಮನೆ ಕುಳಿತಿರಲಿಲ್ಲ. ತನ್ನ ಅಭ್ಯಾಸವನ್ನು ನೋಡಿಕೊಳ್ಳುವುದಲ್ಲದೆ—ಅವನು ಅದನ್ನು ಸರಿಯಾಗಿಯೆ ಮಾಡುತ್ತಿದ್ದನು ಎಂಬುದು ನಮಗೆ ಗೊತ್ತಿದೆ—ಅವನು ಮತ್ತು ಅವನ ಇನ್ನು ಇಬ್ಬರು-ಮುವ್ವರು ಗೆಳೆಯರು, ಸಹಪಾಠಿಗಳು ಅವನ ಕೋಣೆಯಲ್ಲಿ ಒಂದೆಡೆ ಸೇರಿ ರಸಾಯನಶಾಸ್ತ್ರದ ಕೆಲವು ಪ್ರಯೋಗಗಳನ್ನು ಮುಂಬಯಿಯಲ್ಲಿ ನಡೆಯಿಸಿದ್ದರು. ಅದರಿಂದ ಅವನಿಗೆ ಮತ್ತು ಅವನ ಮಿತ್ರರಿಗೆ ಹೆಚ್ಚಿನ ಅಧ್ಯಯನವನ್ನು ಕೈಗೊಳ್ಳಲಿಕ್ಕೆ ಪ್ರಚೋದನೆಯಾಯಿತು. ಅವರು ತಮ್ಮ ಮತ್ತು ಇತರರ ಕೆಲವು ಗ್ರಂಥಗಳನ್ನು ಸಂಗ್ರಹಿಸಿ, ಅವನ ಕೋಣೆಯಲ್ಲಿ ಒಂದು ಗ್ರಂಥಾಲಯವನ್ನು ರೂಪಿಸಿದರು. ಒಂದರಿಂದ ಇನ್ನೊಂದು ವಿಷಯದ ಅರಿವಾಗಿ ಅವರ ಗ್ರಂಥಸಂಗ್ರಹ ಮತ್ತು ವಾಚನಾಭಿರುಚಿಗಳಿಂದ ಅವರಿಗೆ ಹೊಸ ವಿಚಾರಗಳು ಬರತೊಡಗಿದವು. ಆಳರಸರಾದ ಬ್ರಿಟಿಶರು ಹೆಚ್ಚು ಬಲಿಷ್ಠರು ಮತ್ತು ಪ್ರಭಾವಿಗಳು ಆಗಲಿಕ್ಕೆ ಅವರು ಹೆಚ್ಚು ಅಭ್ಯಾಸವನ್ನು ಮಾಡುತ್ತಿದ್ದರು ಮತ್ತು ವಿವಿಧ ಮಹತ್ವದ ವಿಷಯಗಳ ಬಗ್ಗೆ ಅವರು ವಿವಾದಗಳನ್ನು ನಡೆಯಿಸುತ್ತಿದ್ದರು, ಎಂಬ ಕಾರಣದಿಂದ ಎಂದು ಅವರು ಭಾವಿಸಿದರು. ಅದೇ ರೀತಿಯಲ್ಲಿ ತಾವಾದರೂ ಏಕೆ ನಡೆಯಬಾರದು ? ಅಂತು ಅವರು ತಿಂಗಳಿಗೆ ನಾಲ್ಕು ಬಾರಿ ಒಂದೆಕಡೆ ಸೇರಿ ಮಹತ್ವದ ಸಂಗತಿಗಳನ್ನು ಚರ್ಚಿಸಬೇಕು ಎಂದು ನಿರ್ಣಯಿಸಿದರು. ತಾವೇ ಬರೆದ ಪ್ರಬಂಧಗಳನ್ನು ಓದಲಿಕ್ಕೆಂದು ಅವರು ಎರಡು ಇಂತಹ ಸಭೆಗಳನ್ನು ಮೀಸಲಿರಿಸಿ, ಇನ್ನೆರಡು ಸಭೆಗಳು ಸಾಮಾಜಿಕ ಸುಧಾರಣೆಗಳ ಭಾಷಣಗಳಿಗಾಗಿ ಸಾರ್ವಜನಿಕರಿಗೆ ನಿಗದಿಯಾಗಿದ್ದವು. ಯಾಕೆಂದರೆ ಬ್ರಿಟಿಶರು ತಮ್ಮ ಮೇಲೆ ಆಧಿಪತ್ಯವನ್ನು ನಡೆಯಿಸಲಿಕ್ಕೆ ಅವರು ಭಾರತೀಯರಿಗಿಂತ ಸಾಮಾಜಿಕವಾಗಿ ಹೆಚ್ಚಿನ ಪ್ರಗತಿಯನ್ನು ಪಡೆದಿದ್ದುದೇ ಕಾರಣ ಎಂದು ಈ ತರುಣಮಿತ್ರರು ತಿಳಿದಿದ್ದರು. ಅದೂ ಅಲ್ಲದೆ ಆಗಿನ ಪರಿಸ್ಥಿತಿಯಲ್ಲಿ ಸಮಾಜ ಸುಧಾರಣೆಯ ಮಾತುಗಳು ಸಾಮಾನ್ಯವಾಗಿದ್ದವು.

ಇವೆಲ್ಲ ವಿಚಾರಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಈ ತರುಣರು "ಯುವಾ ಪುರುಷೋನಿ ಅನ್ಯೋನ್ಯ ಬುದ್ಧಿವರ್ಧಕ ಸಭಾ" ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಿಕೊಂಡರು—ಅದನ್ನು ತಿಳಿಯಾದ ಕನ್ನಡದಲ್ಲಿ ಭಾಷಾಂತರಿಸುವದಾದರೆ ಯುವಜನರ ಪರಸ್ಪರ ಬುದ್ಧಿವರ್ಧಕ ಸಂಘ ಎಂದುಕೊಳ್ಳಬಹುದು. ಅವರು

ಹರಯದ ನರ್ಮದಾಶಂಕರನನ್ನು ತಮ್ಮ ಸಂಸ್ಥೆಯ ಅಧ್ಯಕ್ಷನೆಂದು ಆಯ್ಕೆ ಮಾಡಿಕೊಂಡರು.

ಸಂಘದ ಅಧ್ಯಕ್ಷನೆಂದು ಚುನಾಯಿತನಾದನಂತರ ಜರುಗಿದ ಆ ಸಂಸ್ಥೆಯ ಮೊದಲ ಸಭೆಯಲ್ಲಿ ಸಾರ್ವಜನಿಕವಾಗಿ ನರ್ಮದಾಶಂಕರನು ತನ್ನ ಪ್ರಥಮ ಬಹಿರಂಗ ಭಾಷಣವನ್ನು ಮಾಡಿದನು. ಭುಲೇಶ್ವರದ ಬಳಿಯಲ್ಲಿದ್ದ ಒಂದು ಸಭಾಭವನವು ಖಾಲಿಯಾಗಿದ್ದು ಅದನ್ನು ಅವರ ಕೆಲಜನ ಮಿತ್ರರು ಈ ಸಂಘದ ಕಾರ್ಯಕಲಾಪಗಳಿಗಾಗಿ ಕೊಡಮಾಡಿದ್ದರು. ಅದರಲ್ಲಿ ಸುಮಾರು ಒಂದು ನೂರು ಜನರು ಸೇರಬಹುದಾಗಿತ್ತು. ಆ ನೂರರ ಸಮೀಪದ ಜನರ ಸಮ್ಮುಖದಲ್ಲಿ ಈ ತರುಣ ಉತ್ಸಾಹಿಯು ತಾನು ನಿರ್ಧರಿಸಿಕೊಂಡ, ಸಂಘಗಳನ್ನು ಸ್ಥಾಪಿಸುವ ಸೌಕರ್ಯಗಳು ಎಂಬ ವಿಷಯವನ್ನು ಕುರಿತು ಸುದೀರ್ಘವಾದ ಭಾಷಣವನ್ನು ಮಾಡಿದನು. ೧೮೫೦ರಲ್ಲಿ ಮುಂಬಯಿಯಲ್ಲಿ ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಮಾಡಿದ ಈ ಉಪನ್ಯಾಸವು ಒಮ್ಮೆಲೆ ಯಶಸ್ವಿಯಾಗಿ ಮುಂದೆ ೧೮೫೧ರಲ್ಲಿ ಆತನು ಅದನ್ನು ಬರೆದು ತೆಗೆದು ಜುಲೈ ೪ ನೆಯ ದಿನಾಂಕ ಸೂರತದಲ್ಲಿ ಅದೇ ವ್ಯಾಖ್ಯಾನವನ್ನು ಮತ್ತೆ ನೀಡಿದನು. ಅನಂತರ ಅದೇ ವರ್ಷ ಅದನ್ನು ಆತನು ಒಂದು ಸ್ವತಂತ್ರ ಪ್ರಬಂಧವೆಂದು ಪ್ರಕಟಿಸಿದನು—ಪುಸ್ತಕರೂಪದಲ್ಲಿ. ಮುದ್ರಿತರೂಪದಲ್ಲಿ ಅದು ಅವನ ಪ್ರಥಮ ಪ್ರಯತ್ನವಾಗಿತ್ತು ಮತ್ತು ಅವನಿಗೆ ಅದರ ಅರಿವು ಇರದಿದ್ದರೂ ಗುಜರಾತೀ ಭಾಷೆಯಲ್ಲಿಯೆ ಅದೊಂದು ಅತ್ಯಂತ ಮಹತ್ವದ ಗದ್ಯಲೇಖನವಾಗಿ ಪರಿಣಮಿಸಿತು. ಏನೇ ಆಗಲಿ, ಆ ಲೇಖಕ ತನ್ನ ಭಾಷೆಯಲ್ಲಿ ಗದ್ಯಸಾಹಿತ್ಯದ ಮಾರ್ಗದರ್ಶಕನಾದನು ಮತ್ತು ಆ ಸಾಹಿತ್ಯದ ಪ್ರಮುಖ ಪ್ರವರ್ತಕನಾದನು.

ಮುಂದಿನ ಮೂರು ವರ್ಷಗಳಲ್ಲಿ ಅಂದರೆ ೧೮೫೧ರ ಫೆಬ್ರವರಿ ೧೯ನೆಯ ದಿನಾಂಕದಿಂದ ೧೮೫೪ರ ಜನವರಿ ೨ನೆಯ ದಿನಾಂಕದವರೆಗೆ ಅವನು ಮಹತ್ವದ ಯಾವ ಕಾರ್ಯವನ್ನೂ ಕೈಕೊಂಡಂತೆ ಕಾಣುವದಿಲ್ಲ; ಆಗ್ಗೆ ಅವನು ಸೂರತದಂತಹ ಆಮೋದ-ಪ್ರಮೋದಗಳ ನಗರದಲ್ಲಿರುತ್ತಿದ್ದನು. ಮೊದಲು ಆತನಿಗೆ ಎಲ್ಲಿಯಾದರೂ ಶಿಕ್ಷಕನೆಂದು ಸಣ್ಣ ಕೆಲಸವು ಕೂಡ ದೊರೆಯಲಿಲ್ಲವೆಂದು ಅವನು ಕೆಲಕಾಲ ಮನಬಂದಂತೆ ಅಲೆದಾಡಿದನು. ಅವನ ತಂದೆಯವರು ಮುಂಬಯಿಯಲ್ಲಿದ್ದರು, ತನಗೆ ಮಾಡಲಿಕ್ಕೆ ಯಾವ ಕೆಲಸವೂ ಇರಲಿಲ್ಲ; ಅಂತೆಯೆ ಅವನ ಮನಸ್ಸಿನಲ್ಲಿ ಹೆಂಗಸರ ಬಗ್ಗೆ ವಿಚಾರಗಳು ಅಣೆಕಟ್ಟು ಇಲ್ಲದ ನದಿಯ ನೀರಿನಂತೆ ಹರಿಯತೊಡಗಿದವು. ಸುದೈವದಿಂದ ಆತನಿಗೆ ಒಂದು ಸಭ್ಯ ಸಂಸಾರದ ಮಹಿಳೆಯೊಬ್ಬಳ ಪರಿಚಯವಾಗಿ ಆಕೆಯಿಂದ ಆತನ ಪ್ರಕ್ಷುಬ್ಧ ಆತ್ಮಕ್ಕೆ ಸಾಂತ್ವನವು ದೊರೆಯಿತು. ಅಲ್ಲಿ ಅವನ ಮಡದಿಯೇನೊ ವಾಸಿಸುತ್ತಿದ್ದಳು, ಆದರೆ ಈ ಬಗೆಯ ಸಾಹಸ ಕಾರ್ಯಗಳು ಅವನ ಜೀವನದಲ್ಲಿ ಅನೇಕ ವರ್ಷಗಳವರೆಗೆ ಜರುಗುತ್ತಿದವು. ಕೈಯಲ್ಲಿ

ತಕ್ಕ ಕೆಲಸವಿಲ್ಲದ ಕಾರಣ ತನ್ನ ಮನಸ್ಸನ್ನು ಬೇರೆ ಕಡೆಗೆ ಒಲಿಸುವ ಉದ್ದೇಶದಿಂದ ಆತನು ಸಮಾನ ವಿಚಾರಗಳ ಜನರ ಸಂಘವೊಂದನ್ನು ಸ್ಥಾಪಿಸಿದನು. ತಾನು ನಿರ್ಮಿಸಿದ ಸಂಸ್ಥೆಯ ಪರವಾಗಿ ಮುದ್ರಣಾಲಯವೊಂದನ್ನು ಸ್ಥಾಪಿಸುವಂತೆ ಅವನಿಗೆ ಸೂಚಿಸಿದರು ಮತ್ತು ಆ ಮೂಲಕ ಆ ಸಂಘದ ಸದಸ್ಯರು ಅನೇಕ ವಿಷಯಗಳ ಬಗ್ಗೆ ತಮ್ಮ ವಿಚಾರಗಳನ್ನು ಪ್ರಕಟಿಸಬಹುದು ಎಂದು ಹೇಳಿದರು. ಅವನಿಗೆ ಈ ಸೂಚನೆಯು ಸ್ವಾಗತಾರ್ಹವೆನಿಸಿ ಇನ್ನು ಕೆಲವರ ಪಾಲುಗಾರಿಕೆಯಲ್ಲಿ ಅವನು ಒಂದು ಅಚ್ಚುಕೂಟವನ್ನು ಕೊಂಡನು ಕೂಡ. ಈ ಸಂಘವನ್ನು ಅವರು 'ಸ್ವದೇಶ-ಹಿತೇಚ್ಛು' ಎಂದು ಕರೆದರು ಮತ್ತು ಅವರು ಪ್ರಕಟಿಸುವ ಪತ್ರಿಕೆಯನ್ನು 'ಜ್ಞಾನಸಾಗರ' ಎಂದು ಹೆಸರಿಸಿದರು. ಮುಂಬಯಿಯಲ್ಲಿಯ ಸಂಸ್ಥೆಯಂತೆಯೆ ಇದು ಕೂಡ ತನ್ನ ಸದಸ್ಯರ ಉಪನ್ಯಾಸಗಳಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿತ್ತು. ಮುಂಬಯಿಯಲ್ಲಿ ಮೌಖಿಕವಾಗಿ ಮಾಡಿದ ಭಾಷಣವನ್ನು ಈಗ್ಗೆ ಬರೆದು ತೆಗೆದನು ಮತ್ತು ಇಲ್ಲಿಯ ಹೊಸ ಜನರೆದುರಿಗೆ ಅದನ್ನು ೧೮೫೧ ನೆಯ ವರ್ಷದ ಜುಲೈ ೪ ನೆಯ ದಿನಾಂಕ ನಿವೇದಿಸಿದನು. ಒಂದು ವರ್ಷದಷ್ಟರಲ್ಲಿ ಈ ತರುಣರ ಉತ್ಸಾಹವು ಕುಂದಿತು. ಅದರ ವಾರಪತ್ರಿಕೆಯು ನಿಂತುಹೋಯಿತು ಮತ್ತು ಅವರ ಸಂಘವನ್ನು ಮುಚ್ಚಲಾಯಿತು.

ನರ್ಮದಾಶಂಕರನು ೧೮೫೨ ರಲ್ಲಿ ಸೂರತದ ಹತ್ತಿರಿರುವ ರಣದೇರ ಎಂಬಲ್ಲಿ ಚಿಕ್ಕ ಪಾಠಶಾಲೆಯ ಶಿಕ್ಷಕನ ಕೆಲಸವನ್ನು ಪಡೆದನು. ಕೆಲಕಾಲ ಅವನಿಗೆ ಸೂರತದಿಂದ ರಣದೇರಕ್ಕೆ ಹೋಗುವಾಗ್ಗೆ ಮಾಡಬೇಕಾದ ಹರಿಗೋಲಿನ ಪ್ರವಾಸವು ರಮ್ಯವಾಗಿ ತೋರಿತು ಮತ್ತು ಪಾಠಶಾಲೆಯಲ್ಲಿ ಹೆಚ್ಚಿನ ಮಹತ್ವದ ಕೆಲಸವಿಲ್ಲದಾಗ್ಗೆ ಅವನಿಗೆ ಸಾಗರಸ್ನಾನವು ಕೂಡ ಮೆಚ್ಚಿನದಾಗಿತ್ತು. ಅವನು ಒಳ್ಳೆಯ ಮನಃಸ್ಥಿತಿಯಲ್ಲಿ ಇದ್ದಾಗ್ಗೆ ಉತ್ತಮವಾಗಿ ಬೋಧಿಸುತ್ತಿದ್ದನು. ಆ ಕಾರಣವಾಗಿ ಅವನು ಒಮ್ಮೆ ಒಂದು ದುರ್ಭರ ಪ್ರಸಂಗದಿಂದ ಪಾರಾಗಲು ಸಾಧ್ಯವಾಯಿತು. ಅವನು ಒಂದು ದಿನ ಪ್ರಾತಃಕಾಲದಲ್ಲಿ ಸಹಜವಾದ ರೀತಿಯಲ್ಲಿ ಪಾಠಗಳನ್ನು ನಡೆಯಿಸುತ್ತಿದ್ದಾಗ್ಗೆ ಯಾವ ಪೂರ್ವಸೂಚನೆಯೂ ಇಲ್ಲದೆ ವಿದ್ಯಾಲಯದ ಮೇಲ್ವಿಚಾರಣೆಗೆಂದು ಶ್ರೀ ಗ್ರಹಾಮ್ ಎಂಬ ಇನ್‌ಸ್ಪೆಕ್ಟರರು ತಮ್ಮ ಕಾರ್ಯದ ಕ್ರಮದಲ್ಲಿ ಬಂದು ಇಳಿದರು. ಮಕ್ಕಳು ಅತ್ತಿತ್ತ ಹರಿದಾಡದೊಡಗಿದರು; ಅಧ್ಯಾಪಕರು ಅಲ್ಲಿ ಇರಲೇ ಇಲ್ಲ. ಉಪಾಧ್ಯಾಯರು ಪಾಠಶಾಲೆಯ ಬಾಗಿಲ ಬಳಿಗೆ ಬಂದುದನ್ನು ಕಂಡು ಇನ್‌ಸ್ಪೆಕ್ಟರರು ತುಸು ಕೋಪಗೊಂಡರು. ಯಾವ ಯತ್ನವೂ ಇಲ್ಲದೆ ಅವನಿಗೆ ತಿಳಿದುಬಂದಿತು-ಶಿಕ್ಷಕನು ಅದೇ ನಿದ್ದೆಯಿಂದ ಎದ್ದು ಬಂದಿರುವನು ಎಂಬುದು. ಇನ್‌ಸ್ಪೆಕ್ಟರರು ಕೇಳಿದ ಪ್ರಶ್ನೆಗಳಿಗೆ ಆತನು ರಾತ್ರಿಯಲ್ಲಿ ತಡವಾಗಿ ತನ್ನ ಅಧ್ಯಯನವನ್ನು ಮುಗಿಸಿದ ನಂತರ ಮಲಗಿದ ಕಾರಣ ಈಗ್ಗೆ ಆದ ವಿಲಂಬಕ್ಕೆ ಮೂಲ ಎಂದು ಹೇಳಿದನು.

ಹೆಚ್ಚಿನ ಪ್ರಶ್ನೆಗಳನ್ನು ಕೇಳದೆ ಇನ್‌ಸ್ಪೆಕ್ಟರರು ಪಾಠಗಳನ್ನು ಆರಂಭಿಸಿದರು ಮತ್ತು ವರ್ಗದ ವಿದ್ಯಾರ್ಥಿಗಳೆಲ್ಲ ಚೆನ್ನಾಗಿ ಓದಿಕೊಂಡಿರುವರು ಎಂಬ ಸಂಗತಿಯನ್ನು ತಿಳಿದು ಅವರಿಗೆ ಆಶ್ಚರ್ಯವಾಯಿತು. ಅತ್ಯಂತ ಸಂತುಷ್ಟರಾಗಿ ಅವರು ಅಧ್ಯಾಪಕನನ್ನು ಪ್ರಶಂಸಿಸಿದರು ಮತ್ತು ಅಂತಹ ಶಿಕ್ಷಕನನ್ನು ಪಡೆದ ವಿದ್ಯಾರ್ಥಿಗಳು ನಿಜವಾಗಿಯೂ ಸುದೈವಿಗಳು ಎಂದರು.

ಆದರೆ ನರ್ಮದಾಶಂಕರನಿಗೆ ಇಂತಹ ಏಳುಬೀಳುಗಳ ಪರಿಚಯವು ಸಾಕಷ್ಟಾಗಿತ್ತು, ಅದರಲ್ಲಿಯೂ ವಿಶೇಷವಾಗಿ ಸುಸಂಸ್ಕೃತ ನಗರಗಳಿಂದ ದೂರ ಇರುವ ಈ ದುರ್ದೈವಿಯಾದ ಊರಲ್ಲಿ! ಅಂತೆಯೆ ಅವನು ಸೂರತಕ್ಕೆ ವರ್ಗಮಾಡಿಸಿಕೊಂಡು ಹೋಗಿ ಅಲ್ಲಿ ಕಾರ್ಯವನ್ನು ಕೈಕೊಂಡನು. ಆದರೆ ತನ್ನ ಸ್ಫುರಿಸುತ್ತಿರುವ ಉತ್ಸಾಹಕ್ಕೆ ಯಾವ ಬಗೆಯ ಪ್ರೋತ್ಸಾಹವೂ ಇಲ್ಲದ ಚಿಕ್ಕ ಪಾಠಶಾಲೆಯ ಈ ಶಿಕ್ಷಕ ವೃತ್ತಿಯು ಅವನಿಗೆ ರುಚಿಸಲಿಲ್ಲ. ಆ ಕೆಲಸವನ್ನು ಬಿಟ್ಟುಕೊಟ್ಟು ಬೇರೆ ಯಾವುದಾದರೊಂದು ಉಚ್ಚವರ್ಗದ ಮತ್ತು ಹೆಚ್ಚಿನ ಪ್ರತಿಫಲ ದೊರೆಯುವ ಕೆಲಸವನ್ನು ಪಡೆಯಬಯಸಿದನು; ಆದರೆ ಎಲ್ಲಿಯೂ ಅವನಿಗೆ ಯಶಸ್ಸು ದೊರೆಯಲಿಲ್ಲ. ಅಷ್ಟರಲ್ಲಿ ಹದಿನೇಳು ವರ್ಷದ ಅವನ ಹೆಂಡತಿಯು ಮೃತಕೂಸಿನ ಹೆರಿಗೆಯಲ್ಲಿ ತಾನೇ ಸತ್ತುಹೋದಳು. ಮೊದಲೇ ದುಃಖಿಯಾದ ನರ್ಮದಾಶಂಕರನಿಗೆ ಸೂರತವನ್ನು ಬಿಟ್ಟು ತೊಲಗಲಿಕ್ಕೆ ಮತ್ತೊಂದು ಅರ್ಥಪೂರ್ಣ ಕಾರಣವು ಪ್ರಾಪ್ತವಾದಂತಾಯಿತು. ಎಷ್ಟೋ ಯೋಚನೆ ಮತ್ತು ನಿಷ್ಫಲವಾದ ಪತ್ರವ್ಯವಹಾರದ ನಂತರ ಕೊನೆಯಲ್ಲಿ ಆತನು ತನ್ನ ಕೆಲಸಕ್ಕೆ ರಾಜೀನಾಮೆಯನ್ನಿತ್ತನು ಮತ್ತು ಇದಾದ ೧೮೫೮ ರ ಜನವರಿ ೨ನೆಯ ದಿನಾಂಕದ ಮರುದಿನವೇ ತನ್ನ ಕನಸಿನ ಹೊಳಲೆನಿಸಿದ ಮುಂಬಯಿಗೆ ನಾವೆಯಲ್ಲಿ ಪ್ರಯಾಣಮಾಡಿದನು.

ಅವನು ಸೂರತದಲ್ಲಿ ಕಳೆದ ಮೂರು ವರ್ಷಗಳಷ್ಟು ಸಮಯವನ್ನು ಹೀಗೆ ವರ್ಣಿಸುತ್ತಾನೆ: "೧೮೫೫ನೆಯ ವರ್ಷದ ಫೆಬ್ರುವರಿ ೧೯ನೆಯ ದಿನಾಂಕದಿಂದ ೧೮೫೮ ರ ಜನವರಿ ೨ನೆಯ ದಿನಾಂಕದ ಈ ಅವಧಿಯಲ್ಲಿ ನಾನು ಗುಜರಾತಿಯ ಅಥವಾ ಇಂಗ್ಲಿಶದ ಒಂದು ಪುಸ್ತಕವನ್ನು ಓದಲಿಲ್ಲ. ನಾನು ಹಾರ್ಕನೆಸ್‌ರಿಗೆ ಇಂಗ್ಲಿಶಿನಲ್ಲಿ ಒಂದು ಪತ್ರವನ್ನು ಮಾತ್ರ ಬರೆದೆನು; ಅದರ ಹೊರತಾಗಿ ನಾನು ಇಂಗ್ಲಿಶಿನಲ್ಲಿ ಬೇರೆ ಏನನ್ನೂ ಬರೆದಿರಲಿಲ್ಲ. ಗುಜರಾತಿಯಲ್ಲಿ ನಾನು ಮೂರು ಉಪನ್ಯಾಸಗಳನ್ನು ಮಾತ್ರ ಬರೆದೆನೇ ಹೊರತು ಬೇರೆ ಏನನ್ನೂ ಇಲ್ಲ. 'ಜ್ಞಾನಸಾಗರ'ಕ್ಕೆ ನಾನು ಏನನ್ನೂ ಬರೆದಿರಲಿಲ್ಲ. ದೋಲತ್‌ರಾಮರೇ ಅದನ್ನು ನೋಡಿಕೊಳ್ಳುತ್ತಿದ್ದರು. ನಾನು ಗಾಂಜಾ ಸೇದುತ್ತಿದ್ದೆನು ಮತ್ತು "ಪಾಕ್"ಗಳನ್ನು ತಿನ್ನುತ್ತಿದ್ದೆನೇ ಹೊರತು ಬೇರೆ ಯಾವ ಮಾದಕಗಳನ್ನು ಸೇವಿಸುತ್ತಿರಲಿಲ್ಲ ಮತ್ತು ಮಹಿಳೆಯರಲ್ಲಿ ಅಧಿದೇವನಂತೆ ಓಡಾಡುತ್ತಿದ್ದೆನು. ಒಬ್ಬನೇ ಇದ್ದಾಗ ನಾನು ಕೀರ್ತಿಯನ್ನು

(ಹಣವನ್ನಲ್ಲ) ಮತ್ತು ಪ್ರೇಮವನ್ನು ಗಳಿಸುವ ವಿಷಯವಾಗಿ ಯೋಚನೆಯಲ್ಲಿ ನನ್ನ ಸಮಯವನ್ನು ವಿನಿಯೋಗಿಸುತ್ತಿದ್ದೆನು. ಆಗ್ಗೆ ನನಗೆ ಸಮಾಜ ಸುಧಾರಣೆಗಳ ಯೋಚನೆಯೂ ಇರಲಿಲ್ಲ, ಅವುಗಳನ್ನು ರೂಪಿಸುವ ವಿಧಾನ-ಸಾಧನಗಳ ಚಿಂತೆಯೂ ಇರಲಿಲ್ಲ."

ಈ ತರುಣನು ಈ ಕಾಲದಲ್ಲಿ ತನ್ನಲ್ಲಿ ಮತ್ತು ತನ್ನ ಸ್ನೇಹಿತರ ಗುಂಪಿನಲ್ಲಿ ಮಗ್ನನಾಗಿದ್ದು ಸೂರತಕ್ಕೆ ಭೇಟಿಯನ್ನಿತ್ತ ಕವಿ ದಲಪತರಾಮನತ್ತ ಲಕ್ಷ್ಯಕೊಡಲಿಕ್ಕೆ, ಅವನು ಕವಿಯ ಭಾಷಣವನ್ನು ಕೇಳಲಿಕ್ಕೆ ಹೋಗಿದ್ದರೂ, ಸಾಧ್ಯವಾಗಲಿಲ್ಲ. ಆತನು ಆ ಸಭೆಗೆ ಹೋದುದು ಕಾವ್ಯದ ಅಭಿಮಾನದಿಂದಾಗಲಿ, ಕವಿಯ ಗೌರವಾರ್ಥವಾಗಲಿ ಆಗಿರದೆ ಕೇವಲ ತನ್ನ ಸ್ನೇಹಿತರ ಸಾನ್ನಿಧ್ಯಲಾಭಕ್ಕಾಗಿ ಆಗಿತ್ತು. ವಾಸ್ತವಿಕವಾಗಿ ಅವನು ದಲಪತರಾಮನನ್ನು ನೋಡಿದುದು ಅವ್ಯಕ್ತವಾದ ಕುತೂಹಲದೊಂದಿಗೆ ತುಸು ಅಪ್ರಿಯವಾದ ದೃಷ್ಟಿಯಿಂದಾಗಿತ್ತು. ಕವಿಗಳು ಕ್ವಚಿತ್ತಾಗಿ ಕಂಡು ಬರುತ್ತಿದ್ದರು. ಆ ಕಾಲದಲ್ಲಿ, ಎಂದು ಆತನಿಗೆ ಕುತೂಹಲ ಮತ್ತು ಒಂದು ಸಭೆಯಲ್ಲಿ ತರುಣ ಕವಿಯೊಬ್ಬನನ್ನು ಸಭಿಕರು ಮೆಚ್ಚಿಕೊಂಡಿದ್ದಾಗ್ಗೆ ಅವನ ಬದಲು ದಲಪತರಾಮನು ತಾನು ಮುಂದಾಗಿ ಬಂದು ತನ್ನ ಕವನವೊಂದನ್ನು ಹಾಡಲು ಬಂದುದಕ್ಕಾಗಿ ಅಸಮಾಧಾನವು ಅವನಲ್ಲಿ ಮೂಡಿತ್ತು. ಆ ಅಪ್ರೀತಿಯು ದುರ್ದೈವ ದಿಂದ ಅವನಲ್ಲಿ ಜೀವನವಿಡೀ ಮನೆಮಾಡಿಕೊಂಡಿತು.

ಅವನು ಮುಂಬಯಿಗೆ ತಿರುಗಿ ಬಂದಾಗ್ಗೆ ಅವನಿಗೆ ೨೧ ವರ್ಷಗಳಾಗಿದ್ದರೂ, ಅವನ ಜೀವನದಲ್ಲಿ ಇನ್ನೂ ಸ್ಥಿರತೆಯು ಬಂದಿರಲಿಲ್ಲ. ಅವನ ಒಲವು ಸಾಹಿತ್ಯದ ಕಡೆಗೆ ಇದ್ದಂತೆ ಸಮಾಜ ಸುಧಾರಣೆಯತ್ತ ಇದ್ದರೂ, ಈತನು ಆ ಎರಡೂ ಕ್ಷೇತ್ರ ಗಳಲ್ಲಿ ಉತ್ಸಾಹಿಯಾಗಿರಲಿಲ್ಲ. ಆಗ್ಗೆ ಅವನ ಒಂದೇ ಅಭಿಲಾಷೆಯೆಂದರೆ ತಾನು ಇನ್ನೂ ಹೆಚ್ಚು ಓದಬೇಕು ಮತ್ತು ಪ್ರಪಂಚದ ಜ್ಞಾನವನ್ನು ಇನ್ನೂ ಆಳವಾಗಿ ಪಡೆಯಬೇಕು ಎಂಬುದಾಗಿತ್ತು. ಅವನ ಈ ಮನೀಷೆಯು ಪೂರ್ಣವಾಗಲಿಕ್ಕೆ ಮುಂಬಯಿಯು ಯೋಗ್ಯವಾದ ಸ್ಥಳವಾಗಿದ್ದ ಕಾರಣ ಅವನು ಅತ್ತ ಪ್ರಸ್ಥಾನ ಮಾಡಿದನು.

೪

೧೮೫೪ನೆಯ ಕ್ರಿಸ್ತಾಬ್ದಿಯಲ್ಲಿ ನರ್ಮದಾಶಂಕರನು ಮುಂಬಯಿಯಲ್ಲಿ ಬಂದು ಇಳಿದನು. ಅವನಿಗೆ ಮಾಡಲಿಕ್ಕೆ ಅಂತಹ ಯಾವ ಕೆಲಸವೂ ಇರಲಿಲ್ಲ ಮತ್ತು ತುಸು ಹಣವನ್ನು ತರುವಂತಹ ಯಾವ ನೌಕರಿಯೂ ಅವನಿಗಿರಲಿಲ್ಲ. ಆದರೆ ಅವನಿಗೆ ನೆರವನ್ನು ನೀಡಲು ಅವನ ತಂದೆಯವರು ಮಾತ್ರ ಸದಾ ಸಿದ್ಧರಾಗಿದ್ದರು.

ಅವರೇ ಈ ತರುಣ ವ್ಯಕ್ತಿಗೆ ಒಂದು ಕೆಲಸವನ್ನು ಹುಡುಕಿಕೊಟ್ಟರು. ಮುಂಬಯಿಯಲ್ಲಿ ಆಗ್ಗೆ ಶ್ರೀ ಜೀವರಾಜ ಬಾಲು ಎಂಬ ಶ್ರೀಮಂತ ಮತ್ತು ಉದಾರ ಹೃದಯಿಯಾದ ವ್ಯಕ್ತಿಯೊಬ್ಬನು ಇದ್ದನು. ತನ್ನ ಮಗನಿಗೆ ಇಂಗ್ಲಿಶನ್ನು ಕಲಿಸುವದಕ್ಕೆಂದು ಮತ್ತು ತನ್ನ ಸಂಗಡ ಮುಂಜಾವಿನ ಹನ್ನೊಂದು ಗಂಟೆಯಿಂದ ಅಪರಾಹ್ನದ ನಾಲ್ಕು ಗಂಟೆಯವರೆಗೆ ಇರಲಿಕ್ಕೆಂದು ಅವನು ನರ್ಮದಾಶಂಕರನಿಗೆ ಇಪ್ಪತ್ತೈದು ರೂಪಾಯಿಗಳ ಸಂಬಳವನ್ನು ಕೊಡಮಾಡಿದನು. ಆ ಕೆಲಸವು ಹಗುರವಾದುದು ಮತ್ತು ಸಂತೋಷದಾಯಕವಾಗಿತ್ತೇನೊ ನಿಜವಾದರೂ ಆ ಹುಡುಗನಿಗೆ ಮಾತ್ರ ಓದುವ ಉದ್ದೇಶವಿರಲಿಲ್ಲ. ನರ್ಮದಾಶಂಕರನಿಗೆ ಅದೆಲ್ಲ ಬೇಸರ ಬಂದಿತು ಮತ್ತು ಅಯ್ದು ತಿಂಗಳಲ್ಲಿ ಆತನು ಆ ಕೆಲಸವನ್ನು ಬಿಟ್ಟುಕೊಟ್ಟನು; ಯಾಕೆಂದರೆ ತಾನು ಸರಿಯಾಗಿ ಮಾಡಲಾರದ ಕೆಲಸಕ್ಕಾಗಿ ಅವನಿಗೆ ಸಂಬಳವನ್ನು ಸ್ವೀಕರಿಸುವ ಅಪೇಕ್ಷೆಯಿರಲಿಲ್ಲ. ಅದರ ಬದಲಾಗಿ ಆತನು ತಾನೇ ವಿದ್ಯಾರ್ಥಿಯಾಗಿ ಸಂಸ್ಕೃತದ ಅಧ್ಯಯನವನ್ನು ಕೈಕೊಳ್ಳಲು ಅವನು ಒಬ್ಬ ಶಾಸ್ತ್ರಿಯವರ ಕಡೆಗೆ ಹೋಗತೊಡಗಿದನು. ಕೆಲವು ತಿಂಗಳ ತರುವಾಯ ಅವನು ಆ ಕೆಲಸವನ್ನೂ ನಿಲ್ಲಿಸಿಬಿಟ್ಟನು.

ಈ ಎಲ್ಲ ಘಟನೆಗಳು ಅಯ್ದು ತಿಂಗಳ ಅವಧಿಯಲ್ಲಿ ಜರುಗಿದವು. ಆ ಅಯ್ದು ತಿಂಗಳಲ್ಲಿ ಅವನು ದೈಹಿಕವಾಗಿ ನಿಷ್ಕ್ರಿಯನಾಗಿದ್ದರೂ ಅವನ ಮನಸ್ಸು ಯೋಚನೆಗಳಿಂದ ತುಂಬಿತ್ತು. ಅವನ ತಲೆಯಲ್ಲಿ ವಿಚಾರಗಳು ಭರದಿಂದ ಹರಿದಾಡತೊಡಗಿದ್ದವು. ಅವರ ಶಬ್ದಗಳಲ್ಲಿಯೆ ಹೇಳುವದಾದರೆ, ಭಾವತರಂಗಗಳು ಹೀಗೆ ಸಾಗಿದ್ದವು: "ಒಂದು ಕಡೆ ನಾನು ನನ್ನ ವ್ಯಾಸಂಗ ಮತ್ತು ಅಧಿಕಾರಗಳಿಂದ ಕೀರ್ತಿಯನ್ನು ಗಳಿಸುವ ದಿನಕ್ಕಾಗಿ ಹಂಬಲಿಸುತ್ತಿದ್ದರೆ—ನಾನು ಕಾನೂನಿನ ಪರೀಕ್ಷೆಯನ್ನು, ಆ ಅಭ್ಯಾಸದ ನಂತರ, ಮುಗಿಸಿಕೊಳ್ಳಬೇಕೆಂದು ಬಯಸಿದ್ದೆನು—ಜನರ ಮೇಲೆ ವರ್ಚಸ್ಸನ್ನು ಬೀರಲು ನಾನು ಮಾಮಲೇದಾರನಾಗಬೇಕು ಎಂದು ಯೋಚಿಸಿದ್ದೆನು (ಮಾಜಿಸ್ಟ್ರೇಟ್ ಅಲ್ಲ). ಸರ್ ವಿಲ್ಯಮ್ ಜೋನ್ಸ್ ಅವರಂತೆ ನಾನು ಭಾಷಾಪಂಡಿತನಾಗಬೇಕೆಂದುಕೊಂಡೆನು; ಸಂಸ್ಕೃತ, ಪರ್ಶಿಯನ್, ಇಂಗ್ಲಿಶ್, ಉರ್ದು, ಹಿಂದೀ, ಮರಾಠಿ ಮತ್ತು ಇನ್ನು ಅನೇಕ ಭಾಷೆಗಳಲ್ಲಿ ಪ್ರಭುತ್ವವನ್ನು ಪಡೆಯಬೇಕು ಎಂದು ಯೋಚಿಸಿದೆನು; ನಾನು ಮತ್ತೆ ಕಾಲೇಜಿಗೆ ಹೋಗಿ, ಇಂಗ್ಲಿಶ್ ಜನರಿಗೆ ಓದು ಹೇಳಿ, ಅಧ್ಯಯನದಿಂದ ಸಂತೋಷವನ್ನು ಪಡೆಯುವಂತಹ ಸ್ವತಂತ್ರ ಜೀವನವನ್ನು ಸಾಗಿಸಬೇಕೆಂದು ಹವಣಿಸಿದೆನು. ಇನ್ನೊಂದು ಕಡೆಯಿಂದ ನನಗೆ ಸೂರತದಲ್ಲಿ ಅಂಟಿದ ಆಚಾರ ಮತ್ತು ಅಭ್ಯಾಸಗಳಿಗಾಗಿ ಪಶ್ಚಾತ್ತಾಪವೆನಿಸುತ್ತಿತ್ತು. ಯಾಕೆಂದರೆ ಆಗ್ಗೆ ನನಗೆ ಅದೆಲ್ಲ ಪಾಪಮಯ ಎಂದು ತೋರಿತು. ಇಂತಿಂತಹ ನಡತೆಯು ಪಾಪವೇನು ಎಂದು ನಾನು ಸುಳ್ಳು ಹೆಸರುಗಳ ಸಹಾಯದಿಂದ ನನ್ನ ತಂದೆಯವರನ್ನು ನಾನು ಕೇಳುತ್ತಿದ್ದೆನು. ಪ್ರಪಂಚದ ದೃಷ್ಟಿಯಿಂದ ಅದೆಲ್ಲ

ಅಪರಾಧವೆನಿಸಿದರೂ ನಿಜವಾದ ಪರಿತಾಪದಿಂದ ಪ್ರತಿಯೊಬ್ಬನೂ ಅದನ್ನು ಪರಿಹರಿಸಿ ಕೊಳ್ಳಬಹುದು. ಸೂರತದಲ್ಲಿರುವ ನನ್ನ ಪ್ರಿಯ ಆಪ್ತಜನರಿಂದ ದೂರವಾಗಿ ನಾನು ಮುಂಬಯಿಗೆ ತಿರುಗಿ ಹೋದುದರಿಂದ ಕೂಡ ನನಗೆ ಅಷ್ಟು ವ್ಯಥೆಯಾಗಿತ್ತು. ಈ ಐಹಿಕ ಪ್ರಪಂಚದ ಅರ್ಥಹೀನ ಜೀವನದ ವಿಚಾರಗಳು, ಎಷ್ಟಾದರೂ ಹಣವನ್ನು ಗಳಿಸಬೇಕು ಎಂಬ ಹಂಬಲ, ಆದರೂ ಹಣವು ನಿರುಪಯುಕ್ತ ಎಂಬ ಭಾವನೆ, ಈ ಪ್ರಪಂಚವನ್ನೆ ತೊರೆಯಬೇಕು ಎಂಬ ಆಕಾಂಕ್ಷೆ—ಇವೆಲ್ಲ ಪ್ರಬಲವಾಗಿ ನನ್ನ ಮನಸ್ಸನ್ನು ಮುತ್ತಿಕೊಂಡಿದ್ದವು. ಮನಸ್ಸಿನ ಈ ಸ್ಥಿತಿಯಲ್ಲಿ ನಾನು ನನ್ನ ತಂದೆಯವರಿಗೆ ಅತ್ತ ಅವರ ಅರ್ಧಾಂಗಿಯೂ ತೀರಿಕೊಂಡಿರುವಳು, ಇತ್ತ ನನ್ನ ಒಡನಾಡಿಯೂ ಕಣ್ಮರೆಯಾಗಿರುವಳು ಎಂದ ಮೇಲೆ ನಾವು ಈ ಬದುಕಿಗೆ ಅಂಟಿ ಕೊಂಡಿರಬೇಕಾದರೂ ಏಕೆ ? ಎಂದು ಕೇಳಿದೆನು. ಅದರ ಬದಲಾಗಿ ನಾವು ಯಾವುದಾದರೊಂದು ದೂರದ ಹಳ್ಳಿಗೆ ಹೋಗಿ, ಯೋಗ್ಯವಾದ ಕೆಲಸವೊಂದನ್ನು ಕೈಕೊಂಡು ಉಪಜೀವನವನ್ನು ಸಾಗಿಸಿ, ಜ್ಞಾನಸಾಧನೆಯಲ್ಲಿ ಕಾಲಯಾಪನೆಗೈದು, ಆ ಜ್ಞಾನವು ಕೊಡುವ ಫಲದಲ್ಲಿಯೆ ಸುಖವನ್ನು ಪಡೆಯಬೇಕು, ಅಂತೆಯೆ ನಾವು ಒಂದು ಸರೋವರದ ಅಥವಾ ನದಿಯ ದಂಡೆಯಿದ್ದಲ್ಲಿಗೆ ಹೋಗೋಣ."

ಇಂತಹ ಅವಸ್ಥೆಯಲ್ಲಿ ನರ್ಮದಾಶಂಕರನು ಒಂದು ದಿನ 'ನೇಟಿವ್ ಬುಕ್ ಕ್ಲಬ್'ನ ಗ್ರಂಥಾಲಯದಲ್ಲಿ ಕುಳಿತುಕೊಂಡಿದ್ದನು. ಆಗ್ಗೆ ಒಬ್ಬ ಸುಂದರ ಮತ್ತು ಗೌರವರ್ಣದ ಯುವಕನು ಪುಸ್ತಕಗಳನ್ನು ಕೊಟ್ಟು ಬೇರೆ ಪುಸ್ತಕಗಳನ್ನು ಪಡೆಯು ತ್ತಿದ್ದುದನ್ನು ಕಂಡನು. ಹೇಗೊ ಏನೋ ನರ್ಮದಾಶಂಕರ ಮತ್ತು ಆ ತರುಣರಲ್ಲಿ ಸಂಭಾಷಣೆಯು ತಲೆದೋರಿತು. ಆ ಸಂವಾದದಲ್ಲಿ ಝುವೇರಿಲಾಲ ಉಮಿಯಾ ಶಂಕರನೆಂಬ ಆ ಯುವಕನು ನಮ್ಮ ತರುಣಮಿತ್ರನಿಗೆ ಮತ್ತೆ ಕಾಲೇಜನ್ನು ಸೇರಿಕೊಳ್ಳುವಂತೆ ಉಪದೇಶಿಸಿದನು. ತಾನೂ ಕಾಲೇಜಿಗೆ ಹೋಗುತ್ತಿರುವುದನ್ನು ಆತನು ತಿಳಿಸಿದನು. ಈ ಸೂಚನೆಯು ನರ್ಮದಾಶಂಕರನಿಗೆ ಮಾನ್ಯವಾಗಿ ಅವನು ಮತ್ತೆ ಕಾಲೇಜಿಗೆ ಹೋಗತೊಡಗಿದನು. ಕಾಲೇಜಿನಲ್ಲಿ ಅವನು ತುಂಬ ಉತ್ಸಾಹ ದಿಂದ ದುಡಿದನು ಮತ್ತು ಎರಡು ತಿಂಗಳ ಸಮಯವು ಅಭ್ಯಾಸವಿಲ್ಲದೆ ಕಳೆದು ಹೋಗಿದ್ದರೂ, ಆ ಪರಿಸ್ಥಿತಿಯಲ್ಲಿ ಹೆಚ್ಚಿನ ಶ್ರಮವಹಿಸಿ ಅಭ್ಯಾಸಮಾಡಿ ಅವನು ವಾರ್ಷಿಕ ಪರೀಕ್ಷೆಯಲ್ಲಿ ತಿಂಗಳೊಂದಕ್ಕೆ ಹದಿನೈದು ರೂಪಾಯಿಗಳ ವೆಸ್ಟ್ ಶಿಷ್ಯ ವೃತ್ತಿಯನ್ನು ಗಳಿಸಿಕೊಂಡನು.

ಆದರೂ ಓದಿನತ್ತ ಅವನ ಮನಸ್ಸು ಸ್ಥಿರಗೊಳ್ಳಲಿಲ್ಲ. ಅವನಿಗೆ ನೆನಪಿನಲ್ಲಿ ಉಳಿದ ಒಬ್ಬನೇ ಒಬ್ಬ ಉಪಾಧ್ಯಾಯನು ದಾದಾಬಾಯಿ ನವರೋಜಿಯಾಗಿದ್ದು ಅವರು ಗಣಿತವನ್ನು ಕಲಿಸುತ್ತಿದ್ದರು ಮತ್ತು ಈ ವಿದ್ಯಾರ್ಥಿಯ ಇಂಗ್ಲಿಶಿನ ಮೇಲಿನ ಪ್ರಭುತ್ವವನ್ನು ಪ್ರಶಂಸಿಸಿದ್ದರು. ಇದನ್ನಷ್ಟು ಬಿಟ್ಟರೆ ಆತನು ತನ್ನ ಯೋಚನೆಗಳಲ್ಲಿ

ಮತ್ತು ಜಂಭದ ಮಾತುಗಳಲ್ಲಿ ಮುಳುಗಿದ್ದನು. ತಾನು ಇಂಗ್ಲಂಡಕ್ಕೆ ಹೋಗುವ ದಾಗಿ ಹೆಮ್ಮೆಯಲ್ಲಿ ಹೇಳುತ್ತಿದ್ದನು ಮತ್ತು ತಾನೊಬ್ಬ ಪ್ರಸಿದ್ಧಪುರುಷನಾಗುವನೆಂದು ಕೂಡ ಕೊಚ್ಚಿಕೊಳ್ಳುತ್ತಿದ್ದನು. ಅಂತು ತನ್ನ ಮಾತುಗಳಲ್ಲಿ ಮತ್ತು ವಿಚಾರಗಳಲ್ಲಿ ಮುಳುಗಿದ ಅವನಿಗೆ ತನ್ನ ಗುರುಗಳು ಹೇಳುತ್ತಿದ್ದುದರ ಕಡೆಗೆ ಗಮನವೇ ಇರುತ್ತಿರಲಿಲ್ಲ. ಈ ಬಗೆಯ ದೊಡ್ಡ ದೊಡ್ಡ ಮಾತುಗಳಿಗಾಗಿ ಮತ್ತು ಅವನು ಬಹಿರಂಗವಾಗಿ ನಿಶ್ಚಿಂತನಾಗಿ ಇರುವಂತೆ ಕಾಣುತ್ತಿದ್ದ ಕಾರಣ ಅವನ ಸ್ನೇಹಿತರಾದ ರಘುವೇರಿಲಾಲರೇ ಮೊದಲಾದವರು ಅವನನ್ನು 'ಲಾಲಾಜಿ' ಎಂದು ಕರೆಯುತ್ತಿದ್ದರು. ಅಧ್ಯಯನದಲ್ಲಿ ಹೀಗೆ ಅವನು ತಾಳ್ಮೆಗೆಟ್ಟಂತೆ ಮತ್ತು ಗಮನವಿಲ್ಲದಂತೆ ಕಂಡರೂ ಕಾವ್ಯದ ಪಾಠವು ನಡೆದಾಗ್ಗೆ ಮಾತ್ರ ಅವನು ಮೈಯೆಲ್ಲ ಕಿವಿಯಾಗಿ ನಡೆದುಕೊಳ್ಳುತ್ತಿದ್ದನು. ಫಾಕ್‌ನರ್ ಅವರು ಬರೆದ 'ನೌಕಾಭಂಗ' ಮತ್ತು ವರ್ಡ್ಸ್‌ವರ್ಥ್ ಅವರ ಬೇರೆ ಕೆಲವು ಕವನಗಳು ಅವನ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದ್ದವು. 'ನೌಕಾಭಂಗ'ದಲ್ಲಿ ನಾವಿಕರು ತೋರಿದ ಧೈರ್ಯವನ್ನು ಆಶ್ಚರ್ಯದಿಂದ ಪುಲಕಿತನಾಗಿ ಮೆಚ್ಚಿಕೊಂಡಿದ್ದರೆ, ಮೊದಲಿನ ಕವನಗಳಲ್ಲಿ ನಿಸರ್ಗದ ವರ್ಣನೆಗಳಿಂದ ಸಂತುಷ್ಟನಾಗಿದ್ದನು. 'ನೌಕಾಭಂಗ'ದಿಂದ ಸ್ಫೂರ್ತಿಯನ್ನು ಪಡೆದು ಆತನು ಇಂಗ್ಲಿಶಿನಲ್ಲಿ ನೂರಾರು ಸಾಲುಗಳನ್ನು ರಚಿಸಿ ಪ್ರಾಧ್ಯಾಪಕ ರೀಡ್ ಅವರಿಗೆ ತೋರಿಸಿದನು. ಅವರು ಆ ಕವನದ ಸಾಲುಗಳನ್ನು ನೋಡಿ ನಕ್ಕರಷ್ಟೇ ಅಲ್ಲದೆ ಇಂಗ್ಲಿಶಿನಲ್ಲಿ ಅವನು ಕವನಗಳನ್ನು ರಚಿಸುವ ವಿಚಾರಕ್ಕಾಗಿಯೆ ನಕ್ಕುಬಿಟ್ಟರು.

ಆದರೆ ಅಷ್ಟರಲ್ಲಿ ಬೀಜಾಂಕುರವಂತೂ ಆಗಿಹೋಗಿತ್ತು. ಆ ವರ್ಷದ ಸೆಪ್ಟಂಬರ್ ತಿಂಗಳಲ್ಲಿ ಅವನಿಗೆ ಮಧ್ಯಕಾಲೀನ ಗುಜರಾತದ ಸುಪ್ರಸಿದ್ಧ ಸಂತಕವಿಯಾದ ಧೀರ ಭಗತನ ಕೆಲವು ರಚನೆಗಳು ನೋಡಲಿಕ್ಕೆ ಸಿಕ್ಕಿದುವು. ಅವುಗಳಿಂದ ಅತ್ಯಂತ ಮೋಹಗೊಂಡ ಅವನು ಸಂದರ್ಭವಿರಲಿ, ಇಲ್ಲದಿರಲಿ ಅವುಗಳನ್ನು ಹಾಡುತ್ತ ನಡೆದನು. ಅವುಗಳಲ್ಲಿ ಅಡಕವಾಗಿದ್ದ ಸನ್ಯಾಸದ ವಿಚಾರಗಳು, ಆಗಿನ ಅವನ ಮನಸ್ಸನ್ನು ಆವರಿಸಿಕೊಂಡಿದ್ದ ಕಾರಣ ಅವನಿಗೆ ಅತ್ಯಂತವಾಗಿ ರುಚಿಸಿದವು. ಅದೇ ಸುಂಕವು ಅವನಲ್ಲಿ ಬೇರೂರಿತು. ಅದೇ ರೀತಿಯಲ್ಲಿ ಅವನೂ ಕೆಲವು ಹಾಡುಗಳನ್ನು ಕಟ್ಟಿದನು ಮತ್ತು ಅದರಿಂದ ತನಗೆ ತುಂಬ ಸಮಾಧಾನವಾಯಿತು ಎಂಬುದನ್ನು ತಿಳಿದು ಅವನು ಸಂತಸಪಟ್ಟನು. ಆ ಕಾಲದಲ್ಲಿ ಅವನ ಮನಸ್ಸಿಗೆ ನೆಮ್ಮದಿಯು ಆವಶ್ಯಕತೆಯು ಬಲವಾಗಿ ಇದ್ದುದರಿಂದ ಅವನ ಈ ಕಾವ್ಯರಚನೆಯು ಆ ಬೇಡಿಕೆಯನ್ನು ಪೂರ್ಣಗೊಳಿಸಿತು. ತಾನು ಬಯಸಿದ—ಅಧ್ಯಯನ, ಧನಪ್ರಾಪ್ತಿ ಮತ್ತು ಮಡದಿ, ಇವೆಲ್ಲ ತನಗೆ ಸಂತೋಷವನ್ನುಂಟುಮಾಡಲು ಬೇಕಷ್ಟೆ; ಕವನ ಸೃಷ್ಟಿಯು ಈ ಕಾರ್ಯದಿಂದ ಕೂಡ ತನಗೆ ಅಂತಹ ಸಂತಸವೇ ದೊರಕುವದು. ಅಂದಮೇಲೆ ತಾನು ಅದರಲ್ಲಿಯೆ ತೊಡಗಬಾರದೇಕೆ? ಎಂದು ಅವನು ತನ್ನನ್ನೆ

ಕೇಳಿಕೊಂಡನು. ಅವನು ಹಾಗೆಯೆ ಮಾಡಬೇಕು ಮತ್ತು ಹೇಗಾದರೂ ದೊರೆಯುವ ಮುಷ್ಟಿಕಾಳುಗಳಿಗಾಗಿ ಅವನು ಚಿಂತಿಸಬಾರದು. ಈ ಯೋಚನೆಯಿಂದ ಆತನು ಕವಿಯ ಜೀವನದತ್ತ ಹೊರಳಿದನು ಮತ್ತು ಮುಂದೆ ಅದರಿಂದ ಆತನಿಗೆ ಕೀರ್ತಿಯು ಲಭಿಸಿತಷ್ಟೆ ಅಲ್ಲದೆ ಅವನ ಜೀವನ ಪ್ರವಾಹವನ್ನೆ ಬದಲಿಸಿತು.

ತನ್ನ ಮೊದಲ ಕವನವನ್ನು ರಚಿಸಿದ ದಿನವು ಅವನ ಸ್ಮರಣೆಯಲ್ಲಿ ಉಳಿಯಲಿಲ್ಲ. ಆದರೆ ತನ್ನ ವಯಸ್ಸಿನ ೨೩ ನೆಯ ಹುಟ್ಟಿದ ದಿನವನ್ನು, ಅಂದರೆ ೧೮೫೫ ರ ಸೆಪ್ಟಂಬರ್ ೨೧ ನೆಯ ದಿನಾಂಕವನ್ನು, ಹಿಂದೂ ಪಂಚಾಂಗದ ಮೇರೆಗೆ ತಾನು ಕವಿಯ ಜೀವನವನ್ನು ಆರಂಭಿಸಿದುದಾಗಿ ನಿರ್ಧರಿಸಿದನು.

ಅನಂತರ ಅವನು ಪ್ರತಿದಿನ ಒಂದಿಲ್ಲೊಂದು ಕೃತಿಯನ್ನು ರಚಿಸತೊಡಗಿದನು.

ಈ ಪಠ್ಯೇತರ ಚಟುವಟಿಕೆಗೆ ಮೆಚ್ಚಿಕೊಂಡ ಅವನಿಗೆ ಪಾಠಪ್ರವಚನಗಳ ಕಡೆಗೆ ಕೊಡಬೇಕಾದಷ್ಟು ಗಮನವನ್ನು ಕೊಡಲಾರದಂತಾದನು ಮತ್ತು ಅದರ ಪರಿಣಾಮವಾಗಿ ಮುಂದೆ ಜರುಗಿದ ಪರೀಕ್ಷೆಯಲ್ಲಿ ಆತನಿಗೆ ವಾಂಛಿತವಾದ ವಿದ್ಯಾರ್ಥಿವೇತನವು ತಪ್ಪಿಹೋಯಿತು. ಅಂತೆಯೆ ಅವನು ಯಾವ ಮನ್ನಣೆಯೂ ಇಲ್ಲದೆ ಪರೀಕ್ಷೆಯಲ್ಲಿ ಸಾಮಾನ್ಯವಾಗಿ ಉತ್ತೀರ್ಣನಾದನು.

ಅವನ ಬದುಕಿನಲ್ಲಿ ಉಂಟಾದ ಈ ಪರಿವರ್ತನೆಗೆ ಜೊತೆಯಾಗಿ ಇನ್ನೊಂದು ವಿಚಾರಾಂತರವು ಅವನಲ್ಲಿ ಸೇರಿಕೊಂಡಿತು. ತರುಣ ಮಿತ್ರರ ಸಂಸ್ಥೆಯನ್ನು ಆತನು ಮತ್ತೆ ಸೇರಿದನು ; ಆ ಸಂಸ್ಥೆಯು ಅಷ್ಟರಲ್ಲಿ ತನ್ನ ಹೆಸರನ್ನು ಬದಲಿಸಿಕೊಂಡು ಸ್ವಲ್ಪದರಲ್ಲಿ "ಬುದ್ಧಿವರ್ಧಕ ಸಭಾ" ಎಂಬುದಾಗಿತ್ತು. ಅದರ ಕಾರ್ಯಕಲಾಪಗಳಲ್ಲಿ ಈಗ ಆತನು ಹೆಚ್ಚು ಉತ್ಸಾಹವನ್ನು ತಳೆದನು. ಅವನು ಆ ಸಭೆಯ ಆಶ್ರಯದಲ್ಲಿ ಎರಡು-ಮೂರು ಭಾಷಣಗಳನ್ನು ಮಾಡಿದನು ಮತ್ತು ಬಹಿರಂಗವಾಗಿ ಎರಡು-ಮೂರು ತನ್ನ ಕವನಗಳನ್ನು ಹಾಡಿದನು. ಶ್ರೋತೃಗಳಿಂದ ಅವು ಮೆಚ್ಚಿಕೆಯನ್ನು ಪಡೆದುದೊಂದು ಆಶ್ಚರ್ಯವಾಗಿದ್ದರೂ, ಆ ತರುಣ ಕವಿಗಿಂತ ಅಂದಿನ ಕೇಳುಗರಿಗೆ ಛಂದಸ್ಸಿನ ನಿಯಮಗಳು ಕಡಿಮೆ ತಿಳಿದಿದ್ದವು. ಯಾಕೆಂದರೆ ಆಗಿನ ಮುಂಬಯಿಯಲ್ಲಿ ಗುಜರಾತಿಯಲ್ಲಿ ಕಾವ್ಯರಚನೆಯು ನಡೆದ ವಿಚಾರವು ಯಾರಿಗೂ ಗೊತ್ತಿರಲಿಲ್ಲ. ವಾಸ್ತವವಾಗಿ ಆ ಕಾಲದ ಗುಜರಾತದ ಬೇರೆ ಭಾಗಗಳಲ್ಲಿ ಹೆಸರುಗಳಿಸಿಕೊಂಡಿದ್ದ ದಲಪತರಾಮನ ವಿಷಯವು ಮುಂಬಯಿಯಲ್ಲಿ ಯಾರಿಗೂ ತಿಳಿದಿರಲಿಲ್ಲ. ನರ್ಮದಾಶಂಕರನು ಈ ಮತ್ತು ಇಂತಹ ಅನ್ಯ ಕವಿಗಳ ಮಾರ್ಗದಲ್ಲಿಯೇ ಅವರ ಕೃತಿಗಳನ್ನು ಆಳವಾಗಿ ಅಭ್ಯಸಿಸಿದನಂತರ, ತನ್ನ ಕವನಗಳನ್ನು ರಚಿಸಿದ್ದನು. ಈ ಒಂದು ಲೋಪದ ಬಗ್ಗೆ ಅವನಲ್ಲಿ ಆತ್ಮಪ್ರಜ್ಞೆಯು ಜಾಗೃತವಾಗಿದ್ದರೂ, ಅದು ಅನ್ಯರಿಗೆ ಅನಗತವಾಗಿರಲಿಲ್ಲ ಎಂದು ಅವರ ಎಲ್ಲ ಮೆಚ್ಚಿಕೆಯನ್ನು ಸ್ವಾಗತಿಸಿ, ಅವರ ಮನ್ನಣೆಯನ್ನು ಸಂತೋಷದಿಂದ ಸ್ವೀಕರಿಸಿದ್ದನು.

ಆದರೆ ಅವನ ಮನಸ್ಸಿನಲ್ಲಿ ಅಶಾಂತಿಯಿತ್ತು. ಈ ಜನರಿಗೆಲ್ಲ ಕಾವ್ಯ ಮತ್ತು ಛಂದಸ್ಸಿನ ನಿಯಮಗಳು ಗೊತ್ತಿರದೆ ನನ್ನನ್ನು ಶ್ಲಾಘಿಸಿದುದೇನೊ ಸರಿಯೆ; ಆದರೆ ತಾನು ಗಣ್ಯನಾದ ಕವಿಯಾಗಬೇಕಾಗಿದ್ದರೆ ಆ ನಿಯಮಗಳನ್ನು ತಿಳಿಯಲೇಬೇಕು. ಒಂದು ಮಾಸಪತ್ರಿಕೆಯಲ್ಲಿ ಓದಿದ ಲೇಖನದಲ್ಲಿ ಛಂದಸ್ಸಿನ ಶಾಸ್ತ್ರವನ್ನು ಪಿಂಗಳಶಾಸ್ತ್ರ ಎಂದು ಕರೆದಿದ್ದುದನ್ನು ಆತನು ಓದಿದ್ದನು ಎಂದು ಅವನು ಆ ಶಾಸ್ತ್ರದ ಶೋಧದಲ್ಲಿ ತೊಡಗಿದನು.

ಅದು ಮುಂಬಯಿಯಲ್ಲಿಯಂತೂ ಎಲ್ಲಿಯೂ ದೊರೆಯಲಿಲ್ಲ. ಹಾಗಾದರೆ ಅದನ್ನು ಪಡೆಯಲು ಮಾಡಬೇಕಾದುದೇನು ? ಆ ವಿಷಯವಾಗಿ ಸಂಸ್ಕೃತದಲ್ಲಿಯಾಗಲಿ, ಪ್ರಾಕೃತದಲ್ಲಿಯಾಗಲಿ ಗ್ರಂಥಗಳಿದ್ದರೆ ಅವುಗಳನ್ನು ದೊರಕಿಸಲಿಕ್ಕೆ ಪ್ರಯತ್ನಿಸಬೇಕೆ? ಆ ಭಾಷೆಗಳ ಪುಸ್ತಕಗಳು ಕೂಡ ಮುಂಬಯಿಯಲ್ಲಿ ಲಭ್ಯವಾಗಲಿಲ್ಲ. ಈಗ ? ತಾನು ಆ ವಿಷಯವಾಗಿ ತುಂಬ ಪರಿಚಯವಿದ್ದ ಕವಿ ದಲಪತರಾಮನಿಗೆ ಪತ್ರ ಬರೆಯಬೇಕೆ ? ಅದೇನು ಬೇಡ. ಸೂರತದಲ್ಲಿ ಕಿರಿಯ ಕವಿಯೊಬ್ಬನು ತನ್ನ ರಚನೆಯನ್ನು ಓದಿ ಜನರ ಮೆಚ್ಚಿಕೆಯನ್ನು ಪಡೆಯುವಷ್ಟರಲ್ಲಿ ಆತನು ನಡುವೆ ಬಂದು ತನ್ನ ಕೃತಿಯನ್ನು ಓದಿದ ಘಟನೆಯು ಅವನ ನೆನಪಿಗೆ ಬಂದಿತು. ಹಾಗಾದರೆ ಆ ಕಿರಿಯ ಕವಿಗೆ ಏಕೆ ಬರೆಯಬಾರದು ? ಈಗ ಅವನು ಪ್ರಬುದ್ಧನಾಗಿರಲಿಕ್ಕೆ ಸಾಕು. ಆ ಕವಿಯಾಗಿದ್ದ ಮನಮೋಹನದಾಸ ರಣಛೋಡದಾಸನಿಗೆ ಈತನು ಅತ್ಯಂತ ನಮ್ರವಾದ ಮತ್ತು ಹೆಚ್ಚು ವಿನಯಪೂರ್ವಕವಾದ ಪತ್ರವೊಂದನ್ನು ಬರೆದು ಛಂದಸ್ಸಿನ ಶಾಸ್ತ್ರವಿದ್ದ ಪುಸ್ತಕಗಳ ಕೆಲವು ಹೆಸರುಗಳನ್ನು ಸೂಚಿಸಲಿಕ್ಕೆ ಮತ್ತು ಆ ಕ್ಷೇತ್ರದಲ್ಲಿ ತಾನು ಕೈಕೊಳ್ಳಬೇಕೆಂದು ಮಾಡಿದ ಯಾತ್ರೆಯಲ್ಲಿ ತನಗೆ ಮಾರ್ಗದರ್ಶನ ಮಾಡಲಿಕ್ಕೆ ಕೋರಿಕೊಂಡನು. ಆ ಪತ್ರದೊಡನೆ ತಾನು ಕಳಿಸಿದ ಕೆಲವು ಕವನಗಳನ್ನು ಸರಿಪಡಿಸುವಂತೆ ಅವನನ್ನು ಕೇಳಿಕೊಂಡು ಆ ಬಗ್ಗೆ ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕೆಂದು ಬೇಡಿಕೊಂಡಿದ್ದನು.

ನರ್ಮದಾಶಂಕರನು ತನ್ನ ಪತ್ರಕ್ಕೆ ಉತ್ತರ ಬರಲೆಂದು ತುಂಬ ಆತುರದಿಂದ ಕಾಯ್ದನು; ಆದರೆ ಉತ್ತರವೇ ಬರಲಿಲ್ಲ. ಅದರಿಂದ ಅವನಿಗೆ ತುಂಬ ನಿರಾಸೆಯಾದರೂ ಮುಂಬಯಿಯಲ್ಲಿ ಒಬ್ಬ ಮಿತ್ರನಿಂದ ಸಂಸ್ಕೃತದ ಒಂದು 'ಶ್ರುತಬೋಧ' ಎಂಬ ಗ್ರಂಥವು ಅವನಿಗೆ ದೊರೆತು, ಅದನ್ನು ಒಬ್ಬ ಮಹಾರಾಷ್ಟ್ರೀಯ ಶಾಸ್ತ್ರಿಯವರ ಸಹಾಯದಿಂದ ತನಗೆ ತಿಳಿದುಕೊಳ್ಳಲು ಸಾಧ್ಯವಾಯಿತು ಎಂಬ ಸಮಾಧಾನವನ್ನು ಪಡೆದನು. ಆ ಪುಸ್ತಕದಿಂದ ಅವನಿಗೆ ಸಂಸ್ಕೃತದ ಕೆಲವು ವೃತ್ತಗಳ ಪರಿಚಯವಾದರೂ ದೇಶೀ ಮಾತ್ರಾ ವೃತ್ತಗಳು ಮತ್ತು ಮಾತ್ರೆಗಳು ಗೊತ್ತಾಗಲಿಲ್ಲ; ಅವುಗಳು ಅವಗತವಾಗುವವರೆಗೆ ಅವನ ಪ್ರಯತ್ನಕ್ಕೆ ಚ್ಯುತಿಯಿರಲಿಲ್ಲ. ದೇಶೀಯ ಧಾಟಿಗಳಲ್ಲಿ ಅವನು ಜಾಣತನದಿಂದ ಕವನಗಳ ರಚನೆಯನ್ನೆ ಮಾಡಲಿಲ್ಲ ಮತ್ತು ಕೆಲವು ಸಮಯ ಅವನು ಕೇವಲ ಸಂಸ್ಕೃತ ಛಂದಸ್ಸುಗಳ ಮೇರೆಗೆ ಕಾವ್ಯನಿರ್ಮಾಣದಲ್ಲಿ ತೊಡಗಿದನು.

ಅವನು ಸಮಯಕ್ಕಾಗಿ ಕಾದುಕೊಂಡಿದ್ದನು. ತನ್ನ ಎರಡನೆಯ ಮದುವೆಗಾಗಿ ಅವನು ಶೀಘ್ರದಲ್ಲಿಯೆ ಸೂರತಕ್ಕೆ ಹೋಗಲಿದ್ದನು. ಅಲ್ಲಿ ನಿಶ್ಚಿತವಾಗಿಯೂ ತನಗೆ ಪಿಂಗಳವು ಪ್ರಾಪ್ತವಾಗಿ ಶಾಸ್ತ್ರೀಯವಾಗಿ ಕವಗಳನ್ನು ರಚಿಸುವ ಕಲೆಯಲ್ಲಿ ನಿಪುಣನಾಗುವನು ಎಂದುಕೊಂಡನು.

೫

ಅವನು ಸೂರತಕ್ಕೆ ತೆರಳಿದನು ಮತ್ತು ಅಲ್ಲಿ ದಹಿಗೌರಿ ಎಂಬ ಹುಡುಗಿಯೊಡನೆ ೧೮೫೬ ರ ಮೇ ತಿಂಗಳಲ್ಲಿ ಎರಡನೆಯ ಮದುವೆಯನ್ನು ಮಾಡಿಕೊಂಡನು. ಮದುವೆಯ ಗಡಿಬಿಡಿಯಲ್ಲಿ ಮತ್ತು ಮದುವೆಯ ಪದ್ಧತಿಯಲ್ಲಿ ಕೆಲವು ಚಿಕ್ಕಪುಟ್ಟ ಸುಧಾರಣೆಗಳನ್ನು ಮಾಡಿಕೊಳ್ಳಬೇಕು ಎಂದು ಅವನು ಸೂಚಿಸಿದ್ದಕ್ಕಾಗಿ ಅವನ ತಂದೆ ಮತ್ತು ಬೇರೆ ಹಿರಿಯರೊಡನೆ ಆದ ವಿವಾದದ ಗೊಂದಲದಲ್ಲಿ ಅವನಿಗೆ ಅಲ್ಲಿ ಆ ಛಂದಸ್ಸಿನ ಪುಸ್ತಕಗಳ ಶೋಧವನ್ನು ಮಾಡುವದಾಗಲೀ ಇಲ್ಲ. ವಿವಾಹವಾದ ಕೂಡಲೇ ಆತನಿಗೆ ಮುಂಬಯಿಗೆ ಬರಬೇಕಾಯಿತು. ಯಾಕೆಂದರೆ ಅಲ್ಲಿ ಅವನ ಕಾಲೇಜು ಮತ್ತು ಅವನ ವಿದ್ಯಾಭ್ಯಾಸಗಳು ಅವನ ದಾರಿಯನ್ನೆ ನೋಡುತ್ತಿದ್ದವು. ಮುಂಬಯಿಗೆ ತಿರುಗಿ ಬಂದೊಡನೆ ಅವನ್ನು ಕಾಲೇಜನ್ನು ಸೇರಿಕೊಂಡನು. ಆದರೆ ಆ ಅಧ್ಯಯನದಲ್ಲಿ ತನಗೆ ಹೆಚ್ಚಿನ ಅಭಿರುಚಿಯಿಲ್ಲ ಮತ್ತು ಆ ಕಾರಣವಾಗಿ ತಾನು ಅದನ್ನು ಮುಂದುವರಿಸಲಾರೆ ಎಂಬ ವಿಷಯದಿಂದ ಅವನಿಗೆ ಆಶ್ಚರ್ಯವಾಯಿತು. ಮೊದಲನೆಯದಾಗಿ ಅವನು ಕಾವ್ಯರಚನೆಯಲ್ಲಿ ತಲ್ಲೀನನಾಗಿ, ಸಂಸ್ಕೃತ ಮತ್ತು ಇಂಗ್ಲಿಶ್ ಭಾಷೆಗಳಲ್ಲಿ ಗ್ರಂಥಗಳನ್ನು ಬರೆದು ಕೀರ್ತಿಯನ್ನು ಗಳಿಸಬೇಕು ಎಂಬ ಆಕಾಂಕ್ಷೆ ಮತ್ತು ಎರಡನೆಯದಾಗಿ ತಾನು ಈಗ ಪ್ರಬುದ್ಧನಾಗಿದ್ದು ಏನಾದರೂ ಹಣವನ್ನು ಗಳಿಸಿ ಮನೆತನದ ವೆಚ್ಚಕ್ಕೆ ಸಹಾಯವನ್ನು ಸಲ್ಲಿಸಿ ತನ್ನ ತಂದೆಯ ಮೇಲಿನ ಭಾರವನ್ನು ಕಡಮೆ ಮಾಡದೆ ಕಾಲೇಜಿನಲ್ಲಿ ವ್ಯರ್ಥವಾಗಿ ಏನನ್ನಾದರೂ ಕಲಿಯುತ್ತ ಸಾಗುವದು ಅವನಿಗೆ ಅಸಹ್ಯವೆನಿಸಿತು. ಅವನ ತಂದೆಯು ಕೂಡ ಅವನಿಗೆ ಯಾವುದಾದರೊಂದು ಕೆಲಸವನ್ನು ಹಿಡಿಯಲಿಕ್ಕೆ ಮತ್ತು ವಿರಾಮದ ಸಮಯದಲ್ಲಿ ತನ್ನ ಕಾವ್ಯಸೃಷ್ಟಿಯಲ್ಲಿ ತೊಡಗುವಂತೆ ಮತ್ತು ಸಂಸ್ಕೃತ-ಇಂಗ್ಲಿಶ್‌ಗಳಲ್ಲಿ ಅಧ್ಯಯವನ್ನು ನಡೆಸುವಂತೆ ಹೇಳಿದನು. ಕೊನೆಯಲ್ಲಿ ಈ ಎಲ್ಲ ಮಾತುಗಳಿಂದ ಅವನಿಗೆ ಮನವರಿಕೆಯಾಗಿ ತಾನು ಕಾಲೇಜಿನ ಅಭ್ಯಾಸವನ್ನು ಬಿಟ್ಟುಬಿಡಬೇಕು ಎಂದು ತೋರಿ, ಸಾಕಷ್ಟು ಅನುಮಾನ ಮತ್ತು ದೀರ್ಘ ಯೋಚನೆಯನಂತರ ಕಾಲೇಜಿನಿಂದ ಹೊರಬರುವ ನಿರ್ಣಯವನ್ನು ಕೈಕೊಂಡು ೧೮೫೬ ರ ಆಗಸ್ಟ್ ೧೯ ನೆಯ ದಿನಾಂಕ ಕಾಲೇಜಿನಿಂದ ಬಿಡುಗಡೆಯನ್ನು ಹೊಂದಿದನು. ಅವನ ಪ್ರಿನ್ಸಿಪಾಲರಾಗಿದ್ದ ಶ್ರೀ ಹಾರ್ಕನೆಸ್ ಅವರು ಅವನಿಗೊಂದು ಉತ್ತಮವಾದ ಶಿಫಾರಸ್ಸಿನ ಪತ್ರವೊಂದನ್ನು ಕೊಟ್ಟರು.

ಅದರ ಬಲದಿಂದ ಆತನು ಒಂದು ಒಳ್ಳೆಯ ಕೆಲಸಕ್ಕಾಗಿ ಪ್ರಯತ್ನವನ್ನು ನಡೆಯಿಸಿದನು. ಅವನು ಕಾಲೇಜಿನಲ್ಲಿ ಇದ್ದಾಗ್ಗೆ ಕಚ್ಛದ ಮಹಾರಾವ್ ಅವರು ಪ್ರಿನ್ಸಿಪಾಲ ಹಾರ್ಕ್‌ನೆಸ್ ಅವರಿಗೊಂದು ಪತ್ರವನ್ನು ಬರೆದು ಇಂಗ್ಲಿಷನ್ನು ಚೆನ್ನಾಗಿ ಕಲಿಸಬಲ್ಲ ಒಬ್ಬ ಶಿಕ್ಷಕನನ್ನು ಕಳಿಸಬೇಕೆಂದು ಬಿನ್ನವಿಸಿಕೊಂಡಿದ್ದರು. ಅದಕ್ಕಾಗಿ ಅವರು ಕೊಡಮಾಡಿದ ಒಂದು ನೂರು ರೂಪಾಯಿಗಳು ತಿಂಗಳೊಂದಕ್ಕೆ ಆಕರ್ಷಕ ವಾದ ಸಂಬಳವೆನಿಸಿತ್ತು. ಶ್ರೀ ಹಾರ್ಕನೆಸ್ ಅವರು ನರ್ಮದಾಶಂಕರನ ಹೆಸರನು ಶಿಫಾರಸು ಮಾಡಿದ್ದರು; ಆದರೆ ಮಹಾರಾವ್ ಅವರಿಗೆ ನಾಗರಬ್ರಾಹ್ಮಣರಾರೂ ಬೇಕಾಗಿರಲಿಲ್ಲವೆಂದು ನರ್ಮದಾಶಂಕರನಿಗೆ ಆ ಸ್ಥಳವು ದೊರೆಯಲಿಲ್ಲ. ಕಚ್ಛದಲ್ಲಿ ಛಂದಸ್ಸಿನ ಕೆಲವು ಪುಸ್ತಕಗಳಿರುತ್ತವೆ ಮತ್ತು ಅಲ್ಲಿ ಹೋದರೆ ತನಗೆ ಅವು ಓದಲಿಕ್ಕೆ ಸಿಗುವವು ಎಂಬ ವಿಚಾರದಿಂದ ಆತನು ಅತ್ತ ಹೋಗಲು ಉತ್ಸುಕ ನಾಗಿದ್ದನು. ಅದಲ್ಲದೆ ತಾನು ಮಹಾರಾವನಲ್ಲಿ ಕಾವ್ಯ ಕಲೆಯ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದರೆ ತನ್ನ ಕೆಲಸವೂ ಸ್ಥಿರವಾಗಿ ತಾನು ಅಲ್ಲಿ ಶಾಂತರೀತಿಯಿಂದ ಕವಿ ಜೀವನ ವನ್ನು ಮುಂದುವರಿಸಬಹುದು ಎಂದೂ ಅವನು ರಹಸ್ಯವಾಗಿ ಯೋಚಿಸಿದ್ದನು. ಆದರೆ ಅದು ಆಗುವಂತಿರಲಿಲ್ಲ. ಅದರ ನಂತರ ಆತನು ಬೇರೆ ಒಂದು ಕೆಲಸಕ್ಕಾಗಿ ಪ್ರಯತ್ನವನ್ನು ಮಾಡಿದನು; ಆದರೆ ಅದೂ ನಿಷ್ಫಲವಾಯಿತು.

ತನಗೆ ಬೇಗನೆ ಕೆಲಸವೊಂದು ಸಿಕ್ಕಲಿಲ್ಲ ಎಂದು ಅವನೇನೂ ಆಲಸ್ಯದಲ್ಲಿ ಕಾಲ ಕಳೆಯಲಿಲ್ಲ. ಅವನು ಕಾವ್ಯರಚನೆಯಲ್ಲಿ ತೊಡಗಿಯೇ ಇದ್ದನು ಮತ್ತು ಒಬ್ಬ ವಿದ್ವಾಂಸನಾದ ಬ್ರಾಹ್ಮಣನಿಂದ ಸಂಸ್ಕೃತದ ಪಾಠಗಳನ್ನು ಹೇಳಿಸಿಕೊಳ್ಳ ಲೆಳಸಿದನು. ಅವನು 'ವೃತ್ತರತ್ನಾಕರ'ವನ್ನು ಸಂಪೂರ್ಣವಾಗಿ ಓದಿಕೊಂಡನು ಮತ್ತು 'ರಘುವಂಶ'ದ ಕೆಲವು ಸರ್ಗಗಳ ಅಭ್ಯಾಸವನ್ನೂ ಕೈಕೊಂಡನು. ಈ ಕಾರ್ಯದಲ್ಲಿ ಮಗ್ನನಾದಾಗ್ಗೆ ಪತ್ರಿಕೆಯಲ್ಲಿ ಒಂದು ಜಾಹೀರಾತನ್ನು ಅವನು ನೋಡಿದನು. ವೈಷ್ಣವ ಗೋಸಾವೀಜಿ ಮಹಾರಾಜರ ಸ್ಥಾನ ಮತ್ತು ಚರಿತ್ರೆಯ ಬಗ್ಗೆ ಉತ್ತಮವಾದ ಒಂದು ಪ್ರಬಂಧವನ್ನು ಬರೆದವರಿಗೆ ಒಂದು ನೂರು ರೂಪಾಯಿಗಳ ಪಾರಿತೋಷಕ ವನ್ನು ಕೊಡುವುದಾಗಿ ಅದರಲ್ಲಿ ಸಾರಿದ್ದರು. ಆ ಸ್ಪರ್ಧೆಯಲ್ಲಿ ಭಾಗವಹಿಸಿ ಕೊಡಮಾಡಿದ ಬಹುಮಾನವನ್ನು ಪಡೆಯಬೇಕೆಂದು ನರ್ಮದಾಶಂಕರನು ಯೋಚಿಸಿ ದನು. ಸ್ವತಃ ದೊಡ್ಡ ಪಂಡಿತರೂ, ಒಂದು ದೊಡ್ಡ ವೈಷ್ಣವ ದೇವಾಲಯದ ಪ್ರಮುಖರೂ ಆಗಿದ್ದ ವೈಜನಾಥಶಾಸ್ತ್ರಿ ಅವರನ್ನು ಆತನು ಆ ವಿಷಯದ ಕೆಲವು ಪುಸ್ತಕಗಳನ್ನು ಪಡೆಯಲಿಕ್ಕೆಂದು ಸಂಧಿಸಿದನು. ಆ ಪುಸ್ತಕಗಳೇನೊ ಅಲ್ಲಿ ಇದ್ದವು; ಆದರೆ ಅವುಗಳನ್ನು ಮಂದಿರದ ಹೊರಗೆ ಯಾರಿಗೂ ಕೊಡುವ ಅಧಿಕಾರವು ಆ ಸಭ್ಯ ಗೃಹಸ್ಥನಿಗೆ ಇರಲಿಲ್ಲ. ಆ ಕಾರಣ ಆತನು ನರ್ಮದಾಶಂಕರನಿಗೆ ಸೂಕ್ತವಾದ ಉಪದೇಶವನ್ನು ಮಾಡಿದನು. ಆ ಎಲ್ಲ ಪುಸ್ತಕಗಳು ಸೂರತದಲ್ಲಿ

ಇರುತ್ತವೆ ಮತ್ತು ಆತನು ಅಲ್ಲಿಗೆ ಹೋದರೆ ಸಹಜವಾಗಿ ಅವು ದೊರೆಯಬಹುದು. ಆ ತರುಣ ಕವಿಗೆ ಅವನು ಮಾಡಿದ ಸೂಚನೆಯು ಮಾನ್ಯವಾಯಿತು ಮತ್ತು ತಾನು ಸೂರತದಲ್ಲಿ ಆ ಗ್ರಂಥಗಳನ್ನು ಪಡೆಯದೆ ಹೋದರೂ ತನಗೆ ಅಲ್ಲಿ ಪಿಂಗಳಶಾಸ್ತ್ರದ ಕೆಲವು ಹೊತ್ತಗೆಗಳಾದರೂ ದೊರೆಯಬಹುದು ಎಂದು ಭಾವಿಸಿದನು. ಅಂತೆಯೆ ತನ್ನ ತಂದೆಯವರು ತನಗೆ ಸೂರತಕ್ಕೆ ಹೋಗಗೊಡುವಂತೆ ಅವರನ್ನು ಮನವೊಲಿಸಿ ಅವನು ಕೂಡಲೆ ಅತ್ತ ಹೊರಟನು. ಅವನಿಗೆ ಅಲ್ಲಿ ವೈಷ್ಣವ ಮಹಾರಾಜರ ವಿಷಯಕ ಗ್ರಂಥಗಳು ದೊರೆಯಲಿಲ್ಲ. ಆದರೆ ಆಕಸ್ಮಿಕವಾಗಿ ಅವನ ಅವಗಾಹನೆಗೆ ಬಂದ ಗ್ರಂಥವು, ಆವರೆಗೆ ತಾನು ಹಾತೊರೆಯುತ್ತಿದ್ದ — ದೇಸೀ ವೃತ್ತಗಳ ಗ್ರಂಥವೊಂದಾಗಿತ್ತು.

ಇಂತಹ ಪುಸ್ತಕಗಳಿಗಾಗಿ ಕವಿಯು ಕೈಕೊಂಡ ಶೋಧವು ಅವನ ಜೀವನದಲ್ಲಿಯೇ ಒಂದು ರೋಮಾಂಚಕಾರಕ ಮತ್ತು ಉತ್ಸಾಹಪೂರ್ಣ ಪ್ರಕರಣವಾಗಿತ್ತು. ಅದರಲ್ಲಿ ಆತನು ಪಡೆದ ಯಶಸ್ಸಿನ ಫಲವೇ ಇಂದು ಆತನು ಗಳಿಸಿದ ಕೀರ್ತಿಗೆ ಮೂಲ! ಅವನು ಅನೇಕ ಕ್ಷೇತ್ರಗಳಲ್ಲಿ ಮಾರ್ಗದರ್ಶಕನಾದನು.

ಎಲ್ಲ ಮಹತ್ವದ ಸಂಶೋಧನಗಳಂತೆ ಇದು ಕೂಡ ಅನಿರೀಕ್ಷಿತವಾಗಿಯೆ ಆಗಿತ್ತು. ಅವನು ಸೂರತಕ್ಕೆ ಹೋದಕೂಡಲೆ ತನ್ನ ಸಂಗಡ 'ಜ್ಞಾನಸಾಗರ'ಕ್ಕಾಗಿ ದುಡಿಯುತ್ತಿದ್ದ ಒಬ್ಬ ಹಳೆಯ ಸಹೋದ್ಯೋಗಿಯನ್ನು ಸಂಧಿಸಿದನು. ಅವನಿಗೆ ತಾನು ಅಂತಹ ಪುಸ್ತಕವೊಂದರ ಆವಶ್ಯಕತೆಯನ್ನು ತೀವ್ರವಾಗಿ ಭಾವಿಸುತ್ತಿದ್ದುದಾಗಿಯೂ ಅದರ ಶೋಧದಲ್ಲಿ ಆತನು ತನಗೆ ಸಹಾಯಮಾಡಬೇಕು ಎಂದೂ ಅವನನ್ನು ಕೇಳಿಕೊಂಡನು. ಅವರಿಬ್ಬರೂ ಸೂರತನಗರದ ತುಂಬೆಲ್ಲ ಹೆಚ್ಚಿನ ಉತ್ಕಂಠೆಯಿಂದ ಅಲೆದಾಡಿದರು; ಅಷ್ಟರಲ್ಲಿ ಅಂತಹ ಪುಸ್ತಕದ ಯಾವ ಸಂಬಂಧವೂ ಇಲ್ಲದ ಒಬ್ಬ ಉಪ್ಪಾರನ ಭೇಟಿಯು ಆಕಸ್ಮಿಕವಾಗಿ ಅವರಿಗೆ ಆಯಿತು. ಗೋವರ್ಧನ ಎಂಬ ಹೆಸರಿನ ಈ ಗೊಂಡಿಯು ಕವನಗಳ ಮತ್ತು ಹಾಡುಗಳ ಭಕ್ತನಾಗಿದ್ದನು. ನಮ್ಮ ಕವಿಯು ತನ್ನ ಕೆಲವು ಕೃತಿಗಳನ್ನು ಅವನ ಸಮ್ಮುಖದಲ್ಲಿ ಓದಿ ತೋರಿಸಲಾಗಿ, ಆ ಉಪ್ಪಾರನಿಗೆ ಅತ್ಯಂತ ಸಂತೋಷವಾಯಿತು. ತಾನೊಬ್ಬ ಸಾಮಾನ್ಯ ಮನುಷ್ಯ ಎಂದು ಆತನು ಸಾರುತ್ತ ತನ್ನ ಗುರುವಾದ ಲಾಲದಾಸನು ಶ್ರೇಷ್ಠ ಕವಿಯಾಗಿದ್ದು ಅವನ ಕಡೆ ಆ ಎಲ್ಲ ಪುಸ್ತಕಗಳು ಇರುತ್ತವೆ,ಎಂದು ತಿಳಿಸಿದನು. ಆ ಕವಿಯು ಬಯಸಿದ ಪುಸ್ತಕವು ಅವನಲ್ಲಿ ಇದ್ದರೂ ಇರಬಹುದು. ನಮ್ಮ ಕವಿಯು ಅತ್ಯಂತ ಉತ್ಸುಕನಾದನು. ಆದರೆ ಆ ಉಪ್ಪಾರನು ಒಂದೆರಡು ದಿನಗಳವರೆಗೆ ತಡೆಯುವಂತೆ ಹೇಳಿದನು. ತಾನು ಗುರುವಿನ ಎಲ್ಲ ಹಸ್ತಲಿಖಿತ ಪುಸ್ತಕಗಳನ್ನು ಪರೀಕ್ಷಿಸಿ, ಅವುಗಳಲ್ಲಿ ಆ ಬಗೆಯ ಗ್ರಂಥವೇನಾದರೂ ಇರುವದೊ ಹೇಗೆ ಎಂಬುದನ್ನು ತಿಳಿದುಕೊಳ್ಳುವುದಾಗಿ ತಿಳಿಸಿದನು. ಕವಿಯು ಮರುದಿನ ಅವನಲ್ಲಿಗೆ ಹೋಗುವದಾಗಿ ಒಪ್ಪಿಕೊಂಡನು.

ಅವನು ಅಲ್ಲಿಗೆ ಹೋದ ಕೂಡಲೆ ಅವನೆದುರು ಒಂದು ಪೆಟ್ಟಿಗೆಯ ತುಂಬೆಲ್ಲ ಇದ್ದ ಪುಸ್ತಕಗಳನ್ನು ಆ ಉಪ್ಪಾರನು ಅವನ ಅವಗಾಹನೆಗಾಗಿ ತಂದು ಇಟ್ಟನು. ಕವಿಯು ಆತುರತೆಯಿಂದ ಆ ಎಲ್ಲ ಗ್ರಂಥಗಳನ್ನು, ಹಳೆಯ ಸಾಮಗ್ರಿಯನ್ನು ನಿರೀಕ್ಷಿಸಿದನು ಮತ್ತು ಅವನಿಗೆ ಅತ್ಯಾನಂದವಾಗುವಂತೆ ತಾನು ಎದುರು ನೋಡುತ್ತಿದ್ದ ಪುಸ್ತಕವು ಅಲ್ಲಿ ದೊರೆಯಿತು. ಅದರ ಹೆಸರು "ಛಂದ ರತ್ನಾವಳಿ" ಎಂಬುದಾಗಿತ್ತು. ಕವಿಯು ಆ ಗ್ರಂಥವನ್ನು ತನ್ನ ಸಂಗಡ ಮನೆಗೆ ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದನು; ಆದರೆ ತನ್ನ ಗುರುವು ಅಂತಹ ಅಮೌಲ್ಯ ಗ್ರಂಥವನ್ನು ಒಯ್ಯಲಿಕ್ಕೆ ಬಿಡಲಾರನು ಎಂದು ಉಪ್ಪಾರನು ತಿಳಿಸಿದನು. ಅವನು ಅದರ ಪ್ರಯೋಜನವನ್ನು ಪಡೆಯ ಬೇಕು ಎಂದು ಬಯಸಿದ್ದರೆ, ಆ ಪುಸ್ತಕವನ್ನು ತನ್ನ ಮನೆಗೆ ಒಯ್ದು ಅಲ್ಲಿ ಅದರ ಪ್ರತಿಯನ್ನು ಮಾಡಿಕೊಳ್ಳಬಹುದು ಎಂದು ಸೂಚಿಸಿದನು. ನರ್ಮದಾಶಂಕರನು ಅದನ್ನು ಕೂಡಲೆ ಒಪ್ಪಿಕೊಂಡನು ಮತ್ತು ಅಂದಿನಿಂದ ಪ್ರತಿದಿನ ಮುಂಜಾನೆ ಒಂದು ಮಸಿಯ ಕುಡಿಕೆ ಮತ್ತು ಲೆಕ್ಕಣಿಕೆಯೊಂದಿಗೆ ಉಪ್ಪಾರನ ಮನೆಗೆ ಹೋಗಿ ಪ್ರತಿದಿನ ಕೆಲವು ಪುಟಗಳನ್ನು ಪ್ರತಿ ಮಾಡಿಕೊಳ್ಳಲಿಕ್ಕೆ ತೊಡಗಿದನು. ಹೀಗೆ ಹಲವು ದಿನಗಳಾದ ಮೇಲೆ, ಉಪ್ಪಾರನಿಗೆ ತನ್ನಲ್ಲಿ ನಂಬುಗೆಯು ಹುಟ್ಟಿದನಂತರ ಆತನು ಒಂದು ದಿನ ಕೆಲವು ಪುಟಗಳನ್ನು ಮನೆಗೆ ಒಯ್ದು ಅವುಗಳ ಪ್ರತಿಯನ್ನು ಮಾಡಿಕೊಂಡು ಮರುದಿನ ಮತ್ತೆ ಕೆಲವು ಪುಟಗಳಿಗಾಗಿ ಬಂದಾಗ್ಗೆ ಮೊದಲಿನ ಪುಟಗಳನ್ನು ತಿರುಗಿ ಕೊಡುವಂತೆ ಅಪ್ಪಣೆಯನ್ನು ಪಡೆದುಕೊಂಡನು. ಈ ಏರ್ಪಾಡಿನಿಂದ ಆತನಿಗೆ ತುಂಬ ಸಹಾಯವಾಯಿತು ಮತ್ತು ಕೆಲವೇ ದಿನಗಳಲ್ಲಿ ಅವನು ಇಡಿಯ ಗ್ರಂಥವನ್ನು ಬರೆದುಕೊಂಡನು. ಅದರಲ್ಲಿ ದೇಶೀಯ ವೃತ್ತಗಳಾಗಿದ್ದ ದೋಹರಾ ಚೌಪಾಯಿಗಳಂತಹ ಮಾತ್ರೆಗಳ ಮತ್ತು ಛಂದಸ್ಸಿನ ಪರಿಚಯವಿದ್ದ ಕಾರಣ ಅದರಿಂದ ಅವನಿಗೆ ಹೆಚ್ಚು ಉಪಯೋಗವಾಯಿತು. ಅವನಿಗೆ ಸಂಸ್ಕೃತದ ಪರಿಚಯವು ಚೆನ್ನಾಗಿದ್ದ ಕಾರಣ ಆ ಸಂಪೂರ್ಣ ಪುಸ್ತಕವನ್ನು ತಾನೇ ಅರ್ಥಮಾಡಿಕೊಂಡನು.

ಈ ರೀತಿಯಾಗಿ ಸೂರತದಲ್ಲಿ ಅವನ ಕಾರ್ಯವು ತುಂಬ ಯಶಸ್ವಿಯಾದನಂತರ ಆತನು ಹೊಸ ಬಗೆಯ ಆತ್ಮವಿಶ್ವಾಸದಿಂದ ಮತ್ತು ಅನೇಕ ನವೀನ ಯೋಚನೆಗಳೊಂದಿಗೆ ಮುಂಬಯಿಗೆ ಬಂದನು.

ಉತ್ಸಾಹಪೂರ್ಣವಾಗಿ ಅವನು ಅಲ್ಲಿ ಅತ್ಯಂತ ಮನಃಪೂರ್ವಕವಾಗಿ ಕೆಲಸದಲ್ಲಿ ತೊಡಗಿದನು. ೧೮೫೭ ರ ಜನವರಿ ತಿಂಗಳಲ್ಲಿ ಅವನು ವಿದ್ಯಾವಂತ ಮತ್ತು ವಿದ್ಯಾಹೀನ ದಂಪತಿಗಳ ಜೀವನದ ಬಗ್ಗೆ ತುಲನಾತ್ಮಕವಾದ ಒಂದು ಕವನವನ್ನು ರಚಿಸಲಿಕ್ಕೆ ಅತ್ಯಂತ ಉತ್ಸಾಹದಿಂದ ಪ್ರಯತ್ನವನ್ನು ನಡೆಯಿಸಿದಾಗ ಆತನ ತಂದೆಯು ಆ ತಿಂಗಳ ಪತ್ರಿಕೆಯೊಂದರಲ್ಲಿ ಪ್ರಕಟವಾದ ದಲಪತರಾಮನ ಕೆಲವು ಕವನಗಳ ಕಡೆಗೆ ಅವನ ಗಮನವನ್ನು ಸೆಳೆದನು. ಆ ರಚನೆಗಳು ಪಿಂಗಳಶಾಸ್ತ್ರದ

ಕೆಲವು ನಿಯಮಗಳನ್ನು ಸಚಿತ್ರವಾಗಿ ವಿವರಿಸುತ್ತಿದ್ದವು. ಛಂದಃಶಾಸ್ತ್ರದ ನಿಯಮ ಗಳನ್ನು ಕಾವ್ಯದಲ್ಲಿಯೇ ತಿಳಿಸಿ ಹೇಳುವ ಕವಿಯ ಕಲ್ಪನಾಶಕ್ತಿಯನ್ನು ಕಂಡು ತಂದೆಯು ವಿಸ್ಮಯಗೊಂಡನು. ನರ್ಮದಾಶಂಕರನು ತಿರಸ್ಕಾರದಲ್ಲಿ ನಕ್ಕು ಹೀಗೆ ನುಡಿದನು : "ಅದೇನು ಅಷ್ಟು ಕಷ್ಟವಲ್ಲ." ತಂದೆಯು "ನೀನು ಪಿಂಗಳದ ಬಗ್ಗೆ ಒಂದು ಗ್ರಂಥವನ್ನು ಬರೆದರೆ ನಾನು ನಿನ್ನ ಜಾಣತನವನ್ನು ಒಪ್ಪಬಹುದು" ಎಂದು ಉತ್ತರಿಸಿದನು. ನರ್ಮದಾಶಂಕರನು ತತ್‌ಕ್ಷಣ ಆಗ್ಗೆ ತಾನು ಕೈಕೊಂಡಿದ್ದ ಕಾವ್ಯಕೃತಿಯನ್ನು ಅಷ್ಟಕ್ಕೆ ಬಿಟ್ಟುಕೊಟ್ಟು ಪಿಂಗಳಶಾಸ್ತ್ರದ ಪುಸ್ತಕವೊಂದರ ಬರೆವಣಿಗೆಯಲ್ಲಿ ತೊಡಗಿದನು. ಅವನು ಆ ಗ್ರಂಥದ ಮೊದಲ ಕೆಲವು ಶ್ಲೋಕ ಗಳನ್ನು ತನ್ನ ತಂದೆಗೆ ತೋರಿಸಲಾಗಿ ಆತನು ಸಂತೋಷಪಟ್ಟನು. ಕವಿಯು ಆ ಕೃತಿಯ ರಚನೆಯಲ್ಲಿ ಮುಂದಿನ ಕೆಲವು ದಿವಸಗಳಲ್ಲಿ ದುಡಿದು ಮಾರ್ಚ್ ತಿಂಗಳಲ್ಲಿ ಅದನ್ನು ಪೂರ್ಣಗೊಳಿಸಿದನು. ತನ್ನ ತಂದೆಯನ್ನು ಆ ಪುಸ್ತಕದ ಒಂದು ಹೊಸ ಪ್ರತಿಯನ್ನು ಮಾಡಿಕೊಡುವಂತೆ ಬಿನ್ನವಿಸಿಕೊಂಡನು ಮತ್ತು ಅದನ್ನು ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಕಲ್ಲಚ್ಚಿನಲ್ಲಿ ಪ್ರಕಟಿಸಿದನು.

ಆ ಕೃತಿಯ ವಿಷಯದಲ್ಲಿ ಅತ್ಯಂತ ಉತ್ತಮವಾದ ವಿಮರ್ಶೆಗಳು ಬಂದವು. ಮಹಿಪತಿರಾಮ ರೂಪರಾಮ ಎಂಬ ಪ್ರಖ್ಯಾತ ಸಾಹಿತಿಯು ಅದೊಂದು ಉತ್ಕೃಷ್ಟವಾದ ಗ್ರಂಥವಾಗಿದ್ದು ಅದರಿಂದ ಅದರ ಲೇಖಕನಿಗೆ ಪ್ರಖ್ಯಾತ ಕವಿಗಳ ಸಾಲಿನಲ್ಲಿ ಸ್ಥಾನವನ್ನು ದೊರಕಿಸಿಕೊಡುತ್ತದೆ ಎಂದು ಬರೆದನು. ದಲಪತರಾಮ ಕವಿಯು "ಈ ವರೆಗೆ ಕಾವ್ಯವನ್ನು ಹೇಗೆ ರಚಿಸಬೇಕು ಎಂಬ ಬಗ್ಗೆ ಯಾರೂ ಗ್ರಂಥವನು ಬರೆದಿರಲಿಲ್ಲ. ಮುಂಬಯಿಯ ನರ್ಮದಾಶಂಕರರು ಇಂತಹ ಒಂದು ಕೃತಿಯನ್ನು ಸೃಷ್ಟಿಸಿದ್ದಾರೆ. ಇಂತಹ ಹೊತ್ತಿಗೆಯನ್ನು ಬರೆಯಲಿಕ್ಕೆ ಅವರಿಗೆ ಸಾಕಷ್ಟು ತೊಂದರೆ ಯಾಗಿರಲಿಕ್ಕೆಬೇಕು. ಗುಜರಾತೀ ಭಾಷೆಯಲ್ಲಿ ಅಂತಹ ಕೃತಿಯು ಮೊದಲನೆಯದು" ಎಂದು ನುಡಿದನು. ಇದರಿಂದ ಉತ್ತೇಜನವನ್ನು ಪಡೆದು ನರ್ಮದಾಶಂಕರನು ಅಲಂಕಾರಶಾಸ್ತ್ರದ ಗ್ರಂಥಗಳ ಅಭ್ಯಾಸದಲ್ಲಿ ತೊಡಗಿದನು ಮತ್ತು ಅದೇ ವರ್ಷದ ಡಿಸೆಂಬರ್ ತಿಂಗಳ ಕೊನೆಯುಷ್ಟರಲ್ಲಿ ಪಂಡಿತರೊಬ್ಬರಲ್ಲಿ ನಡೆಯಿಸಿದ ಆ ಪಾಠಗಳನು ಪೂರ್ಣಗೊಳಿಸಿದನು.

ಈ ಅವಧಿಯಲ್ಲಿ ಆತನು ಗೋಕುಲದಾಸ ತೇಜಪಾಲ ವಿದ್ಯಾಲಯದಲ್ಲಿ ಶಿಕ್ಷಕ ನೆಂದು ಕೆಲಸವನ್ನು ಕೈಗೊಂಡಿದ್ದನು. ಸರಕಾರೀ ಪಾಠಶಾಲೆಗಳಲ್ಲಿ ಕೆಲಸಕ್ಕಿರುವದು ಹೆಚ್ಚು ಶ್ರೇಯಸ್ಕರ ಎಂದು ಆತನು ಭಾವಿಸಿದನು. ಅಂತೆಯೆ ಆತನು ಎಲ್‌ಫಿನ್‌ಸ್ಟನ್ ಸಂಸ್ಥೆಯ ಕೇಂದ್ರೀಯ ವಿದ್ಯಾಲಯದಲ್ಲಿ ಒಂದು ಶಿಕ್ಷಕನ ಕೆಲಸಕ್ಕೆಂದು ಅರಿಕೆಯನ್ನು ಮಾಡಿಕೊಂಡು ಅದನ್ನು ಪಡೆದನು.

ಮುಂದಿನ ವರ್ಷದ ಜನವರಿ ತಿಂಗಳ ಮೊದಲಭಾಗದಲ್ಲಿ ಆತನು ತನ್ನ ಇನ್ನೊಂದು ಪುಸ್ತಕವನ್ನು ಬರೆಯುವ ಸಿದ್ಧತೆಯನ್ನು ನಡೆಯಿಸಿದನು; ಅದು

ಅಲಂಕಾರ ಪ್ರವೇಶ ಎಂಬ ಗ್ರಂಥವಾಗಿತ್ತು ಮತ್ತು ಅನಂತರ ರಸಗಳ ವಿಷಯವಾಗಿ ಅಧ್ಯಯನವನ್ನು ಆರಂಭಿಸಿದನು. ಆ ವರ್ಷದ ಜೂನ್ ಅಥವಾ ಜುಲೈ ತಿಂಗಳ ಕೊನೆಯಷ್ಟರಲ್ಲಿ ಅವನು ಅಲಂಕಾರ ಮತ್ತು ರಸಗಳ ಎರಡೂ ಗ್ರಂಥಗಳನ್ನು ಬೆಳಕಿಗೆ ತಂದನು.

ಅವನಲ್ಲಿದ್ದ ತುಂಬ ಉತ್ಸಾಹ ಮತ್ತು ಅವನ ಹುಮ್ಮಸ್ಸಿನಿಂದ ತುಳುಕುವ ತಾರುಣ್ಯಗಳು ಮಾತ್ರ ಇಷ್ಟು ಅಲ್ಪಾವಧಿಯಲ್ಲಿ ಈ ಎಲ್ಲ ಗ್ರಂಥಗಳನ್ನು ಬರೆಯಲಿಕ್ಕೆ ಉತ್ತೇಜನವಾಗಿರದೆ ಅಲ್ಲಿಯವರೆಗೆ ಗುಜರಾತಿಯಲ್ಲಿ ಆ ಬಗೆಯ ಸಾಹಿತ್ಯವೇ ನಿರ್ಮಿತವಾಗಿರಲಿಲ್ಲ ಎಂಬ ಕಾರಣವೂ ಪ್ರಮುಖವಾಗಿದೆ. ಅದರ ಎಲ್ಲ ಸಾಧನ-ಸಾಮಗ್ರಿಯನ್ನು ಸಂಗ್ರಹಿಸುವದು ತೀರ ಕಷ್ಟದ ಕೆಲಸ ಎಂಬುದನ್ನು ಆತನು ಅರಿತಿದ್ದನು ಮತ್ತು ಇನ್ನೊಬ್ಬ ಹೊಸ ವ್ಯಕ್ತಿಯು ತಾನು ಎದುರಿಸಿದ ತೊಡಕುಗಳಿಂದ ಪೀಡಿತನಾಗಬಾರದು ಎಂಬುದೂ ಅವನ ಮನೀಷೆಯಾಗಿತ್ತು. ಅಂತು ಈ ಎಲ್ಲ ಕ್ಷೇತ್ರಗಳಲ್ಲಿ ಜರುಗಿದ ಗುಜರಾತೀ ಭಾಷೆಯ ಉತ್ತಮ ಕಾರ್ಯಕ್ಕೆ ಮಾರ್ಗದರ್ಶಕವಾದ ಇಂತಹ ಒಳ್ಳೆಯ ಕೃತಿಗಳನ್ನು ರಚಿಸಿ ಅವನು ಹೊಸ ಹಾದಿಯನ್ನು ಹಾಕಿಕೊಟ್ಟನು. ಈ ಎಲ್ಲ ಪಾಂಡಿತ್ಯಪೂರ್ಣ ಕಾರ್ಯದೊಡನೆ ಅವನಲ್ಲಿ ಹುದುಗಿಕೊಂಡಿದ್ದ ಸೃಜನಾತ್ಮಕ ಭಾವನೆಯು ಆ ವರ್ಷದ ಏಪ್ರಿಲ್-ಮೇ ತಿಂಗಳಲ್ಲಿ ತನ್ನ ಕವನಗಳ ಎರಡು ಸಂಪುಟಗಳನ್ನು ಪ್ರಕಟಿಸುವಂತೆ ಪ್ರೇರೇಪಿಸಿತು. ಅವುಗಳನ್ನು ಯಥಾರ್ಥವಾಗಿ 'ನರ್ಮ-ಕವಿತಾ' ಭಾಗ ಒಂದು ಮತ್ತು ಎರಡು ಎಂದು ಹೆಸರಿಸಿದನು.

ಹೀಗೆ ತೀವ್ರಗತಿಯಿಂದ ಕೃತಿಗಳು ಬಂದಂತೆ ಕವಿಯ ಕೀರ್ತಿಯು ಗಗನದೆತ್ತರವನ್ನು ತಲುಪಿತು. ಸಂತುಷ್ಟನಾದ ಮತ್ತು ಕೃತಜ್ಞತೆಯಿಂದ ತುಂಬಿದ ಜನತೆ ಅವನ ಮೇಲೆ 'ಕವಿ' ಎಂಬ ಗೌರವಪೂರ್ಣ ಅಭಿಧಾನವನ್ನು ಅರ್ಪಿಸಿದರು. ಆ ಬಿರುದು ಇನ್ನೂವರೆಗೆ ಅವನ ಹೆಸರಿನೊಡನೆ ಅಂಟಿಕೊಂಡಿದೆ—೧೮೫೫ರಲ್ಲಿ ಅವನು ರಚಿಸಿದ ಮೊದಲ ಕವಿತೆಯ ಒಂದುನೂರಾ ಇಪ್ಪತ್ತೊಂದು ವರ್ಷಗಳನಂತರ ಕೂಡ! ಆ ದಿನಗಳ ಮೆರುಗು ಈಗ ಮಾಯವಾಗಿದೆ. ಕಾವ್ಯರಚನೆಯ ಬಗ್ಗೆ ವಿಚಾರಗಳು ಬದಲಾಗಿವೆ. ಇಂದಿನ ಎಷ್ಟೋ ಜನ ವಾಚಕರು ಅವನ ವಿಪುಲ ಕಾವ್ಯಸಂಗ್ರಹದಲ್ಲಿ ನಿಜವಾಗಿಯೂ ಕಾವ್ಯಮಯವಾದ ಸಾಮಗ್ರಿಯನ್ನು ಕಾಣಲಿಕ್ಕಿಲ್ಲ. ಆದರೂ ಇಂದಿಗೂ ಸಹ ನರ್ಮದಾಶಂಕರನು ಗುಜರಾತದಲ್ಲೆಲ್ಲ ಕವಿ ನರ್ಮದಾಶಂಕರನಾಗಿಯೆ ಉಳಿದಿದ್ದಾನೆ.

ಯಶಸ್ಸಿಗಾಗಿ ಅವನು ಹಂಬಲಿಸುತ್ತಿದ್ದನು ಮತ್ತು ಇಂದು ಅದು ಅವನ ಬಾಗಿಲವರೆಗೆ ನಡೆದುಬಂದಿತ್ತು. ನರ್ಮದಾಶಂಕರನು ಸಂಪಾದಕನಾಗಿದ್ದ "ಬುದ್ಧಿವರ್ಧಕ" ಪತ್ರಿಕೆಗೆ ಸುವಿಖ್ಯಾತನಾದ ದಲಪತರಾಮನು ಕೂಡ ಪ್ರಕಟನೆಗಾಗಿ ಕವನ

ಗಳನ್ನು ಕಳಿಸುತ್ತಿದ್ದನು—ಅದೂ ದಲಪತರಾಮನು ಹೇಳಿದಂತೆ ಆಗಿರದೆ ಸಂಪಾದಕನ ಸೂಚನೆಯ ಮೇರೆಗೆ! ನರ್ಮದಾಶಂಕರನಂತಹ ಮಹತ್ವಾಕಾಂಕ್ಷಿಗೆ ಕೂಡ ಇಷ್ಟು ಕೀರ್ತಿಯು ಸಾಕಷ್ಟೆನಿಸಿತ್ತು. ಅವನ ಗ್ರಂಥಗಳ ಮಾರಾಟವಾಗುತ್ತಿತ್ತು. ಅವರ ಕವಿತೆಗಳನ್ನು ಜನರು ಓದುತ್ತಿದ್ದರು, ಹೊಗಳುತ್ತಿದ್ದರು. ಅವನ ಹೆಸರು ಎಲ್ಲರ ನಾಲಗೆಯ ಮೇಲೆ ಇದ್ದಿತು. ಇನ್ನು ಹೆಚ್ಚಿನ ಸಾಹಿತ್ಯಕೃತಿಗಳ ಮತ್ತು ಇನ್ನೂ ಅಧಿಕ ಕೀರ್ತಿಯ ಅವಕಾಶಗಳು ದೊರೆಯತೊಡಗಿದವು. ಅಂತೆಯೆ ಎಲ್‌ಫಿನ್‌ಸ್ಟನ್ ಸಂಸ್ಥೆಯ ಕೇಂದ್ರೀಯ ವಿದ್ಯಾಲಯದಲ್ಲಿದ್ದ ಸಹಾಯಕ ಶಿಕ್ಷಕ ಎಂಬ ತನ್ನ ಚಿಕ್ಕ ಕೆಲಸವು, ಈ ಪರಿಸ್ಥಿತಿಯಲ್ಲಿ ಆತನಿಗೆ ಆ ಅವಕಾಶಗಳ ಪ್ರಯೋಜನವನ್ನು ಪಡೆಯಲಿಕ್ಕೆ ಆತಂಕವೆನಿಸಿತು. ಬೆಳಗಿನ ಹತ್ತೂವರೆ ಗಂಟೆಯಿಂದ ಸಂಜೆಯ ಅಯ್ದೂವರೆಯವರೆಗೆ ಪಾಠಶಾಲೆಯ ವಿದ್ಯಾರ್ಥಿಗಳು ಮಾಡುತ್ತಿದ್ದ ಸದ್ದಿನಲ್ಲಿ ಕೀರ್ತಿದೇವತೆಯ ಸುಮಧುರ ಸಂಗೀತವು ಅವನಿಗೆ ಕೇಳಿಸದಂತೆ ಹೋಗುತ್ತಿತ್ತು. ಆ ಕಾರಣ ತಾನು ಇನ್ನು ಮುಂದೆ ಕಾವ್ಯವಾಣಿಯನ್ನು ಮಾತ್ರ ಭಜಿಸಬೇಕು ಎಂದುಕೊಂಡನು. ಅದಕ್ಕಾಗಿ ತಾನು ಎಲ್ಲ ಬಂಧನಗಳನ್ನು ಮುರಿದೊಗೆಯಬೇಕು, ಎಲ್ಲ ಶೃಂಖಲೆಗಳನ್ನು ಎತ್ತಿ ಎಸೆಯಬೇಕು. ಕಾಯಾ, ವಾಚಾ ಮತ್ತು ಮನಸಾ ಇನ್ನು ಮೇಲೆ ತಾನು ಎಲ್ಲದಕ್ಕಿಂತ ಹೆಚ್ಚು ಬಯಸಿದ ಕಾರ್ಯದಲ್ಲಿಯೆ ಮಗ್ನನಾಗಿ ಬೇರೆ ಶ್ರಮದ ಕೆಲಸಗಳನ್ನೆಲ್ಲ ತೊರೆಯಬೇಕು ಎಂದು ನಿರ್ಧರಿಸಿದನು.

ಈ ತನ್ನ ಅಭಿಪ್ರಾಯದ ವಿಷಯವಾಗಿ ಆತನು ವಿದ್ಯಾಲಯದ ತನ್ನ ಸಹೋದ್ಯೋಗಿಗಳ ಸಂಗಡ ಮಾತನಾಡಲಾಗಿ ಅವರು ಕೂಡ ಅವನ ನಿರ್ಣಯವನ್ನು ಮೆಚ್ಚಿಕೊಂಡರು. ಅದರಿಂದ ಆತನಿಗೆ ಇನ್ನಷ್ಟು ಹುರುಪು ಬಂದು ಪಾಠಶಾಲೆಯ ತನ್ನ ಕೆಲಸವನ್ನು ಬಿಡಲಿಕ್ಕೆ ಮತ್ತು ಕೇವಲ ಸಾಹಿತ್ಯಸೃಷ್ಟಿಗೆ ಸಂಪೂರ್ಣವಾಗಿ ತನ್ನ ಶಕ್ತಿಯನ್ನೆಲ್ಲ ಮುಡಿಪನ್ನಾಗಿ ಇಡುವಂತೆ ಅದು ಪ್ರೋತ್ಸಾಹಿಸಿತು. ಸಾವಕಾಶ ವಾದರೂ ಸ್ಥಿರವಾಗಿ ಈ ಅವನ ಭಾವವು ಒಂದು ಬಲವತ್ತರವಾದ ಸಂಕಲ್ಪವಾಗಿ ಪರಿಣಮಿಸಿತು. ಒಮ್ಮೆ ಆ ನಿರ್ಣಯವನ್ನು ಅವನು ಕೈಕೊಂಡ ತರುವಾಯ ಅವನನ್ನು ಯಾರೂ ತಡೆಯುವಂತಿರಲಿಲ್ಲ. ಈ ವಿಷಯವಾಗಿ ಅವನು ತಂದೆಗೆ ಕೂಡ ಯಾವ ಮಾತನ್ನೂ ತಿಳಿಸಿರಲಿಲ್ಲ; ಇತ್ತ ೧೮೫೮ರ ನವಂಬರ್ ೨೩ನೆಯ ದಿನಾಂಕ ಅವನು, ತನ್ನ ನಿರ್ಧಾರಕ್ಕೆ ಒಳಗಾಗಿ ಪಾಠಶಾಲೆಯ ತನ್ನ ಸ್ಥಳಕ್ಕೆ ರಾಜೀನಾಮೆ ಯನ್ನು ಸಲ್ಲಿಸಿ, ಸಂಪೂರ್ಣವಾಗಿ ಸರಸ್ವತೀದೇವಿಯ ಆರಾಧಕನಾದನು. ಕೊನೆಯ ದಿನ ವಿದ್ಯಾಲಯದಿಂದ ಮನೆಗೆ ತಿರುಗಿ ಹೋದಕ್ಷಣ ಆತನು ತನ್ನ ಲೇಖನಿಯನ್ನು ದಿಟ್ಟಿಸಿ ನೋಡಿ, ಕಣ್ಣುಗಳಲ್ಲಿ ನೀರು ಹರಿಯುತ್ತಿದ್ದರೂ ಈ ಮಾತುಗಳನ್ನು ಆಡಿದನು: "ಈಗ ನಾನು ನಿನ್ನ ರಕ್ಷಣೆಯನ್ನು ಕೋರುತ್ತೇನೆ." ಇನ್ನು ಮುಂದೆ ತಾನು ಸರಸ್ವತಿಯೊಬ್ಬಳನ್ನೆ ಸೇವಿಸುವದು ಮತ್ತು ತನ್ನಿಂದ ಇಡಿಯ ದಿನ ಸೇವೆಯನ್ನು ಅಪೇಕ್ಷಿಸುವ ಬೇರೆ ಯಾವ ಒಡೆಯನನ್ನೂ ಅಲ್ಲ ಎಂದುಕೊಂಡನು.

ತನ್ನನ್ನು ಯಾವಾಗಲೂ ಅತ್ಯಂತ ವಾತ್ಸಲ್ಯದಿಂದ ನೋಡುತ್ತಿದ್ದ ಆತನ ತಂದೆಯು, ಈ ವಿಷಯವನ್ನು ಅರಿತ ಕೂಡಲೆ ಕೋಪಾವಿಷ್ಟನೂ ಆಗಲಿಲ್ಲ, ಅವನ ನಿರ್ಣಯಕ್ಕೆ ಆಕ್ಷೇಪಣೆ ಎತ್ತಲಿಲ್ಲ; ಆದರೆ "ಅಂತಹದೇನು ಅವಸರವಿದ್ದಿತು, ಮಗು?" ಎಂದು ಮಾತ್ರ ನುಡಿದನು.

ಆದರೆ ಕವಡೆಗಳನ್ನು ಒಗೆದು ಆಗಿತ್ತು ಮತ್ತು ಇನ್ನು ಆ ನಿರ್ಣಯವನ್ನು ಹಿಂದೆಗೆದುಕೊಳ್ಳುವಂತಿರಲಿಲ್ಲ. ಆಗ್ಗೆ ನರ್ಮದಾಶಂಕರನಿಗೆ ಇಪ್ಪತ್ತೈದು ವರ್ಷಗಳ ವಯಸ್ಸು ಮಾತ್ರ ಆಗಿತ್ತು ಮತ್ತು ಘೋರವಾದ ಹೆಜ್ಜೆಯನ್ನಿಟ್ಟಾಗ್ಗೆ ಚರಿತಾರ್ಥದ ಯಾವ ಮಾರ್ಗವೂ ಅವನಿಗೆ ಅವಗಡವಾಗಿರಲಿಲ್ಲ. ಇಂತಹ ನಿರ್ಣಯವನ್ನು ಮಾಡಿದಾಗ್ಗೆ ಅದರ ಹಿಂದೆ ಅಡಕವಾಗಿದ್ದ ಹಿರಿಯ ಹೊಣೆಯ ಅರಿವಾಗುವದು ಮತ್ತು ಕವಿಯು ಕೈಗೊಂಡ ಈ ಐತಿಹಾಸಿಕ ನಿರ್ಣಯಕ್ಕೆ ಸ್ಫೂರ್ತಿಯನ್ನು ನೀಡಿದ ಆತನ ತ್ಯಾಗಭಾವನೆಯ ಕಲ್ಪನೆಯೂ ಉಂಟಾಗುವದು. ಇಂದು, ಅಂದರೆ ೧೯೭೬ ರಲ್ಲಿ ಕೂಡ ಭಾರತದಲ್ಲಿ ಲೇಖನ ಕಾರ್ಯದಿಂದ ಉಪಜೀವನವನ್ನು ಸಾಗಿಸುವದು ಎಷ್ಟು ಕಠಿಣ ಎಂಬುದು ಎಲ್ಲರಿಗೂ ತಿಳಿದ ಮಾತಾಗಿದೆ. ಅಂದಮೇಲೆ ೧೮೫೮ ರಲ್ಲಿ ಅದು ಎಷ್ಟು ದುಸ್ತರವೆನಿಸಿರಬಹುದು? ಆಗ್ಗೆ ಸಾಮಾನ್ಯವಾಗಿ ಜನರಲ್ಲಿ ಕಾವ್ಯ ಮತ್ತು ಸಾಹಿತ್ಯಗಳ ಬಗ್ಗೆ ಅಷ್ಟು ಜಾಗೃತಿಯಿರಲಿಲ್ಲ. ಆದರೆ ನರ್ಮದಾಶಂಕರನು ಇಂತಹ ನಿರ್ಣಯಗಳನ್ನು ಮಾಡಿಕೊಂಡು ಎಂತಹ ದುರ್ಧರ ಪರಿಸ್ಥಿತಿಯಲ್ಲಿಯೂ ಅದನ್ನು ನಡೆಸುವಂತಹ ವ್ಯಕ್ತಿಯಾಗಿದ್ದನು.

ಆದರೆ ಸಂಕಲ್ಪವಿರಲಿ ಬಿಡಲಿ ನರ್ಮದಾಶಂಕರನಂತಹ ಕವಿಯಾದವರಿಗೂ ಉದರ ನಿರ್ವಾಹದ ಪ್ರಶ್ನೆಯು ಇರುತ್ತದೆಯಷ್ಟೆ. ಅವನಿಗೆ ಇತ್ತ ಸ್ಥಿರವಾದ ಆದಾಯವಿರಲಿಕ್ಕೆ ಆಧಾರವಿರಲಿಲ್ಲ; ಮತ್ತು ತನ್ನ ಆ ವಯಸ್ಸಿನಲ್ಲಿ ತಂದೆಗೆ ಭಾರವಾಗುವದು ಅವನಿಗೆ ಬೇಡವಾಗಿತ್ತು; ಅವನ ತಂದೆಯವರಿಗೂ ವಯಸ್ಸಾಗಿತ್ತು ಎಂಬ ಕಾರಣದಿಂದ ಕೂಡ. ಆದರೆ ತಾನು ಮಾಡಬೇಕಾದುದಾದರೂ ಏನನ್ನು? ತನಗೆ ಕವನಗಳಲ್ಲಿ ಆಸ್ಥೆಯಿದ್ದುದು ಅವರಿಗೆ ಗೊತ್ತು ಮತ್ತು ಸಮಾಜದ ನೀತಿ ಮತ್ತು ಭಕ್ತಿಮಯ ಜೀವನ ಇವುಗಳಲ್ಲಿ ಅವನಿಗೆ ಅಭಿರುಚಿಯಿದ್ದಿತು. ಹೊಟ್ಟೆಯ ಪಾಡಿಗಾಗಿ ಅವನಿಗೆ ಬೇರೆ ಯಾವ ಮಾರ್ಗವೂ ಅಷ್ಟು ಸೂಕ್ತವೆನಿಸಲಿಲ್ಲ. ಹಾಗಿದ್ದರೆ ತಾನು ಹರಿದಾಸನಾಗಲಿ, ಕೀರ್ತನಕಾರನಾಗಲಿ ಏಕಾಗಬಾರದು? ಆ ದಾರಿಯಿಂದ ತಾನು ಜೀವನ ನಿರ್ವಹಣೆಯವನ್ನು ಕೈಕೊಳ್ಳಬಹುದು, ತನ್ನ ಜ್ಞಾನ ಭಂಡಾರವನ್ನೂ ಸಮೃದ್ಧಗೊಳಿಸಿಕೊಳ್ಳಬಹುದು. ಅಲ್ಲದೆ ಆ ಕಾಲದಲ್ಲಿ ಗುಜರಾತದಲ್ಲಿ ಹರಿದಾಸರಂತೆ ಕೀರ್ತನಗಳನ್ನು ಹೇಳುವವರು ಯಾರೂ ಇರಲಿಲ್ಲ; ಇತ್ತ ತನ್ನ ಭಾಷೆ ಮತ್ತು ಕಾವ್ಯಗಾಯನದ ಶೈಲಿಗಳು ಉಚ್ಚ ಮಟ್ಟದಲ್ಲಿದ್ದವು. ಅಂತೆಯೆ ತಾನು ಸಂಸ್ಕೃತದಲ್ಲಿ ಇನ್ನಷ್ಟು ಆಳವಾಗಿ ಅಧ್ಯಯನವನ್ನು ಕೈಗೊಂಡು ಗುಜರಾತಿಯಲ್ಲಿ

ಕೆಲವು ಹರಿಕಥೆಗಳನ್ನು ಕಟ್ಟಿ ಅದರಿಂದ ತನ್ನ ಉಪಜೀವನವನ್ನು ಸಾಗಿಸಬೇಕು ಎಂದು ಭಾವಿಸಿ, ತನ್ನ ಯೋಜನೆಯ ಸಿದ್ಧಿಗಾಗಿ ಆತನು ಸಹಾಯಕ್ಕಾಗಿ ಕೆಲವು ಜನ ಹಿಂದೂ ವರ್ತಕರನ್ನು ಸಂಧಿಸಿದನು. ಆದರೆ ಅವರಿಂದ ದೊರೆತ ಹಣವು ಅವನು ನಿರೀಕ್ಷಿಸಿದ ಮೊತ್ತವಾಗಿರಲಿಲ್ಲ.

ಆದರೂ ಆತನು ಪುಣೆಗೆ ಹೋಗಿ ಅಲ್ಲಿ ಸಂಸ್ಕೃತದ ಅಭ್ಯಾಸವನ್ನು ಆರಂಭಿಸಿದನು. ಅಲ್ಲಿ ಅವನು 'ಲಘುಕೌಮುದಿ'ಯ ಕೆಲ ಅಂಶವನ್ನೂ ಮತ್ತು ಕಾಲಿದಾಸನ ಇಡಿಯ 'ವಿಕ್ರಮೋರ್ವಶೀಯ' ನಾಟಕವನ್ನು ಪಠಿಸಿದನು. ಅಲ್ಲಿ ಅವನು ಕಾವ್ಯಶಾಸ್ತ್ರವನ್ನು ಓದಿಕೊಂಡನು. ಅದರಲ್ಲಿ ಅವನ ಆಸಕ್ತಿಯು ಹೆಚ್ಚಾಗಿ ಗುರುಗಳಿಂದ ಕಾವ್ಯರಚನೆಯ ಸಲುವಾಗಿ ಆವಶ್ಯಕವಾಗಿದ್ದ ಅರ್ಹತೆಯ ಬಗ್ಗೆ ಚರ್ಚೆಯನ್ನು ನಡೆಯಿಸುತ್ತಿದ್ದನು. ಅಂತು ಅವನು ಪಿಂಗಳಶಾಸ್ತ್ರ, ರಸ ಮತ್ತು ಅಲಂಕಾರ ಇವುಗಳ ವಿಷಯವಾಗಿ ಹೆಚ್ಚಿನ ಜ್ಞಾನವನ್ನು ಪಡೆದನು.

ಈ ಬಗೆಯಾಗಿ ನಾಲ್ಕು ತಿಂಗಳ ಸತತ ಅಧ್ಯಯನದ ನಂತರ ಆತನು ೧೮೫೯ ರ ಮಾರ್ಚ್ ೨೦ ನೆಯ ದಿನಾಂಕ ಮುಂಬಯಿಗೆ ತಿರುಗಿ ಬಂದನು.

## ೬

ಇತ್ತ ನರ್ಮದಾಶಂಕರನು ಕೀರ್ತನಕಾರನಾಗಬೇಕೆಂದು ಕಂಡ ಕನಸು ಕನಸಾಗಿಯೇ ಉಳಿಯುವಂತಾಯಿತು. ಆ ಬಗೆಯ ವ್ಯವಸಾಯವನ್ನು ಆರಂಭಿಸಬೇಕಾದರೆ ಕೈಯಲ್ಲಿ ತುಸು ನಗದು ಹಣವಿರುವದು ಅಗತ್ಯವಾಗಿತ್ತು. ಆದರೆ ತಾನು ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಾಗ್ಗೆ ತನ್ನ ಬಳಿಯಲ್ಲಿಟ್ಟುಕೊಂಡ ಹಣವೆಲ್ಲ ಪುಣೆಯಲ್ಲಿ ವ್ಯಯಿಸಿಹೋಗಿತ್ತು. ಅತ್ತಿತ್ತ ಅವನು ಎಷ್ಟೇ ಪ್ರಯತ್ನಪಟ್ಟರೂ ಯಾವ ದಾರಿಯೂ ಕಾಣಲಿಲ್ಲ. ಇತ್ತ ತಾನು ತಂದೆಗೆ ತೊಡಕಾಗಬಾರದು ಎಂಬ ಅವನ ನಿಶ್ಚಯವು ದೃಢವಾಗಿತ್ತು.

ಈ ಬಗೆಯ ನಿರಾಶೆಯ ಸ್ಥಿತಿಯಲ್ಲಿ ಅವನು ಇದ್ದಾಗ್ಗೆ ಸೌರಾಷ್ಟ್ರದಲ್ಲಿ ಕೆಲಸಮಾಡುತ್ತಿದ್ದ ಹರಿಶಂಕರ ಎಂಬವನ ಬಗ್ಗೆ ಅವನು ಕೇಳಿದನು. ಅವನು ಸ್ವಾಮಿನಾರಾಯಣ ಪಂಥಕ್ಕೆ ಸೇರಿದ ಒಬ್ಬ ಧಾರ್ಮಿಕ ಭಾವನೆಯುಳ್ಳ ಗೃಹಸ್ಥನಾಗಿದ್ದನು ಮತ್ತು ಆತನು ತರುಣನಿರಲಿಕ್ಕೆ ಸಾಕು ಎಂದು ನರ್ಮದಾಶಂಕರನು ತಿಳಿದಿದ್ದನು. ಅವನು ಶಿಕ್ಷಕನೂ ಆಗಿರುವನೆಂಬುದನ್ನು ತಿಳಿದನಂತರ ಹರಿಶಂಕರನನ್ನು ತನ್ನ ಜೊತೆಗೆ ಬರುವಂತೆ ಕೇಳಿಕೊಂಡರೆ; ಅವನ ಪಾಲುಗಾರಿಕೆಯಲ್ಲಿ ಉತ್ತಮವಾದ ರೀತಿಯಲ್ಲಿ ಉಪಜೀವನದ ವ್ಯವಸ್ಥೆಯೂ ಆಗಬಹುದು ಮತ್ತು ಸಾಕಷ್ಟು ಶಿಕ್ಷಣ ಮತ್ತು

ಸಿದ್ಧತೆಯ ಫಲವಾಗಿ ತಾನು ನೈತಿಕ ಹಾಗೂ ಸಾಮಾಜಿಕ ವಿಷಯಗಳ ಮೇಲೆ ಉಪನ್ಯಾಸಗಳನ್ನು ಮಾಡಬಹುದು ಎಂದು ಅವನು ಯೋಚಿಸಿದನು. ಹಾಗಿದ್ದರೆ, ಆ ವ್ಯಕ್ತಿಯನ್ನು ಭೆಟ್ಟಿಯಾಗಲು ತಾನು ಹೋಗಬಾರದೇಕೆ? ಸೌರಾಷ್ಟ್ರದ ಭಾವನಗರದಿಂದ ಆತನು ಎಂಬತ್ತು ಮೈಲುಗಳಲ್ಲಿ ಇರುವನು ಮತ್ತು ಭಾವನಗರವು ಒಂದು ಪ್ರಮುಖ ಸಂಸ್ಥಾನವಾಗಿದ್ದು ಅದರ ಆಡಳಿತವು ವಿದ್ಯಾವಂತ ಸಂಸ್ಥಾನಿಕರ ಕೈಯಲ್ಲಿರುವದಲ್ಲದೆ ಅವನಿಗೆ ದಿವಾನನಾಗಿರುವವನು ಅನೇಕ ಸಾಂಸ್ಕೃತಿಕ ವಿಷಯ ಗಳಲ್ಲಿ ಆಸಕ್ತಿಯಿದ್ದವನಾಗಿರುವನು. ನರ್ಮದಾಶಂಕರನು ಅಲ್ಲಿಯವರೆಗೆ ಯಾವ ದೇಶೀಯ ಸಂಸ್ಥಾನವನ್ನೂ ಕಂಡಿರಲಿಲ್ಲ; ಅವುಗಳ ಬಗ್ಗೆ ಆತನು ಸಾಕಷ್ಟು ಸಂಗತಿಗಳನ್ನು ತಿಳಿದಿದ್ದರೂ ಈಗ ಅವುಗಳ ಒಂದು ಪ್ರಗತಿಪರ ಸಂಸ್ಥಾನಕ್ಕೆ ಹೋಗ ಬೇಕಾಗಿದೆ ಎಂಬ ವಿಚಾರವು ಅವನಿಗೆ ಹೆಚ್ಚಿನ ಆಕರ್ಷಣೆಯಾಗಿ ಪರಿಣಮಿಸಿತು. ವಾಡಿಕೆಯಂತೆ ಈತನು ತನ್ನ ತಂದೆಗೆ ಆ ವಿಷಯವಾಗಿ ಏನನ್ನೂ ತಿಳಿಸದೆ ಭಾವನಗರಕ್ಕೆ ಹೊರಟನು. ತುಸು ತೊಂದರೆ ಮತ್ತು ಅಮಿತ ಸಾಹಸದನಂತರ ಆಗಿನ ಕಾಲದ ಪ್ರವಾಸವನ್ನು ಮುಗಿಸಿ ಅವನು ಕೊನೆಯಲ್ಲಿ ಭಾವನಗರವನ್ನು ತಲುಪಿದನು ಮತ್ತು ತಾನು ಭೆಟ್ಟಿಯಾಗಲಿಕ್ಕೆ ಉತ್ಸುಕನಾಗಿದ್ದ ಹರಿಶಂಕರನ ವಿಷಯವಾಗಿ ಕೇಳಿದನು. ಅದಕ್ಕೆ ಉತ್ತರವಾಗಿ ಆತನಿಗೆ ದೊರೆತ ಸುದ್ದಿಯು ಸರಿಯಾಗಿರದೆ, ಹರಿಶಂಕರ ಎಂಬ ಹೆಸರಿನವನು ಯಾವುದೋ ಒಂದು ಅಪಚಾರದ ಪರಿಣಾಮವಾಗಿ ಈಗ ಸೆರೆಮನೆ ಯಲ್ಲಿರುವನು ಎಂಬುದು ಅವನಿಗೆ ತಿಳಿದುಬಂದಿತು. ಅದಲ್ಲದೆ ಹರಿಶಂಕರನು ಇರುವ ಸ್ಥಳವು ಭಾವನಗರದಿಂದ ತಾನು ತಿಳಿದುದಕ್ಕಿಂತ ಇನ್ನೂ ದೂರ ಇದೆ ಎಂಬುದು ಅವನಿಗೆ ಗೊತ್ತಾಯಿತು. ಅಂತೆಯೆ ಆ ದಿಕ್ಕಿನಲ್ಲಿ ಮುಂದುವರಿಯುವದು ನಿಷ್ಪ್ರಯೋಜಕ ಎಂಬುದರ ಅರಿವಾಗಿ ನರ್ಮದಾಶಂಕರನು ಭಾವನಗರದಲ್ಲಿ ಮಾಡ ಬೇಕಾದ ಕೆಲಸವನ್ನೆಲ್ಲ ಮುಗಿಸಿಕೊಂಡು ಮುಂಬಯಿಗೆ ತಿರುಗಿ ಹೋಗಬೇಕು ಎಂದು ಈಗ್ಗ ಅವನು ಯೋಚಿಸಿದನು.

ಅವನನ್ನು ಸಂಸ್ಥಾನಿಕನು ಬರಮಾಡಿಕೊಂಡನು ಮತ್ತು ತನ್ನ ಪಂಥದವನೇ ಆದ ದಿವಾನನು ಕೂಡ ಅವನನ್ನು ಗೌರವದಿಂದ ಸ್ವಾಗತಿಸಿದನು; ಆದರೆ ತನ್ನನ್ನು ಭೆಟ್ಟಿಯಾದಾಗ್ಗೆ ಆತನು ತನಗೆ ಏನೋ ಅನುಗ್ರಹವನ್ನು ಮಾಡುತ್ತಿರುವಂತೆ ಅವನಿಗೆ ತೋರಿತು. ಅದನ್ನು ಸಹಿಸಿಕೊಳ್ಳುವಂತಹ ವ್ಯಕ್ತಿ ಅವನಾಗಿರಲಿಲ್ಲ; ಅಂತೆಯೆ ಅವನು ತಿರುಗಿ ಮುಂಬಯಿಯನ್ನು ತಲುಪುತ್ತಲೆ ದಿವಾನನ ಮಕ್ಕಳಿಗೆ ಅವನಿಂದ ದೊರೆತ ಪುಸ್ತಕಗಳ ಸಾಧಾರಣ ಬೆಲೆಯಲ್ಲಿಯೆ ಪುಸ್ತಕಗಳನ್ನು ಕಾಣಿಕೆಯಾಗಿ ಕಳಿಸಿಕೊಟ್ಟನು. ಭಾವನಗರದಲ್ಲಿಯೇನೊ ಅವನಿಗೆ ಒಂದು ಚಿಕ್ಕ ಕೆಲಸವನ್ನು ಒಪ್ಪಿಸಲಾಯಿತು; ಆದರೆ ಆರ್ಥಿಕವಾಗಿ ಅದು ಹೆಚ್ಚು ಉಪಯುಕ್ತವಾಗಲಿಲ್ಲವೆಂದು ಅವನು ಆ ದೇಶೀಯ ಸಂಸ್ಥಾನಕ್ಕೆ ಹೊರಡುವ ಮೊದಲು ಮುಂಬಯಿಯಲ್ಲಿದ್ದ ಕಠಿಣ ಪರಿಸ್ಥಿತಿಯನ್ನೇ ಅವನು ಮತ್ತೆ ಎದುರಿಸಬೇಕಾಯಿತು.

ಭಾವನಗರದಿಂದ ಮರಳಿ ಬರುವಾಗ್ಗೆ, ಇನ್ನೊಂದು ದೇಶೀಯ ಸಂಸ್ಥಾನವಾಗಿದ್ದ ಬಡೋದೆಯನ್ನು ಸಂದರ್ಶಿಸಿದನು ; ಆದರೆ ಅಲ್ಲಿ ತಾನು ಒಂದು ಗ್ರಂಥದಲ್ಲಿ ಬರೆದ, ಕೊನೆಯ ಮಧ್ಯಕಾಲೀನ ಕವಿಯೆನಿಸಿದ ದಯಾರಾಮನ ವಿಷಯವಾಗಿ ಕೆಲವು ಸಂಗತಿಗಳನ್ನು ಸಂಗ್ರಹಿಸುವದನ್ನು ಬಿಟ್ಟು ಬಡೋದೆಯಲ್ಲಿ ಮತ್ತೇನನ್ನೂ ಪಡೆಯಲಿಲ್ಲ. ದೇಶೀಯ ಸಂಸ್ಥಾನಗಳಲ್ಲಿ ಆತನು ಸಾಧಾರಣವಾಗಿ ಇಪ್ಪತ್ತು ದಿನಗಳ ಪ್ರವಾಸವನ್ನು ಮಾಡಿದನಂತರ ಮುಂಬಯಿಗೆ ತಿರುಗಿ ಬಂದನು.

ಆ ಅಲೆಮಾರಿಯನ್ನು ಮುಂಬಯಿಯು ಕೂಡಲೆ ಸ್ವಾಗತಿಸಿ ತನ್ನ ಕಾರ್ಯಕಲಾಪಗಳ ಸುಳಿಯಲ್ಲಿ ಅವನನ್ನು ಸೆಳೆದುಕೊಂಡಿತು ; ಮುಂಬಯಿಯು ಆಗಿನ ಕಾಲದಲ್ಲಿ ಚಟುವಟಿಕೆಗಳಿಂದ ತುಂಬಿತ್ತು. ಸರಕಾರವು ಶಿಕ್ಷಣದ ಕ್ಷೇತ್ರದಲ್ಲಿ ಕಿಂಚಿತ್ ಕಾರ್ಯವನ್ನು ಆರಂಭಿಸಿತ್ತು ಮತ್ತು ಕೆಲಜನ ವಿದ್ಯಾವಂತರು ಸಮಾಜ ಸುಧಾರಣೆಯ ವಿಷಯದಲ್ಲಿ ಪ್ರಯತ್ನವನ್ನು ಕೈಕೊಂಡಿದ್ದರು. ದೇಶೀಯ ರಾಜ್ಯಗಳಿಂದ ತಿರುಗಿ ಬಂದನಂತರ ನರ್ಮದಾಶಂಕರನಿಗೆ ಶ್ರೀ ಇ. ಐ. ಹಾವರ್ಡ್ ಎಂಬ ಸರಕಾರೀ ಅಧಿಕಾರಿಯಿಂದ ಕೆಳಗೆ ಕಾಣಿಸಿದ ಪತ್ರವೊಂದು ಬಂದಿತ್ತು :

"ಪ್ರಮಾಣಿತ ಗುಜರಾತೀ ಲಿಪಿಲೇಖನವನ್ನು ಒಮ್ಮೆ ನಿಶ್ಚಿತಗೊಳಿಸುವ ಉದ್ದೇಶದಿಂದ ದೇಶೀಯ ಭಾಷೆಗಳ ಪಠ್ಯ ಪುಸ್ತಕ ಸಮಿತಿಗೆ ತಾವು ಸದಸ್ಯರಾಗುವ ಕೃಪೆಯನ್ನು ಮಾಡಬೇಕು ಎಂದು ನಾನು ಬಿನ್ನವಿಸಿಕೊಳ್ಳುತ್ತೇನೆ."

ಕವಿಯು .ಕೃತಜ್ಞತಾಪೂರ್ವಕವಾಗಿ ಆ ಸದಸ್ಯತ್ವವನ್ನು ಸ್ವೀಕರಿಸಿದರೂ ಮಿಕ್ಕ ಕಾರ್ಯಕಲಾಪಗಳು ಅವನ ಧ್ಯಾನವನ್ನು ಸೆಳೆದುಕೊಂಡವು.

ಮುಂಬಯಿಗೆ ತಿರುಗಿ ಬಂದ ತರುವಾಯದಲ್ಲಿಯೂ ಆತನು ಮತ್ತೆ ಪುಣೆಗೆ ಹೋಗಿ ಅಲ್ಲಿ ಕೀರ್ತನಕಾರನಾಗಬೇಕೆಂಬ ಯೋಜನೆಯನ್ನು ಮುಂದುವರಿಸಬೇಕು ಎಂದು ಯೋಚಿಸುತ್ತಿದ್ದಂತೆಯೆ ತನ್ನ ಕಣ್ಣಿನ ಚಿಕಿತ್ಸೆಗಾಗಿ ದಲಪತರಾಮನು ಮುಂಬಯಿಗೆ ಬರಲಿರುವನು ಎಂಬುದು ತಿಳಿದುಬಂದಿತು. ದಲಪತರಾಮನನ್ನು ಎದುರಿಸಲು ತಾನು ಹೆದರುತ್ತಿರುವ ಕಾರಣದಿಂದ ಆತನು ಪುಣೆಯತ್ತ ಓಡಿಹೋಗುತ್ತಿರುವನು ಎಂದು ಮಿತ್ರರು ಮಾಡುತ್ತಿರುವ ಮೂದಲಿಕೆಯನ್ನು ಆತನು ಅರಿತುದು ಸಾಕಷ್ಟು ಬಲವತ್ತರವಾದ ಕಾರಣವಾಗಿ ನರ್ಮದಾಶಂಕರನು ಪುಣೆಗೆ ಹೋಗುವ ತನ್ನ ವಿಚಾರವನ್ನು ಬಿಟ್ಟುಕೊಟ್ಟನು. ಅವನು ಮುಂದೆ ಮುಂಬಯಿಯಲ್ಲಿ ಹಿರಿಯ ಕವಿಯನ್ನು ಕಂಡಾಗ್ಗೆ ಅವನು ಇವನೊಡನೆ ಸ್ನೇಹಪೂರ್ವಕವಾಗಿಯೆ ಮಾತನಾಡಿದನು. ಪ್ರಖ್ಯಾತ ಮರಾಠೀ ವಿದ್ವಾಂಸನಾದ ಭಾವು ದಾಜಿಯ ಕಡೆಗೆ ತನ್ನನ್ನು ಕರೆದುಕೊಂಡು ಹೋಗಬೇಕೆಂದು ಅವನು ನರ್ಮದಾಶಂಕರನನ್ನು ಕೇಳಿಕೊಂಡನು ಆ ಘನ ಪಂಡಿತನ ಆಪ್ತಸ್ನೇಹಿತನಾಗಿದ್ದ ನರ್ಮದಾಶಂಕರನು ಆ ಬಿನ್ನಹವನ್ನು ಮಾನ್ಯಮಾಡಿದನು. ಇನ್ನೊಂದು ದಿನ ಇಬ್ಬರೂ ಕವಿಗಳು ಕೂಡಿ ಸುವಿಖ್ಯಾತ

ಸಮಾಜ ಸುಧಾರಕನಾಗಿದ್ದ ಕರಸನದಾಸ ಮೂಲಜಿಯ ಉಪನ್ಯಾಸವಿದ್ದ ಸಭೆಯೊಂದಕ್ಕೆ ಹೋದರು. ಆ ಸಭೆಯು ಮುಗಿಯುವಾಗ್ಗೆ ದಲಪತರಾಮನು ತನ್ನ ಕೆಲವು ಕವನಗಳನ್ನು ಹಾಡಿ ತೋರಿಸಿದುದನ್ನು ನರ್ಮದಾಶಂಕರನು ತುಂಬ ಮೆಚ್ಚಿಕೊಂಡನು. ಹಿರಿಯನೂ ದಯಾಮಯನೂ ಆದ ಈ ಕವಿಯನ್ನು ತಾನು ಇಷ್ಟರಲ್ಲಿಯೆ ವಿರೋಧಿಸಬೇಕಾಗಬಹುದು ಎಂಬುದು ಆಗ್ಗೆ ಅವನಿಗೆ ಎಳ್ಳಷ್ಟೂ ತಿಳಿದಿರಲಿಲ್ಲ.

ಅದಾದುದು ಹೀಗೆ. ಅಲ್ಲಿಯವರೆಗೆ ಮುಂಬಯಿಯ ಜನತೆಗೆ ಪರಿಚಿತನಾಗಿದ್ದ ಕವಿಯೆಂದರೆ ನರ್ಮದಾಶಂಕರನೊಬ್ಬನೆ ಆಗಿದ್ದನು. ಅಲ್ಲಿ ದಲಪತರಾಮನ ಹೆಸರನ್ನು ಜನರು ದೂರದಿಂದಲೆ ಕೇಳಿದ್ದರು. ಈಗ ಆತನು ಮುಂಬಯಿಗೆ ಬಂದುದು ಮುಂಬಯಿಯ ಜನರಲ್ಲಿ ಹೆಚ್ಚಿನ ಕುತೂಹಲವನ್ನು ನಿರ್ಮಿಸಿದ್ದಿತು. ಇವರಲ್ಲಿ ಯಾರು ಹೆಚ್ಚು ಯೋಗ್ಯತೆಯ ಕವಿಯಾಗಿರಬಹುದು—ಗುಜರಾತದ ಆ ಹಿರಿಯ ಕವಿಯೊ ಅಥವಾ ತಮ್ಮ ಮೆಚ್ಚಿನ ಕವಿ ಎಂದು ತಿಳಿದುಕೊಂಡ ಮುಂಬಯಿಯ ಈ ಕವಿಯೊ ? ಅವರಿಬ್ಬರ ಸಭೆಯೊಂದನ್ನು ಏಕೆ ಏರ್ಪಡಿಸಬಾರದು ? ಅಲ್ಲಿ ಅವರಿಬ್ಬರ ಯೋಗ್ಯತೆಯನ್ನು ಹೋಲಿಸಿ ನೋಡಿ ಅವರ ಪರಸ್ಪರ ಗುಣಾವಗುಣಗಳನ್ನು ಪರೀಕ್ಷಿಸಬಹುದು. ಅಂದು ಕಾವ್ಯ ಮತ್ತು ಲಲಿತಕಲೆಗಳ ಅಭಿಮಾನಿಯಾದ ಒಬ್ಬ ಶ್ರೀಮಂತ ವ್ಯಕ್ತಿಯ ಬಂಗಲೆಯಲ್ಲಿ ಒಂದು ಸಮಾವೇಶದ ಸಿದ್ಧತೆಯಾಯಿತು. ನಗರದ ಧನಿಕ ಮತ್ತು ಧೀಮಂತ ಜನರು ಅವರಿಬ್ಬರನ್ನು ನೋಡಲಿಕ್ಕೆ ಮತ್ತು ಆ ಸ್ಪರ್ಧೆಯನ್ನು ಕೇಳಲಿಕ್ಕೆ ಒಟ್ಟುಗೂಡಿದರು. ಇತ್ತ ಯಾವಾಗಲೂ ನಮ್ರನಾಗಿರದ ನರ್ಮದಾಶಂಕರನು ಅದೊಂದು ಬಾರಿ ವಿನಯಪೂರ್ವಕವಾಗಿ ನಡೆದುಕೊಂಡನು. ಈ ಸ್ಪರ್ಧೆಯು—ಅದನ್ನು ಹಾಗೆಯೆ ಕರೆಯಬೇಕಾಗುವದು—ನಡೆದುದು ೧೮೫೯ ರ ಜೂನ್ ೧೮ ನೇ ದಿನಾಂಕ. ಆ ಸಭೆಯ ವಿಷಯವಾಗಿ ಹಿಂದಿನ ದಿನವಷ್ಟೆ ನರ್ಮದಾಶಂಕರನಿಗೆ ತಿಳಿಸಿದ ಸ್ನೇಹಿತನು ಅಲ್ಲಿ ಕೆಲವು ಕವನಗಳನ್ನು ಹಾಡಿ ತೋರಿಸುವ ಸಿದ್ಧತೆಯಿಂದ ಬರುವಂತೆ ಹೇಳಿದ್ದನು. ನರ್ಮದಾಶಂಕರನು "ನಾನು ಅಲ್ಲಿಗೆ ಬರುವುದೇನೊ ನಿಶ್ಚಿತ; ಆದರೆ ಅಲ್ಲಿ ನಾನು ಕವನಗಳನ್ನು ಕೇಳಲಿಕ್ಕೆ ಬರುವೆನು, ಹೇಳಲಿಕ್ಕೆ ಅಲ್ಲ" ಎಂದಿದ್ದನು ಅದಕ್ಕೆ! ಆ ಮಿತ್ರನು ಮತ್ತೆ ಹೇಳುತ್ತ ಮಹಾರಾಷ್ಟ್ರೀಯ ವಿದ್ವಾಂಸನೂ, ಆಗ್ಗೆ ಮುಂಬಯಿ ಸರಕಾರದ ಪ್ರಾಚ್ಯಭಾಷೆಗಳ ಅನುವಾದಾಧಿಕಾರಿಯೂ, ನರ್ಮದಾಶಂಕರನ ಮಿತ್ರನೂ ಆಗಿದ್ದ ವಿನಾಯಕರಾವ ವಾಸುದೇವನು ಕವಿಗೆ ಒಂದು ಪತ್ರವನ್ನು ಬರೆದು ಆ ಸಭೆಗೆ ತನ್ನ ಉತ್ತಮ ಕವನಗಳಲ್ಲಿ ಕೆಲವನ್ನು ತೆಗೆದುಕೊಂಡು ಬರಬೇಕು ಎಂದು ಹೇಳಿದುದನ್ನು ತಿಳಿಸಿದನು. ಆದರೂ ನರ್ಮದಾಶಂಕರನೇನೂ ಮಣಿಯಲಿಲ್ಲ. ಅದಕ್ಕೆ ಪ್ರತಿಯಾಗಿ ಅವನು ಮನೆಯನ್ನು ತಲುಪಿದನಂತರ ಅಂದು ಆ ಸಭೆಯ ಮೇಲಾಟದಲ್ಲಿ ತಾನು ಭಾಗವಹಿಸಬಾರದು, ಯಾಕೆಂದರೆ ಒಂದು ವೇಳೆ ತನ್ನ

ಕೃತಿಗಳು ಉತ್ತಮವಾದವು ಎಂದು ಸಿದ್ಧವಾದರೆ ಆ ಹಿರಿಯ ಕವಿಗೆ ಸಂಕೋಚ ವೆನಿಸಬಹುದು ಎಂದುಕೊಂಡನು. ಆ ಮೇರೆಗೆ ಆತನು ಅಂದಿನ ಸಭೆಗಾಗಿ ಆ ಸಭ್ಯ ಗೃಹಸ್ಥನ ನಿವಾಸಕ್ಕೆ ತನ್ನ ಯಾವ ರಚನೆಗಳನ್ನೂ ತೆಗೆದುಕೊಳ್ಳದೆ ತೆರಳಿದನು.

ದಲಪತರಾಮ, ನರ್ಮದಾಶಂಕರ ಮತ್ತು ಇನ್ನೊಬ್ಬ ಉಭಯತರ ಸಮಾನ ಮಿತ್ರರು ಕೂಡಿ ಸಭಾಸ್ಥಾನಕ್ಕೆ ಸಂಜೆಯ ೫ ಗಂಟೆಯ ಹೊತ್ತಿಗೆ ಬಂದರು. ಸಭಾಗೃಹವು ಕಿಕ್ಕಿರಿದು ತುಂಬಿತ್ತು. ಅಲ್ಲಿ ಗುಜರಾತಿಗಳು ಮತ್ತು ಮಹಾರಾಷ್ಟ್ರೀಯರು ಸೇರಿದ್ದು ಎಲ್ಲ ಕಡೆ ಉತ್ಕಂಠತೆಯ ವಾತಾವರಣವು ಪ್ರಸರಿಸಿತ್ತು. ದಲಪತರಾಮನು ತನ್ನ ರಚನೆಗಳನ್ನು ಓದಬೇಕೆಂದು ವಿಜ್ಞಾಪಿಸಿಕೊಳ್ಳಲಾಯಿತು. ಅವನು ತುಂಬ ಹುಮ್ಮಸ್ಸಿನಿಂದ ಅವುಗಳನ್ನು ಹಾಡಿ ತೋರಿಸಿದನು. ಅದಕ್ಕೆ ಜನರು ಮೆಚ್ಚಿಗೆಯನ್ನು ವ್ಯಕ್ತಮಾಡಿ ತುಂಬ ಕೊಂಡಾಡಿದರು. ಆಗ್ಗೆ ಬಂದಿತು ನರ್ಮದಾಶಂಕರನ ಸರತಿ. ಅವನನ್ನು ರೀತಿಯಂತೆ ಕೇಳಿಕೊಳ್ಳಲಾಯಿತು ; ಆದರೆ ಆತನು ನಮ್ರತಾಪೂರ್ವಕ ವಾಗಿ "ನಾವು ಇಲ್ಲಿ ಸೇರಿದುದು ಈಗ ದಲಪತರಾಮರ ಗೌರವಾರ್ಥವಾಗಿ. ಆದುದರಿಂದ ಅವರ ಕೃತಿಗಳನ್ನು ಮಾತ್ರ ನಾವು ಕೇಳಬೇಕೆ ಹೊರತು ಅನ್ಯರ ಕವನಗಳನ್ನಲ್ಲ." ಅದಲ್ಲದೆ ತಾನು ಅವರಲ್ಲಿ ಒಬ್ಬನಾಗಿನ್ದು ತನ್ನ ರಚನೆಗಳನ್ನು ಅವರು ಅನೇಕ ಸಲ ಕೇಳಿದುದುಂಟು ಎಂದನು. ಆದರೂ ಅಷ್ಟರಿಂದ ಅವನು ಪಾರಾಗು ವಂತಿರಲಿಲ್ಲ. ಮತ್ತೆ ಜನರು ಒತ್ತಾಯಮಾಡತೊಡಗಿದರು. ಅವರಲ್ಲಿ ವಿನಾಯಕರಾವ ವಾಸುದೇವನು ಹೆಚ್ಚು ಆಗ್ರಹ ಮಾಡಿದನು. ನರ್ಮದಾಶಂಕರನು ಪೂರ್ಣ ನಿರಾಕರಿಸಲಾರದಾದನು. ಸಭೆಗಳು ಮತ್ತು ಪ್ರವಚನಗಳ ಆಹ್ವಾನಗಳಿಂದ ಅವನು ಎಂದೂ ಪರಾವೃತ್ತನಾಗಿರಲಿಲ್ಲ. ಅದಕ್ಕೆ ಬದಲಾಗಿ ಅವು ಎಂದಿಗೂ ಅವನಿಗೆ ತುಂಬ ಆಕರ್ಷಕ ಎನಿಸಿದ್ದವು. ಕೊನೆಗೆ ಆತನು ಮಾತನಾಡಲಿಕ್ಕೆಂದು ಎದ್ದು ನಿಂತನು. ಮೊದಮೊದಲು ಅವನು ಅನುಮಾನಿಸಿದನು ; ಯಾಕೆಂದರೆ ಅವನು ಇದಕ್ಕಾಗಿ ಪೂರ್ವಸಿದ್ಧತೆಯನ್ನು ಮಾಡಿಕೊಂಡಿರಲಿಲ್ಲ ಮತ್ತು ತನ್ನೊಡನೆ ತನ್ನ ಯಾವ ಪುಸ್ತಕಗಳನ್ನೂ ತಂದಿರಲಿಲ್ಲ. ಆದರೆ ವಿನಾಯಕರಾವ ವಾಸುದೇವನು ಅವನಿಗೆ ಬೆಂಬಲವಾಗಿ ನಿಂತು ಅವನನ್ನು ಪ್ರೋತ್ಸಾಹಿಸತೊಡಗಿದನು. ಅದರಿಂದ ಅವನ ಭಾವವು ಬದಲಾಯಿತು ಮತ್ತು ಆತನು ತುಂಬ ಆವೇಶದಿಂದ ಕವನಗಳನ್ನು ಹಾಡತೊಡಗಿದನು. ಅವನು ಕಾವ್ಯಗಾಯನವನ್ನು ಮಾಡುತ್ತಿದ್ದನು ಮತ್ತು ವಿನಾಯಕರಾವ ವಾಸುದೇವನು ಅವನ ಬೆನ್ನನ್ನು ತಟ್ಟುತ್ತ ಹುರಿದುಂಬಿಸುತ್ತಲೇ ಇದ್ದನು. "ವಾಹ! ವಾಹ!! ನರ್ಮದಾಶಂಕರ, ನೀನು ಈ ಸುಂದರವಾದ ಕವನ ವನ್ನು ಯಾವಾಗ ರಚಿಸಿದ್ದಿ ?" ಎನ್ನುತ್ತಿದ್ದನು. ಅಂದಿನ ಅವನ ಕಾವ್ಯ ಗಾಯನವು ಉತ್ಕೃಷ್ಟವಾಗಿತ್ತು ಮತ್ತು ಅದರಿಂದ ಅವನು ಪಡೆದ ಅತ್ಯುತ್ಸಾಹದ ಪ್ರಶಂಸೆಯಿಂದ ಕವಿಯ ಸಂತೋಷವು ಇಮ್ಮಡಿಸಿತು. ಅದರಲ್ಲಿ ಉಂಟಾದ ಒಂದೇ ಒಂದು ಕೊರತೆಯು ಅವನಿಗೆ ಭಾಸವಾದುದೆಂದರೆ ತನಗೆ ದೊರೆತ ಪ್ರೋತ್ಸಾಹ-ಪ್ರಶಂಸೆಗಳು

ಹೆಚ್ಚಿದಂತೆ ದಲಪತರಾಮನ ಮುಖವು ಕಳೆಗುಂದಿದ ಹಾಗೆ ತೋರಿದನು. ತನ್ನ ಗೆಳೆಯನ ಉತ್ಸಾಹದ ಅತಿರೇಕವನ್ನು ಕಡಿಮೆಮಾಡಲಿಕ್ಕೆಂದು ಆತನ ಬೆರಳು ಗಳನ್ನು ನರ್ಮದಾಶಂಕರನು ಕಾಲಿನಿಂದ ಅದುಮಿ ಹಿಡಿದರೂ ಆತನಿಗೆ ಅದು ಅರ್ಥವಾಗಲಿಲ್ಲ.

ಆ ಸಂಜೆಯ ಕಾರ್ಯಕ್ರಮವು ಮುಗಿಯುವಷ್ಟರಲ್ಲಿ ನರ್ಮದಾಶಂಕರನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನು ಮನೆಗೆ ಹೋಗಿ ಬರುತ್ತ ತಮ್ಮಿಬ್ಬರಲ್ಲಿ ತಾನೇ ಹೆಚ್ಚಿನ ಕವಿಯೆಂಬ ಮನವರಿಕೆಯಾಗಿತ್ತು ಮತ್ತು ಅಂದು ದಲಪತರಾಮನಿಗೆ ತನ್ನ ಬಗ್ಗೆ ಮತ್ಸರವೆನಿಸಿತ್ತು ಎಂಬುದು ಅವನಿಗೆ ತಿಳಿದಿತ್ತು. ಈ ಈರ್ಷ್ಯೆಯ ಭಾವನೆಯು ಅವನಲ್ಲಿ ಇಡಿಯ ಜೀವನದಲ್ಲಿ ಬೇರುಬಿಟ್ಟಿತ್ತು ಮತ್ತು ಆ ಶಾಂತ ಸ್ವಭಾವದ ಸದ್ವರ್ತನೆಯ ಹಿರಿಯನೊಡನೆ ಇದ್ದ ಅವನ ಸಂಬಂಧವನ್ನು ಹಾಳು ಮಾಡಿತ್ತು ; ವಾಸ್ತವವಾಗಿ ಅವರಿಬ್ಬರಲ್ಲಿ ದಲಪತರಾಮನೇ ಹೆಚ್ಚಿನ ಕವಿಯಾಗಿದ್ದ ನೇನೊ !

ಈ ಪ್ರಸಂಗಕ್ಕೆ ಸಂಬಂಧಿಸಿದಂತೆ ಆಗಿನ ಮುಂಬಯಿ ನಗರದಲ್ಲಿ ಕಂಡು ಬರುತ್ತಿದ್ದ ಜನರ ಬೌದ್ಧಿಕ ಮತ್ತು ಸಾಂಸ್ಕೃತಿಕ ಸಮನ್ವಯದ ವಿಷಯವಾಗಿ ಅನುಕೂಲವಾದ ಪರಿಸ್ಥಿತಿಯಿದ್ದುದೊಂದು ಗಮನಾರ್ಹವಾದ ಸಂಗತಿಯಾಗಿದೆ. ಗುಜರಾತಿ ಭಾಷೆಯ ಅಂದಿನ ಇಬ್ಬರು ಕವಿಪುಂಗವರನ್ನು ಕೇಳಲಿಕ್ಕೆ ಮತ್ತು ಗೌರವಿ ಸಲಿಕ್ಕೆ ವಿನಾಯಕರಾವ ವಾಸುದೇವನಂತಹ ಸುಪ್ರಸಿದ್ಧ ಮಹಾರಾಷ್ಟ್ರೀಯ ಪಂಡಿತ ರಂತಹವರು ಅಂದಿನ ಶ್ರೋತೃಗಣದಲ್ಲಿ ಸೇರಿಕೊಂಡಿದ್ದರು ಎಂಬ ವಿಷಯವನ್ನು ನಾವು ತಿಳಿದಿದ್ದೇವೆ. ಡಾ. ಭಾವು ದಾಜಿಯಂತಹ ಪ್ರಕಾಂಡ ಮಹಾರಾಷ್ಟ್ರೀಯ ವಿದ್ವಾಂಸರು ಕವಿ ನರ್ಮದಾಶಂಕರನೊಡನೆ ಸ್ನೇಹಾತಿಶಯದ ಸಂಬಂಧವನ್ನು ಇಟ್ಟು ಕೊಂಡಿದ್ದರು. ಮಿಕ್ಕ ಮಹಾರಾಷ್ಟ್ರೀಯ ಧೀಮಂತರು ಮತ್ತು ಸಾಹಿತಿಗಳು ಗುಜರಾತದ ಸಾಂಸ್ಕೃತಿಕ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ಪಾರ್ಸಿ ಜನರು ಅಂದಿನ ಗುಜರಾತೀ ಕಾವ್ಯ ಮತ್ತು ಕವಿಗಳ ಬಗ್ಗೆ ಅತೀವ ಅಭಿಮಾನವನ್ನು ತಳೆದಿದ್ದರು. ಇತ್ತ ಕೆಲಜನ ಯೂರೋಪಿಯನ್‌ರು ಕೂಡ ಈ ಭಾಷೆ ಮತ್ತು ಅದರ ಸಾಹಿತ್ಯದ ವಿಷಯ ವಾಗಿ ಕಡಿಮೆ ಪ್ರೀತಿಯನ್ನು ತೋರಿಸುತ್ತಿರಲಿಲ್ಲ. ಆ ಕಾಲದಲ್ಲಿ ಮುಂಬಯಿಯು ನಿಜವಾಗಿಯೂ ಉದಾರನೀತಿಯ ನಗರವಾಗಿತ್ತು ಮತ್ತು ಅದೊಂದು ವೈಭವಪೂರ್ಣ ಕಾಲವೆನಿಸಿತ್ತು. ಅವನ ಪ್ರೀತಿಯ ನಗರವಾದ ಮುಂಬಯಿಯಲ್ಲಿ ಪ್ರಚಲಿತವಿದ್ದ ಈ ಸಮಭಾವದ ಕಾರಣವಾಗಿಯೆ ನರ್ಮದಾಶಂಕರನಂತಹರು ತಮ್ಮ ಪೂರ್ಣ ವಿಕಾಸವನ್ನು ಪಡೆಯುವಂತಾಯಿತು. ಆಗಿನ ಉತ್ಸಾಹದ ವಾತಾವರಣವು ಮುಂಬಯಿಯಲ್ಲಿ ಮತ್ತೆ ಪಸರಿಸಲಿ ಎಂದು ಮಾತ್ರ ನಾವು ಈಗಿನ ಈ ಪರಿಸ್ಥಿತಿಯಲ್ಲಿ ಕೋರಬಹುದು.

ಆಗ್ಗೆ ಕಂಡುಬರುತ್ತಿದ್ದ ಸ್ನೇಹ ಮತ್ತು ಸೌಹಾರ್ದಗಳ ಭಾವನೆಯನ್ನು ತೋರಿಸುವ ಒಂದು ದೃಷ್ಟಾಂತವು ಮಾತ್ರ ಸಾಕು ಎಂದು ತೋರುತ್ತದೆ. ಮೇಲೆ ಕಾಣಿಸಿದ ತುರುಸಿನ ಮೇಲಾಟದನಂತರ ತುಸು ಸಮಯದಲ್ಲಿ ಡಾ. ಭಾವು ದಾಜಿಯು ನರ್ಮದಾಶಂಕರನನ್ನು ಭೆಟ್ಟಿಯಾಗಿ ಆ ಇಬ್ಬರು ಕವಿಗಳ ಸನ್ಮಾನಾರ್ಥವಾಗಿ ತಾನು ನಿಧಿಯೊಂದನ್ನು ಸಂಗ್ರಹಿಸುತ್ತಿದ್ದ ಸಂಗತಿಯನ್ನು ಅರುಹಿದನು. ಅಂತೆಯೇ ತಾನು ಮುಂದೆಯೂ ಯಾವ ಭಯ-ಸಂಕೋಚಗಳೂ ಇಲ್ಲದೆ ಕಾವ್ಯರಚನೆಯಲ್ಲಿ ತೊಡಗ ಬೇಕು ಎಂದು ತಿಳಿಸಿದನು. ಆ ಯೋಜನೆಯು ಫಲಕಾರಿಯಾಗದಿದ್ದರೂ ನರ್ಮದಾಶಂಕರನು ಕೀರ್ತನಕಾರನಾಗಬೇಕು ಎಂದು ಮಾಡಿದ ಯೋಚನೆಯನ್ನು ಅದರಿಂದ ಬಿಡುವಂತಾಯಿತು. ಹೀಗೆ ಆತನು ಕವಿಯಾಗಿಯೆ ಮುಂದುವರಿಯ ಬೇಕೆಂದು ನಿರ್ಣಯಿಸಿದನು.

## ೭

ಮುಂಬಯಿಗೆ ದಲಪತರಾಮನು ಬಂದ ಸನ್ನಿವೇಶವು ನರ್ಮದಾಶಂಕರನ ಚಟುವಟಿಕೆಗಳು ಮತ್ತು ಅವನ ವ್ಯಕ್ತಿತ್ವದ ಇನ್ನೊಂದು ಪದರಿನ ಮೇಲೆ ಪ್ರಕಾಶ ವನ್ನು ಕೆಡಹುತ್ತದೆ. ಮುಂಬಯಿಯ ಸಾಮಾಜಿಕ ಜೀವನದ ಮೇಲೆಯೂ ಅದು ಬೆಳಕನ್ನು ಬೀರುತ್ತದೆ. ನಮಗೆ ಈಗಾಗಲೆ ತಿಳಿದಂತೆ ಮುಂಬಯಿಯ ಧನಿಕ ವರ್ಗವು, ಕಾವ್ಯ-ನಾಟಕಗಳ ಭಕ್ತರೂ ಆಗಿದ್ದು ಈ ಉಭಯಕವಿಗಳ ಸಮ್ಮಿಲನ ವನ್ನು ಏರ್ಪಡಿಸಿದ್ದಿತು. ಈ ಜನರು ತಮ್ಮತಮ್ಮೊಳಗೆ ರಹಸ್ಯವಾಗಿ ಈ ಇಬ್ಬರು ಕವಿಗಳ ಸ್ಪರ್ಧೆಯ ವಿಷಯವಾಗಿ ಸಂತೋಷದಿಂದ ಅದನ್ನು ಎದರುನೋಡುತ್ತಿದ್ದರು. ಅವರಲ್ಲಿ ಕೆಲವರಂತೂ ಗರ್ವಿಷ್ಠನಾದ ನರ್ಮದಾಶಂಕನು ತನ್ನ ಹಿರಿಯ ಕವಿಯಿಂದ ಸೋಲಿಸಲ್ಪಡಬೇಕು ಎಂದು ಬಯಸಿದ್ದರು - ರಹಸ್ಯವಾಗಿ! ಒಂದು ದಿನ ಸಂಜೆ ಯಲ್ಲಿ ಅವನ ಮಿತ್ರನೊಬ್ಬನು ಪ್ರತಿ ದಿನ ಸಾಯಂಕಾಲದಲ್ಲಿ ನರ್ಮದಾಶಂಕರನು ಹೋಗುತ್ತಿದ್ದ ಒಂದು ಪುಸ್ತಕದ ಅಂಗಡಿಗೆ ಅವನ ಭೆಟ್ಟಿಗಾಗಿ ಹೋದನು. ಅವನನ್ನು ನೋಡಿದೊಡನೆ ಅವನ ಸ್ನೇಹಿತನು ವಿನೋದದಲ್ಲಿ ಹೀಗೆ ನುಡಿದನು: "ನಿನ್ನ ಗುಣದ ಪರೀಕ್ಷೆಯಾಗುವುದು ನಾಳೆ." ಅಲ್ಲಿಯವರೆಗೆ ನರ್ಮದಾಶಂಕರನಿಗೆ ಆ ನಿಯೋಜಿತ ಸಭೆಯ ಬಗ್ಗೆ ಏನೂ ಗೊತ್ತಿರದ ಮೂಲಕ ಅವನು ಹೇಳುತ್ತಿರುವದು ಅವನಿಗೆ ತಿಳಿಯಲಿಲ್ಲ. ತಾನು ವೈಷ್ಣವ ಮಹಾರಾಜರ ವಿರೋಧವಾಗಿ ಬರೆದ ಲೇಖನಗಳು ಮತ್ತು ಕವನಗಳು ಹಾಗೂ ಮಾಡಿದ ಉಪನ್ಯಾಸಗಳ ಬಗ್ಗೆ ತನ್ನ ಮೇಲೆ ಮಾನಹಾನಿಯ ಮೊಕದ್ದಮೆಯನ್ನು ಹಾಕಬಹುದು ಎಂಬುದನ್ನು ತನ್ನ ಮಿತ್ರನು ಹೇಳುತ್ತಿರುವದಾಗಿ ಅವನು ಭಾವಿಸಿದನು. ಅಂತೆಯೆ ಅವನು ಸಿಟ್ಟಿನಲ್ಲಿ ಹೀಗೆ ನುಡಿದನು: "ತಾನು ವಾಸಿಸುತ್ತಿದ್ದ ವಿಭಾಗದ ಎಲ್ಲ ಮನೆಗಳ ಮೇಲಿನ

ಹೆಂಚುಗಳಷ್ಟು ಜನರು ಅವನ ಶತ್ರುಗಳಾಗಿ ಅವನ ವಿರುದ್ಧ ನಿಂತರೂ ತಾನು ತನ್ನ ನಂಬುಗೆಗಳನ್ನು ಬಿಟ್ಟುಕೊಡಲಾರ ಎಂದು ಮಾರ್ಟಿನ್ ಲೂಥರನು ಹೇಳುತ್ತಿದ್ದಂತೆ ನಾನು ಕೂಡ ಈ ಮನೆಗಳ ಮೇಲಿನ ಹಂಚುಗಳು ಬಿದ್ದು ಆದ ಚೂರುಚೂರುಗಳ ಸಂಖ್ಯೆಯಲ್ಲಿ ಜನರು ನನ್ನ ವೈರಿಗಳಾದರೂ ನಾನು ಈ ಮಹಾರಾಜರ ಬಗ್ಗೆ ಎಳ್ಳಷ್ಟೂ ಚಿಂತಿಸುವದಿಲ್ಲ."

ಈ ಕೋಪಾಟೋಪದಿಂದ ತಿಳಿಯುವಂತೆ ನರ್ಮದಾಶಂಕರನ ಚಟುವಟಿಕೆಗಳು ಕೇವಲ ಸಾಹಿತ್ಯರಂಗಕ್ಕೆ ಸೀಮಿತವಾಗಿರಲಿಲ್ಲ. ತನ್ನ ಹದಿನೆಂಟನೆಯ ವಯಸ್ಸಿನಿಂದ ತನ್ನ ಉತ್ಸಾಹಸರ್ವಸ್ವವನ್ನು ಸೆಳೆದುಕೊಂಡ ಸಮಾಜ ಸುಧಾರಣೆಯ ಆಂದೋಲನವು ಈ ನಡುವಿನ ವರ್ಷಗಳಲ್ಲಿ ಅಪರಿಮಿತವಾಗಿ ಬೆಳೆದು ಈಗ ಆತನು ಆ ಚಳವಳಿಯಲ್ಲಿ ಹೆಚ್ಚು ಆಸಕ್ತಿಯ ಭಾಗವನ್ನು ವಹಿಸತೊಡಗಿದ್ದನು. ಅತ್ಯಂತ ಚಿಕ್ಕ ವಯಸ್ಸಿನಿಂದಲೇ ಸಮಾಜ ಸುಧಾರಣೆಗಳ ವಿಷಯವಾಗಿ ಆತನಲ್ಲಿದ್ದ ಉತ್ಕಟವಾದ ಪ್ರೇಮದ ಕಾರಣ ಸುಪ್ರಸಿದ್ಧನಾದ ಕರಸನದಾಸ ಮೂಲಜಿ ಎಂಬ ಅಸಾಮಾನ್ಯ ಧೈರ್ಯದ ಮತ್ತು ಜಾಣತನದ ವ್ಯಕ್ತಿಯ ಸಂಗಡ ಆತನು ಸ್ನೇಹವನ್ನು ಬೆಳೆಯಿಸಿಕೊಂಡಿದ್ದನು. ಆ ವಿಷಯವಾಗಿ ಆತನವಲ್ಲಿದ್ದ ಅನಾದೃಶವಾದ ಉತ್ಸಾಹ ಮತ್ತು ಅಸಾಧಾರಣವಾದ ಧೈರ್ಯಗಳ ಒಂದು ಉದಾಹರಣೆಯು ಸಾಕಾಗಬಹುದು.

ಈ ಕರಸನದಾಸನ ತಂದೆತಾಯಿ ಅವನ ಚಿಕ್ಕ ವಯಸ್ಸಿನಲ್ಲಿಯೆ ತೀರಿಕೊಂಡಿದ್ದು ಆತನು ತನ್ನ ತಾಯಿಯ ಚಿಕ್ಕಮ್ಮನ ಮನೆಯಲ್ಲಿ ಬೆಳೆದನು. ಈ ಚಿಕ್ಕಮ್ಮನು ಸ್ವಾಭಾವಿಕವಾಗಿಯೆ ಅತ್ಯಂತ ಧರ್ಮಿಷ್ಠಳಾಗಿದ್ದಳು. ಆದರೆ ಕರಸನದಾಸನ ವಿಚಾರಗಳು ಸುಧಾರಣೆಯತ್ತ ಒಲಿದಿದ್ದವು; ಅವನು ಮಾತ್ರ ಆ ವಿಚಾರಗಳನ್ನು ಆ ಅಜ್ಜಿಗೂ ತಿಳಿಸದಂತೆ ತನ್ನಲ್ಲಿಯೆ ರಹಸ್ಯವಾಗಿ ರಕ್ಷಿಸಿಕೊಂಡು ಬಂದಿದ್ದನು. ಒಮ್ಮೆ ವಿಧವಾ ವಿವಾಹದ ವಿಷಯವಾಗಿ ಉತ್ತಮವಾದ ಪ್ರಬಂಧವೊಂದನ್ನು ಬರೆದು ಕಳಿಸಿದವನಿಗೆ ಒಂದು ನೂರ ಐವತ್ತು ರೂಪಾಯಿಗಳ ಬಹುಮಾನವನ್ನು ಕೊಡಲಾಗುವದೆಂದು ಜಾಹೀರುಮಾಡಿದ್ದರು. ತಾನು ವಿಧವಾ ವಿವಾಹದ ಆವಶ್ಯಕತೆಯಲ್ಲಿ ಅತ್ಯಂತ ನಿಷ್ಠೆಯಿಂದ ನಂಬುತ್ತಿದ್ದು ಆ ವಿಷಯವಾಗಿ ತನ್ನ ವಿಚಾರಗಳು ತುಂಬ ಸಹಾಯಕವಾಗಿದೆ ಎಂದು ಆತನು ತಿಳಿದಿದ್ದುದರಿಂದ ಕರಸನದಾಸನು ಆ ಸ್ಪರ್ಧೆಯಲ್ಲಿ ಭಾಗವಹಿಸಲೆಳಸಿದನು. ಆದರೆ ಆ ವಿಷಯವಾಗಿ ಸಿದ್ಧತೆಯನ್ನು ಬಹಳ ರಹಸ್ಯವಾಗಿ ಮಾಡಬೇಕಾಗಿತ್ತು. ಅಜ್ಜಿಗೆ ಅದು ಒಂದುವೇಳೆ ಗೊತ್ತಾದರೆ ಆಕೆಯು ತನ್ನ ಮೇಲೆ ಕೋಪಿಸಿಕೊಳ್ಳಬಹುದು, ಅವನು ಎಷ್ಟೇ ಪ್ರಯತ್ನಿಸಿದರೂ ಆಕೆಗೆ ವಿಷಯ ತಿಳಿದೇ ತಿಳಿಯಿತು. ಆಕೆ ಕೋಪದಿಂದ ಕೇಳಿದಳು: " ಅದೆಂತಹ ಪಾಪ! ಅದು ಕೂಡ ತನ್ನ ಕಣ್ಣಮುಂದೆಯೆ, ತನ್ನ ಮನೆಯಲ್ಲಿಯೆ ನಡೆಯಬೇಕೆಂದರೆ! ಅದು ತೀರ ಮಿತಿಮೀರಿದ ಕೆಲಸವಾಗಿತ್ತು.

ಅದು ಕೃತಘ್ನತೆಯ ಪರಾಕಾಷ್ಠೆಯಾದುದರಿಂದ ಒಂದು ಕ್ಷಣದ ಮಟ್ಟಿಗೆ ಕೂಡ ಅದನ್ನು ಪ್ರೋತ್ಸಾಹಿಸಕೂಡದು. ಅದಕ್ಕೆ ವಿಧಿಸಬಹುದಾದ ದಂಡವನ್ನು ಕರಸನನು ತೆರಲೇಬೇಕಾಗುವದು."

ಅವನು ಹಾಗೆ ದಂಡವನ್ನು ಕೊಡಬೇಕಾಯಿತು. ಅದು ಅತ್ಯಂತ ಬೆಲೆಯುಳ್ಳ ಶಿಕ್ಷೆಯಾಗಿದ್ದರೂ ಅವನು ಆ ಬಗ್ಗೆ ಏನನ್ನೂ ಮಾಡುವಂತಿರಲಿಲ್ಲ. ಅವನು ಅಜ್ಜಿಯ ಮನೆಯಿಂದ ಹೊರಬಿದ್ದು ತನ್ನ ಕಾಲಮೇಲೆಯೆ ತಾನು ನಿಲ್ಲುವ ಪ್ರಯತ್ನದಲ್ಲಿ ತೊಡಗಿದನು. ಅದಕ್ಕಾಗಿ ಅವನು ಹೆಚ್ಚಿನ ಶ್ರಮವನ್ನು ವಹಿಸಬೇಕಾಯಿತು ; ಆದರೆ ತನ್ನ ತತ್ವಗಳಿಗೆ ಅವನು ವಿಧೇಯನಾಗಿದ್ದನು. ಅವನು ಪ್ರಬುದ್ಧನಾದಂತೆ ಆ ತತ್ವಗಳಿಗಾಗಿ ಅನೇಕ ಬಗೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಯಿತು. ಅದರಲ್ಲಿ ಒಂದು ವಿಷಯವು " ಪರದೇಶಗಳಲ್ಲಿ ಮಾಡುವ ಪ್ರವಾಸದಿಂದ ಆಗುವ ಪ್ರಯೋಜನ" ಎಂಬದಾಗಿತ್ತು. ಈ ಉಪನ್ಯಾಸವನ್ನು ಆತನು ನರ್ಮದಾಶಂಕರನ ಬುದ್ಧಿವರ್ಧಕ ಮಂಡಲದ ಆಶ್ರಯದಲ್ಲಿ ಮಾಡಬೇಕಾಯಿತು. ಆ ಭಾಷಣದಿಂದ ನರ್ಮದಾಶಂಕರನ ಮೇಲೆ ಅತ್ಯಂತ ಆಳವಾದ ಪ್ರಭಾವವು ಉಂಟಾಯಿತು. ಅದರಿಂದ ಅವರಿಬ್ಬರ ದೀರ್ಘಕಾಲದ ಸ್ನೇಹವೂ ಕುದುರಲಿಕ್ಕೆ ಆರಂಭವಾದಂತಾಯಿತು.

ಕರಸನದಾಸ ಮೂಲಜಿಯು ದೊಡ್ಡವನಾದ ಮೇಲೆ ತನ್ನ ಸಮಾಜ ಸುಧಾರಣೆಯ ಆಂದೋಲನಕ್ಕೆಂದು ಒಂದು ವಿಶಿಷ್ಟ ಕ್ಷೇತ್ರವನ್ನು ಅನುಸರಿಸಿದ್ದನು. ತಾನು ಸ್ವತಃ ವೈಷ್ಣವನಾಗಿದ್ದು ವೈಷ್ಣವ ಪುರೋಹಿತರು ತಮ್ಮ ವರ್ಚಸ್ಸು, ಅಧಿಕಾರ ಮತ್ತು ಜೀವನದಲ್ಲಿ ಸುಖವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಉಪಯೋಗಿಸಿಕೊಳ್ಳುವ ಎಲ್ಲ ಸುಷ್ಟ-ದುಷ್ಟ ಮಾರ್ಗಗಳನ್ನು ಆತನು ತಿಳಿದಿದ್ದನು. ಕರಸನದಾಸನು ಒಂದು ಪತ್ರಿಕೆಯನ್ನು ಆರಂಭಿಸಿ ವೈಷ್ಣವ ಮತದ ರಕ್ಷಕರೆಂದು ಹೇಳಿಕೊಳ್ಳುವ ಈ ಜನರ ಮೇಲೆ ದಾಳಿಯನ್ನು ಆರಂಭಿಸಿದನು. ತನ್ನ ಪತ್ರಿಕೆಯನ್ನು ಆತನು ' ಸತ್ಯಪ್ರಕಾಶ ' ಎಂಬ ಅನ್ವರ್ಥಕನಾಮದಿಂದ ಕರೆದನು. ನರ್ಮದಾಶಂಕರನು ತನ್ನ ಮಿತ್ರನ ಈ ಕಾರ್ಯದಲ್ಲಿ ಲೇಖನಗಳನ್ನು ಬರೆದು, ಉಪನ್ಯಾಸಗಳನ್ನು ನೀಡಿ, ಕವನಗಳನ್ನು ರಚಿಸಿ, ಈ ಮಹಾರಾಜರ ವಿರುದ್ಧ ನಡಯಿಸಿದ ಆಂದೋಲನದಲ್ಲಿ ಸಹಾಯ ಮಾಡಿದನು. ಅಂತೆಯೇ ತನ್ನ ಮೇಲೆ ಮಾನಹಾನಿಯ ಖಟ್ಲೆಯೊಂದನ್ನು, ತನ್ನ ಸ್ನೇಹಿತನು ತನ್ನ ಶಕ್ತಿಯ ಪರೀಕ್ಷೆಯು ಮರುದಿನ ಆಗಲಿರುವದು ಎಂದು ವಿನೋದವಾಗಿ ಹೇಳಿದಾಗ್ಗೆ, ಅವನು ನಿರೀಕ್ಷಿಸಿದ್ದನು.

ಆದರೆ ಅಂತಹದೇನೂ ಆಗಲಿಲ್ಲ ; ಅಷ್ಟೇ ಅಲ್ಲದೆ ನರ್ಮದಾಶಂಕರನು ಸಾಮಾಜಿಕ ಸುಧಾರಣೆಯ ಆಂದೋಲನದಲ್ಲಿ ಪ್ರಮುಖನಾಗಿದ್ದನು. ೧೮೫೯ ರ ಏಪ್ರಿಲ್ ತಿಂಗಳಲ್ಲಿ ತನ್ನ ಊರಾದ ಸೂರತದಂತಹ ಚಿಕ್ಕ ಊರಲ್ಲಿ ಒಂದು ಸಣ್ಣ ಸುಧಾರಣೆಯನ್ನು ಜರುಗಿಸಿದ್ದನು. ಕವಿಯು ಹೇಳುವಂತೆ ಆ ವರ್ಷ ತಾನು ಎಲ್ಲ ಧಾರ್ಮಿಕ

ಮೂಢನಂಬಿಕೆಗಳಿಂದ ಮುಕ್ತನಾದ ಎಂಬುದು ಗಮನಾರ್ಹವಾಗಿದೆ. ಅದು ಆದ ತರುಣದಲ್ಲಿಯೆ ಅವನ ಮತದವರೇ ಆದ ಜನರ ಸಮುದಾಯ-ಭೋಜನವೊಂದು ಸೂರತದಲ್ಲಿ ಜರುಗಿತು. ಆ ಮತವು ಇತ್ತ ಎರಡು ಪಂಗಡಗಳಲ್ಲಿ ವಿಜೃಂಭಿಸಿತ್ತು—ನಾಗರ ಗೃಹಸ್ಥರು ಮತ್ತು ನಾಗರ ಬ್ರಾಹ್ಮಣರು ಎಂದು. ನರ್ಮದಾಶಂಕರನು ಎರಡನೆಯ ಗುಂಪಿಗೆ ಸೇರಿದ್ದನು. ಮೊದಲಿನ ಭಾಗದವರು, ಅದೇ ಮತವನ್ನು ಅವಲಂಬಿಸಿದ್ದರೂ, ಎರಡನೆಯವರಿಗಿಂತ ಉಚ್ಚಸ್ಥಾನದಲ್ಲಿ ಇರುವರೆಂದು ಭಾವಿಸಿದ್ದರು. ಪರಿಣಾಮವಾಗಿ ಅವರು ಒಂದು ವಿಚಿತ್ರವಾದ ಮತ್ತು ಅಪ್ರಿಯವಾದ ಪದ್ಧತಿಯನ್ನು ನಡೆಯಿಸಿಕೊಂಡು ಬಂದಿದ್ದರು. ಆ ಮತೀಯರು ಎರಡೂ ಗುಂಪುಗಳ ಜನರು ಸೇರುವಂತೆ ಸಮುದಾಯ-ಭೋಜನವನ್ನು ಏರ್ಪಡಿಸಿದಾಗ್ಗೆ, ಗೃಹಸ್ಥರ ವಿಭಾಗದ ಮಹಿಳೆಯರು ಮೈಮೇಲೆ ಕುಪ್ಪುಸಗಳನ್ನು ತೊಡುವಂತೆ ಆಜ್ಞಾಪಿಸಿದರು; ಇತ್ತ ಬ್ರಾಹ್ಮಣರ ಸ್ತ್ರೀಯರಿಗೆ ಹಾಗೆ ಮಾಡುವಂತೆ ಬಿಡಲಿಲ್ಲ. ಅದೊಂದು ನಡೆದು ಬಂದ ಸಂಪ್ರದಾಯವಾದುದರಿಂದ ಅದಕ್ಕೆ ಯಾರೂ ಅಡ್ಡಿ ಮಾಡಲಿಲ್ಲ. ಆದರೆ ನರ್ಮದಾಶಂಕರನು ಅದು ಸರಿಯಲ್ಲ ಎಂದು ಭಾವಿಸಿ, ಒಮ್ಮೆ ಊಟವು ನಡೆದಾಗ್ಗೆ ತನ್ನ ಮನೆಯ ಮತ್ತು ಬೇರೆ ಕೆಲವು ಕುಟುಂಬಗಳ ಹೆಂಗಸರಿಗೆ ಪೂರ್ಣ ವೇಷವನ್ನು ಧರಿಸಿ, ಊಟಕ್ಕೆ ಹೋಗುವಂತೆ ಹೇಳಿದನು. ಅದರ ಪರಿಣಾಮವಾಗಿ ಕೆಲಜನರ ಹೃದಯದಲ್ಲಿ ಮತ್ಸರವು ತಲೆದೋರಿದಂತಾದರೂ ಆ ಹಾಳು ರೂಢಿಯು ಮಾತ್ರ ಕಣ್ಮರೆಯಾಯಿತು.

ಆ ಕಾಲದ ಪ್ರಮುಖ ಗುಜರಾತಿಗಳಲ್ಲೊಬ್ಬನಾದ ಮಹಿಪತಿರಾಮನು ವಿದೇಶ ಪ್ರವಾಸವನ್ನು ಕೈಕೊಂಡಾಗ್ಗೆ ನರ್ಮದಾಶಂಕರನು ಕೈಕೊಂಡ ಕಾರ್ಯವು ಅವನ ಧೈರ್ಯದ ಇನ್ನೊಂದು ನಿದರ್ಶವಾಗಿದೆ. ಸಾಗರೋಲ್ಲಂಘನವು ಆಗಿನ ದಿನಗಳಲ್ಲಿ ಪಾಪಕಾರ್ಯವೆಂದು ಭಾವಿಸಲಾಗಿದ್ದು ಅದಕ್ಕೆ ಪ್ರೋತ್ಸಾಹವನ್ನು ಕೊಡುವದು ಕೂಡ ಅಷ್ಟೇ ಪಾಪಮಯವೆನಿಸಿತ್ತು. ಈ ಆಕಸ್ಮಿಕವಾದ ಯೋಜನೆಯನ್ನು ಕೈಕೊಳ್ಳುವಂತೆ ನರ್ಮದಾಶಂಕರನು ಮಹಿಪತಿರಾಮನಿಗೆ ಉತ್ತೇಜನವನ್ನು ನೀಡಿದುದಾಗಿ ಆಪಾದಿಸಲಾಯಿತು. ವಾಸ್ತವವಾಗಿ ಆತನಿಗೆ ಈ ವಿಷಯದ ಲವಲೇಶವೂ ತಿಳಿದಿರಲಿಲ್ಲ. ಅವರ ಮತದ ಜನರು ವೈಯಕ್ತಿಕವಾಗಿ ಅವನಿಗೆ ಏನನ್ನೂ ಮಾಡಲಿಲ್ಲ ನಿಜ; ಆದರೆ ಮುಂಬಯಿಯಲ್ಲಿ ವಾಸಿಸುತ್ತಿದ್ದ ಅವರ ಎಲ್ಲ ಜಾತಿ ಬಾಂಧವರಲ್ಲಿ ಒಂದು ಪರಿಪತ್ರವನ್ನು ಹಂಚಿ ಈ ಧರ್ಮಬಾಹಿರ ಕೃತ್ಯದ ವಿಷಯವಾಗಿ ಅಸಂತೋಷವನ್ನು ವ್ಯಕ್ತಗೊಳಿಸಲಾಗಿತ್ತು. ನರ್ಮದಾಶಂಕರ, ಅವನ ತಂದೆ ಮತ್ತು ಅವನ ಮಿತ್ರನಾದ ರಘುವೇರಿಲಾಲ ಉಮಿಯಾಶಂಕರ ಮತ್ತು ಮತ್ತೆ ಕೆಲವರು ಆ ಪರಿಪತ್ರಕ್ಕೆ ಸಹಿ ಹಾಕಲು ಒಪ್ಪಲಿಲ್ಲ. ಅವರಿಗೆ ಬಹಿಷ್ಕಾರವನ್ನು ಹಾಕಿದರೂ ಅವರೇನು ಅದನ್ನು ಲೆಕ್ಕಿಸಲಿಲ್ಲ. ಆ ಕಾಲದಲ್ಲಿ ಇಂತಹ ನಿಯಮ-ನಿಷ್ಠುರವಾದ ಜಾತಿ ಸಂಘಟನೆಯಿಂದ ಬಹಿಷ್ಕಾರವಾಗುವದೆಂದರೆ ಅದಕ್ಕೆ ಸಾಕಷ್ಟು ಮಹತ್ವವಿದ್ದಿತು.

ಕೆಲವು ತಿಂಗಳ ತರುವಾಯ ಅವನನ್ನೇನೊ ತಮ್ಮ ಮತದಲ್ಲಿ ಸೇರಿಸಿಕೊಂಡರು ; ಆದರೆ ತತ್ವಗಳು ಅಡಕವಾದಾಗ್ಗೆ ಆತನು ಯಾವ ಬಲಿದಾನಕ್ಕೂ ಸಿದ್ಧನಿದ್ದ ಎಂಬುದು ಈ ಸನ್ನಿವೇಶದಿಂದ ಸ್ಪಷ್ಟವಾಗುತ್ತದೆ.

ಇತ್ತ ಅವನಿಗೆ ಒಂದು ನಿಜವಾದ ದೊಡ್ಡ ಆಹ್ವಾನವು ಬಂದುದು ಜದುನಾಥಜಿ ಮಹಾರಾಜ ಎಂಬ ಪ್ರಸಿದ್ಧವೈಷ್ಣವ ಗುರುವಿನೊಡನೆ ಸಂಘರ್ಷವಾದಾಗ್ಗೆ. ಆ ಗುರುವು ತುಂಬ ಬುದ್ಧಿವಂತ ಮತ್ತು ಕುಟಿಲವ್ಯಕ್ತಿಯಾಗಿದ್ದು ಅತ್ಯಂತ ಸೊಗಸಾಗಿ ಮಾತನಾಡುತ್ತಿದ್ದನು. ಸೂರತದಲ್ಲಿ ಆತನು ಹಿರಿಯ ಸಮಾಜ ಸುಧಾರಕನಾದ ದುರ್ಗಾರಾಮ ಮೇಹತಾಜಿ ಎಂಬವನ ಸಂಪರ್ಕವನ್ನು ಇಟ್ಟುಕೊಂಡಿದ್ದನು. ಅವನಿಗೆ ಸಮಾಜ ಸುಧಾರಕರ ವಾಗ್ಧಾರೆಯ ಪರಿಚಯವಿದ್ದಿತು ಮತ್ತು ತನ್ನ ಸವಿಮಾತುಗಳಿಂದ ಅವರನ್ನು ಹೇಗೆ ಒಲಿಸಿಕೊಳ್ಳಬಹುದು, ಸಣ್ಣಪುಟ್ಟ ಕೆಲಸಗಳಿಂದ ಹೇಗೆ ಅವರನ್ನು ಗೆದ್ದುಕೊಳ್ಳಬಹುದು ಎಂಬುದನ್ನು ಅರಿತಿದ್ದನು. ಆ ಗುರುವು ಮುಂಬಯಿಗೆ ಬಂದಾಗ್ಗೆ ನರ್ಮದಾಶಂಕರನು ತನ್ನ ಮಿತ್ರವೃಂದದೊಡನೆ ಸಮಾಜ ಸುಧಾರಣೆಯ ಕಾರ್ಯದಲ್ಲಿ ತುಂಬ ಮಗ್ನನಾಗಿದ್ದನು. ನರ್ಮದಾ ಶಂಕರನು ತನ್ನ ಮೊದಲ ಪ್ರವಚನವನ್ನು ನೀಡಿದ ಸಂಸ್ಥೆಯು ಈಗ ಬದಲಾಗಿತ್ತು ಮತ್ತು ಈಗಿನ ಕಾರ್ಯಕಾರಿಸಮಿತಿಯ ಸದಸ್ಯರು ಕೇವಲ ಭಾಷಣಗಳನ್ನು ಬಿಗಿಯು ವದರಲ್ಲಿ ತಮ್ಮ ಕರ್ತವ್ಯವನ್ನು ಮಿತಿಗೊಳಿಸಿರಲಿಲ್ಲ. ಹುಡುಗೆಯರಿಗಾಗಿ ವಿದ್ಯಾಲಯ ಗಳನ್ನು ಅವರು ಆರಂಭಿಸಿದುದು ಸಾಂಪ್ರದಾಯಿಕ ಜನರಿಗೆ ಬರಸಿಡಿಲಿನಂತೆ ಎನಿಸಿತ್ತು. ನಾವು ಈಗಾಗಲೆ ತಿಳಿದಂತೆ ಹುಡುಗೆಯರು ಪಾಠಶಾಲೆಗಳಿಗೆ ಹೋದರೆ ಅವರು ವಿಧವೆಯರಾಗುವರು ಎಂಬುದು ಅವರ ಭಾವನೆಯಾಗಿತ್ತು. ಇತ್ತ ವಿಧವೆಯರ ಸ್ಥಿತಿಯು ಮಾತ್ರ ಯೋಚಿಸಲಿಕ್ಕೆ ಕೂಡ ದುರ್ಧರವಾಗಿತ್ತು. ಸುಧಾರಕರು ವಿಧವೆಯರ ಪುನರ್ವಿವಾಹವಾಗಬೇಕು ಎನ್ನುತ್ತಿದ್ದರು. ಸಂಪ್ರದಾಯಸ್ಥರು ಅದರ ವಿಚಾರವನ್ನು ಕೂಡ ಸಹಿಸುತ್ತಿರಲಿಲ್ಲ. ನರ್ಮದಾಶಂಕರನು ಮಾತ್ರ ವಿಧವಾ ಪುನರ್ವಿವಾಹದ ಬಗ್ಗೆ ಕವನಗಳನ್ನು ರಚಿಸುತ್ತಿದ್ದನು, ಉಪನ್ಯಾಸಗಳನ್ನು ಮಾಡು ತ್ತಿದ್ದನು.

ಆ ಕವನಗಳಲ್ಲಿ ಮತ್ತು ಭಾಷಣಗಳಲ್ಲಿ ಅವನು ಬಳಸುತ್ತಿದ್ದ ಶಬ್ದಸರಣಿಯು ಯುದ್ಧದ ಭಾಷೆಯಾಗಿತ್ತು. ಆ ಶಬ್ದಚಿತ್ರಗಳು ತೋರಿಸುವಂತೆ ಅಲ್ಲಿ ಎರಡು ಶಸ್ತ್ರಸನ್ನದ್ಧ ಗುಂಪುಗಳಿದ್ದವು. ಅವರಲ್ಲಿ ಬೇಕಾದಾಗ ಯುದ್ಧವು ಜರುಗುವಂತಿತ್ತು. ಸುಧಾರಣಾಪ್ರಿಯರು ಅದಕ್ಕಾಗಿ ಸಿದ್ಧರಾಗಿದ್ದರು ; ಆದರೆ ಜದುನಾಥರಿಗೆ ಅದಾವುದೂ ಬೇಕಾಗಿರಲಿಲ್ಲ. ಅವನು ಆ ಭೇದವನ್ನು ಸರಿಪಡಿಸಲಿಕ್ಕೆ ಪ್ರಯತ್ನಿಸಿದನು. ಅಂತೆಯೆ ಆತನು ಸೌಮ್ಯಸ್ವರೂಪದ ಸುಧಾರಣೆಗಳ ಮಾತನ್ನಾಡು ತ್ತಿದ್ದನು. ಹುಡುಗೆಯರ ಶಿಕ್ಷಣವೆ? ಅವನು ಕೇಳುತ್ತಿದ್ದನು ಮತ್ತು ಅದರಲ್ಲಿ

ಅಂತಹದೇನು ಲೋಪವಿದೆ ? ಎಂದು ನರ್ಮದಾಶಂಕರನ ಭೆಟ್ಟಿಯಾಗಿ ಅವನೊಡನೆ ಆ ವಿಷಯವಾಗಿ ಮಾತನಾಡುವದಾಗಿ ಅವನು ಹೇಳುತ್ತಿದ್ದನು.

ಅಂತು ಮಹಾರಾಜರ ಕಡೆಗೆ ಹೋಗಿ ಆ ವಿಷಯವನ್ನು ಚರ್ಚಿಸಬೇಕೆಂದು ನರ್ಮದಾಶಂಕರನಿಗೆ ತಿಳಿಸಲಾಯಿತು. ಆ ಮಹಾರಾಜನು ವಾಸಿಸುತ್ತಿದ್ದ ಬಾಯಖಳಾದತ್ತ ಅವನು ಹೋದನೇನೋ ನಿಜ ; ಆದರೆ ಅವನು ಹೋದ ಸಮಯ ಅಷ್ಟು ಅನುಕೂಲವಾಗಿರಲಿಲ್ಲ. ಕವಿಯು ಅವನ ಮನೆಗೆ ಹೋಗುವಷ್ಟರಲ್ಲಿ ಆ ಮಹಾರಾಜನು ಎಲ್ಲಿಯೊ ಹೊರಗೆ ಹೊರಟಿದ್ದನು. ಇನ್ನೊಮ್ಮೆ ಹೋದಾಗ್ಗೆ ಆತನು ಅಪರಾಹ್ನದಲ್ಲಿ ವಿಶ್ರಾಂತಿಯನ್ನು ಹೊಂದುತ್ತಿದ್ದ. ಕವಿಯನ್ನು ಆಗ್ಗೆ ಭೆಟ್ಟಿಯಾಗಲಿಲ್ಲ. ಇದರಿಂದ ಅವರ ಸಂಬಂಧದಲ್ಲಿ ತುಸು ಕಿಲ್ಮಿಷವುಂಟಾದರೂ, ಅದೇನೂ ಕೆಡಲಿಲ್ಲ ; ಯಾಕೆಂದರೆ ಆ ಮಹಾರಾಜನೇ ಮುಂದೆ ಒಂದು ಸಂದರ್ಭದಲ್ಲಿ ಒಂದು ಬಾಲಿಕಾ ವಿದ್ಯಾಲಯದ ವಾರ್ಷಿಕಸಭೆಗೆ ಹೋಗಿ ಅಲ್ಲಿ ಪಾರಿತೋಷಕಗಳನ್ನು ಹಂಚಿದ್ದನು. ಇದರಿಂದ ರೂಢಿಗತ ಜನರಿಗೆ ಗೊಂದಲವುಂಟಾಗಿ ಅವರು ಸಂಕೋಚಕ್ಕೆ ಈಡಾದರು ಮತ್ತು ಶಾಂತರಾದರು. ಇತ್ತ ಸುಧಾರಣಾಪ್ರಿಯರು ಹರ್ಷಭರಿತರಾದರು. ಕೆಲವರಿಗಂತೂ ಮಹಾರಾಜನ ಈ ಗತ್ತುಗಾರಿಕೆಯಿಂದ ಗಾಬರಿಯೆನಿಸಿತು. ಆದರೆ ನರ್ಮದಾಶಂಕರನಿಗೆ ಮಾತ್ರ ಸಂದೇಹವುಂಟಾಗಿತ್ತು. ಮಹಾರಾಜನು ಯುದ್ಧವನ್ನು ತಡೆಹಿಡಿಯುವ ಭಾಷೆಯಲ್ಲಿ ಮಾತನಾಡುತ್ತಿದ್ದರೂ ಅವನಲ್ಲಿ ಪ್ರಚ್ಛನ್ನಶತ್ರುವು ಇದ್ದುದು ನರ್ಮದಾಶಂಕರನಿಗೆ ಮನದಟ್ಟಾಗಿತ್ತು. ಆ ಹಗೆಯ ಬತ್ತಳಿಕೆಯಲ್ಲಿ ವಿಧವಿಧದ ಶಸ್ತ್ರಗಳಿದ್ದುದು ಮತ್ತು ಆತನಿಗೆ ಯುದ್ಧದ ಯುಕ್ತಿಗಳೆಲ್ಲ ಗೊತ್ತಿದ್ದುದನ್ನು ಆತನು ತಿಳಿದಿದ್ದನು. ಈ ಅವನ ಸಮ್ಮತಿಯು ಹುಡುಗಿಯರ ವಿದ್ಯಾಭ್ಯಾಸದ ಬಗ್ಗೆ ಅವನು ತೋರಿದ ಸೋಲಿನ ದ್ಯೋತಕವೊ ಅಥವಾ ಅದೊಂದು ಅವನ ಯುಕ್ತಿಯೊ ? ಜದುನಾಥಜಿಯು ಸುಧಾರಣೆಗಳ ಆವಶ್ಯಕತೆಯ ಬಗ್ಗೆ ಕಳಕಳಿಯುಳ್ಳವನಾಗಿದ್ದರೆ, ಮತ್ತು ಆತನು ಕೇವಲ ಗೋಮುಖ ವ್ಯಾಘ್ರನಂತೆ ನಟಿಸುತ್ತಿರಲಿಲ್ಲವಾದರೆ, ಅವನು ವಿಧವೆಯರು ಮರುಮದುವೆಯಾಗುವಂತೆ ಅವರನ್ನು ಬಿಟ್ಟುಕೊಡುವುದಿಲ್ಲವೇಕೆ ? ಅದಕ್ಕೆ ಅವನು ವಿರೋಧಿಯೆ ಆಗಿದ್ದರೆ, ನರ್ಮದಾಶಂಕರನೊಡನೆ ಸಾರ್ವಜನಿಕ ವಿವಾದದಲ್ಲಿ ತೊಡಗಲು ಸಿದ್ಧನಿರುವನೆ ? ನರ್ಮದಾಶಂಕರನಂತೂ ಅದಕ್ಕೆ ಸದಾ ಸಿದ್ಧವಾಗಿದ್ದನು.

ಜದುನಾಥಜಿಯು ಬಹಿರಂಗವಾಗಿ ಆಡುವ ಮಾತುಗಳಲ್ಲಿ ಮತ್ತು ತನ್ನ ಸಾಂಪ್ರದಾಯಿಕ ಅನುಯಾಯಿಗಳಲ್ಲಿ ಖಾಸಗಿಯಾಗಿ ಆಡುವ ಮಾತುಗಳಲ್ಲಿ ವ್ಯತ್ಯಾಸವಿದ್ದು ಆತನು ಹೀಗೆ ಎರಡು ನಾಲಿಗೆಗಳಿಂದ ಮಾತನಾಡುತ್ತಿರುವ ಬಗ್ಗೆ ನರ್ಮದಾಶಂಕರ ಮತ್ತು ಅವನ ಕೆಲಜನ ಗೆಳೆಯರಿಗೆ ಸಂದೇಹವಿದ್ದಿತು. ಅಂತೆಯೆ ಕವಿಯು ತನ್ನ ಲೇಖನಗಳು, ಕವನಗಳು ಮತ್ತು ಭಾಷಣಗಳ ಮೂಲಕ ಧರ್ಮಾಂಧರ ಮೇಲೆ ದಾಳಿ

ಯನ್ನು ಮುಂದುವರಿಸಿದ್ದನು. ಆದರೆ ಜದುನಾಥಜಿಯು ಸಂಗಡ ಸಾರ್ವಜನಿಕ ವಾಗಿ ವಿವಾದ ಮಾಡಬೇಕೆಂಬ ಅವನ ಆಹ್ವಾನವು ಕೆಲವು ಮಿತ್ರರು ಮತ್ತು ಸಹಪಾಠಿ ಗಳಿಗೆ ಸೇರಲಿಲ್ಲ ; ಹಲವರಂತೂ ಅದನ್ನು ಬಿಟ್ಟುಕೊಡುವಂತೆ ಸಲಹೆಮಾಡಿದ್ದರು.

ಆದರೆ ಈ ವಿಚಾರವನ್ನು ಮಹಾರಾಜನು ಮತ್ತು ಅವನ ಬೆಂಬಲಿಗರು ಸ್ವಾಗತಿಸಿದರು. ಅದರಿಂದ ಅವರಲ್ಲಿ ಒಂದು ಸಂಭ್ರಮದ ಭಾವವುಂಟಾಯಿತು. ಜೇಡರಹುಳುವಿನಂತೆ ತಾವು ಅತ್ಯಂತ ಜಾಣ್ಮೆಯಿಂದ ತಮ್ಮ ಜಾಲವನ್ನು ಪಸರಿಸಿರು ವದಾಗಿ ಮತ್ತು ಅದರಲ್ಲಿ ನೊಣವು ತಾನೇ ಬಂದು ಬೀಳುತ್ತಿರುವದಾಗಿ ಸಂತಸ ದಲ್ಲಿದ್ದರು. ಮಹಾರಾಜನು ಬಹಿರಂಗ ವಿವಾದದ ಈ ಆಹ್ವಾನವನ್ನು ಸ್ವೀಕರಿಸಿ, ತಮ್ಮ ಅನುಕೂಲದ ಒಂದು ಸ್ಥಳಕ್ಕೆ ಕವಿಯನ್ನು ಕರೆದರು. ನರ್ಮದಾಶಂಕರನು ಈ ಆಮಿಷವನ್ನು ಒಪ್ಪಿಕೊಂಡನು ; ಆದರೆ ಇನ್ನು ಕೆಲವರು ಅವನ ಸುಧಾರಕ ಮನೋಭಾವದ ಮಿತ್ರರು ಮಹಾರಾಜನಲ್ಲಿ ಮತ್ತು ಅವರ ಸುಧಾರಕ ಆದರ್ಶಗಳಲ್ಲಿ ಇನ್ನೂ ಪೂರ್ಣವಾಗಿ ವಿಶ್ವಾಸವನ್ನು ಕಳೆದುಕೊಂಡಿರಲಿಲ್ಲವೆಂದು ಆ ಸ್ಪರ್ಧೆಯಿಂದ ಕಾಲ್ದೆಗೆದರು. ಕವಿಯು ಮಾತ್ರ ಕದಲಲಿಲ್ಲ ; ಆವಶ್ಯಕವೆನಿಸಿದರೆ ತಾನೊಬ್ಬನೆ ಆ ಪ್ರಸಂಗವನ್ನು ಎದುರಿಸುವದೆಂದು ನಿರ್ಣಯಿಸಿದನು. ಅವನ ಕೆಲವರು ಸಹೋದ್ಯೋಗಿಗಳು ಹೀಗೆ ಹಿಂದೆ ಸರಿದರೂ, ಸಭೆಯಲ್ಲಿ ಗೊಂದಲವುಂಟಾಗಿ ಒಂದು ವೇಳೆ ಕವಿಯ ಮೇಲೆ ವೈಯಕ್ತಿಕ ದಾಳಿಯಾದರೆ ಸಹಾಯಕ್ಕೆಂದು ಕಿಸನದಾಸ ಬಾವಾ ಎಂಬ ವ್ಯಾಯಾಮಪಟುವು ಅವನ ಸಂಗಡ ಹೊರಟನು. ಆ ಸಮಯದಲ್ಲಿ ಅವನ ಸಮೀಪವರ್ತಿಗಳಾದ ಇನ್ನೂ ಇಬ್ಬರು-ಮುವ್ವರು ಸ್ನೇಹಿತರು ಅವನ ಜೊತೆಯಲ್ಲಿ ಇದ್ದರು.

ಕವಿಯ ಸ್ಥೈರ್ಯ ಮತ್ತು ಮನೋಧೈರ್ಯಗಳನ್ನು ಪ್ರಕಟಗೊಳಿಸಿದ ಈ ಪ್ರಸಂಗವು ಕವಿಯ ಜೀವನದಲ್ಲಿ ಅತ್ಯಂತ ಸ್ಮರಣೀಯವಾಗಿದೆ. ಅವನ ಬದುಕಿನಲ್ಲಿ ಇಷ್ಟು ರೋಮಾಂಚಕಾರಿಯಾದ ಸನ್ನಿವೇಶವು ಇನ್ನೊಂದಿಲ್ಲ.

ಆ ಸಭೆಯು ಧಾರ್ಮಿಕ ಜನರ ಭದ್ರಕೋಟೆಯಂತಿದ್ದ ವಿಭಾಗದಲ್ಲಿ ಒಂದು ಕಿಕ್ಕಿರಿದ ಜನಸಂದಣಿಯಿದ್ದ ಸದನಲ್ಲಿ ಜರುಗಿತು. ಆ ಸಭಾಭವನದ ಸುತ್ತೆಲ್ಲ ಗೋಡೆಯಿದ್ದಿತು. ಅಲ್ಲಿ ಎಲ್ಲ ಕಡೆಯಲ್ಲಿ ಜನರು ನೆರೆದಿದ್ದರು. ಆ ಭವನದಲ್ಲಿಯೆ ಮಹಾರಾಜನ ಅತ್ಯಂತ ನಿಕಟ ವೈಷ್ಣವ ಅನುಯಾಯಿಗಳಾದ ಇನ್ನೂರು ಜನರಿದ್ದರು ಮತ್ತು ಆ ಗೋಡೆಯ ಒಳಗಡೆಯಲ್ಲಿ ಸುಮಾರು ಎಂಟುನೂರು ಜನರು ತುಂಬಿ ದ್ದರು. ಮಹಾರಾಜನು ಬುದ್ಧಿವಂತ ; ತನ್ನ ಪ್ರತಿಸ್ಪರ್ಧಿಯ ಆವೇಶಪೂರ್ಣ ಸ್ವಭಾವದ ಪರಿಚಯವಿದ್ದ ಆತನು ಕವಿಯನ್ನು ಸಾವಕಾಶವಾದರೂ ನಿಶ್ಚಯದಿಂದ ಒಂದು ಆಧಾರ ದೊರೆಯದ ವಾದಬಿಂದುವಿಗೆ ತಂದು ನಿಲ್ಲಿಸಿದನು. ನರ್ಮದಾಶಂಕರನ ದನಿಯು ಏರತೊಡಗಿ ಅವನು ಕೋಪಾವಿಷ್ಟನಾದನು. ಆ ಕ್ಷಣಕ್ಕೆ ಮಹಾರಾಜನು

ಕವಿಯ ವಿಶ್ವಾಸವು ಶಾಸ್ತ್ರಗಳು ದೈವೀಸ್ವರೂಪದಲ್ಲಿರುವವು ಮತ್ತು ಪರಮಾತ್ಮನಿಂದ ಪ್ರೇರಿತವಾಗಿರುವವು ಎಂಬ ವಾದದಲ್ಲಿ ಇರುವದೇ ಎಂದು ಕೇಳಿದನು. ಆ ಪರಿಸ್ಥಿತಿಯ ಕಾವು ಮತ್ತು ಗೊಂದಲಗಳಲ್ಲಿ ಕವಿಯು ಪ್ರತಿಭಟನೆಯ ಸ್ವರದಲ್ಲಿ ಅವು ಪರಮಾತ್ಮ ಪ್ರೇರಿತ ಅಲ್ಲ ಎಂದು ಹೇಳಿದನು. ಮಹಾರಾಜನು ಇದಕ್ಕೆ ಉತ್ತರವಾಗಿ ಏನನ್ನೂ ಹೇಳಬೇಕಾಗಿರಲಿಲ್ಲ. ಕವಿಯು ಆ ಮಾತುಗಳನ್ನು ಆಡಿದ ಕ್ಷಣದಲ್ಲಿ ಕೋಲಾಹಲ ವೆದ್ದಿತು. ಧ್ವನಿಯನ್ನು ಎತ್ತಿ ಕೂಗಾಡಿದರು, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಕೋಪಾವಿಷ್ಟರಾದರು. ಅಲ್ಲಿ ನೆರೆದ ಜನಜಂಗುಳಿಯು ಹುಚ್ಚೆದ್ದು ಹರಿದಾಡಿತು. ಆ ಗುಂಪನ್ನು ನಿಯಂತ್ರಿಸುವಂತೆ ಕವಿಯು ಮಹಾರಾಜನಿಗೆ ಎಚ್ಚರಿಕೆಯನ್ನು ಕೊಟ್ಟನು; ಯಾಕೆಂದರೆ ಒಂದು ವೇಳೆ ಕವಿಯ ಮೈಮೇಲೆ ಯಾರಾದರೂ ನುಗ್ಗಿದರೆ ಆ ಹೊಣೆಯು ಮಹಾರಾಜನದಾಗುವದು.

ಆ ಕಾಲಕ್ಕೆ ಸಭಾಗೃಹದಲ್ಲಿ ನರ್ಮದಾಶಂಕರನಿಗೆ ಯೋಗ್ಯ ಜೊತೆಗಾರರು ಯಾರೂ ಇರಲಿಲ್ಲ. ತನ್ನ ರಕ್ಷಣೆಗಾಗಿ ಬಂದಿದ್ದ ಪ್ರಬಲ ಕಿಸನದಾಸ ಬಾವಾನನ್ನು ಕೂಡ ಕವಿಯು ಹೊರಗೆ ಕಳಿಸಿದ್ದನು. ಯಾಕೆಂದರೆ ಆ ಸಭೆಯಲ್ಲಿ ಹಿಂಸಾಚಾರವು ನಡೆಯಬಹುದೆಂಬ ಭಯದಿಂದ ಅವನ ವೃದ್ಧತಂದೆಯು ಕವಿಯ ಸಂರಕ್ಷಣೆಗಾಗಿ ಅಲ್ಲಿ ಬಂದಿದ್ದನು. ಒಂದು ವೇಳೆ ಪ್ರಸಂಗವು ಕೈಮೀರಿ ಹೋದರೆ ತನ್ನ ತಂದೆಯು ಆ ಜನರಲ್ಲಿ ಮೊದಲು ಜರ್ಜರಿತನಾಗಬಹುದು ಎಂದು ಭಾವಿಸಿ, ಅವನನ್ನು ಕೂಡಲೆ ಆ ಜಟ್ಟಿಯ ಜೊತೆ ಮಾಡಿ ಕಳಿಸಿಕೊಟ್ಟಿದ್ದನು. ಆ ದೃಶ್ಯವು ಮಾತ್ರ ಸ್ಫೂರ್ತಿದಾಯಕವಿದ್ದಂತೆಯೆ ಭಯಾನಕವೂ ಆಗಿರಲಿಕ್ಕೆ ಸಾಕು. ಒಂದು ಕಡೆ ಕಿಡಿಗೇಡಿಗಳಾದ ಸಾವಿರಕ್ಕೂ ಮೇಲ್ಪಟ್ಟ ಧರ್ಮಾಂಧರು ಮತ್ತು ಇನ್ನೊಂದು ಕಡೆ ಸಹಾಯಕ್ಕೆ ಯಾರೂ ತಕ್ಕವರಿಲ್ಲದ ಈ ಧೀರ ಕವಿ! ಆ ಜನರ ಸಮುದಾಯದಲ್ಲಿ ಒಬ್ಬನೆ ತಲೆಯನ್ನೆತ್ತಿಕೊಂಡು ಎದೆಯನ್ನು ಮುಂದೆ ಚಾಚಿ ಪ್ರತಿರೋಧದ ಎಚ್ಚರಿಕೆಯ ಮಾತುಗಳನ್ನಾಡುತ್ತಾ ನಿಂತ ಆ ಕವಿಯ ಚಿತ್ರವನ್ನು ನಾವು ಕಲ್ಪಿಸಿಕೊಳ್ಳಬಹುದು. ಆದರೆ ಆ ಎಚ್ಚರಿಕೆಯ ಮಾತುಗಳು ನಿರರ್ಥಕವಾದವು. ಅಷ್ಟರಲ್ಲಿ ಗಂಡಾಂತರವನ್ನು ಕಂಡ ಕವಿಯು ಇತರರಿಗೆ ತಿಳಿಯುವದಕ್ಕೆ ಮೊದಲು ಆ ಸಭೆಯಿಂದ ಹೊರಗೆ ಬಂದನು. ಕಾಲಚೀಲಗಳನ್ನು ಹಾಕಿಕೊಂಡ ಅವನಿಗೆ ಬೂಟುಗಳು ಸಿಗದ ಕಾರಣ ಅವನು ಅದನ್ನು ಲೆಕ್ಕಿಸದೆ ಬರಿಗಾಲಿನಿಂದ ಹೊರಹೊರಟನು. ಹೊರಗಿನ ಗೊಡೆಯೊಳಗೆ ಇದ್ದ ಜನಸಮೂಹಕ್ಕೆ ಅವನೇ ಅವರ ಭಾವೀ ಗುರಿಯಾಗಿದ್ದುದು ಗೊತ್ತಿರಲಿಲ್ಲವೆಂದು ಅವನು ಹೊರಬರುವಾಗ್ಗೆ ಆತುರತೆಯಿಂದ “ಆ ದುರ್ಬೀಜನೆಲ್ಲಿ?” ಎಂದು ಕೇಳಿದರು. ನರ್ಮದಾಶಂಕರನು ಹೊರಗಿನ ಬೀದಿಯತ್ತ ಕೈಯನ್ನೆತ್ತಿ ತೋರಿ, “ಬೇಗ ನೋಡಿರಿ, ಅತ್ತ ಅವನು ಹೊರಟಿರುವನು” ಎಂದು ನುಡಿದನು; ಮತ್ತು ಅನ್ಯರು ಅವನ ಗುರುತನ್ನು ಹಿಡಿಯುವ ಮೊದಲೇ ಅಲ್ಲಿಂದ ಕಾಲ್ದೆಗೆದಿದ್ದನು. ಅವನ ಮನೆಯ ಬಳಿಯಲ್ಲಿ ಜನರ ಒಂದು

ಗುಂಪು ಶೀಘ್ರವಾಗಿ ಸೇರಿತು ಮತ್ತು ಅಷ್ಟರಲ್ಲಿ ಅವನು ಪಾರಾಗಿ ಹೋದ ಸುದಿ ಯು ಹಬ್ಬಿದ್ದರೂ, ಅವನು ಅವರ ಕಣ್ಣಿಗೆ ಬೀಳುವ ಮೊದಲು ತನ್ನ ಕೋಣೆಯಲ್ಲಿ ಸುರಕ್ಷಿತವಾಗಿ ಕುಳಿತಿದ್ದನು. ಅಲ್ಲಿಂದ ಅವನು ಅವರ ಬೈಗಳನ್ನು ಮಾತ್ರ ಕೇಳುತ್ತಿದ್ದನು.

ಅವನು ಈ ಪ್ರಸಂಗದಿಂದ ಧೈರ್ಯವಾಗಿ ಉಳಿದು ಬಂದಿದ್ದರೂ ಆ ದ್ವಂದ್ವವು ಅವನ ಮನಸ್ಸನ್ನು ವಿಹ್ವಲಗೊಳಿಸಿತು. ತನ್ನ ಸಂಗಡಿಗರು ತನ್ನ ಕೈಬಿಟ್ಟರು ಎಂದು ಅವನು ಭಾವಿಸಿದನು. ಆ ಯುಗಪ್ರವರ್ತಕ ಘಟನೆಯಲ್ಲಿ ಅವರು ಸದಾ ಅವನ ಜೊತೆಗೆ ಇರುವಂತೆ ಮಾಡಿದುದು ಕೇವಲ ಅವರ ಹೇಡಿತನವೇ ಹೊರತು ತತ್ವಗಳಲ್ಲಿ ಅವರ ನಿಷ್ಠೆಯು ಕಡಿಮೆಯಾಗಿತ್ತು ಎಂಬುದಲ್ಲ. ಆ ಪ್ರಸಂಗದ ತರುವಾಯ ಕೂಡ ಅವನು ಶಾಸ್ತ್ರಗಳು ಅಪೌರುಷೇಯವಲ್ಲ ಎಂದು ಹೇಳಿದುದರ ವಿರುದ್ಧವಾಗಿ ತಮ್ಮ ಅಸಮ್ಮತಿಯನ್ನು ಸೂಚಿಸಿ ಬರೆಯುತ್ತಿದ್ದ ಲೇಖನಗಳಿಗೆ ಕೂಡ ಅವರಿಗೆ ತಮ್ಮ ಸುರಕ್ಷಿತೆಯ ದೃಷ್ಟಿಯು ಕಾರಣವಾಗಿತ್ತು ಎಂದೂ ಅವನು ತಿಳಿದನು. ಹಾಗೆಯೆ ತನ್ನ ಅವಸರದ ಮತ್ತು ನಿಷ್ಠುರವಾದ ರೀತಿಯಲ್ಲಿ ಆ ಜನರು ಮಾತುಗಳನ್ನು ಆಡುವ ಮಟ್ಟಿಗೆ ಮತ್ತು ತಮಗೆ ಸಾಕಷ್ಟು ಪ್ರಚಾರ ದೊರೆಯುವವರೆಗೆ ಮಾತ್ರ ಶೂರರಾಗಿರುವರು ಮತ್ತು ಪ್ರತ್ಯಕ್ಷ ಕಾರ್ಯರಂಗದಲ್ಲಿ ದುಮುಕುವಾಗ್ಗೆ ಅವರು ತಾನು ನೋಡಿದಂತೆಯೆ ನಡೆದುಕೊಳ್ಳುವರು ಎಂದು ನಿರ್ಧರಿಸಿಕೊಂಡನು.

ಆನಂತರ ಆತನು ಮತ್ತು ಆತನ ಸುಧಾರಣಾಪ್ರಿಯ ಸ್ನೇಹಿತರು ಕೂಡಿ ಸ್ವಲ್ಪ ಕೆಲಸವನ್ನು ಸಮಾಜದಲ್ಲಿ ಕೈಕೊಂಡರೂ ಅದರಲ್ಲಿ ಮೊದಲಿನ ಸೌಹಾರ್ದ ಮತ್ತು ಬಂಧುಭಾವಗಳಿರಲಿಲ್ಲ.

ಮುಂದೆ ಅದು ಮಹಾರಾಜನ ಮಾನಹಾನಿಯ ಮೊಕದ್ದಮೆ ಎಂಬ ದೊಡ್ಡ ಮತ್ತು ಸುಪ್ರಸಿದ್ಧವಾದ ಪ್ರಕರಣವು ಇಡಿಯ ಗುಜರಾತವನ್ನು ಆಮೂಲಾಗ್ರವಾಗಿ ನಡುಗಿಸಿದಾಗ್ಗೆ ಸ್ಪಷ್ಟವಾಗಿ ಕಂಡುಬಂದಿತು. ಆ ಸಂದರ್ಭದಲ್ಲಿಯೂ ಅದೇ ಜದುನಾಥಜಿ ಮಹಾರಾಜನು ಸೇರಿಕೊಂಡಿದ್ದನು. ಆದರೆ ಈ ಬಾರಿ ಅವನ ಗುರಿಯು ನರ್ಮದಾಶಂಕರನಾಗಿರದೆ ಅವನ ಗೆಳೆಯ ಮತ್ತು ಸಮಾಜ ಸುಧಾರಕನಾದ ಕರಸನದಾಸ ಮೂಲಜಿಯಾಗಿದ್ದನು.

ಈಗಾಗಲೆ ನಮಗೆ ತಿಳಿದಂತೆ ಕರಸನದಾಸ ಮೂಲಜಿಯು 'ಸತ್ಯಪ್ರಕಾಶ' ಎಂಬ ಸಾಮಾಜಿಕ ಸುಧಾರಣೆಯ ಪತ್ರಿಕೆಯ ಸಂಪಾದಕರಾಗಿದ್ದನು. ಆ ಪತ್ರಿಕೆಯು ನಿರ್ಭಯವಾಗಿದ್ದಷ್ಟೇ ನಿರ್ದಾಕ್ಷಿಣ್ಯವಾಗಿದ್ದಿತು. ವೈಷ್ಣವ ಮಹಾರಾಜರ ನಡತೆ ಮತ್ತು ಕಾರ್ಯಕಲಾಪಗಳು ಆ ಪತ್ರಿಕೆಯ ಟೀಕೆಗೆ ಪ್ರಮುಖವಾದ ಗುರಿಯಾಗಿದ್ದವು. ಇತ್ತ ಆ ಮಹಾರಾಜರು ಈ ಪತ್ರಿಕೆಗೆ ಒಂದು ಮತ್ತೆ ಏಳಲಾರದಂತಹ

ಪೆಟ್ಟನ್ನು ಹಾಕುವದಕ್ಕಾಗಿ ಯೋಗ್ಯ ಸಂಧಿಗಾಗಿ ಕಾಯ್ದುಕೊಂಡಿದ್ದರು. ಆ ಪತ್ರಿಕೆಯ ಪ್ರಭಾವವನ್ನು ತಗ್ಗಿಸುವ ಉದ್ದೇಶದಿಂದ ಅವರು ತಮ್ಮದೇ ಆದ ಒಂದು ಪತ್ರಿಕೆಯನ್ನು ಹೊರಡಿಸಿದ್ದರೂ ಅದರಿಂದ ಹೆಚ್ಚಿನ ಪರಿಣಾಮವೇನೂ ಆಗುತ್ತಿರಲಿಲ್ಲ. ಅಂತೆಯೆ ಅವರು ತಡೆದಿದ್ದರು.

'ಸತ್ಯಪ್ರಕಾಶ'ದಲ್ಲಿ "ಪ್ರಾಚೀನ ಹಿಂದೂ ಧರ್ಮ" ಎಂಬ ಹೆಸರಿನ ಲೇಖನ ವೊಂದು ಪ್ರಕಟವಾದ ಕೂಡಲೆ ತಮ್ಮ ಸುವರ್ಣ ಸಂಧಿಯು ಸನ್ನಿಹಿತವಾಗಿದೆ ಎಂದು ಅವರು ಭಾವಿಸಿದರು. ಆಗ್ಗೆ ಕೂಡ ಅವರು ಕಾಯ್ದು ನೋಡಿದರು. ವಿಚಾರವಿನಿಮಯ ಮಾಡಿದರು; ಆದರೆ ಸಾಕಷ್ಟು ಯೋಚನೆಯ ನಂತರ ಆ ಸುದಿನವನ್ನು ಶತ್ರುವಿನ ಮೇಲೆ ಬಲವಾದ ಪ್ರಹಾರ ಮಾಡದೆ ಕಳೆದುಕೊಳ್ಳಬಾರದು ಎಂದು ಎಣಿಸಿದರು. ಅಂತೆಯೆ ೧೮೬೧ರ ಮೇ ೧೪ನೆಯ ದಿನಾಂಕ ಇದೇ ಜದುನಾಥಜಿಯು ಆ ಪತ್ರಿಕೆಯಲ್ಲಿ ೧೮೬೦ರ ಅಕ್ಟೋಬರ್ ೨೧ನೆಯ ದಿನಾಂಕದ ಸಂಚಿಕೆಯಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಸ್ಪಷ್ಟವಾಗಿ ಜರುಗಿಸಿದ ಮಾನಹಾನಿಯ ಪರಿಹಾರ ವೆಂದು ರೂ. ೫೦,೦೦೦ ಕ್ಕಾಗಿ ಕರಸನದಾಸ ಮೂಲಜಿ ಮತ್ತು ಅವನ ಪತ್ರಿಕೆಯ ಮೇಲೆ ಮೊಕದ್ದಮೆ ಹಾಕಿದನು.

ಈ ಪ್ರಕಟಣದ ವಿಚಾರಣೆಯು ನಡೆದ ಇಪ್ಪತ್ತಮೂರು ದಿನಗಳ ಮಟ್ಟಿಗೆ ಅದು ಕೇವಲ ಆ ಪಟ್ಟಣದಲ್ಲೆಲ್ಲ ಮನೆಮಾತಾಗಿರದೆ ಇಡಿಯ ಆ ಪ್ರದೇಶದಲ್ಲಿಯೆ ಚರ್ಚಿತ ವಾಗುತ್ತಿತ್ತು. ಮಹಾರಾಜನ ಕಡೆಗೆ ಆ ಪ್ರಾಂತದ ಧರ್ಮನಿಷ್ಠರೆಲ್ಲ ಬೆಂಬಲಕ್ಕಾಗಿ ನಿಂತಿದ್ದರೆ ಇತ್ತ ಇನ್ನೊಂದು ಕಡೆ ಆ ನಗರದ ಮತ್ತು ಪ್ರಾಂತದ ವಿದ್ಯಾವಂತ ಶಿಷ್ಟರು ಸೇರಿಕೊಂಡಿದ್ದರು. ಆ ಗುಂಪಿನಲ್ಲಿ ಹಿಂದುಗಳು ಮತ್ತು ಪಾರ್ಸಿಗಳಿದ್ದರಲ್ಲದೆ ಮುಂಬಯಿಯ ವಿಲ್ಸನ್ ಕಾಲೇಜಿನ ಪ್ರವರ್ತಕರಾದ ಡಾ. ವಿಲ್ಸನ್‌ರು ಕೂಡ ಇದ್ದರು. ಅದು ಸುಧಾರಕರಿಗೆ ಜಯವಾಗಿ ಮಹಾರಾಜ ಮತ್ತು ಅವನ ಸಾಂಪ್ರದಾಯಿಕ ಅನುಯಾಯಿಗಳಿಗೆ ಮತ್ತೆ ತಲೆಯೆತ್ತದಂತಹ ಸೋಲನ್ನು ತಂದೊಡ್ಡುವದರಲ್ಲಿ ಪರಿಣಮಿಸಿತು. ಇಡಿಯ ದೇಶದಲ್ಲಿ ವಿಜಯದುಂದುಭಿಯು ಮೊಳಗಿತು. ನರ್ಮದಾಶಂಕರನು ಕೂಡ ಆ ವಿಷಯವಾಗಿ ಒಂದೋ ಎರಡೋ ಕವನಗಳನ್ನು ಬರೆದು ಆ ಗೆಲುವನ್ನೂ ಹಾರೈಸಿದರೂ ಆ ಬಗ್ಗೆ ಆತನು ಅಂತರಂಗದಲ್ಲಿ ಹೆಚ್ಚು ಸುಖಿಯಾಗಿರಲಿಲ್ಲ. ಆ ವೈಭವವನ್ನು ಅಂದಿನ ವಿದ್ರೋಹ ಮತ್ತು ಕಾರ್ಯಸನ್ನಾಹಗಳಿಗೆ ನಾಂದಿಯನ್ನು ಹಾಡಿದ ತಾನು ಸಹಭಾಗಿಯಾಗಿ ಸವಿಯ ಬೇಕಲ್ಲದೆ ಅದರ ಶ್ರೇಯಸ್ಸನ್ನೆಲ್ಲ ಕರಸನದಾಸನೊಬ್ಬನೇ ಪಡೆಯುತ್ತಿರುವನಲ್ಲ ಎಂದುಕೊಂಡನು ಅವನು. ಈ ಸನ್ನಿವೇಶದಿಂದ ಅವನ ಭ್ರಮೆಯ ನಿರಸನವಾಯಿ ತಷ್ಟೆ ಅಲ್ಲದೆ ಅವನ ಮತ್ತು ಇತರ ಸಮಾಜ ಸುಧಾರಕರ ನಡುವಿನ ಅಂತರವು ಹೆಚ್ಚಾಯಿತು.

ಆದರೂ ಕೂಡ ಕೆಲವು ಕ್ಷೇತ್ರಗಳಲ್ಲಿ ಅವರು ಕೂಡಿಯೆ ಕೆಲಸಗಳನ್ನು ಕೈಕೊಳ್ಳುತ್ತಿದ್ದರು. ಒಬ್ಬ ಮಿತ್ರನ ಮುಖಾಂತರ ಬ್ರಾಹ್ಮಣ ವಿಧವೆಯೋರ್ವಳು ಪುನರ್ವಿವಾಹವಾಗಬೇಕೆಂಬ ವಿಚಾರವಿದ್ದವನೆಂದು ನರ್ಮದಾಶಂಕರನ ಪರಿಚಯ ವನ್ನು ಮಾಡಿಕೊಂಡಳು. ಆಗ್ಗೆ ನರ್ಮದಾಶಂಕರರು ತನ್ನ ಸುಧಾರಣಾವಾದಿಗಳಾದ ಸ್ನೇಹಿತರ ಸಹಾಯವನ್ನು ಕೋರಿ, ಒಳ್ಳೆಯ ನಡತೆಯಿಂದ ಆಕೆಯನ್ನು ನೋಡಿ ಕೊಳ್ಳುವ ಭರವಸೆಯನ್ನು ನೀಡಿದ ಒಬ್ಬ ವ್ಯಕ್ತಿಗೆ ಆಕೆಯ ಮದುವೆಯುನ್ನು ಮಾಡಿಕೊಟ್ಟನು. ಆದರೆ ಕೆಲವು ಸಮಯದ ನಂತರ ಆ ಗಂಡಹೆಂಡಿರು ತಮಗೆ ನೆರವನ್ನು ನೀಡಿದವರ ವಿರುದ್ಧವಾಗಿ ನಿಂತರು. ಸುಧಾರಕಮಿತ್ರರು ಅವರ ಮದುವೆಯನ್ನು ಮಾಡಿ ನಂತರ ಅತ್ಯಂತ ಬೇಸತ್ತು ಆ ದಂಪತಿಯ ಗೊಡವೆಯನ್ನೆ ಬಿಟ್ಟುಕೊಟ್ಟರು. ಆದರೆ ಈ ಸಮ್ಮಿಲನದಿಂದ ಕೂಡ ಆ ಎರಡೂ ಬಣಗಳಲ್ಲಿ ಕಂಡುಬಂದ ಬಿರುಕು ಮುಚ್ಚಲಿಲ್ಲ.

ಇತ್ತ ಮಹಿಪತರಾಮನು ಇಂಗ್ಲಂಡ್‌ದಿಂದ ತಿರುಗಿ ಬಂದಮೇಲೆ ಅವನ ಸಂಗಡ ಮಾಡಬೇಕಾದ ಊಟದ ಪ್ರಶ್ನೆಯು ತಲೆಯೆತ್ತಿದಾಗ್ಗೆ ಈ ಅವರ ಅಂತರವು ಮತ್ತೆ ಗೋಚರಿಸಿತು. ಹಾಗೆ ಮಾಡಿದವರಿಗೆ ಅವರ ಮತದವರು ಖಂಡಿತವಾಗಿ ಬಹಿಷ್ಕಾರವನ್ನು ಹಾಕುತ್ತಿದ್ದರು. ಆ ದಿಟ್ಟ ಹೆಜ್ಜೆಯನ್ನು ಇಡಬೇಕು ಎಂದು ಉಪದೇಶಿಸುವವರು ತಾವೇ ಅದಕ್ಕಾಗಿ ಮುಂದೆ ಬರುತ್ತಿರಲಿಲ್ಲ ಎಂಬುದು ನರ್ಮದಾ ಶಂಕರನಿಗೆ ಕಂಡುಬಂದಿತು.

ಇದೆಲ್ಲ ಭೇದವನ್ನು ಲೆಕ್ಕಿಸದೆ ಅವನು ಕೈಕೊಂಡ ಸಾಮಾಜಿಕ ಸುಧಾರಣೆಯ ಕಾರ್ಯವು ಮುಂದುವರಿಯಿತು. ಒಬ್ಬ ಮಹಾರಾಷ್ಟ್ರೀಯ ಮಿತ್ರನು ತಾವು ಹಿಂದುಗಳಲ್ಲಿ ಇದ್ದ ಜಾತಿಯ ಪ್ರಾಧಾನ್ಯವನ್ನು ಕುಗ್ಗಿಸುವ ಉದ್ದೇಶದಿಂದ ಸ್ಥಾಪಿಸಲಿದ್ದ ಸಂಘವೊಂದನ್ನು ಸೇರುವಂತೆ ಅವನನ್ನು ಕೇಳಿಕೊಂಡನು. ಅವನು ಅದಕ್ಕೆ ಸಂತೋಷದಿಂದ ಒಪ್ಪಿ ಆ ಸಂಘದ ಕೆಲಸದಸ್ಯರು ಆ ವಿಷಯವಾಗಿ ಸಕ್ರಿಯ ಪ್ರಚಾರಕರಾಗಬೇಕು ಮತ್ತು ಅವರು ಎಲ್ಲ ಕಡೆಗಳಲ್ಲಿ ಭಾಷಣಗಳನ್ನು ಮಾಡುತ್ತ ತಾವು ಸಾರುವ ತತ್ವಗಳನ್ನು ತಾವೇ ಆಚರಣೆಯಲ್ಲಿ ತರುವಂತಹರಾಗಬೇಕು ಎಂಬ ಕರಾರನ್ನು ಹಾಕಿದನು. ಅದೆಲ್ಲ ಸ್ವಾಭಾವಿಕವಾಗಿಯೇ ಸಂಘದ ಸದಸ್ಯತ್ವಕ್ಕೆ ಆನುಷಂಗಿಕವಾಗಿರುವದು ಎಂದು ಆ ಮಿತ್ರನು ಹೇಳಿದನು. ಆ ಆಶ್ವಾಸನದ ಮೇಲೆ ನರ್ಮದಾಶಂಕರನು ಆ ಸಂಸ್ಥೆಯ ಸಭಾಸದನಾದನು; ಆದರೆ ಅದರ ಸದಸ್ಯರಲ್ಲಿ ಗಂಭೀರಸ್ವರೂಪದ ಭಿನ್ನಾಭಿಪ್ರಾಯಗಳು ತಲೆಯೆತ್ತಿ ಅದು ಕೂಡ ನಿಂತು ಹೋಯಿತು. ಮಿಕ್ಕವರೆಲ್ಲ ಅದನ್ನು ಬಿಟ್ಟುಹೋಗಿದ್ದರೂ ಆರು ಜನ ಸದಸ್ಯರು ಮಾತ್ರ ಆ ಕಾರ್ಯವನ್ನು ಮುಂದುವರಿಸುವ ನಿರ್ಣಯವನ್ನು ಕೈಗೊಂಡರು. ನರ್ಮದಾಶಂಕರನು ಆ ಆರರಲ್ಲಿ ಒಬ್ಬನಾಗಿದ್ದನು. ಮುಂದೆ ಮಿಕ್ಕ ಐದು ಜನರು ಕೂಡ ಏನನ್ನೂ ಮಾಡದೆ ಆ ಸಂಘಟನೆಯನ್ನು ಬಿಟ್ಟು ಹೋದರು. ಆಗ ನರ್ಮದಾಶಂಕರನಿಗೆ ಸುಮ್ಮನಿರದೆ ಬೇರೆ ಮಾರ್ಗವಿರಲಿಲ್ಲ.

ಆದರೆ ಉಪಜೀವನದ ಮಾರ್ಗವು ದುರ್ಗಮವಾಗಿತ್ತು. ಸಾಮಾಜಿಕ ಮತ್ತು ಸಾಹಿತ್ಯಿಕ ಕಾರ್ಯಕಲಾಪಗಳು ನಡದೇ ಇದ್ದವು. ಸಿಕ್ಕ ಚಿಕ್ಕಪುಟ್ಟ ಕೆಲಸಗಳಿಂದ ಉದರ ನಿರ್ವಾಹವನ್ನು ಮಾಡಿಕೊಳ್ಳಬೇಕಾಗಿತ್ತು. ನರ್ಮದಾಶಂಕರನು ಒಂದು ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳು ಕಾವ್ಯವನ್ನು ಹೇಗೆ ಹೇಳಬೇಕು ಎಂಬುದನ್ನು ಕಲಿಸಲಿಕ್ಕೆಂದು ಹೋಗಬೇಕಾಯಿತು. ಇಬ್ಬರು ಇಂಗ್ಲಿಶ್ ಜನರಿಗೆ ಗುಜರಾತಿಯನ್ನು ಸ್ವಲ್ಪಕಾಲ ಕಲಿಸಿದನು. ಅದೆಲ್ಲ ಅಲ್ಪಕಾಲದ ಕೆಲಸವಾಗಿತ್ತು. ಅವನಿಗೆ ಒಮ್ಮೆ ಹರಿಕಥೆಯನ್ನು ಹೇಳುವ ಸುಯೋಗವೂ ದೊರೆಯಿತು.

೮

ಈ ಎಲ್ಲ ಎಡೆಬಿಡದ ಚಟುವಟಿಕೆಗಳು ಅನ್ಯಕ್ಷೇತ್ರಗಳಲ್ಲಿ ನಡೆದಾಗ್ಗೆ ನರ್ಮದಾಶಂಕರನ ಸೃಜನಶೀಲ ಕೆಲಸವು ಯಾವ ಅಡೆ-ತಡೆಗಳಿಲ್ಲದೆ ಮುಂದುವರಿದಿತ್ತು. ತನ್ನ ಅದಮ್ಯ ಉತ್ಸಾಹದಿಂದ ಆತನು ಅನೇಕ ವಲಯಗಳಲ್ಲಿ ಅವಿತವಾದ ಕಾರ್ಯವನ್ನು ಕೈಕೊಂಡಿದ್ದನು. ತನ್ನ 'ನರ್ಮಕವಿತಾ' ಸಂಗ್ರಹದ ನಾಲ್ಕನೆಯ, ಅಯ್ದನೆಯ, ಆರನೆಯ, ಏಳನೆಯ ಮತ್ತು ಎಂಟನೆಯ ಸಂಪುಟಗಳನ್ನು ಆ ಸೆಣಸಾಟವು ನಡೆದ, ದಲಪತರಾಮ ಮತ್ತು ತನ್ನೊಡನೆ ಜರುಗಿದ ಮೊದಲನೆಯ ಬಾರಿ ಮತ್ತು ಇನ್ನೊಂದಾದ ಜದುನಾಥಜಿ ಮಹಾರಾಜನೊಡನೆ ಸಾಗಿದ ಘಟನೆಯ ಕಾಲದಲ್ಲಿಯೆ ಪ್ರಕಟಿಸಿದ್ದನು. ಅದಲ್ಲದೆ ಆತನು ಪಿಂಗಳಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಮಹತ್ವದ ಹಿಂದೀ ಗ್ರಂಥಗಳ ಅಧ್ಯಯವನ್ನು ಮಾಡಿದ್ದನು; ಮತ್ತು ಕಾವ್ಯಕಲೆ ಹಾಗೂ ಭಾಷಾಶಾಸ್ತ್ರಗಳ ಅಭ್ಯಾಸವನ್ನು ಕೈಕೊಂಡಿದ್ದನು. ೧೮೬೦ ರಲ್ಲಿ ಆತನು "ತತ್ವಶೋಧಕ ಸಭಾ" ಎಂಬ ಸಂಸ್ಥೆಯನ್ನು ಸಂಘಟಿಸಿದ್ದನು ಮತ್ತು 'ನರ್ಮಕವಿತೆ'ಯ ಒಂಬತ್ತನೆಯ ಹಾಗೂ ಹತ್ತನೆಯ ಸಂಪುಟಗಳನ್ನು ಬೆಳಕಿಗೆ ತಂದಿದ್ದನು. ಹಾಗೆಯೆ ಅವನು ಕೆಲವು ಸಾಹಿತ್ಯಕ ಮತ್ತು ಸಾಮಾಜಿಕ ವಿಷಯಗಳ ಮೇಲೆ ಮೊದಲು ಉಪನ್ಯಾಸಗಳನ್ನು ನೀಡಿದ್ದನು ಮತ್ತು ಅನಂತರ ಆ ಭಾಷಣಗಳನ್ನು ಪ್ರಕಟಿಸಿದ್ದನು; ಇದಲ್ಲದೆ ಆತನು ಹಿರಿಯ ಕವಿಯಾದ ದಯಾರಾಮನ ರಚನೆಗಳ ಸಂಕಲನವನ್ನು 'ದಯಾರಾಮ ಕಾವ್ಯಸಂಗ್ರಹ' ಎಂಬ ಹೆಸರಿನಲ್ಲಿ ತಾನೇ ಸಂಪಾದಿಸಿ ಪ್ರಕಟಿಸಿದ್ದನು.

ಇದೇ ಅವಧಿಯಲ್ಲಿ ನರ್ಮದಾಶಂಕರನು ಒಂದು ಬೃಹತ್ ಕಾರ್ಯವನ್ನು ಕೈಕೊಂಡು ಅತ್ಯಂತ ಅರ್ಹವಾಗಿದ್ದ ಅಪೂರ್ವ ಶ್ರೇಯಸ್ಸನ್ನು ಗಳಿಸಿದನು. ಅದು ತಾನೊಬ್ಬನೆ ರಚಿಸಿ ಪ್ರಕಟಗೊಳಿಸಿದ ಗುಜರಾತೀ ಭಾಷೆಯ ನಿಘಂಟಾಗಿದೆ. ಈ ಮೊದಲು ಮಾರ್ಗದರ್ಶನಕ್ಕಾಗಿ ಆ ಭಾಷೆಯಲ್ಲಿ ಅಂತಹ ಕೃತಿಯೊಂದೂ ಇರಲಿಲ್ಲ. ಆದರೆ ಆತನು ತನ್ನ ವಾಡಿಕೆಯ ಉತ್ಸಾಹ ಮತ್ತು ಧೈರ್ಯಗಳಿಂದ

ಆ ಕಾರ್ಯದಲ್ಲಿ ದುಮುಕಿ ೧೮೬೦ ರ ನವಂಬರ್ ೧೮ ನೆಯ ದಿನಾಂಕ ಅದನ್ನು ಆರಂಭಿಸಿದನು.

ನರ್ಮದಾಶಂಕರನ ಜೀವನಚರಿತ್ರೆಯನ್ನು ಅಭ್ಯಸಿಸುವ ಜನರಿಗೆ ಈತನು ಏಕಾಂಗಿಯಾಗಿ ಶಬ್ದಕೋಶವನ್ನು ರಚಿಸುವಂತಹ ಕಾರ್ಯವನ್ನು ಹೇಗೆ ಕೈಕೊಂಡನು ಎಂಬ ಬಗ್ಗೆ ನಿಜವಾಗಿಯೂ ವಿಸ್ಮಯವಾಗಬಹುದು. ಅದು ಹೇಗೆ ಸಾಧ್ಯ ಎಂದೂ ಅವರು ಕೇಳಬಹುದು. ಆದರೆ ಅದಕ್ಕೆ ಉತ್ತರ ಇಲ್ಲಿ ಇದೆ.

ಅವನ ಕವನಗಳನ್ನು ಅಭ್ಯಸಿಸಲಿಕ್ಕೆಂದು ವಿದ್ಯಾಲಯಗಳ ಪಾಠಕ್ರಮದಲ್ಲಿ ಸೇರಿಸಲಾಗಿತ್ತು ಮತ್ತು ಆತನು ತನ್ನ ಶೈಲಿಯಲ್ಲಿ ಹೊಸಬಗೆಯ ಲೇಖನವನ್ನು ತೋರ್ಪಡಿಸಿದ್ದು ಅವನ ಕೃತಿಗಳಲ್ಲಿ ಅವನು ಬಳಸಿದ ವಿಪುಲ ಸಂಸ್ಕೃತ ಮೂಲದ ಶಬ್ದಗಳ ಅರ್ಥವನ್ನು ತಿಳಿದುಕೊಳ್ಳುವದು ವಿದ್ಯಾರ್ಥಿಗಳಿಗೆ ದುಷ್ಕರವಾದ ಕಾರಣ ಅವರು ತೊಂದರೆಗೀಡಾಗಿದ್ದರು. ಆ ವಿಷಯವಾಗಿ ಅವನ ಬಳಿಗೆ ದೂರುಗಳು ಬಂದು ಅದಕ್ಕಾಗಿ ತಾನು ಏನನ್ನಾದರೂ ಮಾಡಬೇಕು ಎಂದು ಅವನು ಯೋಚಿಸಿದನು. ಆದರೆ ಅದು ಏನಾಗಬಹುದು? ತನ್ನ ಕವನಗಳಲ್ಲಿ ಬರುವ ಎಲ್ಲ ಕಠಿಣ ಪದಗಳನ್ನು ಹುಡುಕಿ ತೆಗೆದು, ಅವುಗಳ ಅರ್ಥವನ್ನು ಕೊಟ್ಟರೆ, ಆ ವಿಷಯವಾಗಿ ವಿದ್ಯಾರ್ಥಿಗಳಿಗೆ ಮುಂದೆ ಯಾವ ತೊಡಕೂ ಉಂಟಾಗಲಿಕ್ಕಿಲ್ಲ ಎಂದು ಅವನು ಭಾವಿಸಿದನು. ಅದೊಂದು ಅತ್ಯಂತ ಆಕರ್ಷಕವಾದ ಕೆಲಸವೆನಿಸಿ ಅವನಿಗೆ ಅದರಿಂದ ತುಂಬಾ ಸಂತೋಷವಾಯಿತು. ಇತ್ತ ತಾನು ಹೆಕ್ಕಿ ತೆಗೆದ ದುರ್ಗಮ ಪದಗಳ ಸಂಖ್ಯೆಯು ಹೆಚ್ಚು ದೊಡ್ಡದಿದೆ ಎಂಬುದನ್ನು ತಿಳಿದು ಆತನಿಗೆ ಆಶ್ಚರ್ಯವಾಯಿತು. ಹಾಗಿದ್ದರೆ ತಾನು ತನ್ನ ರಚನೆಗಳಲ್ಲಿ ಬಳಸಿದ ಶಬ್ದಗಳಿಗೆ ಮಾತ್ರ ಏಕೆ ಸೀಮಿತನಾಗಬೇಕು? ಆ ಭಾಷೆಯಲ್ಲಿ ಬರುವ ಎಲ್ಲ ಶಬ್ದಗಳ ಅರ್ಥಕೋಶವೊಂದನ್ನು ಏಕೆ ನಿರ್ಮಿಸಬಾರದು? ಅದರಿಂದ ಎಲ್ಲ ವಿದ್ಯಾರ್ಥಿಗಳಿಗೆ ಯಾವಾಗಲೂ ಪ್ರಯೋಜನವಾಗಬಹುದು. ವಿಚಾರವು ತ್ವರೆಯಿಂದ ನಿರ್ಣಯರೂಪವನ್ನು ತಳೆದು ಅವನಿಗೆ ಅದನ್ನು ಪೂರ್ಣಗೊಳಿಸಲಿಕ್ಕೆ ಅನೇಕ ವರ್ಷಗಳು ಹಿಡಿದರೂ, ಅದನ್ನು ಮುದ್ರಣರೂಪದಲ್ಲಿ ನೋಡಲಿಕ್ಕೆ ಅಸಂಖ್ಯ ತೊಂದರೆಗಳು ಬಂದರೂ ಅವನು ಆ ಕಾರ್ಯವನ್ನು ಕೈಕೊಂಡನು. ಎಂತಹ ಆತಂಕಗಳು ಬಂದರೂ ಆ ಗ್ರಂಥವು ಆದಷ್ಟು ಶೀಘ್ರದಲ್ಲಿ ಅಚ್ಚಾಗುವಂತೆ ಅವನು ಹೆಣಗಿದನು ಮತ್ತು ತತ್ಫಲವಾಗಿ 'ನರ್ಮಕೋಶ' ಎಂಬ ಮೊದಲಿನ ಮೂರು ಸಂಪುಟಗಳ ಆ ಗ್ರಂಥವು ಅವನು ಅದರ ರಚನೆಯನ್ನು ಮೊದಲು ಮಾಡಿದ ನಾಲ್ಕು ವರ್ಷಗಳಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ಕಂಗೊಳಿಸಿದವು.

ಈ ಹೊಸ ಉಪಕ್ರಮದೊಡನೆಯೆ ಕಾವ್ಯಸೃಷ್ಟಿ ಮತ್ತು ಆವೇಶಪೂರ್ಣ ಹಾಗೂ ರೋಮಾಂಚಕಾರಕವಾದ ಅವನ ಜೀವನ ನಡದೇ ಇದ್ದಿತು. ೧೮೬೦ ರಲ್ಲಿ ಅವನ ಎರಡನೆಯ ಹೆಂಡತಿಯಾದ ದಹಿಗೌರಿಯು ಅವನ ಸಂಗಡ ಮನೆಯನು

ಮಾಡಿಕೊಂಡಿದ್ದಳು ; ಆದರೆ ೧೮೬೧ರ ಏಪ್ರಿಲ್ ತಿಂಗಳಲ್ಲಿ ತಾನು ಗೌರವಾನ್ವಿತವಾದ ಕುಟುಂಬಗಳ ಇಬ್ಬರು ಮಹಿಳೆಯರೊಡನೆ ಹೃದ್ಯವಾದ ಸಂಬಂಧವನ್ನು ಪಡೆದಿದ್ದನು ಎಂದು ನರ್ಮದಾಶಂಕರನು ಹೇಳುತ್ತಾನೆ. ಸ್ತ್ರೀಯರೊಡನೆ ಬಂದ ಈ ಸಂಪರ್ಕ ಮತ್ತು ಸಾಮಾಜಿಕ ಸುಧಾರಣೆಗಳ ಬಗ್ಗೆ ಅವನು ಸ್ವಾಭಾವಿಕವಾಗಿಯೆ ತಳೆದ ಉತ್ಕಟವಾದ ಭಾವನೆಗಳು ಹಾಗೂ ಅಂದಿನ ರೋಮಾಂಚಕಾರಕ ವಾತಾವರಣಗಳು ಅಂದಿನ ಗುಜರಾತೀ ಭಾಷೆ ಮತ್ತು ಸಾಹಿತ್ಯಗಳಿಗೆ ನವೀನವೆನಿಸುವ ವಿವಿಧ ವಸ್ತುಗಳ ಕವನಗಳನ್ನು ರಚಿಸುವಂತೆ ಅವನನ್ನು ಪ್ರೇರೇಪಿಸಿದವು. ವಿಧವೆಯರ ಗೋಳು ಮತ್ತು ಅದರ ಸಂಬಂಧವಾದ ದುರ್ಭರವಾದ ಬಾಳನ್ನು ಕುರಿತು ಅವನು ಅನುಕಂಪ ತುಂಬಿದ ಕವನವೊಂದನ್ನು "ವೈಧವ್ಯ ಚಿತ್ರ" ಎಂಬ ಶೀರ್ಷಿಕೆಯಿಂದ ಬರೆದುದು. ವಸ್ತು ಮತ್ತು ಅದರ ರಚನೆ—ಹೀಗೆ ಎರಡೂ ದೃಷ್ಟಿಗಳಿಂದ ಮೊದಲಿನ ಕೃತಿಗಳಿಗಿಂತ ಬೇರೆಯಾಗಿತ್ತು. ವರ್ಡ್ಸ್‌ವರ್ತ್‌ನ "ಲೂಸಿ ಗ್ರೇ" ಎಂಬ ಕವಿತೆಯನ್ನು ಆತನು ತನ್ನದೇ ಆದ ಹೊಸ ರೀತಿಯಲ್ಲಿ ಮುಕ್ತ ಛಂದದಲ್ಲಿ ಅನುವಾದಿಸಿದ್ದನು. ಹಾಗೆಯೆ ಆತನು ಅನೇಕ ಹೊಸ ವಸ್ತುಗಳನ್ನು ಕುರಿತು ಎಷ್ಟೋ ನೂತನವಾದ ಶೈಲಿಗಳನ್ನು ಆರಂಭಿಸಿದನು. ದೃಷ್ಟಾಂತಕ್ಕೆಂದು ನಾವು ಅವನ ನಿಸರ್ಗದ ಕವನಗಳನ್ನು ಪರೀಕ್ಷಿಸ ಬಹದು. ಅನ್ಯವಿಷಯಗಳನ್ನು ಕುರಿತು ರಚಿಸಿದ ತನ್ನ ಬೇರೆ ಕಾವ್ಯದಲ್ಲಿ ಎಷ್ಟೋ ಜನರು ಆನುಷಂಗಿಕವಾಗಿ ನಿಸರ್ಗವನ್ನು ವರ್ಣಿಸಿದ್ದರೂ ಗುಜರಾತಿಯಲ್ಲಿ ಅಲ್ಲಿಯವರೆಗೆ ಯಾರೂ ಕಾಲಿದಾಸನ 'ಋತುಸಂಹಾರ'ದಂತಹ ಅಥವಾ ಥಾಮ್‌ಸನ್‌ನ "ಋತುಗಳು" (ದಿ ಸೀಸನ್ಸ್) ಎಂಬ ಕವನದಂತಹ ಕೃತಿಗಳನ್ನು ಸೃಷ್ಟಿಸಿರಲಿಲ್ಲ. ನರ್ಮದಾಶಂಕರನು ಕುಳಿತುಕೊಂಡು "ಋತುವರ್ಣನಂ" ಎಂಬ ದೀರ್ಘ ಕವನವನ್ನು—ಬೇರೆ ಬೇರೆ ಋತುಗಳನ್ನು ಚಿತ್ರಿಸುವ ಮತ್ತು ನಿಸರ್ಗವನ್ನು ವರ್ಣಿಸುವ ಕೃತಿಯನ್ನು—ರಚಿಸಿದನು. ಕಾವ್ಯವೆಂಬ ಶುದ್ಧಾರ್ಥದಲ್ಲಿ ಅದರ ಮೌಲ್ಯವೇನೇ ಇರಲಿ, ಅದೂ ಹೊಸ ರೀತಿಯಲ್ಲಿ ಕೈಕೊಂಡ ಒಂದು ಭಿನ್ನಕೃತಿಯೆನಿಸಿತು.

ತಾನೇ ಮಾಡಿದ ನಿಘಂಟುವಿನ ಕಾರ್ಯವಲ್ಲದೆ, ೧೮೬೨ರ ಮೊದಲ ಭಾಗದಲ್ಲಿ ಆತನು ನಾನಾಭಾಯಿ ರುಸ್ತುಮಜಿ ಮತ್ತು ಅರ್ದೇಶೀರ ಫಾರಮಾಜಿ ಎಂಬ ಇಬ್ಬರು ಪಾರಸೀ ಮಿತ್ರರಿಗೆ ಅವರು ಆರಂಭಿಸಿದ ಇಂಗ್ಲಿಶ್-ಗುಜರಾತಿ ಶಬ್ದಕೋಶದ ಕೆಲಸದಲ್ಲಿ ಸಹಾಯಮಾಡಿದನು ಮತ್ತು ಅದರಿಂದ ಸಾಕಷ್ಟು ಹಣವನ್ನು ಸಂಪಾದಿಸಿದನು. ಅದೇ ಕಾಲದಲ್ಲಿ ಪ್ರಿಯತಮೆಯ ವಿರಹದಂತಹ ಅನೇಕ ವಿಷಯನಿಷ್ಠ ಕವನಗಳನ್ನು ರಚಿಸಿದುದು ಕೂಡ ಹೊಸ ದಾರಿಯಾಗಿತ್ತು ; ಯಾಕೆಂದರೆ ಅಲ್ಲಿಯವರೆಗೆ ಜನರು ರಾಧಾ ಮತ್ತು ಕೃಷ್ಣರನ್ನು ಕುರಿತಂತೆ ಹೆಸರುಗಳನ್ನು ಬದಲಿಸಿ ತಮ್ಮ ಪರಿಚಯದ ಪ್ರೇಮಿಗಳ ವ್ಯಕ್ತಿತ್ವವನ್ನು ಬಹಿರಂಗಗೊಳಿಸದೆ ತಮ್ಮ ಭಾವನೆಗಳನ್ನು ಬಿಂಬಿಸುವ ವಾಸ್ತವಿಕವೆನಿಸುವ ರೀತಿಯಲ್ಲಿಯೇ ಕೃತಿರಚನೆಯನ್ನು ಮಾಡುತ್ತಿದ್ದರು. ಇದೇ ಅವಧಿಯಲ್ಲಿ ಅವನು ವ್ಯಾಪಕವಾಗಿ ಪ್ರವಾಸವನ್ನು ಕೈಕೊಂಡನು ; ಪ್ರವಾಸದ

ಬಗ್ಗೆ ಅವನು ಅನೇಕ ಕವನಗಳನ್ನು ಬರೆದನಷ್ಟೇ ಅಲ್ಲದೆ ಅಲ್ಲಿಯೂ ಹೊಸ ದಾರಿಯೆನಿಸುವಂತೆ ಪ್ರವಾಸಕ್ಕೆ ಸಂಬಂಧಿಸಿದ ವಿಷಯಗಳ ಮತ್ತು ಭಾವಗಳ ಬಗ್ಗೆ ಕವಿತೆಗಳನ್ನು ಕಟ್ಟಿದನು.

ನರ್ಮದಾಶಂಕರನು ಸತತವಾಗಿ ಹೊಸ ವಸ್ತುಗಳು, ನವೀನ ವಿಷಯಗಳು ಮತ್ತು ನೂತನ ಸಾಹಿತ್ಯ ಪ್ರಕಾರಗಳಿಗಾಗಿ ಉತ್ಸುಕನಾಗಿದ್ದನು. ಅವನು ಅಷ್ಟರಲ್ಲಿ ವಿಷಯನಿಷ್ಠ ಕವಿತೆಯನ್ನು ಬರೆದಿದ್ದನು ; ನಿಸರ್ಗದ ಕವನಗಳನ್ನು ರಚಿಸಿದ್ದನು. ಸಾಮಾಜಿಕ ವಿಚಾರಗಳ ಕಾವ್ಯವನ್ನು ರೂಪಿಸಿದ್ದನು, ಪ್ರಾರ್ಥನೆಯ ಗೀತಗಳನ್ನು ಸೃಷ್ಟಿಸಿದ್ದನು ಮತ್ತು ಯುದ್ಧಸ್ವರೂಪದ ಪ್ರತಿಮೆಗಳನ್ನು ಮತ್ತು ಶಬ್ದರೂಪಗಳನ್ನು ಬಳಸಿಕೊಂಡು ಕೃತಿಗಳನ್ನು ರಚಿಸಿದ್ದನು ; ಆದರೆ ಅಲ್ಲಿಯವರೆಗೆ ಮಹಾಕಾವ್ಯದ ಕ್ಷೇತ್ರದಲ್ಲಿ ಅವನಿಂದ ಯಾವ ಕಾರ್ಯವೂ ಆಗಿರಲಿಲ್ಲ. ಹಾಗಿದ್ದರೆ ಅದನ್ನು ಏಕೆ ಪ್ರಯತ್ನಿಸಬಾರದು ? ಇತ್ತ ಮಹಾಕಾವ್ಯಕ್ಕೆ ಯೋಗ್ಯವೆನಿಸುವ ಛಂದಸ್ಸೊಂದು ಇರಬೇಕು ಎಂದು ಅವನಿಗೆ ತೋಚಿತು. ಯಾಕೆಂದರೆ ಅಲ್ಲಿಯ ತನಕ ತಾನಾಗಲಿ ಇತರ ಗುಜರಾತೀ ಕವಿಗಳಾಗಲಿ ಉಪಯೋಗಿಸುತ್ತಿದ್ದ ಯಾವ ಛಂದವೂ ಮಹಾಕಾವ್ಯಕ್ಕೆ ಮತ್ತು ಅದರ ವಸ್ತುವಿನ ರಚನೆಗೆ ತಕ್ಕುದಾಗಿರಲಿಲ್ಲ. ತಾನು ಓದಿದ ಎಲ್ಲ ಗ್ರಂಥಗಳನ್ನು ಮತ್ತೆ ತಿರುವಿ ಹಾಕಿ ಒಂದು ಒಪ್ಪವಾದ ವೃತ್ತವನ್ನು ಹುಡುಕಬೇಕೆಂದು ತೊಡಗಿ ನಿಷ್ಫಲನಾಗಿ ಕೊನೆಗೆ ತಾನೇ ಒಂದು ಛಂದವನ್ನು ಸಿದ್ಧಗೊಳಿಸಿಕೊಂಡನು. ಆ ಕಾವ್ಯವನ್ನು ಆತನಿಗೆ ರಚಿಸುವದಾಗಲಿಲ್ಲ ವಾದರೂ ಅದರ ಪ್ರಯತ್ನವಂತೂ ನಡೆಯಿತು. ಹೊಸ ವೃತ್ತದಲ್ಲಿ ಕೆಲವು ಸಾಲುಗಳು ಬಂದವು. ಇಂದಿಗೂ ಇರುವ ಆ ಛಂದಸ್ಸು ಆತನ ದೇಶವಾಸಿಗಳಿಗೆ ವಿರಾಟ್‌ವಸ್ತುಗಳಿಗೆ ಉಚಿತವಾದ ಮಾಧ್ಯಮವಿರಬೇಕು ಎಂಬ ಮಾತನ್ನು ನೆನಪಿಸಿ ಕೊಡಲಿಕ್ಕೆ ದೃಷ್ಟಾಂತವಾಗಿದೆ. ಇತ್ತ ಅವನು ರೂಪಿಸಿದ ವೃತ್ತವು ಅವನ ಕೆಲಸಕ್ಕೆ ಆಗಲಿ ಅವನ ನಂತರದ ಕವಿಗಳಿಗಾಗಲಿ ತಕ್ಕುದಾಗಿರುವದಿಲ್ಲ. ಮಹಾಕಾವ್ಯವನ್ನು ಬರೆಯಲಿಕ್ಕೆ ಮತ್ತು ಅದರ ರಚನೆಗೆ ಯೋಗ್ಯವಾದ ಛಂದಸ್ಸನ್ನು ಗೊತ್ತುಪಡಿಸಲಿಕ್ಕೆ ಅವನಿಗೂ ಸಾಧ್ಯವಾಗಲಿಲ್ಲ. ಆತನ ತರುವಾಯದ ಜನರಿಗೂ ಶಕ್ಯವಾಗಿಲ್ಲ. ಆದರೆ ಅದಕ್ಕಾಗಿ ಶೋಧನವು ನಡೆದಿದೆ, ಪ್ರಯತ್ನವು ಸಾಗಿದೆ ; ಆ ದಿಕ್ಕಿನಲ್ಲಿ ಮಾತ್ರ ಮಾತ್ರ ಅವನು ಆದ್ಯ ಪ್ರವರ್ತಕನಾಗಿದ್ದಾನೆ.

ಅವನ ಸೃಜನಾತ್ಮಕ ಮತ್ತು ಸಾರ್ವಜನಿಕ ಜೀವನದಲ್ಲಿ ಇದು ಅತೀವ ಸುಖಮಯವಾದ ಕಾಲವಾಗಿತ್ತು. "ಹಿಂದೂ ಸಮಾಜದ ಅವನತಿ ಹಾಗೂ ಪತನ" ಎಂಬ ಶೀರ್ಷಿಕೆಯಲ್ಲಿ ಅವನು ಬರೆದ ಒಂದು ನೀಳ್ಗವನವು ಅವನಿಗೆ ತುಂಬ ಶ್ಲಾಘನೆಯನ್ನು ತಂದೊದಗಿಸಿತು. ಅವನ ಭಾಷಣಗಳನ್ನು ಜನರು ಏಕಚಿತ್ತದಿಂದ ಕೇಳುತ್ತಿದ್ದರು, ಅವನ ಗ್ರಂಥಗಳ ಮಾರಾಟ ಚೆನ್ನಾಗಿತ್ತು ಮತ್ತು ಎಲ್ಲ ಸಮುದಾಯಗಳಲ್ಲಿ ಅವನಿಗೆ

ಸ್ನೇಹಿತರಿದ್ದರು. ಈಗಾಗಲೆ ನಾವು ಅವರಲ್ಲಿ ಕೆಲವರು ಪ್ರಮುಖರ ಬಗ್ಗೆ ತಿಳಿದು ಕೊಂಡಿದ್ದರೂ ಇನ್ನೂ ಅನೇಕ ಜನರು ಗಮನಾರ್ಹರಾಗಿದ್ದಾರೆ. ಪ್ರಖ್ಯಾತ ಸಂಸ್ಕೃತ ಪಂಡಿತರಾದ ಡಾ. ಭಾಂಡಾರಕರರು ಅವರಲ್ಲಿ ಒಬ್ಬರಾಗಿದ್ದರು. ಎಷ್ಟೋ ಜನ ಕಳಕಳಿಯ ಪಾರಸೀ ವಿದ್ವಾಂಸರು ಅವನ ಸ್ನೇಹಕ್ಕಾಗಿ ಹಂಬಲಿಸುತ್ತಿದ್ದರು. ಮುಂಬಯಿಯಲ್ಲಿ ಲಕ್ಷಗಟ್ಟಲೆ ಹಣವನ್ನು ಗಳಿಸುತ್ತಿದ ಶ್ರೀಮಂತ ಭಾಟಿಯಾ ಮತ್ತು ಬನಿಯಾಗಳು ಅವನನ್ನು ತಮ್ಮ ಆಪ್ತಸ್ನೇಹಿತನೆಂದು ಭಾವಿಸಿ ಅವನ ಮೇಲೆ ಹಣ ಮತ್ತು ಇತರ ವಸ್ತುಗಳ ಬಹುಮಾನಗಳನ್ನು ಸುರಿಸುತ್ತಿದ್ದರು. ಮುಂಬಯಿಯ ಕೆಲವರು ಇಂಗ್ಲಿಶ್ ಸದ್ಗೃಹಸ್ಥರು ಕೂಡ ಅವನ ಮಿತ್ರವೃಂದದಲ್ಲಿ ಸೇರ್ಪಡೆ ಯಾಗಿದ್ದರು. ಸಂತೋಷಕೂಟ ಮತ್ತು ಇತರ ಸಮಾರಂಭಗಳಲ್ಲಿ ಅವನಿಗೆ ಗವರ್ನರ್‌ರ ನಿವಾಸದಿಂದ ಯಾವಾಗಲೂ ಆಮಂತ್ರಣವಿರುತ್ತಿತ್ತು.

ಇದೆಲ್ಲ ಪರಿಸ್ಥಿತಿಯ ಮೂಲಕ ನರ್ಮದಾಶಂಕರನು ಸಂತೋಷವಾಗಿದ್ದನು. ಅವನಿಗೆ ಕೀರ್ತಿ ಬಂದಿತು. ಸ್ನೇಹಿತರಿದ್ದರು. ಅವನು ವರ್ಚಸ್ವಿಯಾದ ವ್ಯಕ್ತಿ ಯಾಗಿದ್ದನು. ಸಮಾಜದಲ್ಲಿ ಅವನು ಪಡೆಯುತ್ತಿದ್ದ ಗೌರವದ ಬಗ್ಗೆ ಒಬ್ಬ ಸದ್ಗೃಹಸ್ಥನು ಹೀಗೆ ಉಲ್ಲೇಖಿಸಿದ್ದಾನೆ: ನರ್ಮದಾಶಂಕರನು ಹೊರಗಿನ ತನ್ನ ಕಾಲಕಾಲದ ಪ್ರವಚನವನ್ನು ಮುಗಿಸಿಕೊಂಡು ಮುಂಬಯಿಗೆ ಬರುವ ಸರತಿಗೊಮ್ಮೆ ಅವನನ್ನು ಸ್ವಾಗತಿಸಲು ಹತ್ತು-ಹದಿನೈದು ಸಾವಿರ ಜನರ ಗುಂಪುಗಳು ಹಡಗುಗಟ್ಟೆ ಯಲ್ಲಿ ನೆರೆಯುತ್ತಿದ್ದವು. ಅವನು ಆಗ್ಗೆ ತನ್ನ ಸ್ಥಿರವಾದ ಕೆಲಸವನ್ನು ಬಿಟ್ಟಿದ್ದರೂ, ಉಪಜೀವನಕ್ಕಾಗಿ ಪಾಠ ಹೇಳುವ ಕಾರ್ಯವನ್ನು ಕೈಕೊಂಡಿದ್ದರೂ, ಅವನಿಗೆ ಆ ವಿಷಯವಾಗಿ ಯಾವ ತೊಂದರೆಯೂ ಇರಲಿಲ್ಲ. ಯಾಕೆಂದರೆ ಪುಸ್ತಕಗಳ ಮಾರಾಟ ಮತ್ತು ಅವನ ಶ್ರೀಮಂತ ಗೆಳೆಯರ ಉಡುಗೊರೆಗಳೇ ಮೊದಲಾದ ಮೂಲಗಳಿಂದ ಆತನಿಗೆ ಕೈತುಂಬ ಹಣವು ಬರುತ್ತಿತ್ತು. ಹಾಗೆ ಬರುತ್ತಿದ್ದ ಕಾಣಿಕೆಗಳ ಔದಾರ್ಯವು ಈ ಕೆಳಗಿನ ದೃಷ್ಟಾಂತದಿಂದ ಸ್ಪಷ್ಟವಾಗುತ್ತದೆ.

ಮುಂಬಯಿಯ ವರ್ತಕ ಪ್ರಮುಖನಾದ ಕರಸನದಾಸ ಮಾಧವದಾಸನು ಅವನ ಲಕ್ಷಾಧೀಶ ಮಿತ್ರರಲ್ಲಿ ಒಬ್ಬನಾಗಿದ್ದನು. ಅವನ ಸಹಾಯದಿಂದ ನರ್ಮದಾ ಶಂಕರನು ಸಮಾಜ ಸುಧಾರಣೆಗಳ ಒಂದು ಸೇವಾಸಂಸ್ಥೆಯನ್ನು ಸ್ಥಾಪಿಸಬೇಕೆಂದು ಒಮ್ಮೆ ಯೋಚಿಸಿದ್ದನು. ಆ ಸಂಸ್ಥೆಯ ಮುಖ್ಯ ಕಾರ್ಯಾಲಯವು ಮುಂಬಯಿಯಲ್ಲಿ ಇದ್ದರೂ ತನ್ನ ಸಾಮಾಜಿಕ ಪರಿವರ್ತನೆಯ ಕಾರ್ಯವನ್ನು ಪ್ರಚಾರಗೊಳಿಸಲು ಗುಜರಾತದ ನಗರಗಳಲ್ಲಿಯೂ ಮತ್ತು ಗ್ರಾಮಗಳಲ್ಲಿಯೂ ಸಂಚರಿಸಬೇಕಾಗಿತ್ತು. ನರ್ಮದಾಶಂಕರನು, ತಾನೇ ಪ್ರಮುಖ ವಕ್ತಾರಕನೂ, ಭಾಷಣಕಾರನೂ ಆಗ ಬೇಕಾಗಿತ್ತು. ಆ ಸಂಸ್ಥೆಯ ದೈನಂದಿನ ಕಾರ್ಯನಿರ್ವಹಣೆಗಾಗಿ ಒಂದು ಕಾರ್ಯಾಲಯ ಮತ್ತು ಕೆಲಜನರು ಸೇವಕರು ನೇಮಕರಾಗಬೇಕು. ಕರಸನದಾಸ

ಮಾಧವದಾಸನು ಶಕ್ಯವಿದ್ದ ಎಲ್ಲ ನೆರವನ್ನು ತಾನು ನೀಡುವದಾಗಿ ಅಭಿವಚನವನ್ನು ಕೊಟ್ಟಿದ್ದನು; ಆದರೆ ಬೇರೆ ಬೆಂಬಲವು ಬಾರದಂತಾಗಿ ಈ ಸೇವಾಸಂಘದ ಕಲ್ಪನೆಯು ಫಲಪ್ರದವಾಗಲಿಲ್ಲ.

೧೮೬೩ರ ನವೆಂಬರ್ ತಿಂಗಳಲ್ಲಿ ಆರಂಭವಾದ ದಿ ಫ್ರಾಯರ್ ಲ್ಯಾಂಡ್ ರಿಕ್ಲೇಮೇಶನ್ (ಭೂಮಿಯ ಪುನಃಪ್ರಾಪ್ತಿಯ) ಕಂಪನಿಯ ಮೂಲಸ್ಥಾಪಕರಲ್ಲಿ ಒಬ್ಬನು ಈ ಕರಸನದಾಸ ಮಾಧವದಾಸ ಎಂಬ ಸ್ನೇಹಿತನಿದ್ದನು. ಜನರ ಮನಸ್ಸಿನಲ್ಲಿ ಆ ಕಂಪನಿಯ ಸಟ್ಟಾಗಿರಿ ಸ್ವರೂಪವು ಬೀರಿದ ಪ್ರಭಾವದಿಂದ ಅದರ ಪಾಲುಗಳನ್ನು ಕೊಳ್ಳಲಿಕ್ಕೆ ಅದ್ಭುತವಾದ ಗಡಿಬಿಡಿಯಿದ್ದಿತ್ತು. ಅದರ ಪಾಲುಗಳ ಬೆಲೆಯು ಗಗನಕ್ಕೇರಿ ಆ ಕಂಪನಿಯ ಒಂದು ಪಾಲನ್ನು ಕೂಡ ದೊರಕಿಸಲಿಕ್ಕೆ ಕೋಲಾಹಲವುಂಟಾಗಿತ್ತು. ಆ ಸಂಸ್ಥೆಯ ಪ್ರಮುಖ ಪ್ರವರ್ತಕನಾದ ಕರಸನದಾಸ ಮಾಧವದಾಸನು ತನ್ನ ಮಿತ್ರವೃಂದದಲ್ಲಿ ಅನೇಕರಿಗೆ ಮೂಲಬೆಲೆಗೆ ಆ ಪಾಲುಗಳನ್ನು ಕೊಟ್ಟಿದ್ದನು. ನರ್ಮದಾಶಂಕರನು ಅವನ ಮಿತ್ರನಾಗಿದ್ದರೂ ಈ ವ್ಯವಹಾರದಲ್ಲಿ ಆತನು ಇರಲಿಲ್ಲ. ಅವನ ಗೆಳೆಯರು ಮತ್ತು ಹಿತಚಿಂತಕರಾದ ಅನೇಕರು, ಅಂತೆಯೆ, ಪಾಲುಗಳನ್ನು ಪಡೆಯಲು ಕರಸನದಾಸನತ್ತ ಹೋಗಲು ಹೇಳುತ್ತಿದ್ದರು. ಕವಿಗೆ ಈ ವಿಚಾರವು ರುಚಿಸದ್ದರಿಂದ ಆತನು ವಿವಿಧ ಮಿತ್ರರಿಗೆ ವಿವಿಧ ಉತ್ತರಗಳನ್ನು ಕೊಡುತ್ತಿದ್ದನು ಮತ್ತು ಹಾಗೆ ತಾನು ಕರಸನದಾಸನಿಂದ ಅದರ ಒಂದು ಪಾಲನ್ನು ಪಡೆದಿರುವುದಾಗಿಯೂ ತಿಳಿಸಿದನು. ಆದರೆ ಆತನು ಹೋಗಿ ಕೇಳಲಿಕ್ಕೆ ಒಪ್ಪಲಿಲ್ಲ.

ಒಂದು ದಿನ ತನ್ನ ಜನ್ಮದಿನದ ಸಮಾರಂಭಕ್ಕಾಗಿ ಕರಸನದಾಸನು ಕೆಲಜನ ಸ್ನೇಹಿತರನ್ನು ತನ್ನ ಮನೆಗೆ ಆಮಂತ್ರಿಸಿದ್ದನು. ನರ್ಮದಾಶಂಕರನು ಕೂಡ ಹಾಗೆ ಆಹ್ವಾನಿತರಲ್ಲಿ ಒಬ್ಬನಾಗಿದ್ದನು. ಅವನು ಆ ಸಮಾರಂಭಕ್ಕೇನೋ ಹೋದನು ; ಆದರೆ ಆ ಪಾಲುಗಳ ಪ್ರಸ್ತಾಪವನ್ನು ಎತ್ತುವಂತಿಲ್ಲ ಎಂಬ ದೃಢನಿಶ್ಚಯದಿಂದ. ಆತನು ಮನೆಯನ್ನು ಪ್ರವೇಶಿಸುತ್ತಲೇ ಕರಸನದಾಸನು ಆತನನ್ನು ತನ್ನ ಬಳಿಯಲ್ಲಿ ಕುಳಿತು ಕೊಳ್ಳುವಂತೆ ಕರೆದು ಮೆಲ್ಲನೆ ಆತನ ಕಿವಿಯಲ್ಲಿ ಕವಿಗಾಗಿ ಒಂದು ಪಾಲನ್ನು ತೆಗೆದು ಮೀಸಲಿರಿಸಿದ ಸಂಗತಿಯನ್ನು ತಿಳಿಸಿದನು. ಆ ನಿದರ್ಶನದಿಂದ ಸಂತೋಷ ವಾಗಿದ್ದರೂ ಕವಿಯು ವಿನಯಪೂರ್ವಕವಾಗಿ ಹೀಗೆ ನುಡಿದನು: "ಅದರ ಆವಶ್ಯಕತೆ ಏನಿತ್ತು ?" ಕೆಲವು ದಿನಗಳನಂತರ ನರ್ಮದಾಶಂಕರನು ಒಬ್ಬ ಮಿತ್ರನ ಮೂಲಕ ಆ ಪಾಲನ್ನು ಮಾರಿದನು ಮತ್ತು ರೂ. ೫೭೦೦ ರ ಲಾಭವನ್ನು ಮಾಡಿಕೊಂಡನು. ಅದು ತನ್ನ ಎಲ್ಲ ಸಾಲಗಳನ್ನು ತೀರಿಸುವಂತೆ ನರ್ಮದಾಶಂಕರನಿಗೆ ಸಹಾಯ ಸಲ್ಲಿಸಿತು.

ಇದರಿಂದ ಕೆಲವರಿಗೆ ಆಶ್ಚರ್ಯವಾಗಬಹುದು. ಆತನಿಗೆ ಇಷ್ಟೆಲ್ಲ ಉತ್ಪನ್ನ ವಿದ್ದರೂ ಸಾಲವಾಗಿದ್ದಿತೆ ? ದುರ್ದೈವದ ಮಾತೆಂದರೆ ಹಾಗೆ ಆತನಿಗೆ ಸಾಲವಿದ್ದಿತು ;

ಯಾಕೆಂದರೆ ಆಗಿನ ಕಾಲದಲ್ಲಿ ಆತನು ವೈಭವದ ಬಾಳನ್ನು ನಡೆಯಿಸಿದ್ದನು. ಅವನಿಗೆ ಸಾವಿರಗಟ್ಟಲೆ ಪ್ರಾಪ್ತಿಯಿದ್ದರೂ ಹೆಚ್ಚು ಸಾವಿರಗಟ್ಟಲೆ ಆತನು ವೆಚ್ಚ ಮಾಡುತ್ತಿದ್ದನು. ಆತನು ಮಾಡಿದ ಬದುಕು ಉಲ್ಲಾಸಪೂರ್ಣ ಮತ್ತು ಅನಿರ್ಬಂಧವಾಗಿತ್ತು. ಅವನ ಜೀವನದ ಕ್ರಮದಲ್ಲಿ ಮದ್ಯಸೇವನೆಯು ಪ್ರತಿಬಂಧಿತ ವಾಗಿರಲಿಲ್ಲ ; ಪ್ರೇಮ-ಪ್ರಸಂಗಗಳಿಗೆ ಕೂಡ ನಿರ್ಬಂಧಗಳಿರಲಿಲ್ಲ. ಅಂತಹ ನಂಬಲಾರ ದಷ್ಟು ಸೋವಿಯ ಕಾಲದಲ್ಲಿ ಕೂಡ ಆತನು ರೂ. ೭೫ ರಷ್ಟು ದುಬಾರಿ ಬಾಡಿಗೆ ಯಿಂದ ಮನೆಯೊಂದನ್ನು ಹಿಡಿದಿದ್ದನು. ಅರಸುಗುವರನಂತೆ ಅವನು ಜನರ ಅತಿಥಿಸತ್ಕಾರ ಮಾಡುತ್ತಿದ್ದನು ಮತ್ತು ಆ ಕ್ಷಣದ ಉತ್ಸಾಹದಂತೆ ಜನರಿಗೆ ವಸ್ತುಗಳನ್ನು ಕೊಡುತ್ತಿದ್ದನು. ಆ ವೈಭವದ ದಿನಗಳಲ್ಲಿ ಅವನ ಮನಸ್ಸು ನಾಳಿನ ವಿಚಾರದಿಂದ ಎಂದೂ ಚಡಪಡಿಸಲಿಲ್ಲ.

ಆದರೆ ಯಾರಾದರೂ ಯೋಚಿಸಲಿ, ಬಿಡಲಿ ನಾಳೆ ಎಂಬುದು ಎಂದಿಗೂ ಇದ್ದೇ ಇರುತ್ತದೆ. ಅವನ ಶ್ರೀಮಂತ ಮಿತ್ರನೂ, ಪೋಷಕನೂ ಆಗಿದ್ದ ಕರಸನದಾಸ ಮಾಧವದಾಸನು ಕೊಟ್ಟ ಪಾಲಿನಿಂದ ಕವಿಯು ರೂ. ೫೭೦೦ ರ ಪ್ರಯೋಜನವನ್ನು ಒಂದೇ ಪ್ರಸಂಗದಿಂದ ಪಡೆದಿದ್ದು ಆತನು ಕವಿಯನ್ನು ಅನುಗ್ರಹಿಸಲು ಯಾವಾಗಲೂ ಸಿದ್ಧನಾಗಿದ್ದನು. ಮತ್ತೊಂದು ಸಂದರ್ಭದಲ್ಲಿ ಅವನು ತುಂಬ ಸಹಾಯಮಾಡಿದನು. ಅವನ ಉತ್ಕರ್ಷದ ಶಿಖರದಲ್ಲಿಯೂ ಇರುವಾಗ ಕವಿ ದಲಪತರಾಮನು ಒಮ್ಮೆ ಅಹಮ್ಮದಾಬಾದ್‌ದಲ್ಲಿ ತನ್ನ ಸ್ವಂತದ ಮನೆಯನ್ನು ಕಟ್ಟಿಸುವದಕ್ಕೆ ತುಸು ಹಣವನ್ನು ಸಂಗ್ರಹಿಸಬೇಕೆಂದು ಮುಂಬಯಿಗೆ ಬಂದಿದ್ದನು. ಅವನು ಕರಸನದಾಸನನ್ನು ಸಂಧಿಸಿ, ಅವನ ಗೌರವಾರ್ಥವಾಗಿ ಒಂದು ಸ್ತುತಿಪರ ಕವನವನ್ನು ರಚಿಸಿ, ತನ್ನ ಗೃಹ-ನಿರ್ಮಾಣದ ಯೋಜನೆಗಾಗಿ ದೊಡ್ಡ ಕಾಣಿಕೆಯೊಂದನ್ನು ಕೇಳಿದನು. ಈ ಅವನ ಗೆಳೆಯನು ತೀರ ಒರಟಾಗಿದ್ದಾನೆ ಎಂದು ಕರಸನದಾಸನು ಭಾವಿಸಿ ಅವನಿಗೆ ಏನನ್ನೂ ಕೊಡಮಾಡಲಿಲ್ಲ. ಈ ಘಟನೆ ಯಾದನಂತರ ಹಲವು ದಿನಗಳು ಕಳೆದ ಮೇಲೆ, ಅವನು ನರ್ಮದಾಶಂಕರನ ಭೆಟ್ಟಿಯಾದಾಗ್ಗೆ ಆ ಪ್ರಸಂಗದ ಬಗ್ಗೆ ಹೇಳಿ ಹೀಗೆ ನುಡಿದನು : "ಒಂದುವೇಳೆ ನನಗೆ ಏನನ್ನಾದರೂ ಕೊಡಬೇಕು ಎಂದೆನಿಸಿದರೆ, ನಾನು ಅದನ್ನು ನಮ್ಮ ನರ್ಮದನಿಗೆ ಕೊಡುವೆನು." (ನರ್ಮದ ಎಂಬುದು ಇಡಿಯ ಗುಜರಾತದಲ್ಲಿ ಪ್ರಖ್ಯಾತವಾಗಿದ್ದ ಅವನ ಹೆಸರಿನ ಸಂಕ್ಷಿಪ್ತ ರೂಪವಾಗಿತ್ತು. ಇಂದಿಗೂ ಕೂಡ ಜನರು ಅವನ ಔಪಚಾರಿಕವಾದ ನರ್ಮದಾಶಂಕರ ಎಂಬ ಪೂರ್ಣ ಹೆಸರಿನ ಬದಲು ಅದನ್ನೇ ಬಳಸುತ್ತಾರೆ.) ನರ್ಮದನು ಅದಕ್ಕೆ ನಸುನಕ್ಕು ಸುಮ್ಮನಾದನು. ಅದರ ನಂತರ ಕೆಲವು ದಿನಗಳಲ್ಲಿ ಕರಸನದಾಸನು ಕವಿಯ ಕಡೆಗೆ ರೂ. ೫೦೦೦/- ದ ಒಂದು ಚೆಕ್‌ನ್ನು ಕಳಿಸಿದನು ಮತ್ತು ಕವಿಯ ಪುಸ್ತಕಗಳನ್ನು ಮುದ್ರಿಸುವ ವೆಚ್ಚವನ್ನು ಕೂಡ ವಹಿಸಿಕೊಳ್ಳುವ ಅಭಿವಚನವನ್ನಿತ್ತನು.

ಕರಸನದಾಸನು ಮತ್ತು ಕವಿಯ ಇನ್ನೂ ಎಷ್ಟೋ ಜನ ಶ್ರೀಮಂತ ಮಿತ್ರರು ಮುಂಬಯಿಯ ಪಾಲಿನ ಪೇಟಿಯನ್ನು ಮುತ್ತಿದ ಬೆಲೆಯಿಳಿತದ ವಿನಾಶಕಾರಕ ಬಿರುಗಾಳಿಯಲ್ಲಿ ಸಂಪೂರ್ಣ ನಷ್ಟಕ್ಕೆ ಗುರಿಯಾದರು, ಮತ್ತು ಅಂತಹ ಪರಿಸ್ಥಿತಿಯಲ್ಲಿ ಅವರಿಂದ ಯಾವ ಆರ್ಥಿಕ ಸಹಾಯವೂ ದೊರೆಯುವಂತಿರಲಿಲ್ಲ. ಇತ್ತ ನರ್ಮದಾ ಶಂಕರನು ಅತ್ಯಂತ ಪ್ರೀತಿಸುತ್ತಿದ್ದ ಮತ್ತು ತನ್ನ ಇಡಿಯ ಅವಿಶ್ರಾಂತ ಹಾಗೂ ಹಾಗೂ ಪ್ರಕ್ಷುಬ್ಧ ಜೀವನದಲ್ಲಿ ಸುಖ-ಸಾಂತ್ವನಗಳ ಆಗರವಾಗಿದ್ದ ತಂದೆಯನ್ನು ೧೮೬೮ ರ ಜನವರಿ ೧೦ ನೆಯ ದಿನಾಂಕ ಕಳೆದುಕೊಂಡನು. ಹಾಗೆಯೆ ಮಧ್ಯಮ ವರ್ಗದ ಭಾಗ್ಯವಂತ ಜನರೇ ಪುಸ್ತಕಗಳನ್ನು ಕೊಳ್ಳುತ್ತಿದ್ದು ಪಾಲಿನ ಪೇಟಿಯಲ್ಲಿ ಸಂಭವಿಸಿದ ದುರ್ಗತಿಯಿಂದ ವಿಹ್ವಲಗೊಂಡು, ಬೇಗನೆ ದುಡ್ಡು ಮಾಡಿಕೊಳ್ಳುವ ದೃಷ್ಟಿಯಿಂದ ಪಾಲಿನ ಪೇಟಿಯನ್ನು ಆಶ್ರಯಿಸಿ ನಿರಾಸೆ ಹೊಂದಿದ ಕಾರಣ, ಈಗ್ಗೆ ಪುಸ್ತಕಗಳನ್ನು ಕೊಳ್ಳಲಿಕ್ಕೆ ಮುಂದೆ ಬರಲಿಲ್ಲ. ಕವಿಯು ತನ್ನ ಕೌಟುಂಬಿಕ ಜೀವನದಲ್ಲಿಯೂ ಸ್ವಲ್ಪ ಸ್ಥಿರತೆ ಮತ್ತು ಸಮಾಧಾನಗಳು ನೆಲೆಗೊಳ್ಳಬೇಕೆಂದು ಅಪೇಕ್ಷಿಸಿದನು. ಈಗಿನಂತೆ ತಾನು ಮುಂಬಯಿಯಲ್ಲಿ ವಿಲಾಸದ ಜೀವನದಲ್ಲಿ ಮಗ್ನನಾಗಿರುವದೂ ಸಾಧ್ಯವಾಗಿರಲಿಲ್ಲ ; ಯಾಕೆಂದರೆ ಅಂತಹ ಬದುಕಿಗೆ ಬೇಕಾಗುವ ಸೌಕರ್ಯಗಳು ಮುಂದೆ ದೊರೆಯುವಂತಿರಲಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ನರ್ಮದಾಶಂಕರನು ಮುಂಬಯಿಯಲ್ಲಿ ಇರುವದನ್ನು ಬಿಟ್ಟು ಶಾಂತವೂ, ಮಿತವ್ಯಯಕ್ಕೆ ಅನುಕೂಲವೂ ಆದ ಸೂರತಕ್ಕೆ ಸ್ಥಳಾಂತರಿಸಬೇಕಾಯಿತು. ಅದರ ಹಿಂದಿನ ವರ್ಷವೇ ಆತನು ಸೆಪ್ಟೆಂಬರ್‌ದಲ್ಲಿ ' ದಂಡಿಯೊ ' (ನಗಾರಿಯ ಕೋಲು) ಎಂಬ ನಿಯತಕಾಲಿಕ ಪುಸ್ತಿಕೆಯನ್ನು ಆರಂಭಿಸಿದ್ದನು ; ಅದರಿಂದ ಜನರಲ್ಲಿ ಕಾಲಾಂತರದ ಜಾಡ್ಯವು ಕಣ್ಮರೆಯಾಗಿ ಯಾವುದೊಂದು ಪರಿಣಾಮಕಾರಕ ಕಾರ್ಯವನ್ನು ಕೈಕೊಳ್ಳುವಂತೆ ಹುರಿದುಂಬಿಸಬೇಕು ಎಂಬ ಉದ್ದೇಶದಿಂದ. ಅದಕ್ಕೆ ಕೂಡ ನಗರದಲ್ಲಿ ಅವನಿರುವದು ಆವಶ್ಯಕವಾಗಿತ್ತು.

ವಾಟಿಕೆಯಂತೆ ಈ ಹೊಸ ಉಪಕ್ರಮದ ಯೋಜನೆಯು ಅವನನ್ನು ಪೂರ್ಣವಾಗಿ ಆವರಿಸಿಕೊಂಡಿತು ಮತ್ತು ಆತನು ೧೮೬೯ ರಲ್ಲಿ ಸೂರತಕ್ಕೆ ತನ್ನ ಕಾರ್ಯಕೇಂದ್ರವನ್ನು ಸ್ಥಳಾಂತರಿಸಿದನು.

ವೆಚ್ಚವನ್ನು ಇಳಿಸಬೇಕೆಂದು ಮತ್ತು ಶಾಂತವಾದ ಹಾಗೂ ಕಡಿಮೆ ಪರದಾಟದ ಜೀವನವನ್ನು ಸುಲಭವಾಗಿ ಸಾಗಿಸಬೇಕೆಂಬ ಉದ್ದೇಶದಿಂದ ಈ ನಿರ್ಣಯವನ್ನು ಕೈಕೊಳ್ಳಲಾಯಿತು. ಆದರೆ ಹಳೆಯ ಚಟಗಳು ಕೂಡಲೇ ಅಳಿಯಲಿಲ್ಲ. ಆತನು ಸೂರತಕ್ಕೆ ತೆರಳಿದನಂತರದಲ್ಲಿಯೂ ತಾನು ಮುಂಬಯಿಗೆ ಆಗಾಗ್ಗೆ ಹೋಗಿ ಬರಬೇಕಾಗುವದು ಎಂಬ ಕಾರಣದಿಂದ ಮುಂಬಯಿಯಲ್ಲಿಯೂ ಒಂದು ಮನೆಯನ್ನು ಬಾಡಿಗೆಗೆ ಹಿಡಿದಿದ್ದನು. ಅದಲ್ಲದೆ ಅವನು ಸೂರತದಲ್ಲಿ ಒಂದು ನಿವೇಶನವನ್ನು

ಕೊಂಡು ಅಲ್ಲಿ ರೂ. ೧೨,೦೦೦ ದಷ್ಟು ಹೆಚ್ಚಿನ ಹಣದಿಂದ ಮನೆಯೊಂದನ್ನು ಕಟ್ಟಿಸಿಕೊಂಡನು. ಆ ಮನೆಗೆ ಅವನು "ಸರಸ್ವತೀ ಮಂದಿರ" ಎಂದು ಹೆಸರನ್ನಿಟ್ಟು ಹೆಬ್ಬಾಗಿಲಿನ ಮೇಲೆ ತನ್ನ ಗುರಿ ಎನಿಸಿದ "ಪ್ರೇಮ-ಶೌರ್ಯ" ಎಂಬುದನ್ನು ಕೊರೆಯಿಸಿದ್ದನು.

ಅವನ ಭಾಗ್ಯದಲ್ಲಿ ಬರುತ್ತಿದ್ದ ಈ ಏರಿಳಿತಗಳಲ್ಲಿ ಆತನ ಲೇಖನ ಕಾರ್ಯವು ಅಬಾಧಿತವಾಗಿ ಸಾಗಿತ್ತು. ಅವನ ಕವಿತೆಗಳನ್ನು ಸಂಗ್ರಹಿಸಿ ಒಂದು ಸಂಪುಟದಲ್ಲಿ 'ನರ್ಮ ಕವಿತಾ' ಎಂಬ ಹೆಸರಿನಿಂದ ಪ್ರಕಟಿಸಲಾಯಿತು. ಅವನ ಗದ್ಯಕೃತಿಗಳ ಗ್ರಂಥವೂ ಒಂದು ಬೆಳಕಿಗೆ ಬಂದಿತು ಮತ್ತು 'ನರ್ಮ-ವ್ಯಾಕರಣ' ಎಂಬ ಅವನ ವ್ಯಾಕರಣದ ಮೊದಲನೆಯ ಮತ್ತು ಎರಡನೆಯ ಸಂಪುಟಗಳೂ ಪ್ರಕಾಶಿತವಾದವು. ಮತ್ತು ಕೊನೆಯದಾದರೂ ಕನಿಷ್ಠವಲ್ಲದ ಅವನ ಧೈರ್ಯ ಮತ್ತು ಕಳಕಳಿಯಿಂದ ತುಂಬಿದ ಸುಂದರವಾದ ಆತ್ಮಚರಿತ್ರೆಯು "ಮಾರಿ ಹಕೀಕತ್" (ನನ್ನ ಕತೆ) ಎಂದು ಅವನೇ ಇಟ್ಟ ಹೆಸರಿನಲ್ಲಿ ೧೮೬೬ ರ ಸೆಪ್ಟೆಂಬರ್ ೧೮ ನೆಯ ದಿನಾಂಕ ಸಂಪೂರ್ಣವಾಯಿತು.

ಹೀಗೆ ಆತ್ಮ-ಚರಿತ್ರೆಯನ್ನು ಬರೆಯಬೇಕೆಂಬ ಯೋಚನೆಯು ಕುತೂಹಲ ಪೂರ್ಣವಾಗಿದೆ :

೧೮೬೬ ರಲ್ಲಿ ನರ್ಮದಾಶಂಕರನಿಗೆ ಮುವ್ವತ್ತೂರು ವರ್ಷಗಳ ವಯಸ್ಸು ಮಾತ್ರ ಆಗಿತ್ತು. ಆಗ್ಗ ಆತನು ವೈಭವ ಮತ್ತು ಲೋಕಪ್ರಿಯತೆಯ ಶಿಖರ ದಲ್ಲಿದ್ದನು ; ಮೊತ್ತಮೊದಲನೆಯ ತನ್ನ ಕವಿತೆಯನ್ನು ಅವನು ೧೮೫೫ ರಲ್ಲಿ ಬರೆದನಂತರ ಆ ಹನ್ನೊಂದು ವರ್ಷಗಳಲ್ಲಿ ಆತನು ಸಾಕಷ್ಟು ಕೃತಿಗಳನ್ನು ರಚಿಸಿದ್ದನು ಮತ್ತು ರಚಿಸುತ್ತಲೂ ಇದ್ದನು. ಆದರೆ ೧೮೬೬ ರಲ್ಲಿ ಪ್ರಕಟವಾದ ಆತನ ಆತ್ಮಚರಿತ್ರೆಯಲ್ಲಿ ತಾನೇ ಹೇಳುವಂತೆ, ಯಾವ ಕ್ರಿಯಾಶೀಲ ಕವಿಗೂ ಶೋಭಿಸದಂತೆ, ಆ ವರ್ಷದಿಂದ ಅವನ ಕಾವ್ಯಸೃಷ್ಟಿ ಅಷ್ಟರಮಟ್ಟಿಗೆ ಕಡಿಮೆಯಾಯಿತು. ಅದಕ್ಕಾಗಿ ಯಾರು ಏನನ್ನು ಮಾಡಬಹುದು ? ಕಾವ್ಯವೇನು ಆಜ್ಞೆಯ ಮೇರೆಗೆ ಸಿದ್ಧವಾಗುವ ವಸ್ತುವಲ್ಲ ; ನಿಜವಾದ ಲೇಖಕನಿಂದಂತೂ ಅದು ಸಾಧ್ಯವಾಗದ ಮಾತು. ಆದರೆ ಅವನಿಗೇನೇ ಬರೆಯಲೇ ಬೇಕಾಗಿತ್ತು. ಹಾಗಾದರೆ ಮತ್ತೆ ಏನನ್ನಾದರೂ ಏಕೆ ಬರೆಯಬಾರದು ?

ಆ ಮತ್ತೇನನ್ನಾದರೂ ಎಂದರೆ ಯಾವುದನ್ನು ? ಅವನು ತನ್ನನ್ನು ತಾನೇ ಕೇಳಿಕೊಂಡ ಪ್ರಶ್ನೆಗೆ ಉತ್ತರವಾಗಿ ಈ ಆತ್ಮಚರಿತ್ರೆಯ ಯೋಚನೆಯು ಸೂಚಿತ ವಾಯಿತು. ಈ ಹೊಸ ನಿಟ್ಟಿನಲ್ಲಿ ಕೈಕೊಂಡ ಸಾಹಸಕಾರ್ಯದ ಬಗ್ಗೆ ಅವನೇ ಅನೇಕ ಸಂಗತಿಗಳನ್ನು ತಿಳಿಸುತ್ತಾನೆ.

ಮೊದಲನೆಯದಾಗಿ ಅಲ್ಲಿಯವರೆಗೆ ಗುಜರಾತೀ ಭಾಷೆಯಲ್ಲಿ ಆತ್ಮಚರಿತ್ರೆಯನ್ನು ಬರೆಯುವ ಸಂಪ್ರದಾಯವಿರಲಿಲ್ಲ ಮತ್ತು ಆ ಕಾರಣವಾಗಿ ತಾನು ಅದನ್ನು

ಆರಂಭಿಸಬೇಕು. ಎರಡನೆಯದಾಗಿ ಡಾ. ಭಾವುದಾಜಿ, ಕರಸನದಾಸ ಮೂಲಜಿ, ರುಸ್ತಮಜಿ ಗುಸ್ತಾದಜಿ ಇರಾನಿ ಮತ್ತು ಅನ್ಯರು ಅವನ ಜೀವನಚರಿತ್ರೆಯನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಅದನ್ನು ಬರೆಯುವಂತೆ ಅವನನ್ನು ಒಂದೇ ಸಮನಾಗಿ ಒತ್ತಾಯಿಸುತ್ತಿದ್ದರು. ಮೂರನೆಯದಾಗಿ ತಾನೇ ತನ್ನನ್ನು ತಿಳಿದು ಕೊಳ್ಳಬೇಕು ಎಂಬ ವಿಚಾರವಾಗಿತ್ತು. ನಾಲ್ಕನೆಯದೂ ಮತ್ತು ಅರ್ಥಪೂರ್ಣವೂ ಎನಿಸಿದ ಕಾರಣವೆಂದರೆ ತಾನು ಅಳಿದ ಮೇಲೆ ತನ್ನ ಬಗ್ಗೆ ವಿಚಾರಗಳನ್ನು ಅರಿತು ಕೊಳ್ಳುವದು ದುಸ್ತರ ಎಂಬುದು.

ಇತ್ತ ಒಂದು ಮಾತಿನ ಬಗ್ಗೆ ಅವನು ನಿಶ್ಚಿತವಾದ ನಿಲುವನ್ನು ತಳೆದಿದ್ದನು. ತಾನು ಆತ್ಮಚರಿತ್ರೆಯನ್ನು ಬರೆಯುವದಾದರೆ ತನ್ನಮಟ್ಟಿಗೆ ಮಾತ್ರ ಬರೆದುಕೊಳ್ಳ ಬಹುದು. ಆದರೂ ಅದನ್ನು ಆತನು ಮುದ್ರಿಸಿಕೊಳ್ಳಬಹುದು. ಅದು ಪ್ರತಿಯೊಂದು ಕೃತಿಯ ಬಗ್ಗೆ ಅವನ ಸಂಪ್ರದಾಯವಾಗಿತ್ತು. ತಾನು ಬರೆದುದೆಲ್ಲವನ್ನು ಅವನು ಮುದ್ರಿಸಿಕೊಂಡಿದ್ದನು. ವಸ್ತುಗಳನ್ನು ಮತ್ತು ವಿಷಯಗಳನ್ನು ಆ ಮೂಲಕ ಸುಸ್ಥಿತಿಯಲ್ಲಿ ಕಾಯ್ದುಕೊಳ್ಳಬಹುದು. ನಾಲ್ಕು ಅಥವಾ ಅಯ್ದು ಪ್ರತಿಗಳು ಸಾಕೆನಿಸಬಹುದು. ತನ್ನ ಮರಣದನಂತರ ಜನರಿಗೆ ಆ ಮಾತುಗಳನ್ನು ಬಹಿರಂಗವಾಗಿ ತಿಳಿದುಕೊಳ್ಳಬೇಕು ಎನಿಸಿದರೆ ಹಾಗೆ ಮಾಡಲು ಅವರು ಸ್ವಾಗತಾರ್ಹರು. ಆದರೆ ತಾನು ಜೀವಂತ ಇರುವವರೆಗೆ, ಸ್ವಾಭಾವಿಕವಾಗಿಯೆ ಅದು ಆತ್ಮಗತವಾಗಿಯೆ ಉಳಿಯಬೇಕು. ಮಾತ್ರ ಅದನ್ನು ತಾನು ಬರೆಯಬೇಕು. ಅಂತು ಅವನು ಅದನ್ನು ಬರೆದು ತೆಗೆದನು.

ಈ ಅವನ ಆತ್ಮಚರಿತ್ರೆಯು ಉತ್ಕೃಷ್ಟವಾದ ವಿಷಯವೆನಿಸಿದೆ. ಗುಜರಾತೀ ಭಾಷೆಯಲ್ಲಿ ಅಂತಹದಾದ ಆ ಕೃತಿಯು ಮೊದಲನೆಯದು ಎನಿಸಿದ್ದರೂ ಅದೊಂದು ಪರಿಪಕ್ವವಾದ ಬರೆಹದ ಎಲ್ಲ ಗುಣಗಳನ್ನೂ ಪಡೆದಿದೆ. ಅದರಲ್ಲಿ ಕವಿಯು ಜೀವದಿಂದ ಇದ್ದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕೆಲವು ಹೆಸರುಗಳನ್ನು ಮತ್ತು ಪ್ರಸಂಗಗಳನ್ನು, ಅದು ಅನ್ಯಾಯವಾಗಬಹುದೆಂಬ ವಿಚಾರದಿಂದ, ಬೇಕೆಂದು ಉಲ್ಲೇಖಿಸಿಲ್ಲ ; ಆದರೂ ಜೀವನದ ಅನೇಕ ಕ್ಷೇತ್ರಗಳಲ್ಲಿ ಕಂಡುಬರುವ ಆತ್ಮಶ್ಲಾಘನೆಯ ಅವನ ಉತ್ಕಟ ಅಭಿಪ್ರಾಯಗಳು ಸ್ಫುಟವಾಗಿ ಕಾಣದಿದ್ದರೂ ಆ ಗ್ರಂಥದಲ್ಲಿ ಅವನ ನಿಜವಾದ ಸತ್ಯಸಂಧತೆಯು ನಿಚ್ಚಳವಾಗಿ ಮೂಡಿದುದು ಕಂಡುಬರುತ್ತಿದ್ದು ಆತ್ಮಚರಿತ್ರೆಯು ಯಾವ ಬಗೆಯಾಗಿರಬೇಕು ಎಂಬುದರ ಪ್ರಚಲಿತ ಧಾರಣೆಗೆ ಅದು ಅತಿ ನಿಕಟವಾಗಿ ನಿಲ್ಲುತ್ತದೆ.

ಈ ಮೊದಲೇ ನಮಗೆ ತಿಳಿದಂತೆ ಅವನು ತನ್ನ ಆತ್ಮಕತೆಯನ್ನು ಮುಗಿಸಿದ ದಿನಾಂಕವು ೧೮೬೬ ರ ಸೆಪ್ಟೆಂಬರ್ ೧೮ ನೆಯದಾಗಿದೆ. ಈ ವರ್ಷವು ಕವಿಯ ಜೀವನದಲ್ಲಿ ಅತ್ಯಂತ ಪ್ರಮುಖವಾಗಿದ್ದು ಆಗ್ಗೆ ಅವನು ಕವನಗಳನ್ನು ಬರೆಯುವದರಲ್ಲಿ ಪೂರ್ತಿಯಾಗಿ ನಿರಾಸಕ್ತನಾಗಿರದಿದ್ದರೂ ಕಾವ್ಯಸೃಷ್ಟಿಯಲ್ಲಿ ಅವನ ಪ್ರಗತಿಯು

ಕುಂಠಿತವಾಗಿತ್ತು ಮತ್ತು ಅವನ ಮನಸ್ಸಿನಲ್ಲಿ ಸಂಪೂರ್ಣವಾಗಿ ವಿಚಾರಾಂತರವಾಗಿತ್ತು. ಅದರ ತರುವಾಯ ಆತನು ಹೆಚ್ಚು ಬರೆದಿದ್ದರೂ, ಸಾಕಷ್ಟು ಯೋಚನೆಯನ್ನು ಗೈದು, ತುಂಬಾ ಯೋಜನೆಗಳನ್ನು ಮಾಡಿದ್ದರೂ ಮತ್ತು ಅನಂತರ ಅವನು ಇಪ್ಪತ್ತು ವರ್ಷ ಜೀವಿಸಿದ್ದರೂ ಆ ದಿನಾಂಕ, ಆ ತಿಂಗಳು ಮತ್ತು ಆ ವರ್ಷದಿಂದ ಆತನು ಮೊದಲಿನ ನರ್ಮದಾಶಂಕರನಂತೆಯೆ ಆಕರ್ಷಕ, ಸಜೀವ, ಉತ್ಸಾಹಪೂರ್ಣವಾಗಿದ್ದರೂ ಅದೇ ನರ್ಮದಾಶಂಕರನಾಗಿರದೆ ಬೇರೆಯಾಗಿದ್ದನು. ಮೊದಲಿನ ನರ್ಮದಾಶಂಕರನು ನಮಗೆ ಪ್ರಿಯನಾಗಿದ್ದಂತೆಯೆ ಈ ಬದಲಾದ ನರ್ಮದಾಶಂಕರನೂ ಆಗಿರುವನೆಂದು ನಾವು ಭಾವಿಸುತ್ತೇವೆ.

## ೯

ಕವಿಯ ಜೀವನಲ್ಲಿ ಮುಂದಿನ ಇಪ್ಪತ್ತು ವರ್ಷಗಳ ಸನ್ನಿವೇಶಗಳು ಮತ್ತು ಅವುಗಳ ಪ್ರೇರಣೆಯ ಕಾರಣಗಳು, ಅವನ ತಾರುಣ್ಯ ಮತ್ತು ವೈಭವಗಳ ಅವಧಿಯಾಗಿದ್ದ ಮೊದಲ ಮುವ್ವತ್ತುಮೂರು ವರ್ಷಗಳಂತೆ ಭವಿಷ್ಯಕಾಲದ ದೃಷ್ಟಿಯಿಂದ ಅಷ್ಟೊಂದು ವಿವರವಾಗಿ ಉಲ್ಲೇಖಿತವಾಗದೆ ಇದ್ದುದೊಂದು ವಿಷಾದದ ಸಂಗತಿಯಾಗಿದೆ. ಆದರೆ ಮುಂದಿನ ಈ ವರ್ಷಗಳಲ್ಲಿ ಕೂಡ ಆತನ ಅವಿರತ ಉತ್ಸಾಹ, ನಿರ್ಭಯವಾದ ಧೈರ್ಯ ಮತ್ತು ಸಾಮಾನ್ಯವಾಗಿ ಅವನು ಕೈಗೊಂಡ ವೈಚಾರಿಕ ಮತ್ತು ಆತ್ಮೋನ್ನತಿಯ ಕಾರ್ಯಗಳಿಗೆ ನಿದರ್ಶನವಾಗಿ ನಿಂತಿವೆ. ಅವನು ಪೂರ್ವಾವಸ್ಥೆಯಲ್ಲಿ ವ್ಯಾಪಕವಾದ ಕಾವ್ಯಸೃಷ್ಟಿಯಲ್ಲಿ ತೊಡಗಿದ್ದನೇನೋ ನಿಜವಾಗಿದ್ದರೂ ಮುಂದಿನ ಇಪ್ಪತ್ತು ವರ್ಷಗಳಲ್ಲಿಯೂ ಆತನು ಸಾಕಷ್ಟು ಬರೆದನು, ತುಂಬ ಓದಿದನು ಮತ್ತು ಹೆಚ್ಚು ಯೋಚಿಸಿದನು ಎಂಬುದೂ ಅಷ್ಟೇ ನಿಜ. ಅನಿತೊಂದು ಕಾರಣದಿಂದ ಅವನು ಮೊದಲು ಸ್ವೀಕರಿಸಿದ ಕಾರಣಗಳ ವಿಷಯವಾಗಿ ಈಚೆಗೆ ಅವನ ಹುರುಪು ಕುಂದಿದ್ದರೂ, ನಾವು ಈ ಮೊದಲೇ ಕಂಡ ಕಾರಣಗಳಿಂದಾಗಿ ಆ ಹಿಗ್ಗು ಕಣ್ಮರೆಯಾಗಿ ಅದರ ಸ್ಥಾನದಲ್ಲಿ ತದ್ವಿರುದ್ಧವಾದ ಪ್ರತಿಕ್ರಿಯೆಯುಂಟಾಗಿ ಈಗ ಅವನು ಕೈಗೊಂಡ ಪ್ರತಿಯೊಂದು ಕಾರ್ಯದಲ್ಲಿ, ಕೊನೆಯವರೆಗೆ ಅಷ್ಟೇ ಸಮನ್ವಯಕ್ಕೆ ಒಪ್ಪದ ಹಟವು ಕಂಡುಬರುತ್ತದೆ. ಅವನ ಆರ್ಥಿಕ ಸ್ಥಿತಿಯಲ್ಲಿ ವಿಪರೀತವಾದ ಅವನತಿಯುಂಟಾಗಿತ್ತು ಮತ್ತು ನಮಗೆ ಈಗಾಗಲೆ ತಿಳಿದಂತೆ ಅವನ ಜೀವನದ ಈ ಇಡಿಯ ಉತ್ತರಾರ್ಧದಲ್ಲಿ ಅದು ಅವನ ಮನಸ್ಸಿನ ಮೇಲೆ ಅಪರಿಮಿತವಾದ ಪರಿಣಾಮವನ್ನು ಮಾಡಿದ್ದಿತು; ಆದರೆ ಆ ಕಾರಣವಾಗಿ ಅವನ ಬರೆವಣಿಗೆಯ ಗಾತ್ರವೇನೂ ಕೊರಗಲಿಲ್ಲ. ಅದಲ್ಲದೆ ಗುಜರಾತೀ ಸಾಹಿತ್ಯವನ್ನು ಸಮೃದ್ಧಗೊಳಿಸಲಿಕ್ಕೆ ಅವನು ಕೈಗೊಂಡ ವಿವಿಧ ಯೋಜನೆಗಳಿಗೆ ಸಹಾಯವನ್ನು ದೊರಕಿಸುವ ಅವನ ಯತ್ನಗಳೇನೂ ಕಡಿಮೆಯಾಗಲಿಲ್ಲ.

ಈ ಮಾತಿನ ಸತ್ಯತೆಯನ್ನು ತಿಳಿದುಕೊಳ್ಳಲಿಕ್ಕೆ ಒಂದು ದೃಷ್ಟಾಂತವು ಸಾಕು. ನರ್ಮದಾಶಂಕರನಿಗೆ ತನ್ನ ಯೌವನದ ಆರಂಭಕಾಲದಲ್ಲಿ ಪ್ರಾಚೀನ ಕವಿಗಳ ರಚನೆಗಳನ್ನು ಓದಲಿಕ್ಕೆ ಅನೇಕ ಸಂದರ್ಭಗಳು ಒದಗಿದ್ದವು; ಯಾಕೆಂದರೆ ಅವನ ತಂದೆಯು ಅವುಗಳಲ್ಲಿ ಕೆಲವನ್ನು ಕೈಬರಹದ ಕೃತಿಗಳನ್ನಾಗಿ ಸಿದ್ಧಗೊಳಿಸಿ ಒಬ್ಬ ಪ್ರಕಾಶಕನಿಗೆ ಕೊಡುತ್ತಿದ್ದನು ಮತ್ತು ಆನಂತರ ಅವು ಕಲ್ಲಚ್ಚಿನಲ್ಲಿ ಮುದ್ರಿತ ವಾಗಿದ್ದವು. ಗುಜರಾತದ ದೇಶಭಾಷೆಯ ಸಮಿತಿಯು (ಗುಜರಾತಿ ವ್ಹರ್ನ್ಯಾಕ್ಯುಲರ್ ಸೊಸೈಟಿ) ಮುಂದೆ ಮಾಡಿದ ಒಂದು ಹೊಸ ಯೋಜನೆಯಲ್ಲಿ 'ಗುಜರಾತೀ ಕಾವ್ಯದೋಹನ' ಎಂಬ ಶೀರ್ಷಿಕೆಯಲ್ಲಿ ಕವಿ ದಲಪತರಾಮನು ಇಂತಹ ಅನೇಕ ಕವನಗಳ ಮೊದಲ ಸಂಗ್ರಹವೊಂದನ್ನು ಪ್ರಕಟಿಸಿದನು. ಅದರಲ್ಲಿ ದಲಪತರಾಮನು ಯಾವ ಕಾವ್ಯವನ್ನೂ ಇಡಿಯಾಗಿ ಸೇರಿಸದೆ ದೀರ್ಘವಾದ ಕೃತಿಗಳ ಕೆಲವು ಉತ್ತಮಾಂಶ ಗಳನ್ನು ಮಾತ್ರ ಮುದ್ರಿಸಿದ್ದನು. ನರ್ಮದಾಶಂಕರನಿಗೆ ಈ ಬಗೆಯ ವಿಚ್ಛೇದನವು ಸರಿಯೆನಿಸಲಿಲ್ಲವೆಂದು ತನ್ನ ಪತ್ರಿಕೆಯಾದ "ದಂಡಿಯೊ"ದಲ್ಲಿ ಆತನು ಆ ವಿಷಯ ವಾಗಿ ಕಟುವಾದ ಟೀಕೆಯನ್ನು ಬರೆದನು. ನರ್ಮದಾಶಂಕರನ ಈ ಟೀಕೆಯನ್ನು ಲಕ್ಷಿಸದೆ ದಲಪತರಾಮನು ಅಂತಹ ಇನ್ನೊಂದು ಸಂಪುಟವನ್ನು ಪ್ರಕಟಿಸಿದನು ಮತ್ತು ಅದಕ್ಕಿಂತ ಉತ್ತಮವಾದ ಸಂಗ್ರಹವನ್ನು ಯಾರಾದರೂ ಪ್ರಕಾಶಿಸುವಂತಿದ್ದರೆ ಹಾಗೆ ಮಾಡಬಹುದು ಎಂದು ವ್ಯಂಗ್ಯವಾಗಿ ಬರೆದನು. ಇದರಿಂದ ನರ್ಮದಾ ಶಂಕರನಿಗೆ ಒಂದು ಯೋಜನೆಯು ಹೊಳೆಯಿತು. ತಾನು ಇಂತಹ ಕಾವ್ಯಗಳನ್ನು ಹೊಸ ರೀತಿಯಲ್ಲಿ ಏಕೆ ಪ್ರಕಟಿಸಬಾರದು? ಆದರೆ ಅದಕ್ಕೆ ಕೈತುಂಬ ಹಣವು ಬೇಕು. ಅಂತೆಯೆ ಅವನು ಝುವೇರಿಲಾಲ ಉಮಿಯಾಶಂಕರನ ಸಹಕಾರದೊಡನೆ ಒಂದು ವಿಜ್ಞಾಪನೆಯನ್ನು ಹೊರಡಿಸಿ, ಅದರಲ್ಲಿ ಗುಜರಾತದ ಹಿರಿಯ ಕವಿಗಳ ಶ್ರೀಮಂತ ಕಾವ್ಯದ ಅನೇಕ ಸಂಪುಟಗಳನ್ನು ಹೊರತರುವ ಉದ್ದೇಶದಿಂದ ಸಾಹಿತ್ಯಪ್ರೇಮಿ ಗಳಾದ ಗುಜರಾತೀ ಜನರಿಂದ ರೂ. ೨೫,೦೦೦ ದ ವಂತಿಗೆಗಳನ್ನು ಕೇಳಿದ್ದನು. ಆಗಿನ ದುರ್ಲಭವಾದ ಹಣದ ಪರಿಸ್ಥಿತಿಯಲ್ಲಿ ಸಾಹಿತ್ಯಾಭಿಮಾನಿಗಳಾದ ಧನಿಕವೃತ್ತಗಳ ಸಭ್ಯಜನರಲ್ಲಿ ಹಣವಿಲ್ಲದ್ದರಿಂದ ಆ ಬಿನ್ನಹವು ಮಾನ್ಯತೆಯನ್ನು ಪಡೆಯದೆ ಹೋಯಿತು, ನಿಜ; ಕೆಲವು ವರ್ಷಗಳನಂತರ ಮಾತ್ರ ನರ್ಮದಾಶಂಕರನ ಶಿಷ್ಯನೂ, ಅಭಿಮಾನಿಯೂ ಆದ ದಿವಂಗತ ಶ್ರೀ ಇಚ್ಛಾರಾಮ ಸೂರ್ಯರಾಮ ದೇಸಾಯಿ ಪ್ರಕಟಿಸಿದ ಬೃಹತ್ 'ಕಾವ್ಯದೋಹನ' ಎಂಬ ಹೆಸರಿನ ಎಂಟು ಸಂಪುಟಗಳ ಮೂಲಕ ಆ ವಿಚಾರವು ಫಲವನ್ನು ಪಡೆಯಿತು.

ಈ ಕೋರಿಕೆಯಿಂದ ನರ್ಮದಾಶಂಕರನ ಪ್ರಸ್ತಾಪವು ಫಲಿಸಲಿಲ್ಲವಾದರೂ, ಜನರಲ್ಲಿ ಅವನ ಪ್ರಭಾವವು ಅಪೂರ್ವವಾಗಿತ್ತು ಮತ್ತು ಆತನು ತನಗೆ ಬೇಕಾದ ಅನೇಕ ಕೆಲಸಗಳನ್ನು ಅನಾಯಾಸವಾಗಿ ಮಾಡಿಕೊಳ್ಳುವಂತಿತ್ತು. ಈ ಸಂದರ್ಭದಲ್ಲಿ ಕವಿಯು ಒಬ್ಬ ವಿದ್ಯಾವಂತ ಇಂಗ್ಲಿಶ ವ್ಯಕ್ತಿಯಾಗಿದ್ದ ಸರ್ ಅಲೆಗ್ಝಾಂಡರ್

ಗ್ರಾಂಟ್ ಎಂಬವನೊಡನೆ ಮಾಡಿಕೊಂಡ ಭೆಟ್ಟಿಯಂತಹ ಪ್ರಸಂಗವನ್ನು ಉಲ್ಲೇಖಿಸ ಬಹುದು.

ಅವನ ಇಬ್ಬರು ಮಿತ್ರರ ಮುಖಾಂತರ ನರ್ಮದಾಶಂಕರನು ಈ ಇಂಗ್ಲಿಶ್ ಸಜ್ಜನನನ್ನು ಭೆಟ್ಟಿಯಾದನು ಮತ್ತು ಅವರಿಬ್ಬರು ಇವನಿಗೆ ಸರ್ ಅಲೆಗ್ಝಾಂಡರ್ ಗ್ರಾಂಟ್‌ನ ಪರಿಚಯವನ್ನು ಮಾಡಿಕೊಟ್ಟರು. ಆ ಇಂಗ್ಲಿಶ್ ವ್ಯಕ್ತಿಯು ಉಚಿತ ವಾದ ಮರ್ಯಾದೆಯಿಂದ ಅವನನ್ನು ಸ್ವಾಗತಿಸಿದನು ಮತ್ತು ಆಕ್ಸನ್‌ಹ್ಯಾಮ ಹಾಗೂ ಬುಹ್ಲರ್ ಎಂಬ, ಅಲ್ಲಿಯೇ ಇದ್ದ, ಇಬ್ಬರು ಪ್ರಾಧ್ಯಾಪಕರಿಗೆ ಅವನ ಗುರುತು ಮಾಡಿಕೊಟ್ಟನು. ಕವಿಯು ಅವರಿಗೆ ತನ್ನ ಗ್ರಂಥಗಳನ್ನು ತೋರಿಸಿದನು. ಗ್ರಾಂಟ್‌ನಿಗೆ ಸಂತೋಷವಾಯಿತು ಮತ್ತು ಆತನು ತನ್ನ ಕವನಗಳನ್ನು ಓದಬೇಕೆಂದು ಕೇಳಿಕೊಂಡನು. ಕವಿಯು ಪ್ರೇಮಭಾವವನ್ನು ಕುರಿತು ಬರೆದ ಕವನವೊಂದನ್ನು ಓದಿದಾಗ್ಗೆ ಆ ಸಾಹೇಬನು ಸಂಭ್ರಮದಿಂದ ಈ ಉದ್ಗಾರವನ್ನು ತೆಗೆದನು : "ಎಷ್ಟು ಸುಂದರವಾದ ವಾಚನ!" ಆಗ್ಗೆ ಕವಿಯು ಆ ಕವಿತೆಯ ಅರ್ಥವನ್ನು ತಿಳಿಸಿ ಹೇಳಿದನು. ಅವನಿಗೆ ಇನ್ನೂ ಹೆಚ್ಚಿನ ಸಂತೋಷದಾಯಿತು. ಗ್ರಾಂಟ್‌ನಿಗೆ ನರ್ಮದಾಶಂಕರನು ತಾನು ಹಣದ ತೊಂದರೆಯಿಂದಾಗಿ ಹೊಸ ಪುಸ್ತಕಗಳನ್ನು ಪ್ರಕಟಿಸಲಿಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದನು. ಗ್ರಾಂಟ್‌ನು ಆ ವಿಷಯವಾಗಿ ಸರಕಾರಕ್ಕೆ ಮನವಿಯೊಂದನ್ನು ಸಲ್ಲಿಸಿದರೆ ತಾನು ಅದಕ್ಕೆ ಸಾಕಷ್ಟು ಧನಸಹಾಯವು ದೊರೆಯುವಂತೆ ಸಕಲ ಪ್ರಯತ್ನವನ್ನು ಮಾಡುವ ವಚನವನ್ನಿತ್ತನು. ಇತ್ತ ಅದರ ತರುವಾಯ ಅವನು ಆಡಿದ ಮಾತುಗಳು ಇನ್ನೂ ಅರ್ಥಪೂರ್ಣವಾಗಿವೆ. ನರ್ಮದಾಶಂಕರನು ಹೊರಟು ನಿಂತಾಗ್ಗೆ ಗ್ರಾಂಟ್‌ನು "ನೀನು ನಮಗೆ ಓದಿ ತೋರಿಸಿದ ಕವಿತೆಯನ್ನು ಭಾಷಾಂತರಿಸಿ ಕೊಡು; ನಾನು ಅದನ್ನು ಇಂಗ್ಲಂಡ್‌ದ ಆಸ್ಥಾನಕವಿಯಾಗಿದ್ದ ನನ್ನ ಮಿತ್ರ ಲಾರ್ಡ ಟೆನ್ನಿಸನ್‌ನ ಬಳಿಗೆ ಕಳಿಸಿ ಕೊಡುವೆನು" ಎಂದನು.

ಇನ್ನೊಬ್ಬ ಇಂಗ್ಲಿಶ್ ಸದ್ಗೃಹಸ್ಥನಾದ ಶ್ರೀ ಹೋಪ್‌ನಿಂದ ಕೂಡ ತನಗಾಗಿ ಸಾಕಷ್ಟು ಧನವನ್ನು ದೊರಕಿಸಿಕೊಡುವ ಪ್ರೋತ್ಸಾಹಪರವಾದ ಪ್ರತಿಕ್ರಿಯೆಯನ್ನು ಅವನು ಪಡೆದಿದ್ದನು.

ಈ ಘಟನೆಗಳಿಂದ ಎರಡು ಮಾತುಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ಕವಿಯು ತನ್ನ ಜನರಲ್ಲಿ ಮಾತ್ರ ಪ್ರಸಿದ್ಧನಾಗಿದ್ದನಲ್ಲದೆ ಇತರ ಭಾಷಾಬಾಂಧವರಲ್ಲಿ ಕೂಡ ಅವನಿಗೆ ಮರ್ಯಾದೆಯಿದ್ದಿತು. ಎರಡನೆಯದಾಗಿ, ಅವನ ಆರ್ಥಿಕ ಸ್ಥಿತಿಯು ಅತ್ಯಂತ ಕೆಟ್ಟಿದ್ದು, ಪರಿಸ್ಥಿತಿಯು ಕೈಬಿಡುವಂತಹ ಲಕ್ಷಣಗಳನ್ನು ತೋರುತ್ತಿದ್ದುದ ರಿಂದ ಆತನು ತನಗೆ ಲಭ್ಯವಾದ ಯಾವುದೇ ಬಗೆಯ ಆಶ್ರಯವನ್ನು ಪಡೆಯಲಿಕ್ಕೆ ಅವನು ಸಿದ್ಧನಾಗಬೇಕಾಗಿತ್ತು. ದುರ್ದೈವದಿಂದ ಆ ದೆಸೆಯು ಅವನ ಜೀವನದ

ತುಂಬೆಲ್ಲ ಮುಂದುವರಿಯಿತು ಮತ್ತು ತನ್ನ ಜೀವನದ ಮೊದಲ ವರ್ಷಗಳಲ್ಲಿ ಅಂತಹ ವೈಭವದಿಂದ ಮತ್ತು ತಕ್ಕಮಟ್ಟಿಗಿನ ಸಮೃದ್ಧಿಯಲ್ಲಿ ಬಾಳಿದ ಅವನಿಗೆ ಕ್ಲೇಶಮಯವಾದ ಅವಮಾನವನ್ನು ಕೂಡ ಸಹಿಸುವಂತಾಯಿತು.

ಆದರೆ ಈ ಬಗೆಯ ಏರಿಳಿತಗಳು ನರ್ಮದಾಶಂಕರನ ದೈವದಲ್ಲಿ ಸಂಭವಿಸಿದರೂ ಆತನೇನೂ ತನ್ನ ಆದರ್ಶವನ್ನು ಬಿಡಲಿಲ್ಲ ಮತ್ತು ತಾನು ಮಾಡಿದ ನಿರ್ಧಾರದಿಂದ ಹಿಂದಿರುಗಲಿಲ್ಲ ; ಅಂತಹ ಅವನ ನಿಲುವಿನಿಂದ ಅವನಿಗೆ ಇನ್ನಷ್ಟು ತೊಂದರೆಯೇನೊ ಆಯಿತು. ಅವನು ಉತ್ಕರ್ಷದ ಕಲಶವನ್ನು ಕಂಡ ಕಾಲದಲ್ಲಿ ಅವನ ಮಿತ್ರ ಮತ್ತು ಪೋಷಕ ವರ್ತಕಪ್ರಮುಖನಾದ ಕರಸನದಾಸ ಮಾಧವದಾಸನು ' ನರ್ಮಕವಿತಾ ' ಎಂಬ ಅವನ ಕವನಗಳ ಬೃಹತ್‌ಸಂಪುಟದ ಎಲ್ಲ ಅಚ್ಚಿನ ವೆಚ್ಚವನ್ನೂ ತಾನು ವಹಿಸುವದಾಗಿ ಮಾತುಕೊಟ್ಟಿದ್ದನು. ಆದರೆ ಆ ಗ್ರಂಥದ ಮುದ್ರಣವು ಪೂರ್ಣ ವಾಗುವ ಮೊದಲು ಅವನು ಅತ್ಯಂತ ನಷ್ಟಕ್ಕೆ ಗುರಿಯಾಗಿ ಅಷ್ಟು ದೊಡ್ಡ ಪುಸ್ತಕದ ಮುದ್ರಣ ಭಾರವನ್ನು ಹೊರುವಂತಹ ಪ್ರಶ್ನೆಯೆ ಉಳಿಯಲಿಲ್ಲ. ನರ್ಮದಾಶಂಕರನಿಗೆ ಅದನ್ನು ಪ್ರಕಟಿಸಲಿಕ್ಕೆ ಅತ್ಯಂತ ತೊಂದರೆಯಾಯಿತು ಮತ್ತು ತುಂಬ ಸಮಯವು ಹಿಡಿಯಿತು. ಅಷ್ಟೇ ಅಲ್ಲದೆ ಅವನಿಗೆ ಆ ಕಾರ್ಯದಲ್ಲಿ ಸಾಕಷ್ಟು ಸಾಲವನ್ನು ಮಾಡಬೇಕಾಯಿತು. ಆದರೂ ಮೊದಲೇ ನಿರ್ಣಯಿಸಿದಂತೆ ಅವನು ಆ ಗ್ರಂಥವನ್ನು ತನ್ನ ಹಿರಿಯ ಗೆಳೆಯನಾದ ಕರಸನದಾಸ ಮಾಧವದಾಸನಿಗೇ ಅರ್ಪಿಸಿದನು— ಹಾಗೆ ಮಾಡಬೇಡ, ಇನ್ನಾರಾರಾದರೂ ಹಣವನ್ನು ಕೊಡಲಿಕ್ಕೆ ಮುಂದೆ ಬಂದರೆ ಅವರಿಗೆ ಅದರ ಅರ್ಪಣೆಯನ್ನು ಮಾಡು ಎಂದು ಅನೇಕ ಜನರು ಅವನಿಗೆ ಹೇಳಿದರೂ ಕೂಡ !

ಅವನ ಕಾರ್ಯಕಲಾಪದಲ್ಲಿ ಅವನು ಗೈದ ಘನವಾದ ಕೆಲಸವೆಂದರೆ 'ನರ್ಮಕೋಶ' ಎಂಬ ನಿಘಂಟುವಿನ ಹದಿಮೂರು ವರ್ಷಗಳ ದೀರ್ಘಕಾಲದ ದುಡಿತದ ಪ್ರಕಾಶನ. ಇಷ್ಟು ಗೌರವಪೂರ್ಣವಾದ ಗ್ರಂಥವನ್ನು ರಚಿಸುವಾಗ್ಗೆ ಮತ್ತು ಪ್ರಕಟಿಸುವಾಗ್ಗೆ ಆತನು ಅಸಂಖ್ಯ ಎಡರು-ತೊಡರುಗಳನ್ನು ಎದುರಿಸಬೇಕಾಯಿತು. ಮೊದಲು ಆ ಪ್ರಕಾಶನದಲ್ಲಿ ಕಾಲಕಾಲಕ್ಕೆ ಆಸಕ್ತಿಯನ್ನು ತಳೆದು ನೆರವನ್ನು ನೀಡುವದಾಗಿ ಹೇಳಿದ ಅನೇಕ ಜನರು ಒಂದಿಲ್ಲೊಂದು ಕಾರಣದಿಂದ ಅನಂತರ ಅಲ್ಲಿಂದ ಕಾಲ್ದೆಗೆದರು. ಕ್ಷುಲ್ಲಕವಾದ ಪ್ರಚೋದನೆಯಿಂದ ಪ್ರಕ್ಷುಬ್ಧನಾಗಿ ಅನ್ಯರಿಗೆ ಅವಮಾನವನ್ನು ಮಾಡುತ್ತಿದ್ದ ಕವಿಯ ಮನೋಭಾವವೇ ಮೊದಲಾದ ಅನೇಕ ಸಂಗತಿಗಳು ಅದಕ್ಕೆ ಕಾರಣವಾಗಿದ್ದವು. ಆದರೆ ಇತರರಿಗೆ ಕವಿಯು ಕೈಕೊಂಡ ಕಾರ್ಯವನ್ನು ನಿಲ್ಲಿಸಲಿಕ್ಕಾಗಲಿ, ಅದರ ಸಮಯವು ಬಂದಾಗ್ಗೆ ಆ ಕೃತಿಯನ್ನು ಪ್ರಕಟಿಸದಂತೆ ಮಾಡುವದಾಗಲಿ ಸಾಧ್ಯವಾಗಲಿಲ್ಲ. ಈಗಿನ ಭಾಷೆಯಲ್ಲಿ ಹೇಳಬೇಕಾದರೆ ಆತನು ನೆತ್ತರು, ಬೆವರು ಮತ್ತು ಕಣ್ಣೀರುಗಳ ಬೆಲೆಯನ್ನು ತೆರಬೇಕಾದರೂ

ಅದನ್ನು ಆತನು ಪ್ರಕಟಿಸಿದನು. ಇತ್ತ ಹದಿಮೂರು ವರ್ಷಗಳವರೆಗೆ ನಡೆದ ಈ ಅದ್ಭುತ ಕೃತಿಯನ್ನು ಅವನು ಯಾರಿಗೆ ಅರ್ಪಿಸಿದನು ? ಯಾವುದೇ ಶ್ರೀಮಂತ ಅಥವಾ ವಿದ್ವಾಂಸ ವ್ಯಕ್ತಿಗೆ ಅದನ್ನು ಅರ್ಪಿಸದೆ ಆ ಕೃತಿಯ ಪ್ರಯೋಜನವನ್ನು ಪ್ರಮುಖವಾಗಿ ಮಾಡಿಕೊಳ್ಳುವ ಗುಜರಾತದ ಜನರಿಗೆ ಅದು ಅರ್ಪಿತವಾಯಿತು. ಆ ಗ್ರಂಥದ ಸಮರ್ಪಣೆಯೆಂದು ಅವನು ಬರೆದ ಕವನವು ಒಂದು ಅಮೌಲ್ಯ ರತ್ನವಾಗಿದ್ದು ಗುಜರಾತದಲ್ಲಿ ಈಗ್ಗೆಯೂ ಸಾಹಿತ್ಯಕ ಅಥವಾ ಸಾಂಸ್ಕೃತಿಕ ಸಂದರ್ಭದಲ್ಲಿ ಒದಗುವ ಎಲ್ಲ ಮಹತ್ವದ ಕಾರ್ಯಕ್ರಮಗಳಲ್ಲಿ ಜನರು ಕೃತಜ್ಞತಾಭಾವದಿಂದ ಹಾಡುತ್ತಾರೆ. ಗುಜರಾತದ ಜನರ ದೃಷ್ಟಿಯಿಂದ ಇದು ನಿಜವಾದ ರಾಷ್ಟ್ರಗೀತವೆಂದೇ ಪರಿಗಣಿತವಾಗಿದೆ. ಅವರ ಭಾಷೆಯು ಪ್ರಚಲಿತವಿರುವವರೆಗೆ ಅವರ ಸಂಗಡ ಆ ಸಂಬಂಧದಲ್ಲಿ ಆ ಕವನವು ಉಳಿಯುವದು ಎಂದು ನಾವು ನಿಶ್ಚಿತವಾಗಿ ತಿಳಿಯ ಬಹುದು. ಗುಜರಾತದ ಜನತೆಯ ಪರಿಚಯವಿದ್ದವರಿಗೆಲ್ಲ "ಜಯ ಜಯ ಗರವೀ ಗುಜರಾತ" ಎಂಬ ಆ ಕಾವ್ಯವು ಅವಗತವಾಗಿರಲಿಕ್ಕೆ ಸಾಕು.

ಅವನ ಜೀವನದ ಈ ಉತ್ತರ ಭಾಗದಲ್ಲಿ ಕವಿಯ ಮನಸ್ಸನ್ನು ಆವರಿಸಿದುದು ಈ ಕೋಶವನ್ನು ಮುಗಿಸಿ, ಪ್ರಕಟಿಸುವುದೊಂದೇ ಆಗಿರಲಿಲ್ಲ. ಅವನ ಬುದ್ಧಿಯು ಪರಿಪಕ್ವವಾದಂತೆ ಮತ್ತು ಅವನ ಅಭಿರುಚಿಯು ವಿಕಸಿತವಾದಂತೆ ಆತನಿಗೆ ಇತಿಹಾಸ ದಲ್ಲಿ ಮತ್ತು ಮನುಷ್ಯ ಹಾಗೂ ಸಮಾಜಗಳ ಚಾರಿತ್ರಿಕ ಪ್ರಭಾವದಲ್ಲಿ ಆಸ್ಥೆಯುಂಟಾ ಯಿತು. ಈ ಸೆಳೆತಗಳ ಅಭ್ಯಾಸದಲ್ಲಿ ಆತನು ಕೆಲಕಾಲ ಮಗ್ನನಾಗಿದ್ದನು. ಅವನು ಪ್ರಪಂಚದ ಇತಿಹಾಸಕ್ಕೆ ಸಂಬಂಧಿಸಿದ ಎರಡನೂರು ಪುಸ್ತಕಗಳನ್ನು ಸಂಗ್ರಹಿಸಿ ಅವುಗಳ ಆಳವಾದ ಅಧ್ಯಯನವನ್ನು ಕೈಕೊಂಡನು. ಆ ತಲ್ಲೀನತೆಯ ಫಲವು ದೊರೆಯಲಿಕ್ಕೇನು ತಡವಾಗಲಿಲ್ಲ. ಅವನು 'ಜಗತ್ತಿನ ಇತಿಹಾಸ'ವೆಂದು ಎರಡು ಸಂಪುಟಗಳ ದೊಡ್ಡ ಗ್ರಂಥವೊಂದನ್ನು ಬರೆದು ೧೮೭೧ ಮತ್ತು ೧೮೭೬ ರಲ್ಲಿ ಪ್ರಕಟಿಸಿದನು. ಅದಕ್ಕಿಂತ ಮೊದಲು ಅವನು ಮಹಾಕಾವ್ಯಗಳನ್ನು ಅಭ್ಯಸಿಸಿದ್ದನು. 'ರಾಮಾಯಣ', 'ಮಹಾಭಾರತ' ಮತ್ತು 'ಇಲಿಯಡ್'ಗಳನ್ನು ಆತನು ಸ್ವಲ್ಪಮಟ್ಟಿಗೆ ಆಳವಾಗಿ ಓದಿಕೊಂಡಿದ್ದನು. ಅದರ ಪರಿಣಾಮವಾಗಿ ಆತನು ೧೮೭೦ ರಲ್ಲಿ ಆ ಮೂರೂ ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ಮೂರು ಗ್ರಂಥಗಳನ್ನು ಬೆಳಕಿಗೆ ತಂದನು.

ಈ ರೀತಿಯಲ್ಲಿ ಮಹಾಕಾವ್ಯಗಳನ್ನು ಮತ್ತು ಚರಿತ್ರೆಯ ಪುಸ್ತಕಗಳನ್ನು ಪಠಿಸಿದ ಆತನು ಚರಿತ್ರೆಗೆ ಕಾರಣರಾದ ಮಹಾಪುರುಷರು ಮತ್ತು ಕಾವ್ಯರಚನೆಗೆ ಕಾರಣರಾದ ವ್ಯಕ್ತಿಗಳ ಜೀವನದಲ್ಲಿ ಆಸಕ್ತಿಯನ್ನು ತಳೆದನು. ಈ ಮಹಾಪುರುಷರ ಬಗ್ಗೆ ಬರೆಯುವದು ಅತ್ಯಂತ ಆವಶ್ಯಕವಾಗಿದೆ ಎಂದು ಆತನು ಭಾವಿಸಿ 'ಮಹಾಪುರುಷರ ಜೀವನಚರಿತ್ರೆಗಳು' ಎಂಬ ಹೆಸರಿನಲ್ಲಿ ಒಂದು ಸಂಪುಟವನ್ನು ಪೂರ್ಣಗೊಳಿಸಿ ೧೮೭೦ ರಲ್ಲಿ ಪ್ರಕಟಿಸಿದನು.

ಇಷ್ಟೆಲ್ಲ ಸಾಹಿತ್ಯವನ್ನು ಓದುವ ಮತ್ತು ವಿಪುಲವಾದ ಕೃತಿಗಳನ್ನು ರಚಿಸಿ ಪ್ರಕಟಿಸುವ ಭೀಮಕಾರ್ಯದೊಡನೆಯೆ ಅವನ ಗೃಹಸ್ಥಜೀವನದ ನಾಟಕವು ಹೊಸಹೊಸದಾದ ಮತ್ತು ಅಲ್ಲಿಯವರೆಗೆ ಕನಸಿನಲ್ಲಿಯೂ ಕಾಣದಂತಹ ದಿಕ್ಕಿನಲ್ಲಿ ಜರುಗುತ್ತಲಿದ್ದಿತು. ಆ ನಾಟಕವು ಗುಜರಾತದ ಜನರಲ್ಲಿ ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಿತು ಮತ್ತು ಇಡಿಯ ಗುಜರಾತವು ಆ ವಿಷಯವಾಗಿ ಮಾತನಾಡುವಂತಾಯಿತು.

ಅದು ಸಹ ೧೮೭೦ ರಲ್ಲಿ ಸಂಭವಿಸಿತು.

ನಮಗೆ ತಿಳಿದಂತೆ ಅದು ಆದುದು ಹೀಗೆ. ಸ್ತ್ರೀಯರೊಡನೆ ಬರುವ ಸಂಪರ್ಕವನ್ನು ಎಂದಿಗೂ ನರ್ಮದಾಶಂಕರನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವನ ಆವೇಶಮಯ ಮತ್ತು ಸಾಹಸರಮ್ಯಸ್ವಭಾವವು ಅವನನ್ನು ಅವರತ್ತ ಸೆಳೆಯುತ್ತಿತ್ತು. ಅತ್ತ ಅವರಿಗೆ ಕೂಡ ಅವನನ್ನು ದೂರ ಇಡುವಂತೆ ಮನಸ್ಸಾಗುತ್ತಿರಲಿಲ್ಲ. ಅಂತು ೧೮೭೦ ರ ಒಳಹೊರಗೆ ಅವನು ಈ ಎಲ್ಲ ಬೃಹತ್ ಯೋಜನೆಗಳು ಮತ್ತು ಕಾರ್ಯಗಳಲ್ಲಿ ತೊಡಗಿದ್ದಾಗ್ಗೆ ಅವನಿಗೆ ತನ್ನ ಸಮಾಜದವಳೇ ಆಗಿದ್ದ ಒಬ್ಬ ತರುಣ ವಿಧವೆಯ ಸಂಪರ್ಕವು ಒದಗಿಬಂದಿತು. ಕವಿಗೆ ಆಕೆಯ ವಿಷಯವಾಗಿ ಆತ್ಮೀಯತೆ ಯುಂಟಾಯಿತು. ಆ ಮಹಿಳೆಯು ಕೂಡ ಪ್ರತಿಯಾಗಿ ಸ್ಪಂದಿಸಿದಳು. ಪರಿಸ್ಥಿತಿಯು ಗಂಭೀರಸ್ವರೂಪವನ್ನು ತಳೆದು ಆ ಮಹಿಳೆಯು ತನ್ನನ್ನು ಮದುವೆಯಾಗುವಂತೆ ಆತನನ್ನು ಕೇಳಿದಳು. ಕವಿಯು ಅನುಮಾನಕ್ಕೀಡಾದನು. ಆದರೆ ಅದು ಹೇಗೆ ನಡೆದೀತು? ಅವನು ಆಗಲೇ ವಿವಾಹಿತನಾಗಿದ್ದನು, ಮತ್ತು ಆ ಮದುವೆಯು ತೃಪ್ತಿಕರವಾಗಿ ಪರಿಣಮಿಸಿತ್ತು. ಆದರೆ ಆ ವಿಧವೆಗೆ ಅದರ ಪರಿವೆಯಿರಲಿಲ್ಲ. ಅವನು ಯಾವಾಲೂ ವಿಧವೆಯರ ಪುನರ್ವಿವಾಹವನ್ನು ಪ್ರಸ್ತಾಪಿಸುತ್ತಾ ಅನುಮೋದಿಸುತ್ತಾ ಬಂದಿದ್ದಾನೆ, ಈಗ ಅಂತಹ ಸಮಯವೊಂದು ಸನ್ನಿಹಿತವಾದಾಗ್ಗೆ ತನ್ನ ವಿಚಾರಗಳನ್ನು ಕಾರ್ಯರೂಪಕ್ಕೆ ತರದೆ ಓಡಿಹೋಗಬಾರದು ಎಂದು ಆಕೆಯು ಅವನಿಗೆ ಹೇಳಿದಳು. ನರ್ಮದಾಶಂಕರನಿಗೆ ದಿಗಿಲಾಯಿತು. ಅವನು ಮಾಡಬೇಕಾದುದೇನು? ಮದುವೆ ಯಾಗಬೇಕೋ ಬಾರದೋ ಎಂಬುದೇ ಅವನ ಕೂಟಪ್ರಶ್ನೆಯಾಗಿತ್ತು. ಮದುವೆ ಯನ್ನು ಮಾಡಿಕೊಂಡರೆ ಈಗಾಗಲೆ ತನಗೆ ಒಬ್ಬ ಮನೆತನಸ್ಥ ಮಡದಿಯಿದ್ದ ಕಾರಣ ಒಂದು ಅಪ್ರಿಯವಾದ ಉಪಕ್ರಮಕ್ಕೆ ಕೈಹಾಕಿದಂತಾಗುವದು. ವಿವಾಹವಾಗದೆ ಇದ್ದರೆ ತಾನು ಅಲ್ಲಿಯವರೆಗೆ ಸಾರುತ್ತಾ ಬಂದ ವಿಧವೆಯರ ಪುನರ್ವಿವಾಹದ ವಿಚಾರದಿಂದ ಕಾಲ್ತೆಗೆದಂತೆ ಆಗುವದು. ಅವನು ಅನವರತವಾದ ಯೋಚನೆಗೆ ಈಡಾದರೂ ಅದಕ್ಕೆ ಪರಿಹಾರವೇನೂ ಕಾಣಲಿಲ್ಲ. ಅತ್ತ ಆ ವಿಧವೆಯು ಆಡುತ್ತಿದ್ದ ಒಂದೇ ಒಂದು ಮಾತೆಂದರೆ ಮದುವೆಯಾಗಿತ್ತು.

ಅನೇಕ ದಿನಗಳವರೆಗೆ ಅವನೂ ಕೂಡ ಸುದೀರ್ಘವಾದ ವಿಚಾರದನಂತರ ನಂತರ ಅದೇ ನಿರ್ಣಯಕ್ಕೆ ಬಂದನು. ಆ ಮದುವೆಯನ್ನು ತೊರೆದು ಅವನು

ಪಲಾಯನ ಹೂಡಬಾರದು. ಆಗಿನ ಕಾಲದಲ್ಲಿ ಮೊದಲನೆಯ ಮಡದಿಯು ಜೀವದಿಂದ ಇದ್ದರೂ ಎರಡನೆಯ ಮದುವೆಯನ್ನು ಜನರು ಮಾಡಿಕೊಳ್ಳುತ್ತಿದ್ದರು; ಮತ್ತು ಅವನು ತನಗಾಗಿ ಈ ಕಾರ್ಯವನ್ನು ಕೈಕೊಳ್ಳುತ್ತಿರದೆ ಸಮಾಜ ಸುಧಾರಕನು ಮಾಡಬೇಕಾದ ಕಾರ್ಯ ಅದು ಎಂದು ಅವನು ಭಾವಿಸಿದನು. ಹೀಗೆಯೆ ಅಲ್ಲದೆ, ಅದು ನಮ್ಮ ಜನರನ್ನು ಪುಕ್ಕರು ಅಥವಾ ದುಷ್ಟರು ಆಗಿ ರೂಪಿಸುವದು ಎಂದು ಯೋಚಿಸಿದನು. ನರ್ಮದಾಶಂಕರನು ಆ ವಿಚಾರಕ್ಕೇನೂ ಅಪವಾದವಾಗಿರಲಿಲ್ಲ. ಅಂತೆಯೇ ಆತನು ಮದುವೆಗೆ ತನ್ನ ಒಪ್ಪಂದ ನೀಡಿದನು.

ಆದರೆ ಅದರಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಂಡವು. ತನ್ನನ್ನು ಮದುವೆಯಾಗಿ ತನ್ನ ಸಂಗಡ ಬಾಳುವೆಯನ್ನು ನಡೆಯಿಸಿದ ಮೊದಲನೆಯ ಮಡದಿಯ ಗತಿಯೇನು? ಅವನು ಆಕೆಯ ಸಲುವಾಗಿ ಕೆಲವು ಸೂಚನೆಗಳನ್ನು ಮಾಡಿದನು. ಅದರಲ್ಲಿ ಒಂದು ಹೊಸದಾಗಿ ಆ ಮನೆಯಲ್ಲಿ ಇರಲಿಕ್ಕೆಂದು ಬರುವ ಮಹಿಳೆಯೊಡನೆ ತಾನು ಕೂಡ ಅದೇ ಮನೆಯಲ್ಲಿ ಅವನ ಜೊತೆಗೆ ಇರುವದು. ಆ ಸುಸ್ವಭಾವದ ಹಿಂದೂ ಮಡದಿಯಾದ ದಹಿಗೌರಿಯು. ಈ ರೀತಿಯಲ್ಲಿ ನಿರ್ಣಯಿಸಲಿಕ್ಕೆ ಅತ್ಯಂತ ತೊಂದರೆಯಾಗುವಂತಿದ್ದರೂ ಅದೇ ಮಾರ್ಗವನ್ನು ಅನುಸರಿಸಿದಳು.

ನರ್ಮದಾಶಂಕರನು ಈ ವಿಷಯವಾಗಿ ತನ್ನ ಮತ್ತು ತನ್ನ ಪ್ರಥಮ ಪತ್ನಿಯೊಡನೆ ನಡೆದ ಸಂಭಾಷಣೆಯನ್ನು ಮುಂಬರುವ ಜನಾಂಗದ ದೃಷ್ಟಿಯಿಂದ ಗುರುತಿಸಿ ಇಟ್ಟಿದ್ದಾನೆ. ಈ ಸಂವಾದದಲ್ಲಿ ಆತನು ತಾನೇ ಕಳೆಗುಂದಿದ ರೂಪದಲ್ಲಿ ಕಾಣುತ್ತಾನೆ ಮತ್ತು ಒಂದೇ ಒಂದು ಬಾರಿ ಇನ್ನೊಬ್ಬ ವ್ಯಕ್ತಿಯಾದ ಅವನ ಮಡದಿಯು ಉಜ್ವಲವಾದ ಚಿತ್ರಿತವಾಗಿ ಕಾಣುತ್ತಾಳೆ. ಅವನ ಸುಧಾರಕ ಮನೋವೃತ್ತಿ, ಅವನು ಮಹಿಳೆಯರಿಗಾಗಿ ತಳೆಯುತ್ತಿದ್ದ ಗೌರವ, ಅವರ ಸ್ಥಿತಿಯನ್ನು ಸುಧಾರಿಸಬೇಕು ಎಂದು ಅವನು ತಳೆದ ಅಭಿಪ್ರಾಯ, ಇದೆಲ್ಲ ನಿಜವಾಗಿದ್ದರೂ ಈ ಸಂಭಾಷಣೆಯಲ್ಲಿ ನಾವು ಅವನೊಬ್ಬ ಕ್ರೂರನಾದ ಹಿಂದೂ ಗಂಡ, ತಾನು ಗಂಡಸು, ಆಕೆಯು ತನ್ನನ್ನು ನಂಬಿದ ಅವಲಂಬಿಸಿದ ವ್ಯಕ್ತಿ ಹೆಂಗಸು ಎಂಬ ಏಕೈಕ ಕಾರಣದಿಂದ ಆತನು ಮಾತುಗಳೇ ಆಜ್ಞೆಯಂತೆ ಆಕೆಯಿಂದ ಪಾಲಿಸಲ್ಪಡಬೇಕು ಎಂದು ಸಾಧಿಸುವ ಅವನ ಚಿತ್ರವನ್ನು ಕಾಣುತ್ತೇವೆ. ಈ ಚರ್ಚೆಯಿಂದ ನರ್ಮದಾಶಂಕರನಿಗೆ ಒಬ್ಬ ಮನುಷ್ಯ ಎಂಬ ಸಂಬಂಧದಲ್ಲಿ ಗೌರವವನ್ನು ಸಲ್ಲಿಸದಿದ್ದರೂ, ತಾನೇ ಅದೆಲ್ಲವನ್ನೂ ಭವಿಷ್ಯಕ್ಕಾಗಿ ಉಲ್ಲೇಖಿಸಿ ಇಟ್ಟಿರುವನಲ್ಲ ಎಂಬ ಮಾತಿಗಾಗಿ ಅವನಿಗೆ ಶ್ರೇಯಸ್ಸು ಸಲ್ಲಬೇಕು.

ಕೊನೆಯಲ್ಲಿ ಆ ಮದುವೆಯು ಜರುಗಿತು ಮತ್ತು ಅದರ ಪರಿಣಾಮವಾಗಿ ಅವನ ಸಮಾಜವು ಅವನಿಗೆ ಬಹಿಷ್ಕಾರವನ್ನು ಹಾಕಿತು. ಸಮಾಜದ ದೃಷ್ಟಿಯಿಂದ ತಾನು ಜಾತಿಬಾಹಿರನಾದನು; ಆದರೆ ವಾಡಿಕೆಯ ನಿರ್ಭಯದ ನಡತೆಯಲ್ಲಿ ಅವನು ಅದನ್ನು ಗಮನಿಸಲಿಲ್ಲ.

ಆದರೆ ಅವನ ತೊಂದರೆಗಳು ಹೆಚ್ಚಿದವು. ಆರ್ಥಿಕವಾಗಿ ಅವನು ಅಷ್ಟರಲ್ಲಿ ಕಂಗೆಟ್ಟಿದ್ದನು, ಸಾಮಾಜಿಕವಾಗಿ ಬಹಿಷ್ಕೃತನಾಗಿದ್ದನು ಮತ್ತು ಅವನ ಹೊಣೆಯು ಬೆಳೆಯತೊಡಗಿತ್ತು. ಆರೋಗ್ಯವತಿಯಾದ ಅವನ ಹೊಸ ಹೆಂಡತಿಯು ಅವರ ಮದುವೆಯ ಮೊದಲ ವರ್ಷದಲ್ಲಿಯೆ ಗಂಡುಮಗುವೊಂದನ್ನು ಹೆತ್ತು ಹೊಟ್ಟೆಗೆ ಹಾಕಲಿಕ್ಕೆ ಮತ್ತೊಂದು ಜೀವವನ್ನು ಮತ್ತು ಪೋಷಿಸಲಿಕ್ಕೆ ಇನ್ನೊಬ್ಬ ಸದಸ್ಯನನ್ನು ಅವನ ಸಂಸಾರಕ್ಕೆ ಒದಗಿಸಿದಂತಾಯಿತು. ಭಾವನಗರದ ಒಬ್ಬ ಉದಾರಹೃದಯಿಯಾದ ನಾಗರ ಸಜ್ಜನನು, ಅವನ ಕೋಶದ ಪ್ರಕಟನೆಗಾಗಿ ಸಾಕಷ್ಟು ಹಣದ ಸಹಾಯವನ್ನು ನೀಡುವ ಅವಕಾಶವಿದ್ದುದು ಅವನು ತನ್ನ ಪತ್ರಿಕೆಯಾದ ದಂಡಿಯಾದಲ್ಲಿ ಭಾವನಗರದ ನಾಗರ ಜನರ ವಿರುದ್ಧವಾಗಿ ಬರೆದ ಒಂದು ಲೇಖನದಿಂದ ಅವನ ಸಿಟ್ಟಿಗೆ ಗುರಿಯಾದನು. ಅದರಿಂದ ಅವನಿಗೆ ದೊರೆಯಬಹುದಾದ ಅಲ್ಲಿಯ ಸಹಾಯದ ಸಂಭವವು ಕಮರಿದಂತಾಯಿತು.

ಆದರೆ ಅವನು ಹಣವನ್ನು ಗಳಿಸಲೇಬೇಕಾಗಿತ್ತು. ಅದಿಲ್ಲದೆ ಸಾಗುವದಾದರೂ ಹೇಗೆ? ಇಲ್ಲಿಯವರೆಗೆ ಅವನು ಕೈಕೊಳ್ಳದೆ ಉಳಿದ ಒಂದು ಕ್ಷೇತ್ರವಿದ್ದಿತು. ಅದರಲ್ಲಿ ತನಗೆ ಯಶಸ್ಸು ದೊರೆತರೆ ಅವನಿಗೆ ತಕ್ಕಮಟ್ಟಿಗೆ ಹಣವು ಸಿಗುವ ಸಂಧಿಯೊಂದು ಪ್ರಾಪ್ತವಾದಂತೆ ಆಗುವದು. ಅದೆಂದರೆ ಗುಜರಾತಿ ರಂಗಭೂಮಿಗಾಗಿ ಉತ್ತಮವಾದ ನಾಟಕಗಳನ್ನು ಬರೆದು ಕೊಡುವ ಕಾರ್ಯವಾಗಿತ್ತು. ಗುಜರಾತದಲ್ಲಿ ಅಂದು ರಂಗಭೂಮಿಯು ಪ್ರಗತಿಯು ಸಾಕಷ್ಟಾಗಿದ್ದು ಅವನು ಮಾಡಿದ ಪ್ರಯತ್ನಗಳು ಸಫಲವಾಗಬೇಕು ಎಂದು ಅವನು ಭಾವಿಸಿದನು. ಅಂತೆಯೆ ಅವನು ಆ ದಿಸೆಯಲ್ಲಿ ತಕ್ಕ ಮನೋಭಾವವನ್ನು ಮತ್ತು ಯೋಗ್ಯವೆನಿಸುವ ಅರ್ಹತೆಯನ್ನು ಪಡೆದಿರದಿದ್ದರೂ ನಾಟಕಗಳ ರಚನೆಯನ್ನು ಕೈಕೊಂಡನು.

೧೮೭೬ ರಲ್ಲಿ ಅವನು ತನ್ನ ಮೊದಲನೆಯ ನಾಟಕವಾದ 'ರಾಮ ಜಾನಕೀ ದರ್ಶನ'ವನ್ನು ಪ್ರಕಟಿಸಿದಾಗ ಅವನ ದೇಹಶಕ್ತಿಯು ಕ್ಷೀಣವಾಗಿತ್ತು. ತನ್ನ ಜೀವನದ ಮೊದಲಭಾಗದಲ್ಲಿ ಅವನು ತಳೆದ ಉಚ್ಛೃಂಖಲ ವೃತ್ತಿಯು ಈಗ ಅವನ ದೇಹದ ಮೇಲೆ ಪರಿಣಾಮವನ್ನು ಬೀರತೊಡಗಿತ್ತು. ಇತ್ತ ಅವನ ಬರವಣಿಗೆಯ ಕೆಲಸವು ಅನವರತವಾಗಿ ಮತ್ತು ಸತತವಾಗಿ ಮುಂದೆ ಸಾಗಿತ್ತು. ಅದು ಕವಿಗೆ ಸುಖದ ಸಮಯವಾಗಿರಲಿಲ್ಲ.

ಹಾಗೆಯೇ ೧೮೭೬ ರಿಂದ ೧೮೮೧ ರ ವರೆಗಿನ ಅವಧಿಯಲ್ಲಿ ಬರೆದ ನಾಲ್ಕು ನಾಟಕಗಳೇನೂ ಅವನಿಗೆ ಹೆಚ್ಚಿನ ನೆಮ್ಮದಿಯನ್ನು ನೀಡಲಿಲ್ಲ. ಅವುಗಳಿಂದ ಅವನಿಗೆ ಕಿಂಚಿತ್ ಹಣವೇನೋ ಬಂದಿತು; ಆದರೆ ಅವನ ಗೆಳೆಯರಲ್ಲಿ ಕೆಲವರು ಅವನು ಬರೆಯುತ್ತಾ ಬಂದ ಎಲ್ಲ ಪುಸ್ತಕಗಳನ್ನು ಮೆಚ್ಚುವಂತೆ ಈ ನಾಟಕಗಳನ್ನು ಶ್ಲಾಘಿಸಿದರೂ ಸಾಮಾನ್ಯವಾಗಿ ಜನರಲ್ಲಿ ಅವು ಮನ್ನಣೆಯನ್ನು ಪಡೆಯಲಿಲ್ಲ ಮತ್ತು

ಅವನ ಕೀರ್ತಿಗೇನೂ ಕಾರಣವಾಗಲಿಲ್ಲ. ಆದರೆ ಮುಳುಗುತ್ತಿದ್ದ ಮನುಷ್ಯನು ತರಗೆಲೆಯನ್ನು ಹಿಡಿದುಕೊಳ್ಳುವಂತೆ ಅವನು ಆ ಅಯ್ದು ವರ್ಷ ನಾಟಕಗಳನ್ನು ಬರೆಯುತ್ತಲೇ ಸಾಗಿದನು ಮತ್ತು ೧೮೮೩ ರಲ್ಲಿ ಅವನು 'ಬಾಲ ಕೃಷ್ಣ ವಿಜಯ ನಾಟಕ' ಎಂಬ ತನ್ನ ಜೀವನದ ಕೊನೆಯ ನಾಟಕವನ್ನು ಬರೆದನು.

ಈ ದಿನಗಳು ಅವನ ಜೀವನದಲ್ಲಿ ಅತ್ಯಂತ ಕಷ್ಟ ಮತ್ತು ದೈವಪರೀಕ್ಷೆಗಳಿಂದ ತುಂಬಿದ್ದರೂ ಪರಿಹಾರವೇನೋ ಎಂಬಂತೆ ಒಮ್ಮೊಮ್ಮೆ ಸಂತೋಷದ ಪ್ರಸಂಗಗಳೂ ಜರುಗುತ್ತಿದ್ದವು. ಮುಂದೆ ಗುಜರಾತೀ ಸಾಹಿತ್ಯದಲ್ಲಿ ಮೊದಲನೆಯ ಪ್ರಖ್ಯಾತ ವಿಮರ್ಶಕ ಎಂಬ ಹೆಸರನ್ನು ಪಡೆದ ಲೇಖಕನೊಬ್ಬನು ಆಗ್ಗೆ ಉದಯೋನ್ಮುಖನಾಗಿದ್ದನು. ಅವನು ಮೊದಲ ಉತ್ಸಾಹದ ಮತ್ತು ತಾರುಣ್ಯದ ಆವೇಶದಲ್ಲಿ ನರ್ಮದಾಶಂಕರನ ಪ್ರಮುಖ ಅಭಿಮಾನಿಯಾದನು. ಅವನ ಹೆಸರು ನವಲರಾಮ ತ್ರಿವೇದಿ ಎಂದಿದ್ದು ಅವನು ಕೂಡ ನರ್ಮದಾಶಂಕರನಂತೆ ಸೂರತನಗರದ ನಿವಾಸಿಯಾಗಿದ್ದನು. ಅವನು ಒಂದು ಪತ್ರಿಕೆಯಲ್ಲಿ "ಕವಿ ನರ್ಮದಾಶಂಕರ" ಎಂಬ ಲೇಖನವನ್ನು ಬರೆದನು. ಗುಜರಾತೀ ಸಾಹಿತ್ಯದಲ್ಲಿ ಅತ್ಯಂತ ಶ್ರೇಷ್ಠ ಕವಿ ಎಂದು ಇಂದಿಗೂ ಭಾವಿಸಲಾಗಿರುವ ಪ್ರೇಮಾನಂದನಿಗೆ ಆ ಲೇಖನದಲ್ಲಿ ನರ್ಮದಾಶಂಕರನ ಕೆಳಗಿನ ಸ್ಥಾನವು ಕೊಡಲಾಗಿತ್ತು. ಈ ಗೌರವವನ್ನು ನರ್ಮದಾಶಂಕರನು ಸುಮ್ಮನೆ ಸ್ವೀಕಸಿದನಲ್ಲದೆ ಅದರಿಂದ ಸಂತುಷ್ಟನಾದನು. ಮುಂದೆ ಕೆಲವು ಕಾಲದನಂತರ ನವಲರಾಮನಿಗೆ ತನ್ನ ತಪ್ಪಿನ ಅರಿವಾಗಿ ಆತನ ಸ್ಥಾನವನ್ನು ಬದಲಿಸಬೇಕೆಂದು ಯೋಚಿಸಿದಾಗ್ಗೆ ಅದಕ್ಕೆ ನರ್ಮದಾಶಂಕರನು ಒಪ್ಪಲಿಲ್ಲ. ಅವನು ಬರೆದ ಒಂದು ಚಿಕ್ಕ ಟಿಪ್ಪಣಿಯಲ್ಲಿ ನರ್ಮದಾಶಂಕರನು ಹೋಮರನಿಗೆ ಆದರ್ಶ ಮತ್ತು ಸಾರ್ವಕಾಲಿಕನಾದ ದೊಡ್ಡ ಕವಿಯೆಂದು ಗಣಿಸಿ ಅವನ ಹೆಸರಿನಲ್ಲಿ ನೂರು ಗುಣಗಳನ್ನು ಗುರುತಿಸಿ ಇಟ್ಟಿದ್ದನು. ಆಮೇಲೆ ಅವನು ತನ್ನಷ್ಟಕ್ಕೆ ಯೋಚಿಸಿದನು. ಹೋಮರನಿಗೆ ನೂರು ಗುಣಗಳು ಬಂದರೆ ತನಗೆ ಎಷ್ಟು ಗುಣಗಳ ಅರ್ಹತೆಯಿದೆ ಮತ್ತು ಪ್ರೇಮಾನಂದನು ಎಷ್ಟು ಗುಣಗಳನ್ನು ಗಳಿಸಬಹುದು ? ಸುದೀರ್ಘ ಮತ್ತು ಗಂಭೀರ ಎಣಿಕೆಯನಂತರ ಆತನು ಪ್ರೇಮಾನಂದನಿಗೆ ಅರುವತ್ತು ಗುಣಗಳನ್ನು ಮತ್ತು ತನ್ನ ಹೆಸರಿಗೆ ಎಪ್ಪತ್ತನ್ನು ಹಾಕಿದನು—ನಾಚಿಕೆಗೇಡಿಯಂತೆ! ಆ ಅವನ ಟಿಪ್ಪಣಿಯು ಮುಂದಿನ ಜನಾಂಗದ ದೃಷ್ಟಿಯಿಂದ ಇನ್ನೂ ಸುರಕ್ಷಿತವಾಗಿದೆ ಮತ್ತು ಮನುಷ್ಯನ ಸ್ವಪ್ರತಿಷ್ಠೆಯ ಪ್ರೀತಿಯ ಮೇಲೆ ಪಾರದರ್ಶಕವಾದ ಬೆಳಕನ್ನು ಚೆಲ್ಲುತ್ತದೆ. ಅದೇ ಕಾಗದದಲ್ಲಿ ಈ ಕಾಲದ ಸ್ವಲ್ಪ ಮುಂಚಿನ ಕೊನೆಯ ಪ್ರಮುಖ ಕವಿಯೆನಿಸಿದ ಬಡ ದಯಾರಾಮನಿಗೆ ನಾಲ್ವತ್ತು ಗುಣಗಳನ್ನು ಕೊಟ್ಟ. ಅವನ ಕವನಗಳ ವಿಷಯವಾಗಿ ನರ್ಮದಾಶಂಕರನು ಹೆಚ್ಚು ಪರಿಶ್ರಮದ ಸಂಶೋಧನವನ್ನು ಕೈಕೊಂಡು, ಅವುಗಳ ಒಂದು ಸಂಗ್ರಹವನ್ನು ಸಂಪಾದಿಸಿ ೧೮೬೦ ರಲ್ಲಿ ಪ್ರಕಟಿಸಿದ್ದರೂ, ಯಾವುದೇ

ಮಾನದಂಡದಿಂದ ಅವನು ನಿಜವಾಗಿಯೂ ಒಬ್ಬ ದೊಡ್ಡ ಭಾವುಕನಾದ ಕವಿಯೆಂಬುದು ನಿರ್ವಿವಾದವಾಗಿದ್ದರೂ ನರ್ಮದಾಶಂಕರನು ಅವನನ್ನು ಕಡೆಗಣಿಸಿದ್ದನು. ನಮಗೆ ಅದನ್ನು ಕಂಡು ನಗುವು ಬರುತ್ತಿದ್ದರೂ ಆತನು ಮಾತ್ರ ಅದರಿಂದ ಅತೀವ ಸಂತುಷ್ಟನಾಗಿರಲಿಕ್ಕೆ ಸಾಕು.

ಆದರೂ ಕೂಡ ಅವರಿಗೆ ಸಾಂತ್ವನದ ಸನ್ನಿವೇಶಗಳು ಕಡಿಮೆಯಾಗಿ ತೊಂದರೆಗಳು ಬಲಗೊಂಡಿದ್ದವು. ೧೮೭೫ ರಷ್ಟರಲ್ಲಿ ಮನೆತನವನ್ನು ನಡೆಯಿಸುವದು ದುಃಸಾಧ್ಯವಾಯಿತು. ಕವಿಯು ಮತ್ತೆ ಮುಂಬಯಿಗೆ ಸ್ಥಳಾಂತರಿಸಬೇಕು ಎಂಬ ಸೂಚನೆಗಳು ಬಂದವು. ಅಲ್ಲಿ ಅವನ ಅಭಿಮಾನಿಗಳು ಅನೇಕರಿದ್ದಾರೆ ಮತ್ತು ಅವನ ಈ ಕಷ್ಟಕಾಲದಲ್ಲಿ ಅವರು ಅವನಿಗೆ ನೆರವಾಗಬಹುದು ಎಂದು ಹೇಳಲಾಯಿತು.

ಮುಂಬಯಿಗೆ ಹೊರಡಬೇಕು ಎಂಬುದು ದುಷ್ಕರವಾದ ನಿರ್ಣಯವೆನಿಸಿತು. ಆದರೆ ಬೇರೆ ಉಪಾಯವೇ ಇರಲಿಲ್ಲ. ಅಂತು ೧೮೭೫ ರ ಮಾರ್ಚ್ ತಿಂಗಳಲ್ಲಿ ಕವಿಯು ತನ್ನ ಕುಟುಂಬದೊಡನೆ ಮುಂಬಯಿಗೆ ತೆರಳಿದನು.

ಮುಂಬಯಿಯ ಅವನ ಮಿತ್ರರು ಅವನಿಗೆ ಸ್ವಾಗತವನ್ನು ಕೋರಿದರು ಮತ್ತು ಅವನ ಭೆಟ್ಟಿಗಾಗಿ ಅವನ ನಿವಾಸದತ್ತ ಧಾವಿಸಿದರು. ಅದರಲ್ಲಿ ಎಲ್ಲ ಪಂಗಡಗಳ ಜನರಿದ್ದರು. ಅವನನ್ನು ನಿಯಮದಿಂದ ಭೆಟ್ಟಿಯಾಗುತ್ತಿದ್ದ ಹಿಂದೂ ಪ್ರತಿಷ್ಠಿತರಲ್ಲದೆ ಅವರಲ್ಲಿ ನಾನಾಭಾಯಿ ರುಸ್ತಮಜಿ ರಾಣಿನಾರಂತಹ ಪಾರಸಿಗಳೂ ಗಣೇಶ ಶ್ರೀಧರ ಖಾಪರ್ಡೆಯವರಂತಹ ಮಹಾರಾಷ್ಟ್ರೀಯರೂ ಆ ಗುಂಪಿನಲ್ಲಿದ್ದರು. ಅವರ ಸಭೆಗಳಲ್ಲಿ ಎಲ್ಲ ಬಗೆಯ ವಿಷಯಗಳ ಚರ್ಚೆಯು ನಡೆಯುತ್ತಿತ್ತು ಮತ್ತು ಎಲ್ಲ ರೀತಿಯ ವಿವಾದಗಳು ಜರುಗುತ್ತಿದ್ದವು ; ಆದರೆ ಹಣದ ತೊಂದರೆಯ ಮುಖ್ಯ ವಿಷಯವು ಹಾಗೆಯೆ ಉಳಿಯಿತು. ಅವನಿಗೆ ಅಸಂಖ್ಯ ಸ್ನೇಹಿತರಿದ್ದರೂ, ಅವನ ಲೋಕ ಪ್ರಿಯತೆಯಲ್ಲಿ ಪ್ರತಿದಿನ ಹೆಚ್ಚಳವು ಕಂಡಿದ್ದರೂ, ಸಮಾಜದಲ್ಲಿ ಅವನ ಸ್ಥಾನವು ಗಣನೀಯವಾಗಿದ್ದರೂ, ಹಣದ ಮಾತುಗಳು ಮಾತ್ರ ಬರುತ್ತಿರಲಿಲ್ಲ. ದೃಷ್ಟಾಂತವಾಗಿ ಹೇಳಬೇಕಾದರೆ ಬ್ರಹ್ಮವಿದ್ಯಾವಾದಿನಿಯಾದ ಮಡಾಮ್ ಬ್ಲಾವಟ್‌ಸ್ಕಿಯವರು ಮುಂಬಯಿಯಲ್ಲಿದ್ದ ತಮ್ಮ ವಿದ್ಯಾಲಯಕ್ಕೆ ಸಂದರ್ಶನವನ್ನಿತ್ತಾಗ ಕರ್ನಲ್ ಆಲ್‌ಕಾಟ್ ಮತ್ತು ಅನ್ಯಮಿತ್ರರೊಡನೆ ನರ್ಮದಾಶಂಕರನ ನಿವಾಸಕ್ಕೆ ಹೋಗಿ ಅವನ ಭೆಟ್ಟಿಯನ್ನು ಮಾಡಿಕೊಂಡರು. ಅವರು ಪ್ರತಿಪಾದಿಸುತ್ತಿದ್ದ ಹೊಸ ತತ್ವದ ವಿಷಯವಾಗಿ ಅವರು ಕವಿಯ ಸಹಾನುಭೂತಿಗಾಗಿ ಕೇಳಿಕೊಂಡರು. ಕವಿಯು ಅತ್ಯಂತ ಸ್ನೇಹಪರನಾಗಿ ಅವರನ್ನು ಪ್ರತಿಯಾಗಿ ಭೆಟ್ಟಿಯಾದನು ಮತ್ತು ಆಕೆಯು ಬ್ರಹ್ಮಜ್ಞಾನದ ತತ್ವವನ್ನು ವಿವರಿಸುತ್ತಾ ಮಾಡಿದ ಉಪನ್ಯಾಸಗಳ ಅನೇಕ ಸಭೆಗಳಿಗೂ ಹೋಗಿದ್ದನು. ಅದಕ್ಕಿಂತ ಮೊದಲು ಆತನು ಸ್ವಾಮಿ ದಯಾನಂದ ಮತ್ತು ಅವರು ಸ್ಥಾಪಿಸಿದ ಆರ್ಯ ಸಮಾಜದ ಬಗ್ಗೆ ಹೆಚ್ಚು ಆತ್ಮೀಯತೆಯನ್ನು

ತಳೆದಿದ್ದನು. ಆದರೆ ಸಾವಕಾಶವಾದರೂ ದೃಢವಾಗಿ ಅವನು ಅವರ ಪದ್ಧತಿಗಳು ಮತ್ತು ತತ್ವಗಳಲ್ಲಿ ಶ್ರದ್ಧೆಯನ್ನು ಕಳೆದುಕೊಂಡನು ಮತ್ತು ಖಂಡಿತವಾದ ರೀತಿಯಲ್ಲಿ ತನ್ನ ಅಸಮಾಧಾನವನ್ನು ವ್ಯಕ್ತಗೊಳಿಸಿದ್ದನು. ತಾನೇ ಆ ಬಗ್ಗೆ ಅನೇಕ ವ್ಯಾಖ್ಯಾನ ಗಳನ್ನು ಮಾಡಿದ್ದನು ಮತ್ತು ಅವರ ಅನೇಕ ಸಾಹಿತ್ಯಿಕ ಯೋಜನೆಗಳಲ್ಲಿ ಸಹಾಯ ವನ್ನು ಸಲ್ಲಿಸಿ ಮಾರ್ಗದರ್ಶನವನ್ನು ಮಾಡಿದ್ದನು. ಉದಾಹರಣೆಗೆ ನರ್ಮದಾ ಶಂಕರನ ಅಸಂಖ್ಯಾತ ಶಿಷ್ಯರು ಮತ್ತು ಅಭಿಮಾನಿಗಳಲ್ಲಿ ಒಬ್ಬನೆಂದು ತಿಳಿದುಕೊಂಡ ದಿವಂಗತ ಇಚ್ಛಾರಾಮ ಸೂರ್ಯರಾಮ ದೇಸಾಯಿಯು ಮುಂಬಯಿಯಲ್ಲಿ ಒಂದು ವಾರಪತ್ರಿಕೆಯನ್ನು ಹೊರಡಿಸಬೇಕೆಂದು ಯೋಚಿಸಿ ಅದಕ್ಕೆ ಇಡಬೇಕಾದ ಹೆಸರಿಗಾಗಿ ನರ್ಮದಾಶಂಕರನನ್ನು ಕೇಳಿದಾಗ್ಗೆ ಆತನು ಅನುಮಾನವಿಲ್ಲದೆ "ನಾವೆಲ್ಲರೂ ಗುಜರಾತದ ಪ್ರಜೆಗಳಾಗಿದ್ದು ನಾವು ಗುಜರಾತಿಗಳು ಎಂದು ತಿಳಿದುಕೊಳ್ಳಲಿಕ್ಕೆ ಹೆಮ್ಮೆಪಡುತ್ತಿದ್ದ ಕಾರಣ ನಿಮ್ಮ ಪತ್ರಿಕೆಯನ್ನು 'ಗುಜರಾತಿ' ಎಂದೇಕೆ ಕರೆಯ ಬಾರದು?" ಎಂದು ಹೇಳಿದಾಗ್ಗೆ ಇಚ್ಛಾರಾಮನು ಆ ಸೂಚನೆಯನ್ನು ಮನ್ನಿಸಿದನು ಮತ್ತು ಆ ಪತ್ರಿಕೆಯು ಸಕಾಲದಲ್ಲಿ ಹೊರಟಿತು. ಆ ಪತ್ರಿಕೆಯು ಅತ್ಯಂತ ಯಶಸ್ವಿಯಾಗಿ ಗುಜರಾತದ ಪತ್ರಿಕೋದ್ಯಮ ಚರಿತ್ರೆಯಲ್ಲಿ ಅಚ್ಚಳಿಯದ ಉಚ್ಚಸ್ಥಾನ ವನ್ನು ಪಡೆದಿದೆ.

ಇದೆಲ್ಲ ಸನ್ಮಾನ ಮತ್ತು ಕೀರ್ತಿಗೌರವಗಳು ಅವನತ್ತ ಹೇರಳವಾಗಿ ಬಂದರೂ ಹಣದ ಸುಳಿವು ಮಾತ್ರ ಇರಲಿಲ್ಲ. ಒಂದೊಂದು ಸಲ ಮನೆಯಲ್ಲಿ ಅತ್ಯಲ್ಪ ನಗದು ಹಣವಿರುತ್ತಿತ್ತು. ಅವನ ಮಡದಿಯು ಮತ್ತು ಅವನೊಡನೆ ಇರುತ್ತಿದ್ದ ಇನ್ನೊಬ್ಬ ಮಿತ್ರ ಮನೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು ಹಾಗೂ ಅವನಿಗೆ ಈ ಬವಣೆಯು ತಿಳಿಯದಂತೆ ನೋಡಿಕೊಳ್ಳುತ್ತಿದ್ದರೂ ದಿನದಿನಕ್ಕೆ ಪರಿಸ್ಥಿತಿಯು ಹದಗೆಡುತ್ತ ನಡೆದಿತ್ತು. ಈ ರೀತಿಯಲ್ಲಿ ತೊಂದರೆಗಳು ಹೆಚ್ಚಾಗುತ್ತಿದ್ದರೂ ನರ್ಮದಾಶಂಕರನು ಎರಡು ವಿಷಯಗಳನ್ನು ಕೈಕೊಳ್ಳಲಿಲ್ಲ: ಪೂರ್ಣಾವಧಿಯ ಒಂದು ನೌಕರಿಗಾಗಿ ಸಿದ್ಧವಾಗುವದು ಮತ್ತು ಮೊದಲಿಗಿಂತ, ಅಂದರೆ ಸಮೃದ್ಧಿಯ ಸಮಯಕ್ಕಿಂತ ಈಗ ಕಡಿಮೆ ಔದಾರ್ಯವನ್ನು ತೋರಿಸುವುದು. ಆ ದಿನಗಳಲ್ಲಿ ಸಂಭವಿಸಿದ ಒಂದು ಪ್ರಸಂಗವನ್ನು ಭವಿಷ್ಯದ ಜನಾಂಗಗಳಿಗಾಗಿ ದಾಖಲಿಸಲಾಗಿದೆ. ಒಮ್ಮೆ ಒಬ್ಬ ವ್ಯಕ್ತಿಯು ಯಾವುದೋ ಅಗತ್ಯದಿಂದ ಅವನಲ್ಲಿಗೆ ಬಂದು ತನ್ನ ಕಲೆಯಿಂದ ಅವನನ್ನು ಸಂತೋಷಗೊಳಿಸಿದನು. ಕವಿಯ ಬಳಿಯಲ್ಲಿ ಒಂದೇ ಒಂದು ರೂಪಾಯಿಯಿದ್ದಿತು. ಅದನ್ನು ಆತನು ತನ್ನ ಮೆಚ್ಚಿಕೆಯ ಪ್ರತೀಕವೆಂದು ಆ ಕಲಾವಿದನಿಗೆ ಕೊಟ್ಟುಬಿಟ್ಟನು. ಆತನು ಆ ಕಾಣಿಕೆಯನ್ನು ಸ್ವೀಕರಿಸಿದನಷ್ಟೇ ಅಲ್ಲದೆ ತಾನು ಅವನಿಂದ ಇದಕ್ಕೂ ಹೆಚ್ಚಿನ ಬಹುಮಾನ ನಿರೀಕ್ಷೆಯಲ್ಲಿ ಬಂದಿರು ವದಾಗಿ ತಿಳಿಸಿದನು. ಆಗ್ಗೆ ಯಾವ ಸಂಕೋಚವೂ ಇಲ್ಲದೆ ಕವಿಯು ತನ್ನ ಮೈಮೇಲಿನಿಂದ ಬಹು ಮೌಲ್ಯವಾದ ಶಾಲನ್ನು ತೆಗೆದು ಆ ಕಲಾವಿದನಿಗೆ ಕೊಟ್ಟನು.

ಇನ್ನೊಂದು ಪ್ರಸಂಗದಲ್ಲಿ ಅರುವತ್ತು ವರ್ಷ ವಯಸ್ಸಿನ ಮುದುಕನೊಬ್ಬನು ಒಬ್ಬ ಮಿತ್ರನ ಪತ್ರದೊಡನೆ ಕವಿಯ ಕಡೆಗೆ ಬಂದನು. ಯಾವುದಾದರೂ ಒಂದು ಬಗೆಯಲ್ಲಿ ಉದಾರ ನೆರವು ನೀಡಬೇಕೆಂದು ಆ ಗೆಳೆಯ ಶಿಫಾರಸು ಮಾಡಿದ್ದ. ನರ್ಮದಾಶಂಕರನು ಕೂಡಲೆ ತನ್ನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಸಹಾಯಕನತ್ತ ಹೊರಳಿ ಆ ವೃದ್ಧನಿಗೆ ಒಂದುನೂರು ರೂಪಾಯಿಗಳನ್ನು ಕೊಡುವಂತೆ ಅವನಿಗೆ ಹೇಳಿದನು. ಮನೆಯಲ್ಲಿ ಕೇವಲ ಏಳು ರೂಪಾಯಿಗಳು ಇದ್ದುದು ಆ ಕಾರ್ಯದರ್ಶಿಗೆ ತಿಳಿದಿತ್ತು. ಅವನು ನಿಧಾನವಾಗಿ ಆ ವಯಸ್ಕನನ್ನು ಹೊರಗೆ ಕರೆದು ಆ ಹಣಕ್ಕಾಗಿ ಕೆಲವು ದಿನಗಳನಂತರ ಬರುವಂತೆ ತಿಳಿಸಿದನು. ನರ್ಮದಾಶಂಕರನಿಗೂ ಆ ಮಾತು ಕೇಳಿಸಿತು ಮತ್ತು ಅವನಿಗೆ ವಸ್ತುಸ್ಥಿತಿಯು ಅರಿವಾಯಿತು. ಒಂದು ದಿನ ಆತನು ತನ್ನ ಗೆಳೆಯರೊಡನೆ ಸಂತೋಷದಲ್ಲಿದ್ದಾಗ್ಗೆ ಅಂಚೆಯಾಳು ಬಂದು ಅಂದಿನ ಪತ್ರಗಳನ್ನು ಕೊಟ್ಟುಹೋದನು. ಒಂದು ಲಕೋಟೆಯನ್ನು ತೆಗೆದು ನೋಡುವಷ್ಟರಲ್ಲಿ ಅದರಲ್ಲಿ ಒಂದುಸಾವಿರ ರೂಪಾಯಿಗಳ ನೋಟುಗಳಿದ್ದುದು ಕಂಡುಬಂದಿತು. ಅದರ ಸಂಗಡ ಪತ್ರವೇನೂ ಇರದೆ ಕೇವಲ ಒಂದು ಮೊಂಡು ಟಿಪ್ಪಣಿಯಿದ್ದಿತು : " ನಿನ್ನ ಉತ್ತಮ ಮಿತ್ರ ಮತ್ತು ಅಭಿಮಾನಿಯಿಂದ " ಎಂದಿಷ್ಟೆ ಅದರಲ್ಲಿ ಬರೆದಿತ್ತು. ನರ್ಮದಾಶಂಕರನು ತನ್ನ ಕಾರ್ಯದರ್ಶಿಗೆ ಆ ನೋಟುಗಳನ್ನು ಕೊಟ್ಟು " ಇನ್ನೊಮ್ಮೆ ಬರಲಿಕ್ಕೆ ಹೇಳಿದ ಆ ವ್ಯಕ್ತಿಗಾಗಿ ಮೊದಲು ನೂರು ರೂಪಾಯಿಗಳನ್ನು ತೆಗೆದಿಡು. ಉಳಿದ ಹಣವನ್ನು ಮನೆ ಮತ್ತು ಇತರ ಕಾರಣಗಳಿಗೆ ಬಳಸತಕ್ಕದ್ದು " ಎಂದು ಹೇಳಿದನು.

ಒಮ್ಮೊಮ್ಮೆ ಇಂತಹ ಅನಿರೀಕ್ಷಿತ ಲಾಭಗಳು ಒದಗುತ್ತಿದ್ದರೂ ೧೮೭೨ರಲ್ಲಿ ಒಂದು ದಿನ ಮನೆಯಲ್ಲಿ ಏನೂ ಇಲ್ಲದಂತಹ ಸ್ಥಿತಿಯು ಬಂದಿತು. ಕೈಯಲ್ಲಿ ಕೇವಲ ನಾಲ್ಕಾಣೆಯ ಒಂದು ನಾಣ್ಯವಿದ್ದಿತು ; ಮತ್ತೇನೂ ಇರಲಿಲ್ಲ. ಆ ಮೇರೆಗೆ ಕವಿಗೆ ತಿಳಿಸಿದಾಗ್ಗೆ ಆತನು ಸುಮ್ಮನೆ ನಸುನಕ್ಕು " ಇದು ಕೂಡ ಬದುಕಿನ ಒಂದು ಅವಸ್ಥೆ " ಎಂದನು. ಆ ನಾಣ್ಯದಿಂದ ಅವನು ಸ್ವಲ್ಪ ಮಂಡಕ್ಕಿಯನ್ನು ಕೊಂಡು ತರಹೇಳಿ ಅದರದೇ ಆದ ಮಿತವಾದ ಆಹಾರವನ್ನು ಸೇವಿಸಿದನು.

ಅಂದಿನ ಪ್ರಸಂಗವನ್ನು ನರ್ಮದಾಶಂಕರನು ಎಷ್ಟೇ ನಯವಾಗಿ ಮತ್ತು ನಿರ್ಭಯತೆಯಿಂದ ಎದುರಿಸಿದ್ದರೂ ಸ್ಥಿತಿಯು ಮಾತ್ರ ಕಠಿಣವಾಗಿತ್ತು. ಅದರ ನಿವಾರಣೆಗಾಗಿ ಏನನ್ನಾದರೂ ಮಾಡಲೇಬೇಕು ಮತ್ತು ಅದೂ ಸತ್ವರೆಯಿಂದ, ಎಂದು ಅವನ ಮಿತ್ರರಿಗೆ ತೋಚಿತು. ತಮ್ಮ ಮನಸ್ಸಿನಲ್ಲಿ ಇದ್ದುದಕ್ಕೆ ಕವಿಯು ಸಂತೋಷದಿಂದ ಸಮ್ಮತಿಸುವದಿಲ್ಲ ಎಂಬುದನ್ನು ಅವರು ಅರಿತಿದ್ದರು. ಅಂತೆಯೆ ರಹಸ್ಯವಾಗಿ ಮತ್ತು ಏನು ನಡೆದಿದೆ ಎಂಬುದರ ಸುಳಿವು ಕೂಡ ಆತನಿಗೆ ಹತ್ತದಂತೆ ಅವರು ಗೋಕುಲದಾಸ ತೇಜಪಾಲ ವಿಶ್ವಸ್ಥನಿಧಿಯ ಪಂಚರನ್ನು ಕಂಡು ತಮ್ಮ ದಾನ-ವಿಭಾಗದ ಕಾರ್ಯದರ್ಶಿಯೆಂದು ನರ್ಮದಾಶಂಕರನನ್ನು ನೇಮಿಸಿಕೊಂಡು

ಅವನಿಗೆ ತಿಂಗಳೊಂದಕ್ಕೆ ಒಂದುನೂರು ರೂಪಾಯಿಗಳ ಸಂಬಳವನ್ನು ಕೊಡುವಂತೆ ಮನವೊಲಿಸಿದರು.

ಒಂದು ದಿನ ಕವಿಯು ತನ್ನ ಮನೆಯಲ್ಲಿ ಸ್ನೇಹಿತರೊಡನೆ ಹರಟೆ ಹೊಡೆಯುತ್ತ ಕುಳಿತಾಗ್ಗೆ ಅಂಚೆಯಾಳು ಈ ಧರ್ಮನಿಧಿಯ ವಿಶ್ವಸ್ಥರಿಂದ ಬಂದ ದೈವದತ್ತ ಪತ್ರವನ್ನು ಕೊಟ್ಟುಹೋದನು. ನರ್ಮದಾಶಂಕರನು ಆ ಪತ್ರವನ್ನು ಒಡೆಯುತ್ತ ಓದಿದೊಡನೆ ಅವನ ಕಣ್ಣುಗಳಲ್ಲಿ ನೀರು ಮಡುವುಗಟ್ಟಿತು. ಅಲ್ಲಿ ನೆರೆದಿದ್ದ ಗೆಳೆಯರಿಗೆ ಅದರ ಎಲ್ಲ ವಿಷಯವು ತಿಳಿದಿದ್ದರೂ ಆ ಪತ್ರದಿಂದ ಕವಿಯ ಮೇಲೆ ಆದ ಪರಿಣಾಮವನ್ನು ಅವರು ಶಾಂತ ರೀತಿಯಿಂದ ಅವಲೋಕಿಸುತ್ತಿದ್ದರು. ಒಂದು ಶಬ್ದವನ್ನು ನುಡಿಯದೆ ನರ್ಮದಾಶಂಕರನು ಆ ಪತ್ರವನ್ನು ಅಲ್ಲಿ ಬಂದಿದ್ದ ಮಿತ್ರರಲ್ಲಿ ಒಬ್ಬನ ತೊಡೆಯ ಮೇಲೆ ಎಸೆದನು.

ಕೆಲಹೊತ್ತು ಯಾರೂ ಮೌನವನ್ನು ಮುರಿಯಲಿಲ್ಲ. ಕೊನೆಗೆ ನರ್ಮದಾ ಶಂಕರನೇ ಮಾತುಗಳನ್ನು ಆರಂಭಿಸಿದನು. ಅವನ ದನಿಯು ಗದ್ಗದಿತವಾಗಿತ್ತು. "ಹಾಗಾದರೆ ಸ್ಥಿತಿಯು ಇಲ್ಲಿಯವರೆಗೆ ಬಂದಿದೆಯಲ್ಲವೆ? ನಾನು ಈ ಇಪ್ಪತ್ನಾಲ್ಕು ವರ್ಷಗಳವರೆಗೆ ಯಾವ ಚಾಕರಿಯನ್ನೂ ಹಿಡಿಯಬಾರದೆಂದು ತಡೆದವನು, ಈಗ ಈ ಇಪ್ಪತ್ನಾಲ್ಕು ವರ್ಷಗಳನಂತರ ನಾನು ಸೇವಾವೇಷವನ್ನು ತೆಪ್ಪಗೆ ಸ್ವೀಕರಿಸ ಬೇಕಲ್ಲವೆ! ನಿಮಗೆಲ್ಲರಿಗೆ ಅದು ಇಷ್ಟವಾಗಿದೆ, ಅಲ್ಲವೆ? ಆಗಲಿ ಹಾಗಾದರೆ, ಹಾಗೆಯೆ ನಡೆಯಲಿ. ನಾನು ಆ ಕೆಲಸಕ್ಕೆ ಒಪ್ಪುವೆನು. ಆದರೆ ಆ ವಿಷಯವಾಗಿ ನಾನು ನಿಮಗೆಲ್ಲರಿಗೆ ಒಂದು ಮಾತನ್ನು ಹೇಳಬಯಸುವೆ. ಈ ಆಘಾತವನ್ನು ನನ್ನ ಹೃದಯವು ಹೆಚ್ಚುಕಾಲ ಸಹಿಸಲಾರದು. ನನ್ನ ಕೊನೆಯು ಸಮೀಪದಲ್ಲಿ ಇದೆ ಎಂದು ನನಗೆ ಭಾಸವಾಗುತ್ತಿದೆ."

ಕವಿಯು ಆಡಿದ ಮಾತುಗಳಿಂದ ಅವರೆಲ್ಲರ ಕಣ್ಣುಗಳು ತೇವಗೊಂಡವು; ಆದರೆ ಗತ್ಯಂತರವಿರಲಿಲ್ಲ. ಅವರೆಲ್ಲರೂ ಭಾರವಾದ ಹೃದಯದಿಂದ ಹೊರಟು ಹೋದರು—ಅವನ ನಿಷ್ಠಾವಂತ ಮೊದಲ ಮಡದಿ ದಹಿಗೌರಿಯನ್ನುಳಿದು. ಆಗ್ಗೆ ಕವಿಯು ಆಕೆಯನ್ನು ಕುರಿತು "ನಿನ್ನ ಅರಸನು ಈಗ ದಾಸನಾಗಲಿದ್ದಾನೆ, ಪ್ರಿಯೆ" ಎಂದನು. ಆ ಬಡ ಹೆಂಗಸು ಗತಿಗೆಟ್ಟು ಕಣ್ಣೀರನ್ನು ಮಾತ್ರ ಸುರಿಸಿದಳು.

ಆ ಬಗ್ಗೆ ನಿರ್ಣಯವನ್ನು ಕೈಕೊಳ್ಳಲು ಮುಂದೆ ಏಳೆಂಟು ದಿನಗಳು ಹಿಡಿದವು. ಸದ್ಯದ ಸ್ಥಿತಿಯಲ್ಲಿ ನರ್ಮದಾಶಂಕರನು ಆ ಕೆಲಸವನ್ನು ಹಿಡಿಯಬೇಕೆಂದು ನಿರ್ಧರಿಸಲ್ಪಟ್ಟಿತು. ಕೊನೆಯಲ್ಲಿ ಅದಕ್ಕೆ ಆತನೂ ಕೂಡ ಒಪ್ಪಿದನು. ಒಂದು ದಿನ ಬೆಳಗಿನ ಹತ್ತು ಗಂಟೆಗೆ ನರ್ಮದಾಶಂಕರನು ಆ ಧರ್ಮಾರ್ಥ ಸಂಸ್ಥೆಯ ಕಾರ್ಯಾಲಯಕ್ಕೆ ಅದರ ಒಬ್ಬ ಆಳಿನೊಡನೆ ಹೊರಟನು. ಆ ಸಮಯದಲ್ಲಿ ಖಾಪರ್ಡೆ ಮತ್ತು ಬೇರೆ ಗೆಳೆಯರು ಅಲ್ಲಿ ಇದ್ದರು. ಕವಿಯು ಅವರತ್ತ ಹೊರಳಿ "ಗೆಳೆಯರೆ, ನಾನು ಇಪ್ಪತ್ನಾಲ್ಕು ವರ್ಷಗಳ ತರುವಾಯ ನೌಕರಿಯೊಂದಕ್ಕೆ ಹೊರಟ

ದ್ದೇನೆ. ಈಗ ಇಪ್ಪತ್ನಾಲ್ಕು ವರ್ಷಗಳ ಕೆಳಗೆ ನಾನು ಸರಸ್ವತಿಯ ಸೇವೆಯೊಂದನ್ನು ಮಾತ್ರ ಕೈಕೊಳ್ಳುವೆನು ಎಂದು ಮಾಡಿದ ಪ್ರತಿಜ್ಞೆಯಂತೆ ಈಗ ನಡೆಯುವದಾಗಲಿಲ್ಲ" ಎಂದನು. ಆನಂತರ ಅವನು ಮ್ಲಾನವಾದ ಒಂದು ನಗುವನ್ನು ಬೀರಿ "ಇತ್ತ ನೋಡಿರಿ, ನಾನು ಈಗ ದಾಸ್ಯದತ್ತ ನಡೆದಿದ್ದೇನೆ" ಎಂದನು. ಅಲ್ಲಿ ಸೇರಿದ್ದ ಎಲ್ಲ ಜನರ ಕಣ್ಣುಗಳಲ್ಲಿ ನೀರು ತುಂಬಿತ್ತು. ಅವನ ಜೀವನ ಚರಿತ್ರಕಾರನಾದ ನವಲರಾಮನು ಅಂದಿನಿಂದ ಅವನ ಸಾವಿನ ದಿನದವರೆಗೆ ನರ್ಮದಾಶಂಕರನ ಮುಖದಲ್ಲಿ ನಗುವಿನ ರೇಖೆಯೊಂದು ಕೂಡ ಕಾಣಲಿಲ್ಲ ಎಂದು ಉಲ್ಲೇಖಿಸಿದ್ದಾನೆ.

ಈ ದಿನಗಳಲ್ಲಿ ಅವನ ಹೊರಗಿನ ಸ್ಥಿತಿಗತಿಯಲ್ಲಿ ಅಷ್ಟೇ ಅಲ್ಲದೆ ಅಂತರಂಗದ ಅವಸ್ಥೆಯಲ್ಲಿ ಕೂಡ ಪರಿವರ್ತನೆಯಾಗಿತ್ತು. ಆ ಮನೋಭಾವವು ಮೊದಲು ಆತನು ಇಟ್ಟುಕೊಂಡ ಬಲವಾದ ಮತ್ತು ಕ್ರಾಂತಿಕಾರಕ ವಿಚಾರಗಳ ಮೇಲೆಯೂ ತನ್ನ ಪ್ರಭಾವವನ್ನು ಬೀರಿತು. ತಾನು ಮತ್ತು ಅನ್ಯರು ಪ್ರತಿಪಾದಿಸಿದ ಸಮಾಜ ಸುಧಾರಣೆಯ ಮಾತುಗಳು ಮೊದಲಿನಂತೆ ಅವನಿಗೆ ಆಕರ್ಷಕವಾಗಿರಲಿಲ್ಲ. ಸುಧಾರಕರು ಕೂಡ ಮನುಷ್ಯರೇ ಆಗಿದ್ದು ಅವರು ಹೇಳುವ ಸುಧಾರಣೆಗಳು ಅವಿಚಾರ ಮತ್ತು ಅಯೋಗ್ಯವೆನಿಸಿ ಅವು ಭಾರತದಲ್ಲಿ ಜನತೆಯ ಮನ್ನಣೆಯನ್ನು ಪಡೆದಿಲ್ಲ ಎಂದು ಅವನು ಭಾವಿಸಿದನು. ಚರಿತ್ರೆಯನ್ನು ಅವನು ಓದಿದ ಪ್ರಭಾವ, ಉದ್ಗ್ರಂಥಗಳನ್ನು ಅವನು ಅಭ್ಯಸಿಸಿದ ರೀತಿ, ಸುಧಾರಣೆಗಳ ಆಂದೋಲನವನ್ನು ಅವನೇ ಅವಲೋಕಿಸಿದ ದೃಷ್ಟಿ ಈಗಿನ ಪಕ್ವವಯಸ್ಸಿನಲ್ಲಿ ಅವನು ಕೈಕೊಂಡ ಧ್ಯಾನದ ಫಲ ಇವಲ್ಲದೆ ಇನ್ನೂ ಅನೇಕ ವಿಷಯಗಳು ಅವನು ತನ್ನ ಇಡಿಯ ಜೀವನದಲ್ಲಿ ತಪ್ಪುದಾರಿಯನ್ನು ಹಿಡಿದುದಾಗಿಯೂ, ಅವನ ಎದುರಿಸಿದ ಎಲ್ಲ ಸಮಸ್ಯೆಗಳ ಪುನರ್ವಿಚಾರವು ಅಗತ್ಯವಾಗಿದೆಯೆಂದೂ ಅವನಿಗೆ ಮನದಟ್ಟಾಯಿತು. ಅಂತು ಅವನು ಆ ಪುನರ್ವಿಮರ್ಶೆಯಲ್ಲಿ ತೊಡಗಿ ತನ್ನ ಪರಿಷ್ಕೃತ ವಿಚಾರಗಳನ್ನು ಕುರಿತು ಲೇಖನಗಳನ್ನು ಬರೆದನು. ತನಗೆ ವಿಸ್ಮಯವಾಗುವಂತೆ ಮತ್ತು ಅನ್ಯರಿಗೆ ಸಂಕೋಚಿತವೆನಿಸುವಂತೆ ಆತನು ಈಗ ಸಾವಧಾನವಾಗಿಯಾದರೂ ನಿಶ್ಚಯವಾಗಿ ಧಾರ್ಮಿಕತೆಯತ್ತ, ಮೊದಲು ತಾನು ಅದನ್ನು ದ್ವೇಷಿಸುತ್ತಿದ್ದರೂ ಈಗ, ಒಲಿಯುತ್ತಿರುವಂತೆ ತೋರಿತು. ಆದರೆ ಅವರಿಗೆ ತನ್ನ ಧಾರಣೆಯ ಬಗ್ಗೆ ಧೈರ್ಯವಿತ್ತು ಮತ್ತು ಆತನ ಈ ಹೊಸ ನಿರ್ಧಾರಗಳನ್ನು ಮೊದಲು ತದ್ವಿರುದ್ಧವಾದ ನಿರ್ಣಯಗಳನ್ನು ಪ್ರತಿಪಾದಿಸುತ್ತಿದ್ದು ಈಗ್ಗೆಯೂ ಅಷ್ಟೇ ಸಬಲವಾಗಿ ಮತ್ತು ಮುಕ್ತಕಂಠದಿಂದ ಘೋಷಿಸುತ್ತಿದ್ದನು. ಅವನು ಹಿಂದೆ ವೈಷ್ಣವ ಮಹಾರಾಜರೊಡನೆ ವಾಗ್ವಾದಕ್ಕೆ ಹೊರಟಾಗ ಜನರು ಅವನನ್ನು ತನ್ನ ವಿಚಾರಗಳಿಗೆ ಕೊಲ್ಲಬಹುದು ಎಂಬುದು ಭಯವೆನಿಸದಿದ್ದಂತೆಯೆ ಈಗ ಕೂಡ ತನ್ನ ಮತಪರಿವರ್ತನೆಗಾಗಿ ಜನರು ತನ್ನ ಹಾಸ್ಯ ಮಾಡಬಹುದು ಎಂಬ ಭಯವೂ ಅವನನ್ನು ತಟ್ಟಲಿಲ್ಲ. ಅವನು ಬರೆದ ಈ ಲೇಖನಗಳು ಹಲವು ವರ್ಷಗಳವರೆಗೆ ಪ್ರಕಟಗೊಂಡವು. ಮತ್ತು ಅನೇಕ ಸಮಸ್ಯೆ

ಗಳನ್ನು ಚರ್ಚಿಸಿದವು. ಅವನು ನಿಧನ ಹೊಂದಿದ ವರ್ಷವಾದ ೧೮೮೬ರಲ್ಲಿ ಈ ಲೇಖನಗಳ ಬಹುಪಾಲನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಗಿದೆ. ಅವನು ಸಂಪೂರ್ಣವಾಗಿ ಬದಲಾದ ಮನೋಭಾವವನ್ನು ತಳೆದಿದ್ದುದನ್ನು ಅದು ಪ್ರತಿಬಿಂಬಿಸುತ್ತದೆ. ಈ ಗ್ರಂಥಕ್ಕೆ ಯಥಾರ್ಥವಾಗಿ ' ಧರ್ಮ-ವಿಚಾರ ' ಎಂದು ಹೆಸರಿಸಲಾಗಿದೆ.

ಈ ಹೊತ್ತಗೆಯ ಪ್ರಕಾಶನದಿಂದ ಒಂದು ಬಿರುಗಾಳಿಯೇ ಎದ್ದಿತು. ಜನರಿಗೆ ಸಿಟ್ಟಿನಷ್ಟೇ ಆಶ್ಚರ್ಯವೂ ಆಯಿತು. ಅವನ ವಿಚಾರಗಳು ಮತ್ತು ಆದರ್ಶದಲ್ಲಿ ಆದ ಸಂಪೂರ್ಣ ಕಾಯಾಪಲ್ಲಟದಿಂದ ಆದ ವಿಸ್ಮಯದ ಅಂಶವು ಅವನು ತೀರಿಕೊಂಡು ಈಗ ತೊಂಬತ್ತು ವರ್ಷಗಳಾದರೂ ಕಣ್ಮರೆಯಾಗಿಲ್ಲ. ಅವನ ಜೀವನದ ಅಭ್ಯಾಸಿಗಳಾದ ಜನರು ಈಗ್ಗೆಯೂ ದಿಕ್ಕುಗೆಟ್ಟು ಅವನ ಈ ತಿಳಿಯಲಾರದ ವಿಚಾರಭೇದದ ತೋರಿಕೆಯ ಸಮಸ್ಯೆಯು ಅರ್ಥವಾಗದೆ ಏನೋ ಊಹಾಪೋಹದಲ್ಲಿ ಕಂಗೆಡುತ್ತಿರುವದನ್ನು ನಾವು ನೋಡುತ್ತೇವೆ.

ಆದರೆ ಅವನ ಮೇಲುಮೇಲೆ ಅಸಂಬದ್ಧ ಪರಿವರ್ತನೆಯೆಂದು ತೋರುವ ಭಾವದಲ್ಲಿ ಸಮತೋಲನವಿದ್ದುದು ನಿಜವೆ. ಇಡಿಯ ವಿಷಯದತ್ತ ಸೂಕ್ಷ್ಮವಾಗಿ ನೋಡಿದರೆ ಅದರ ಸ್ಪಷ್ಟತೆಯು ಗೋಚರಿಸದಿರದು. ಈ ಹೊಸ ಪಾತ್ರದಲ್ಲಿ ಕಂಡುಬರುವ ವ್ಯಕ್ತಿಯು ಅದೇ ಹಟದ, ವಿಕ್ಷಿಪ್ತ, ಸಮನ್ವಯಕ್ಕೆ ಒಪ್ಪದ, ನಿರ್ಭಯ ಮನುಷ್ಯನಾಗಿದ್ದಾನೆ. ಮೊದಲಿನ ರೂಪದಲ್ಲಿ ಕಂಡುಬಂದ ಅದೇ ಉದ್ವಿಗ್ನತೆ ಮತ್ತು ವಾದಕ್ಕೆ ಸಿದ್ಧವಾಗದ ಹಟಗಳ ಸ್ವಭಾವವೇ ಈಗ್ಗೆಯೂ ಅವನದಾಗಿದ್ದು ಈಗಿನ ವೇಷದಲ್ಲಿ ಅದು ವಿವೇಚನೆಯ ಕಾರಣಗಳಿಂದ ಆಚ್ಛಾದಿತವಾಗಿ ಪಕ್ವವಾದ ಗದ್ಯಲೇಖನದಲ್ಲಿ ಅಭಿವ್ಯಕ್ತವಾಗಿದೆ.

ಈ ಎಲ್ಲ ಮಾನಸಿಕ ಮತ್ತು ಪ್ರಾಪಂಚಿಕ, ಭೌತಿಕ ಹಾಗೂ ಪಾರಮಾರ್ಥಿಕ ತೊಂದರೆ ಹಾಗೂ ಕ್ರಮಗಳು ನರ್ಮದಾಶಂಕರನಂತಹ ಸದೃಢ ಮನುಷ್ಯನ ಪ್ರಕೃತಿಯ ಮೇಲೆಯೂ ಪರಿಣಾಮವನ್ನು ಮಾಡುವಷ್ಟು ಬಲವಾಗಿದ್ದವು. ಅವನು ಸಾಯುವದಕ್ಕಿಂತ ಮೊದಲು ಎಷ್ಟೋ ದಿನ ಅವನ ಆರೋಗ್ಯವು ಹಾಳಾಗಿಹೋಗಿತ್ತು. ಅವನು ಕೆಲಸಮಾಡುತ್ತಿದ್ದ ಕಾರ್ಯಾಲಯದಲ್ಲಿ ಆ ಧರ್ಮದರ್ಶಿಗಳು ಹೊಸ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹವಣಿಸುತ್ತಿದ್ದುದರಿಂದ ಅವುಗಳಿಗೆ ನಿಕಟವಾದ ಸಂಪರ್ಕವಿದ್ದ ಈತನ ಮೇಲೆ ಕೆಲಸದ ಭಾರವು ಹೆಚ್ಚಾಯಿತು. ಆ ಕಾರಣವಾಗಿ ಆತನು ಮನೆಯಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ಕೆಲಸಮಾಡಬೇಕಾಗಿತ್ತಲ್ಲದೆ, ಹಗಲು ಹೊತ್ತಿನಲ್ಲಿ ನಿಯಮಿತವಾಗಿ ಕಾರ್ಯಾಲಯದಲ್ಲಿ ಕೆಲಸಕ್ಕೆ ಹೋಗಬೇಕಾಗುತ್ತಿತ್ತು. ಈ ಭಾರವನ್ನು ಅವನಿಗೆ ತಡೆಯುವದಾಗಲಿಲ್ಲ ಮತ್ತು ಆ ಕಾರಣವಾಗಿ ಅವನು ಹಸಿವೆಯನ್ನು ಕಳೆದುಕೊಂಡನು, ಅವನ ದೇಹದ ತೂಕವು ಅದರಿಂದ ಕಡಿಮೆಯಾಯಿತು. ಒಂದೆರಡು ಬಾರಿ ಅವನು ಎಚ್ಚರ ತಪ್ಪಿ ಬಿದ್ದನು

ಕೂಡ. ಆದರೂ ಆತನು ಮುಂದುವರಿದನು; ಆದರೆ ಅದು ಹೆಚ್ಚುಕಾಲ ನಡೆಯಲಿಲ್ಲ. ೧೮೮೫ರಲ್ಲಿ ಆತನು ತನ್ನ ಕೆಲಸವನ್ನು ಬಿಟ್ಟುಕೊಟ್ಟನು. ಅದರ ನಂತರ ಅವನಿಗೆ ದೊರೆತ ವಿಶ್ರಾಂತಿಯಿಂದ ಹೆಚ್ಚು ಪ್ರಯೋಜನವಾಗಲಿಲ್ಲ; ಯಾಕೆಂದರೆ ಅವನ ಶರೀರವು ಕೊರಗುತ್ತ ಸಾಗಿತ್ತು. ಅದು ಸಂಧಿವಾತ ಮತ್ತು ಅಂತಹ ಬೇರೆ ಬೇನೆಗಳಿಂದ ಸಂಪೂರ್ಣ ಜರ್ಜರಿತವಾಗಿತ್ತು. ಅವನ ಡಾಕ್ಟರ್ ಮಿತ್ರರು ಅವನ ವೇದನೆಯನ್ನು ಕಡಿಮೆಮಾಡಲಿಕ್ಕೆ ಶಕ್ತಿಮೀರಿ ಹೆಣಗಿದರೂ ಅದು ಹೆಚ್ಚಾಗುತ್ತಾ ನಡೆಯಿತು. ಅದಕ್ಕೆ ಯಾವ ಪರಿಹಾರವೂ ಇರಲಿಲ್ಲ.

ಅವನು ಅಯ್ವತ್ತೂರು ವರ್ಷದವನಿದ್ದಾಗ ೧೮೮೬ರ ಫೆಬ್ರವರಿ ೨೬ನೆಯ ದಿನಾಂಕ ಕಾಲವಶನಾದನು. ಆ ದಿನ ಮಧ್ಯಾಹ್ನದಲ್ಲಿ ಅವನ ಇಬ್ಬರು ಹೆಂಡಂದಿರು ಮತ್ತು ಮಗನ ಸಾನ್ನಿಧ್ಯದಲ್ಲಿ ಮತ್ತು ಅವನ ಕೆಲಜನ ಆಜೀವ ಮಿತ್ರರ ಸಮ್ಮುಖದಲ್ಲಿ ಈ ಸಾಹಸಿಯಾದ ಚೈತನ್ಯಮಯ ವ್ಯಕ್ತಿಯು, ಗುಜರಾತೀ ಸಾಹಿತ್ಯದ ಆಧುನಿಕ ಯುಗದ ಈ ಪ್ರವರ್ತಕನು, ಗುಜರಾತದ ಸಾಹಿತ್ಯಿಕ ಮತ್ತು ಸಾಮಾಜಿಕ ಪ್ರಪಂಚದಲ್ಲಿ ಪ್ರಬಲ ಧುರೀಣನು ತನ್ನ ಪಾರ್ಥಿವ ಶರೀರವನ್ನು ತೊರೆದನು.

## ೧೦

ಅವನು ಹುಟ್ಟಿ ಒಂದುನೂರಾನಾಲ್ವತ್ತೆರಡು ವರ್ಷಗಳನಂತರ ಮತ್ತು ಅವನು ತೀರಿಕೊಂಡು ಎಂಬತ್ತೊಂಬತ್ತು ವರ್ಷಗಳ ತರುವಾಯ ಅವನ ವ್ಯಕ್ತಿತ್ವ ಮತ್ತು ಕಾರ್ಯಗಳ ವಿಷಯವಾಗಿ ಹಿಂದಿರುಗಿ ನೋಡಿದರೆ ಅವರ ಅದ್ಭುತ ಉತ್ಸಾಹ ಮತ್ತು ಅದಮ್ಯ ಆಸಕ್ತಿಯ ಸಲುವಾಗಿ ಯಾರಾದರೂ ವಿಸ್ಮಯಗೊಳ್ಳಬಹುದು ಮತ್ತು ಅದರ ಬಗ್ಗೆ ಗೌರವವನ್ನು ತಳೆಯಬಹುದು. ನರ್ಮದಾಶಂಕರನು ತನ್ನ ಎದುರಿನಲ್ಲಿ ಬಂದ ಒಳಿತು ಮತ್ತು ಕೆಡಕುಗಳೆಲ್ಲವನ್ನೂ ತನ್ನ ಕೆಲಸದ ಓಘದಲ್ಲಿ ಸೆಳೆದುಕೊಂಡು ಆ ಕ್ಷಣದಲ್ಲಿ ತನ್ನ ಆವೇಶಪೂರ್ಣ ನಿರ್ಣಯಕ್ಕೆ ಒಳಗಾದ ಗುರಿಯತ್ತ ನೇರವಾಗಿ ನುಗ್ಗುತ್ತಿದ್ದನು. ಅವನು ತಪ್ಪುಗಳನ್ನೇನೊ ಮಾಡಿದನು; ಆದರೆ ತಪ್ಪುಗಳನ್ನು ಯಾರು ಮಾಡುವದಿಲ್ಲ? ಅದಕ್ಕಾಗಿ ಅವನು ದಂಡವನ್ನು ತೆತ್ತನು. ಪ್ರಮಾದಗಳಾಗಲಿ, ಆಗದಿರಲಿ; ಯಶಸ್ಸು ಬರಲಿ, ಬಾರದೆ ಇರಲಿ— ಅವನು ತನ್ನ ಕಾರ್ಯಜೀವನದ ಕೊನೆಯ ಕ್ಷಣದವರೆಗೆ ಕೆಲಸದಲ್ಲಿ ಮಗ್ನನಾಗಿದ್ದನು ಮತ್ತು ತಾನು ಸತ್ಯ ಎಂದು ತಿಳಿದುದನ್ನು ಹೇಳುತ್ತಿದ್ದನು. ಅವನು ಒಮ್ಮೆ ಸತ್ಯ ಎಂದು ಪ್ರತಿಪಾದಿಸಿದುದು, ಅವರ ಬದುಕಿನ ಉತ್ತರಭಾಗದಲ್ಲಿ ತಾನು ಸಾರುತ್ತಿರುವ ಸತ್ಯಕ್ಕೆ ವಿರೋಧವಾಗಿದ್ದರೂ! ಅಂತೆಯೆ ಈಗ ಅವನ ಜೀವನದ ಪ್ರಮುಖ ಅಂಶಗಳನ್ನು ರೇಖಿಸಿದ ಮೇಲೆ ವ್ಯಕ್ತಿ ಮತ್ತು ಲೇಖಕ ಎಂಬ ಸಂಬಂಧದಲ್ಲಿ ಆತನ

ಕಾರ್ಯವನ್ನು ಮತ್ತು ಕಾಣಿಕೆಯನ್ನು ಸರಿಯಾಗಿ ತೂಗಿ ಮೌಲ್ಯಮಾಪನ ಮಾಡುವದೇನು ತಪ್ಪೆನಿಸಲಿಕ್ಕಿಲ್ಲ.

ನಮಗೆ ಈ ಮೊದಲೆ ತಿಳಿದಂತೆ ನರ್ಮದಾಶಂಕರನು ಗುಜರಾತದ ಜನರಿಗೆ ನರ್ಮದ ಕವಿ ಅಥವಾ ಕವಿ ನರ್ಮದಾಶಂಕರ ಎಂದು ಪರಿಚಿತನಾಗಿದ್ದಾನೆ. ಅವನ ಇತರ ಗುಣಗಳನ್ನು ಮತ್ತು ಸಾಹಿತ್ಯ ನಿರ್ಮಾಣವನ್ನು ಯಾವಾಗಲೂ ನೆನಸಿಕೊಳ್ಳಲಿ ಅಥವಾ ಮರೆಯಲಿ ಅವನು ಕವಿಯಾಗಿದ್ದ ಎಂಬ ಒಂದು ಮಾತನ್ನು ಜನರೆಲ್ಲ ತಪ್ಪದೆ ಸ್ಮರಿಸುವರು ಮತ್ತು ಉಲ್ಲೇಖಿಸುವರು. ಅಂತೆಯೆ ಅವನು ಕಾವ್ಯಲೋಕಕ್ಕೆ ಮಾಡಿದ ಕಾಣಿಕೆಯನ್ನು ಕುರಿತು ಮೊದಲು ಯೋಚಿಸುವದು ಹೆಚ್ಚು ಯಥಾರ್ಥ ವೆಂದು ತೋರುತ್ತದೆ.

ನರ್ಮದನು ತನ್ನ ಬಹುತರ ಎಲ್ಲ ಕವನಗಳನ್ನು ಬರೆದ ಪ್ರತ್ಯಕ್ಷ ಅವಧಿಯು ೧೮೫೫ ರಲ್ಲಿ ಅವನು ತನ್ನ ಮೊದಲ ಕೃತಿಯನ್ನು ರಚಿಸಿದಂದಿನಿಂದ ೧೮೬೬ ರಲ್ಲಿ ಅವನು ಕಾವ್ಯಪ್ರಪಂಚಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಲಾರದಂತಾಗಿನವರೆಗೆ ಕೇವಲ ಹನ್ನೊಂದು ವರ್ಷಗಳದ್ದಾಗುತ್ತದೆ. ಆದರೆ ಆ ಹನ್ನೊಂದು ವರ್ಷಗಳಲ್ಲಿ ಆತನು ವಿಪುಲವಾಗಿ ಕಾವ್ಯರಚನೆಯನ್ನು ಕೈಕೊಂಡು ನಮಗೆ ತಿಳಿದಂತೆ ಸಾಹಿತ್ಯದ ಆ ಪ್ರಕಾರಕ್ಕೆ ತಾನು ಸಲ್ಲಿಸಿದ ಸೇವೆಗಾಗಿ ತುಂಬ ಹೆಮ್ಮೆಪಡುತ್ತಿದ್ದನು. ಗುಜರಾತಿಯ ಆಧುನಿಕ ಕಾವ್ಯನಿರ್ಮಾಣದಲ್ಲಿ ಆತನು ಆದ್ಯ ಪ್ರವರ್ತಕನಾಗಿದ್ದನು ಎಂಬ ಮಾತಿನಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಅವನು ಗುಜರಾತದ ಜೀವನ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಉದಯಿಸಿದಾಗ ಅಲ್ಲಿ ಮಧ್ಯಕಾಲದಿಂದ ಆಧುನಿಕಯುಗಕ್ಕೆ ಆಗ ಪರಿವರ್ತನವಾಗುವ ಪರ್ವಕಾಲ ವಾಗಿತ್ತು. ಅಷ್ಟರಲ್ಲಿ ಬ್ರಿಟಿಷರ ಆಧಿಪತ್ಯವು ಭಾರತದಲ್ಲಿ ಸ್ಥಿರವಾಗಿ ಸ್ಥಾಪಿತವಾಗಿದ್ದು ಭಾರತೀಯ ಜನತೆಯು ಬಹುಕಾಲದಿಂದ ಜೀವನದ ಒಂದು ರೀತಿಗೆ ಅನುಗುಣವಾಗಿ ಸಾಗುವಂತಹದು ಒಮ್ಮೆಲೆ ಜೀವನದ ಹೊಸ ಪದ್ಧತಿಯೊಂದನ್ನು ವೈಗೊಡಿಸಿಕೊಂಡ ಮತ್ತು ಬಾಳಿನಲ್ಲಿ ಬೇರೆಯೆ ಎನಿಸುವ ಮನೋಭಾವವನ್ನು ತಳೆದ ಜನರ ಸಂಪರ್ಕವನ್ನು ಪಡೆಯಿತು. ಅವರು ತನ್ನ ಆಳರಸರಾಗಿದ್ದ ಕಾರಣ ಮತ್ತು ಅವರ ಬುದುಕಿನ ಹೋರಾಟದಲ್ಲಿ ಅಷ್ಟು ಯಶಸ್ಸನ್ನು, ಪ್ರಭಾವವನ್ನು ಪಡೆದಿದ್ದಾರೆಂದು ಅವರು ಜೀವನದ ಒಂದು ಸತ್ಯಮಾರ್ಗವನ್ನು ಪ್ರತಿನಿಧಿಸುತ್ತಾರೆ ಎಂದು ಬಗೆದು ತಮ್ಮದಾಗಿದ್ದ ಬದುಕಿನ ದಾರಿಯಲ್ಲಿ, ವಿಚಾರದ ಅವರ ರೀತಿಯಲ್ಲಿ ಮತ್ತು ನಡತೆಯ ರೂಪದಲ್ಲಿ ಸ್ಥಿತ್ಯಂತರವು ಆವಶ್ಯಕ ಎಂದು ಭಾವಿಸಿದರು. ಬ್ರಿಟಿಷರ ಪ್ರಭಾವವು ಅತ್ಯಂತ ಪ್ರಬಲವಾಗಿತ್ತು ಮತ್ತು ವ್ಯಾಪಕವಾಗಿತ್ತು ಎಂಬ ಕಾರಣ ದಿಂದ ಅದು ಭಾರತೀಯ ಜೀವನದ ಎಲ್ಲ ಕ್ಷೇತ್ರಗಳನ್ನು ಆವರಿಸಿತು. ಈ ಪ್ರಭಾವವು ತುಂಬ ಹರಡಿಕೊಂಡಾಗ್ಗೆ ನರ್ಮದಾಶಂಕರನು ತರುಣನಾಗಿದ್ದನು. ಆದಲ್ಲದೆ

ಅವನು ಇಂಗ್ಲಿಷ್ ಬೋಧಕರ ಕೈಯಿಂದ ಪಾಠಗಳನ್ನು ಹೇಳಿಸಿಕೊಳ್ಳುವಷ್ಟು ಸುದೈವಿಯೂ ಆಗಿದ್ದನು ; ಅಂತೆಯೆ ಆತನಿಗೆ ನೇರವಾದ ವೈಯಕ್ತಿಕ ಸಂಬಂಧವೂ ಅವರೊಡನೆ ಬಂದಿತು.

ಆಗಿನ ಕಾಲದಲ್ಲಿ ಇಂಗ್ಲಿಶ್ ಕಾವ್ಯವನ್ನು ಅಭ್ಯಾಸ ಮಾಡಿದ ಯಾವ ಚಿಂತನಶೀಲ ವ್ಯಕ್ತಿಗೇ ಆಗಲಿ ಮೊದಲು ಆತನಿಗೆ ತೋಚಿದ ಸಂಗತಿಯೆಂದರೆ ಆ ಕಾವ್ಯದ ಪ್ರಬಲವಾದ ವಸ್ತುನಿಷ್ಠಸ್ವರೂಪ. ಆಗಿನ ಭಾರತೀಯ ಕಾವ್ಯದಲ್ಲಿ ಅದರಲ್ಲಿಯೂ ಹೆಚ್ಚಾಗಿ ಗುಜರಾತೀ ಕಾವ್ಯದಲ್ಲಿ ದಯಾರಾಮನ ಕಾವ್ಯದಂತಹ ಅತ್ಯಂತ ಸರಳ ಮತ್ತು ಭಾವಪೂರ್ಣ ರಚನೆಗಳಲ್ಲಿ ಕೂಡ ವಸ್ತುನಿಷ್ಠ ಅಂಶವು ಕಂಡುಬರುತ್ತಿರಲಿಲ್ಲ. ನಿಜವಾಗಿಯೂ ಯಾವ ಕವಿಯೆ ಆಗಲಿ ವೈಯಕ್ತಿಕ ಮತ್ತು ವ್ಯಕ್ತಿನಿಷ್ಠ ನಿರ್ಮಾಣವನ್ನು ತಪ್ಪಿಸಿಕೊಳ್ಳುವಂತಿರಲಿಲ್ಲ ; ಆದರೆ ಆ ಕಾಲಕ್ಕಿಂತ ಮೊದಲಿನ ಗುಜರಾತೀ ಕವಿಗಳು, ಈ ಮೊದಲು ನಾವು ನೋಡಿದಂತೆ, ಪ್ರೇಮದ ವಿಷಯವಾಗಿ ಬರೆಯುವಾಗ್ಗೆ ತನ್ನ ಮತ್ತು ತನ್ನ ಪ್ರಿಯತಮೆಯ ಬಗ್ಗೆ ಬರೆಯುವದನ್ನು ಬಿಟ್ಟು ತನ್ನ ಕೃತಿಗೆ ಕೃಷ್ಣನನ್ನು ನಾಯಕನನ್ನಾಗಿಯೂ, ರಾಧೆಯನ್ನು ನಾಯಕಿಯೆಂದೂ ಚಿತ್ರಿಸುತ್ತಿದ್ದನು. ಈ ಚಿರಂತನ ಪ್ರೇಮಿಗಳ ಸಂಕೇತದಲ್ಲಿ ಕವಿಯು ತನ್ನ ಸ್ವಂತ ಭಾವನೆಗಳಿಗೆ ಅಭಿವ್ಯಕ್ತಿಯನ್ನು ನೀಡುವದು ನಿಜವಾಗಿದ್ದರೂ ಅದರಲ್ಲಿ ಕೃತ್ರಿಮವೆನಿಸುವ ಒಂದು ರೂಢಿಯು ಯಾವಾಗಲೂ ತುಂಬಿಕೊಂಡಿದ್ದ ಆಗಿನ ಸಮಾಜದ ಆವಶ್ಯಕತೆಗಳಿಗೆ ಅನುರೂಪವಾಗಿ ತಾನು ವೈಯಕ್ತಿಕವಾಗಿ ಅನುಭವಿಸುವ ಭಾವನೆಗಳನ್ನು ಚಿತ್ರಿಸುವದು ಅವಶ್ಯವಾಗಿತ್ತು. ನರ್ಮದಾಶಂಕರನು ಕವನಗಳನ್ನು ಬರೆಯಲಿಕ್ಕೆ ಆರಂಭಿಸುವ ಮೂರು ವರ್ಷ ಮೊದಲು ಅಂದರೆ ೧೮೫೨ರಲ್ಲಿ ಮಧ್ಯಕಾಲೀನ ಗುಜರಾತದ ಕೊನೆಯ ಮಹಾಕವಿಯಾದ ದಯಾರಾಮನು ದಿವಂಗತನಾದನು ಮತ್ತು ಅವನು ಆಗ್ಗೆ ಕೆಲವು ಉತ್ಕೃಷ್ಟವೆನಿಸುವ ಪ್ರೇಮಗೀತಗಳನ್ನು ಬರೆದಿದ್ದರೂ ಅವನು ಅವುಗಳನ್ನು ಹಳೆಯ ರೀತಿಯಲ್ಲಿ ಬರೆದಿದ್ದನಷ್ಟೆ ಅಲ್ಲದೆ ಅವುಗಳಲ್ಲಿ ವೈಯಕ್ತಿಕ ಅನುಭವವು ಅದೃಶ್ಯವಾಗಿತ್ತು.

ಆದರೆ ನರ್ಮದಾಶಂಕರ ಮತ್ತು ಇತರರು ಓದುತ್ತಿದ್ದ ಇಂಗ್ಲಿಶ್ ಕವನಗಳು ಹಾಗಿರದೆ ಅವುಗಳಲ್ಲಿ ಕವಿಗಳ ವ್ಯಕ್ತಿಗತ ಸಂವೇದನೆಯು ತುಂಬ ಆಕರ್ಷಕವೂ ಪ್ರಬಲವೂ ಆಗಿರುತ್ತಿತ್ತು. ಅವನ ಸುತ್ತಲಿನ ಜೀವನವು ಕೂಡ ಕವಿತೆಗಳಲ್ಲಿ ಆತ್ಮೀಯಭಾವವು ಮೂಡಿದ್ದರೆ ಅದನ್ನು ಜನರು ಮೆಚ್ಚುತ್ತಿದ್ದರೇ ಹೊರತು ತೆಗಳುತ್ತಿರಲಿಲ್ಲ ಎಂಬ ಸ್ತರಕ್ಕೆ ಬಂದಿತ್ತು. ತಾರುಣ್ಯದ ಆವೇಶದಲ್ಲಿ ಮತ್ತು ಹೊಸ ಕಾವ್ಯದ ಪ್ರವರ್ತಕ ಎಂಬ ಧೈರ್ಯದಿಂದ ನರ್ಮದಾಶಂಕರನು ಸ್ವಾನುಭವದ ಭಾವದೊಡನೆ ಕಾವ್ಯರಚನೆಯಲ್ಲಿ ತೊಡಗಿದನು. ಅವನು ಒಂದು ನೂತನ ಯುಗವನ್ನು ಆರಂಭಿಸುತ್ತಿದ್ದನು ಎಂಬುದನ್ನು ಅರಿತಿದ್ದನೊ ಹೇಗೆ ಎಂಬುದನ್ನು ಹೇಳಲಾಗುವದಿಲ್ಲವಾದರೂ ಅವನ ಕಾರ್ಯದಿಂದ ಒಂದು ಹೊಸ ಕಾಲವು

ಉದಯಿಸಿತು ಎಂಬುದು ಮಾತ್ರ ವಸ್ತುಸ್ಥಿತಿಯಾಗಿದೆ. ಅತ್ತ ಅವನ ವೈಯಕ್ತಿಕ ಸ್ವಭಾವವೂ ಹಾಗೆಯೆ ಇದ್ದು ಅವನು ವ್ಯಕ್ತಿಗತ ಮತ್ತು ವಸ್ತುನಿಷ್ಠ ಆಗದಿದ್ದರೆ ಸಾಧ್ಯವೇ ಇರಲಿಲ್ಲ. ತನ್ನ ಉಚ್ಚಮಟ್ಟದ ಸಾಹಿತ್ಯಿಕ ಅಭಿವ್ಯಕ್ತಿಯಲ್ಲಿ ಅವನು ಬೇರೆ ಏನನ್ನೂ ಮಾಡದಂತೆ ತನ್ನಲ್ಲಿಯೇ ಮಗ್ನನಾಗಿದ್ದನು. ಅದರಿಂದ ಅವನು ರಚಿಸಿದ ಕಾವ್ಯದ ಸ್ವರೂಪವೇ ಬದಲಾಯಿತಷ್ಟೆ ಅಲ್ಲದೆ ಇಡಿಯ ಗುಜರಾತೀ ಕಾವ್ಯಸೃಷ್ಟಿಯಲ್ಲಿಯೇ ಸ್ಥಿತ್ಯಂತರವಾಯಿತು.

ಗುಜರಾತದ ಭಾವಗೀತೆಗಳಲ್ಲಿ ನರ್ಮದಾಶಂಕರನಿಂದ ಆತ್ಮೀಯ ಭಾವದ ಪ್ರವೇಶವೊಂದು ಆಯಿತು. ಇಷ್ಟೇ ಅಲ್ಲದೆ ಗುಜರಾತೀ ಸಾಹಿತ್ಯದಲ್ಲಿ ಸ್ವತಂತ್ರವಾಗಿ ನಿಸರ್ಗದ ವಿವಿಧ ರೂಪಗಳನ್ನು ವರ್ಣಿಸುವ ಮೊದಲ ಕವಿಯೆನಿಸಿಕೊಂಡನು—ನರ್ಮದಾಶಂಕರ! ಅವನಿಗಿಂತ ಮೊದಲು ಪ್ರಕೃತಿಗೆ ಕಾವ್ಯದಲ್ಲಿ ಒಂದು ಸ್ಥಾನ ವಿದ್ದಿತು ನಿಜ; ಆದರೆ ಅದನ್ನು ಒಂದು ಸ್ವತಂತ್ರ ವಸ್ತುವೆಂದು ಪರಿಗಣಿಸಿ ಅದಕ್ಕಾಗಿಯೆ ಕಾವ್ಯರಚನೆಯನ್ನು ಮಾಡುವ ಸ್ಥಿತಿಯಿರಲಿಲ್ಲ. ನರ್ಮದಾಶಂಕರನ ಸ್ವಭಾವದಲ್ಲಿದ್ದ ಸಾಹಸರಮ್ಯಗುಣಗಳು ಸಂತೋಷದ ಸಮಯಗಳಲ್ಲಿಯೂ ಅವನನ್ನು ಬೇರೆಯವರಿಂದ ದೂರ ಇರಿಸುತ್ತಿದ್ದವು ಮತ್ತು ಅವನು ಏಕಾಂಗಿಯಾಗಿ ಇರುವದನ್ನು ಇಷ್ಟಪಡುತ್ತಿದ್ದನು. ಎಷ್ಟೋ ಬಾರಿ ನಿಸರ್ಗವೇ ಅವನಿಗೆ ಜೊತೆಯಾಗಿ ತನ್ನ ಅನನ್ಯ ಸೊಬಗನ್ನು ತೋರಿಸುತ್ತಿತ್ತು. ಅವುಗಳನ್ನು ಅವನು ಕವನಗಳಲ್ಲಿ ಬಣ್ಣಿಸುತ್ತಿದ್ದನು ಮತ್ತು ಆ ರೀತಿಯಲ್ಲಿ ಅವನು ಗುಜರಾತೀ ಸಾಹಿತ್ಯದಲ್ಲಿ ಪ್ರಕೃತಿ ಕಾವ್ಯದ ಬುನಾದಿಯನ್ನು ಹಾಕಿದನು.

ಅವನಿಗೆ ಪ್ರವಾಸವು ಕೂಡ ತುಂಬ ಪ್ರಿಯವಾಗಿತ್ತು ಮತ್ತು ಆಗಿನ ದಿನಗಳಲ್ಲಿ ಅವನು ಹೆಚ್ಚಿನ ಪ್ರವಾಸವನ್ನು ಕೈಕೊಂಡನು. ಈ ಪ್ರವಾಸಗಳಲ್ಲಿ ಅವನು ಪಡೆದ ಸಂತೋಷವನ್ನು ಅವನು ಮುಕ್ತಕಂಠದಿಂದ ಹೊಗಳಿದನು ಮತ್ತು ಆ ಕಾವ್ಯಕೃತಿಗಳು ಕೂಡ ತಕ್ಕಮಟ್ಟಿಗೆ ಆ ಭಾಷೆಯ ಮೊದಲ ಸೃಷ್ಟಿ ಎನಿಸಿದವು.

ಅವನ ಸಾಹಸಪ್ರಿಯ ಮತ್ತು ಆವೇಶಮಯ ಸ್ವಭಾವವು ಅವನನ್ನು ಎಷ್ಟೋ ಹೃದಯದ ಕ್ರೀಡೆಗಳಲ್ಲಿ ನೂಕಿತು ಮತ್ತು ಆ ಮೂಲಕ ಅಂತಹ ಕವನಗಳನ್ನು ರಚಿಸಲಿಕ್ಕೆ ಸಾಮಗ್ರಿಗಳನ್ನು ಒದಗಿಸಿದವು; ಅಲ್ಲಿಯೂ ಆತನು ಆ ಭಾಷೆಯಲ್ಲಿ ಮೊದಲಿಗನಾಗಿ ಮೆರೆದನು.

ತನ್ನ ದೇಶವನ್ನು ಅವನು ನಿಜವಾಗಿಯೂ ಆಳವಾಗಿಯೂ ಪ್ರೀತಿಸುತ್ತಿದ್ದನು ಮತ್ತು ಪ್ರೀತಿಯ ಆ ಮುಖವನ್ನು ಕುರಿತು ಅನೇಕ ಹಾಡುಗಳನ್ನು ಬರೆದನು. ಈ ಬಗೆಯ ಕವನಗಳನ್ನು, ಅವನಿಗಿಂತ ಮೊದಲು ರಚಿಸುವ ಬಗ್ಗೆ ಯಾರೂ ಯೋಚಿಸಿದಂತಿರಲಿಲ್ಲ. ಇಂಗ್ಲಿಷ್ ಜನರಿಂದ ಅವನು ಪಡೆದ ಶಿಕ್ಷಣ ಮತ್ತು ಅವರು ವ್ಯಕ್ತಗೊಳಿಸಿದ ಭಾವಗಳಿಂದ ಅವನು ಪ್ರೇರಿತನಾಗಿದ್ದನು.

ಅದಲ್ಲದೆ ನರ್ಮದಾಶಂಕರನು ದೊಡ್ಡ ಹೋರಾಟಗಾರನಾಗಿದ್ದು ಜೀವನದಲ್ಲಿ ಅವನು ಎಷ್ಟೋ ಸಂಘರ್ಷಗಳಲ್ಲಿ ಭಾಗವಹಿಸಿದ್ದನು. ಅಂತಹ ಪ್ರಸಂಗಗಳು ಕೇವಲ ಸಾಮಾಜಿಕ ಜೀವನಕ್ಕೆ ಸೀಮಿತವಾಗಿದ್ದರೂ ಅವನು ಆ ಆಂದೋಲನಗಳಲ್ಲಿ ಪಾಲ್ಗೊಳ್ಳುವಂತೆ ಜನರನ್ನು ಆಮಂತ್ರಿಸಲಿಕ್ಕೆ ಯುದ್ಧದ ಭಾಷೆಯನ್ನೇ ಬಳಸುತ್ತಿದ್ದನು. ಗುಜರಾತೀ ಭಾಷೆಯಲ್ಲಿಯ ಅವನ ಇಂತಹ ಕವನಗಳು ಅತ್ಯಂತ ಪ್ರಭಾವಪೂರ್ಣ ಕೃತಿಗಳೆನಿಸಿವೆ ಮತ್ತು ಅವು ಹೊಸ ಚೈತನ್ಯದ ಹಾಗೂ ಹೊಸ ಸ್ವರೂಪದ ಪ್ರಥಮ ನಿದರ್ಶನಗಳಾಗಿವೆ. ಗುಜರಾತದ ಕುಟುಂಬಗಳಲ್ಲಿ ಇಂದಿಗೆ ಕೂಡ ಆ ಕವನಗಳ ಎಷ್ಟೋ ಪಂಕ್ತಿಗಳು ದಿನದಿನದ ಮಾತುಗಳಲ್ಲಿ ಕೇಳ ಬರುತ್ತವೆ.

ಅವನೊಬ್ಬ ಹಿರಿಯ ಸಮಾಜ ಸುಧಾರಕನಾಗಿದ್ದ ಕಾರಣವಾಗಿಯೆ ಅವನ ಬರೆಹಗಳಲ್ಲಿ ಬಹುತರ ರಚನೆಗಳು ಕವಿಯ ಮನಸ್ಸಿನಲ್ಲಿ ಹುಟ್ಟಿದ ಈ ಉತ್ಥಾನದ ಮುದ್ರೆಯನ್ನು ತಳೆದಿವೆ. ಅವನ ಒಂದು ವಸ್ತುನಿಷ್ಠ ದೀರ್ಘಕವನವಾದ "ವಾಜೆಸಂಗ್ ಮತ್ತು ಚಾಂದಬಾ"ದಲ್ಲಿ ನಾಯಕನು ಹಿಂದುವೂ, ನಾಯಿಕೆಯು ಮುಸ್ಲಿಮಳೂ ಆಗಿದ್ದು ಆಗಿನ ದಿನಗಳಲ್ಲಿ ಕೇಳಲಿಕ್ಕೆ ಕೂಡ ಸಿಗದಂತಹ ಮತ್ತು ಯೋಚನೆಗೂ ನಿಲುಕದಂತಹ ಪ್ರೇಮಪ್ರಸಂಗದಲ್ಲಿ ಅವರು ಪ್ರೇಮಕ್ಕಾಗಿ ಮದುವೆಯಾಗುವ ವಿಷಯವನ್ನು ನಿರೂಪಿಸಲಾಗಿದೆ. ಅವನು ಸ್ತ್ರೀ ಸ್ವಾತಂತ್ರ್ಯದಲ್ಲಿ ವಿಶ್ವಾಸವನ್ನಿಟ್ಟಿದ್ದನು ಮತ್ತು ವಿಧವೆಯರು ಮರುಮದುವೆಯನ್ನು ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದನು ; ಯಾಕೆಂದರೆ ವಿಧವೆಯರ ಜೀವನವು ಕ್ಲೇಶಮಯವಾಗಿತ್ತು. ಅವನು ವಿಧವೆಯರ ಕಷ್ಟಗಳನ್ನು ಚಿತ್ರಿಸುವ, ಮಹಿಳೆಯರಿಗೆ ಹೆಚ್ಚಿನ ಸ್ವತಂತ್ರ ಜೀವನಕ್ಕಾಗಿ ವಾದಿಸುವ ಕವನಗಳನ್ನು ಬರೆದನು.

ಇದಿಷ್ಟೇ ಅಲ್ಲದೆ ಇನ್ನೂ ಹೆಚ್ಚು ಕಾರ್ಯವನ್ನು ಮಾಡಿದನು ಮತ್ತು ಅದು ಅವನಿಗೆ ಹೊಸ ವಿಚಾರಧಾರೆಯ ಪ್ರವರ್ತಕ ಎಂದು ಮತ್ತು ಒಂದು ಮನ್ವಂತರದ ನಿರ್ಮಾಪಕ ಎಂಬ ಸ್ಥಾನವನ್ನು ಕಲ್ಪಿಸಿಕೊಟ್ಟಿತು ; ಹಾಗಾದರೆ ಅವನ ಕಾವ್ಯ ರಚನೆಯಲ್ಲಿ ಕಂಡಬರುವ ಕಾವ್ಯಗುಣದ ವಿಷಯವಾಗಿ ನಾವು ಏನೆಂದು ತಿಳಿಯಬೇಕು ? ಅವನಿಗಿಂತ ಮೊದಲು ಕವಿಗಳಿದ್ದರು ; ಹಾಗೆಯೆ ಅವನ ತರುವಾಯ ಕೂಡ ಕವಿಗಳಿರುವರು. ಅವರೆಲ್ಲರ ಕಾವ್ಯಕ್ಕೆ ಹೋಲಿಸಿದರೆ ಇವನ ಕಾವ್ಯವು ರಸಾಸ್ವಾದನೆಯಲ್ಲಿ ಹೇಗೆ ತೋರುವದು ?

ಈ ಪ್ರಶ್ನೆಗೆ ಉತ್ತರವನ್ನು ಹುಡುಕಹೊರಟರೆ ನಮಗೇನು ಅಂತಹ ಅಭಿನಂದನಾರ್ಹ ಅಭಿಪ್ರಾಯ ಉಂಟಾಗದಿರುವದು ವಿಷಾದದ ವಿಷಯವೆ ಸೈ. ಅವನು ವಿಪುಲವಾಗಿ ಬರೆದಿರುವದೇನೋ ನಿಜವಾಗಿದ್ದರೂ ಅದರೊಳಗಿನ ಕಾವ್ಯ ಭಾಗವು ಅಷ್ಟೊಂದು ಉಚ್ಚಮಟ್ಟದ ಕಲಾಕೃತಿಯೆನಿಸಿಲ್ಲ. ಎಷ್ಟೋ ಸಲ ಅದು ಒರಟು, ಹಸಿಬಿಸಿ, ವಿಕ್ಷಿಪ್ತ ಮತ್ತು ಅನೇಕ ಕಡೆ ಅಶ್ಲೀಲವಾಗಿಯೂ ತೋರುತ್ತದೆ.

ಅದು ಸತತವಾಗಿ ಒಬ್ಬ ಸಂಸ್ಕೃತವ್ಯಕ್ತಿಯ ಪರಿಷ್ಕೃತ ರಚನೆಯೆಂದಾಗಲಿ, ಒಬ್ಬ ಕಲಾವಿದನ ಸುಸಂಪನ್ನಕೃತಿಯೆಂದಾಗಲಿ ತೋರುವದಿಲ್ಲ. ಕೆಲವೊಂದು ಕಡೆ ಅದರಲ್ಲಿ ಆವೇಶವು ಕಂಡುಬರುತ್ತದೆ ಮತ್ತು ಸಮರ್ಪಕವಾದ ಭಾವನೆಗಳು ಕೂಡ ಪ್ರತಿಬಿಂಬಿತವಾಗಿದ್ದರೂ ಅದರಲ್ಲಿ ಅಭಿಜಾತವಾದ ಸುರುಚಿಯು ಕಂಡುಬರುವದಿಲ್ಲ. ಕೆಲವು ಕವಿತೆಗಳಲ್ಲಿ ಕಾಣಸುವ ಗ್ರಾಮ್ಯವಿಚಾರಗಳು ಒರಟಾದ, ಅಶಿಕ್ಷಿತ, ಅಸಂಸ್ಕೃತ ಹಳ್ಳಿಗರನ್ನು ಕೂಡ ತಲೆ ತಗ್ಗಿಸುವಂತಹ ಮಾತುಗಳಾಗಿರುವವು. ಅವನು ಕಾವ್ಯ ರಚನಾಶಾಸ್ತ್ರದ ವಿಷಯವಾಗಿ ಪುಸ್ತಕಗಳನ್ನು ಬರೆದಿದ್ದಾನೆ ಮತ್ತು ಕವನವೊಂದು ಹೇಗೆ ಇರಬೇಕು ಎಂಬ ಬಗ್ಗೆ ಶಾಸ್ತ್ರವನ್ನೆಲ್ಲ ಅರಿತುಕೊಂಡಿದ್ದರೂ ಅವನು ಅದನ್ನು ಕಾರ್ಯರೂಪಕ್ಕೆ ಇಳಿಸುವಾಗ್ಗೆ ಮತ್ತು ತಾನು ಅದೊಂದು ಕಾವ್ಯಕೃತಿ ಎಂದು ಹೇಳಿಕೊಳ್ಳುವಾಗ್ಗೆ ಅದು ಅನೇಕ ಬಾರಿ ಕಾವ್ಯವೇ ಆಗಿರುವದಿಲ್ಲ. ಎಷ್ಟೋ ಕವಿತೆಗಳಿಗೆ ಅವನು ಅದರಲ್ಲಿ ಕಾಣಸಿಗದ ಮಾತುಗಳ ಬಗ್ಗೆ ಉದ್ದವಾದ ಟಿಪ್ಪಣಿ ಗಳನ್ನು ಬರೆದಿರುತ್ತಾನೆ; ಆದರೆ ಅದರಿಂದ ರಚನೆಯು ಇನ್ನಷ್ಟು ಹದಗೆಟ್ಟಿದೆ. ಅದರಲ್ಲಿ ಆ ಮೂಲಕ ಕವಿತೆಯ ಅರ್ಥವಾದರೂ ಗೊಂದಲಕ್ಕೀಡಾಗಿರುತ್ತದೆ ಅಥವಾ ಕವನದಲ್ಲಿ ಬಳಸುವ ಪ್ರತ್ಯಕ್ಷ ಪದಗಳು ಆ ವಿವರಣೆಯಿಂದ ಸ್ಪಷ್ಟವಾಗುವದಿಲ್ಲ. ಅವನು ಯಾವ ದೃಷ್ಟಿಯಿಂದಾದರೂ ಮಹಾಕವಿಯಂತೂ ಅಲ್ಲವೇ ಅಲ್ಲ. ಹಾಗೆ ನೋಡಿದರೆ ಅವನು ರಸಶಾಸ್ತ್ರದ ವಿಷಯವಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದರೂ ಉತ್ತಮ ಕಾವ್ಯವೆಂದರೆ ಹೇಗೆ ಇರುತ್ತದೆ ಎಂಬುದನ್ನೇನು ಈತನು ತಿಳಿದಿರಲಿಲ್ಲ. ಹಾಗೆಯೆ ಆತನು ಕಾವ್ಯ ಮತ್ತು ಕಾವ್ಯಶಾಸ್ತ್ರದ ಇನ್ನೂ ಅನೇಕ ವಿಧವಿಧವಾದ ಗ್ರಂಥಗಳನ್ನು ತನ್ನ ಇಂಗ್ಲಿಶ್ ಅಧ್ಯಾಪಕರ ಮೂಲಕ ಓದಿಕೊಂಡಿದ್ದರೂ ಪ್ರತ್ಯಕ್ಷ ಕಾವ್ಯನಿರ್ಮಾಣ ದಲ್ಲಿ ಅವನು ಹೆಚ್ಚಿನ ಮಟ್ಟವನ್ನು ತಲುಪಲಿಲ್ಲ.

ಕಾವ್ಯದ ಸಾರವೆನಿಸುವ ಈ ಸೂಕ್ಷ್ಮ ಅಂಶದ ಅರಿವು ಅವನಿಗೆ ಇದ್ದಿಲ್ಲ ಎಂಬುದು ನರ್ಮದಾಶಂಕರನು ಕಾವ್ಯವೆಂಬುದು ಹೇಗೆ ಇರುತ್ತದೆ ಎಂಬ ವಿಷಯ ವಾಗಿ ಮಾತನಾಡುವಾಗ್ಗೆ ತಿಳಿದುಬರುತ್ತದೆ. ಗುಜರಾತಿಯಲ್ಲಿ ಆ ಅಂಶಕ್ಕೆ ಅವನು "ಜೋಸೋ" ಎನ್ನುತ್ತಾನೆ—ಅಂದರೆ ಭಾವಪೂರ್ಣ ಉದ್ಗಾರ. ಆ ಅರ್ಥದಲ್ಲಿ ನಿರ್ಮಿತವಾದ ಈ ಪದವೇನು ಅಂತಹ ಸುಷ್ಟವಾದ ಪ್ರಯೋಗವಾಗಿಲ್ಲ. ಆದರೆ ಅದೇನು ಅಷ್ಟು ಮಹತ್ವದ ಮಾತಲ್ಲ. ಕವನದಲ್ಲಿ ಭಾವವಿರಬೇಕು, ಆವೇಶವಿರಬೇಕು ನಿಜ; ಆ ರೀತಿಯ ಉದ್ವೇಗವಿಲ್ಲದೆ, ಅಂತಹ ಪರಿಸರವಿಲ್ಲದೆ ಎಷ್ಟೋ ಸಲ ಅದು ಕವನವೇ ಎನಿಸುವದಿಲ್ಲ. ಆದರೆ ಕವನದ ರಸನಿರ್ಮಾಣದಲ್ಲಿ ಅದೊಂದೆ ಮುಖ್ಯ ವಾದ ಅಂಗವೆ? ತಾನು ಬರೆಯುತ್ತಿದ್ದ ಹೊಸ ಕವಿತೆಯಲ್ಲಿ ಅದೊಂದೆ ಆವಶ್ಯಕವಾಗಿ ಇರಬೇಕಾದ ಘಟಕ ಎಂದು ನರ್ಮದಾಶಂಕರನು ತಿಳಿದಿರಲಿಕ್ಕೆ ಸಾಕು. ಅದೊಂದು ಕಾವ್ಯದಲ್ಲಿ ಗೋಚರಿಸಿದರೆ ಮಿಕ್ಕದ್ದೆಲ್ಲ ತಾನಾಗಿಯೆ ಅದರಲ್ಲಿ ಸೇರುವದು ಮತ್ತು ಒಂದುವೇಳೆ ಬೇರೆ ಅಂಶಗಳು ಅದರಲ್ಲಿ ಕಂಡುಬರದಿದ್ದರೂ, ಅದೇನು ವಿಶೇಷವಲ್ಲ.

ಜಾರ್ಜ್ ಸೇಂಟ್ಸ್‌ಬರಿಯು ಒಂದುಕಡೆ ಕವಿಗಳು ತಮ್ಮ ಕಲೆಯ ಬಗ್ಗೆ ತಳೆದ ದೋಷಯುಕ್ತ ಅಭಿಪ್ರಾಯಗಳೇ ಅವರನ್ನು ಅಡ್ಡದಾರಿಗೆ ಹಾಕುತ್ತವೆ ಎಂದು ಹೇಳಿದ್ದಾನೆ. ನರ್ಮದಾಶಂಕರನ ದೃಷ್ಟಾಂತದಲ್ಲಿ ಅದು ಹಾಗೆಯೆ ಆಗಿದೆ.

ಹಾಗಾದರೆ ಅವನು ಕವಿಯೆಂದು ಎಲ್ಲರ ಗೌರವಕ್ಕೆ ಪಾತ್ರನಾದುದಕ್ಕೆ ಕಾರಣ ವೇನು ? ಅದರ ಕಾರಣವು ಅಂದಿನ ಪರಿಸ್ಥಿತಿಯಲ್ಲಿ ಕಂಡುಬರುತ್ತದೆಯೇ ಹೊರತು ಅವನ ಕಾವ್ಯದಲ್ಲಿರುವ ಆಂತರ್ಯದ ಗುಣದಲ್ಲಿ ಅಲ್ಲ. ಅವನು ಕೈಕೊಂಡುದುದು ಏನೋ ಹೊಸ ಕೆಲಸವಾಗಿತ್ತು ; ನವೀನ ವಿಚಾರವಾಗಿತ್ತು ; ಅಪೂರ್ವ ಕೃತಿಯೆನಿ ಸಿತ್ತು. ಅವನಿಗಿಂತ ಮೊದಲು ಯಾರೂ ಅಂತಹ ರಚನೆಯಲ್ಲಿ ತೊಡಗಿರಲಿಲ್ಲ. ಇತ್ತ ಅವನು ಒಬ್ಬ ಉಗ್ರ-ಯೋಧನೆಂದು ತನ್ನ ಶಕ್ತಿ ಸರ್ವಸ್ವದಿಂದ ಆ ಹೋರಾಟದಲ್ಲಿ ದುಮುಕಿದ್ದನು. ಅವನು ಸಾಕಷ್ಟು ವಾಚಾಳಿಯಾಗಿದ್ದನು ಹಾಗೂ ಅಜೇಯನೆನಿ ಸಿದ್ದನು. ಎಲ್ಲಕ್ಕಿಂತ ಹೆಚ್ಚಾಗಿ ಅವನ ಕಾಲದ ಜನರಿಗೆ ನಿಜವಾದ ಕಾವ್ಯದ ಸ್ವರೂಪವೇನು ಮತ್ತು ಅವನು ಬರೆಯುತ್ತಿರುವ ಹೊಸ ಕಾವ್ಯವು ಯಾವ ಬಗೆಯುದು ಎಂಬುದೇನೂ ತಿಳಿದಿರಲಿಲ್ಲ. ಅವನು ಸ್ವತಃ ತನ್ನ ವಿಚಾರಗಳನ್ನು ವ್ಯಕ್ತಪಡಿಸಲಿಕ್ಕೆ ತೆವಳುತ್ತಿದ್ದನು ಮತ್ತು ಅವನ ಸ್ವಭಾವದ ಜನರಿಗೆ ಪ್ರತಿಯೊಂದು ದೌರ್ಬಲ್ಯವು ನೂತನ ವಿಧಾನದ ದ್ಯೋತಕವೆಂದೇ ತೋರುತ್ತಿತ್ತು. ಅವನು ಜನರನ್ನು ಕೂಡ ಮರುಳು ಮಾಡಿದ ಕಾರಣ ಅವರು ಅವನನ್ನು ಸಂಪೂರ್ಣವಾಗಿ ನಂಬುತ್ತಿದ್ದರು. ಇತ್ತ ಆಗಿನ ದಿನಗಳಲ್ಲಿ ಅವನ ಭಾಷೆಯಲ್ಲಿ ಸಮರ್ಥ ವಿಮರ್ಶಕರಾರೂ ಇರಲಿಲ್ಲ ಮತ್ತು ಇದ್ದ ಒಬ್ಬ ನವಲರಾಮನು ಕೂಡ ಘನತೆ-ಗಾಂಭೀರ್ಯಗಳ ವೇಷದಲ್ಲಿ ಕಂಡುಬರುವ ಈ ಮಹಾಕವಿಗೆ ನಮ್ರನಾದ ಭಕ್ತ ಎಂಬ ಸಂಬಂಧದಲ್ಲಿ ಗೌರವವನ್ನು ಸಲ್ಲಿಸುತ್ತಿದ್ದನು.

ಅಂತು ನರ್ಮದಾಶಂಕರನು ಕವಿಯೆಂದು ನಾವು ಒಪ್ಪುತ್ತಿದ್ದರೂ, ತನ್ನ ಕಾಲದಲ್ಲಿ ಹೊಸದೊಂದು ಮಾಧ್ಯಮವನ್ನು ಹುಡುಕಿ ರೂಪಿಸಿದ ಈತನು ಕವನ ರಚನೆಯಲ್ಲಿ ನಿರತನಾಗಿದ್ದರೂ ಸರಿಯಾದ ಅರ್ಥದಲ್ಲಿ ಅವನೊಬ್ಬ ಮಹಾಕವಿ ಎಂದು ಭಾವಿಸುವಂತಿಲ್ಲ. ಅವನಷ್ಟೆ ಅಲ್ಲದೆ, ಒಂದು ಕಾಲದಲ್ಲಿ, ಅವನ ಟೀಕಾಕಾರ ನೆಂದು ಪ್ರಖ್ಯಾತನಾದವನು ಕೂಡ ತಮ್ಮ ಭಾಷೆಯಲ್ಲಿ ಹೆಚ್ಚಿನ ಘನತೆಯನ್ನು ಪಡೆದು ಹೆಸರಾದ ಕವಿಗಿಂತ ಇವನು ಶ್ರೇಷ್ಠ ಎಂದ ಪರಿಗಣಿತನಾಗಿದ್ದರೂ ಕೂಡ ಅವನ ಸ್ಥಾನವು ನಿಜದಲ್ಲಿ ಅಷ್ಟು ಮೇಲಿನದಾಗಿರಲಿಲ್ಲ. ಅದು ಸಮಕಾಲೀನ ಅಭಿಪ್ರಾಯಗಳು ಹೇಗೆ ಪ್ರಮಾದಗಳನ್ನು ಮಾಡಬಹುದು ಎಂಬ ಮಾತಿಗೆ ನಿದರ್ಶನ ಗಳೆಂದು ಮಾತ್ರ ತೋರಿಸುತ್ತದೆ. ಅವನಲ್ಲಿ ಉತ್ತಮ ಕವಿಯಾಗುವ ಸಾಧ್ಯತೆ ಮತ್ತು ಅರ್ಹತೆಗಳಿದ್ದವು ; ಅವನಲ್ಲಿ ನಿಜವಾದ ಕವಿ ಸಂವೇದನೆಯಿದ್ದಿತು ; ಆದರೆ ದುರ್ದೈವದಿಂದ ಆ ತನ್ನ ಗುಣಗಳನ್ನು ಆತನು ಪರಿಪಕ್ವವಾದ ಆವಿರ್ಭಾವವೆನಿಸುವಂತೆ

ಬಳಸಿಕೊಳ್ಳಲು ಅಸಮರ್ಥನಾಗಿದ್ದನು ಎಂದು ಮಾತ್ರ ನಾವು ಈ ಸಂದರ್ಭದಲ್ಲಿ ಹೇಳಬಹುದು.

ಹಾಗೆ ಅವನು ಗುಜರಾತಿಯಲ್ಲಿ ಭವಿಷ್ಯದ ಕಾವ್ಯಕ್ಕೆ ಹೊಸ ಆಯಾಮಗಳನ್ನು ತೆರೆದು ತೋರಿಸಿದ ಮಾರ್ಗದರ್ಶಕನಾಗಿಯೇ ಉಳಿಯುವನು; ತಾನು ಸ್ವತಃ ಮಹಾಕವಿಯೆಂಬ ಖ್ಯಾತಿಯನ್ನು ಪಡೆಯಲಿಲ್ಲ.

ಹೀಗೆ ನರ್ಮದಾಶಂಕರನು ಕವಿಯೆಂದು ಹಿರಿಯಸ್ಥಾನವನ್ನು ಪಡೆಯದೆ ಹೋದರೂ ಪದ್ಯರಚನೆಯಲ್ಲಿ ಉಂಟಾದ ಈ ಕೊರತೆಯು ಗದ್ಯಲೇಖನದಿಂದ ಸಾಕಷ್ಟು ತುಂಬಿಬಂದಿತ್ತು ಎನ್ನಬಹುದು. ಅವನೇ ಹೇಳಿದಂತೆ ಮತ್ತು ಈ ಮೊದಲು ನಾವು ನೋಡಿದಂತೆ ಅವನ ಕಾಲದಲ್ಲಿ ಗದ್ಯಲೇಖನವು ಇತ್ತೀಚಿನ ಬೆಳವಣಿಯಾಗಿತ್ತು. ಅಲ್ಲಿಯವರೆಗೆ ಬರೆಯಲಾದ ಗದ್ಯವು ಸಾಹಿತ್ಯದ ಉದ್ದೇಶಗಳನ್ನು ಸಾಧಿಸುವಲ್ಲಿ ತಕ್ಕುದಾಗಿರಲಿಲ್ಲ. ಸಾಮಾನ್ಯವಾಗಿ ನರ್ಮದಾಶಂಕರನು ಗದ್ಯಲೇಖನದಲ್ಲಿ ಅಗ್ರಗಣ್ಯ ಎಂದು ಎಲ್ಲರಿಂದ ಹೆಸರನ್ನು ಪಡೆದಿದ್ದಾನೆ. ಇಲ್ಲಿ ಅವನಿಗೆ ದೊರೆತ ಸನ್ಮಾನವು ಕೇವಲ ಗದ್ಯಪ್ರವರ್ತಕ ಎಂಬ ಸಂಬಂಧದಲ್ಲಿ ಅಲ್ಲ. ಆದರೆ ಅಂತಹ ಪ್ರಭಾವಪೂರ್ಣದ ಮಾಧ್ಯಮವನ್ನು ಅವನು ಯಶಸ್ವಿಯಾಗಿ ಬಳಸಿದನು ಎಂದು. ೧೮೫೦ ರ ಆ ದಿನದಿಂದ ಅಂದರೆ ಅವನು ಬರಿಯ ಹದಿನೇಳು ವರ್ಷದವನಿದ್ದಾಗ್ಗೆ ಅವನು "ಸಂಘಗಳ ಸ್ಥಾಪನೆಯಿಂದಾಗುವ ಲಾಭಗಳು" ಎಂಬ ವಿಷಯವಾಗಿ ಮಾಡಿದ ಮೊದಲ ಭಾಷಣದಿಂದ ಅವನು ತೀರಿಕೊಂಡ ವರ್ಷವಾದ ೧೮೮೬ ರವರೆಗೆ, ಅವನ ಕೊನೆಯ ಗ್ರಂಥವಾದ 'ಧರ್ಮ-ವಿಚಾರ'ವು ಪ್ರಕಟವಾಗುವ ತನಕ ಅವನು ಗದ್ಯವನ್ನು ಹೆಚ್ಚುಹೆಚ್ಚಿನ ಸುಲಭತೆ, ಪರಿಣಾಮ ಮತ್ತು ಪ್ರಭುತ್ವದಿಂದ ಉಪಯೋಗಿಸಿಕೊಂಡಿದ್ದನು.

ಮೊದಲ ಬರೆಹಗಾರ ಎಂಬ ಸಂಬಂಧದಲ್ಲಿ ಅವನು ಈ ಮಾಧ್ಯಮವನ್ನು ಬಳಸಿದುದು ಅದ್ಭುತವಾಗಿದೆ. ಅವನು ಸಾಮಾಜಿಕ ಸುಧಾರಣೆಗಳ ವಿಷಯವಾಗಿ ಜ್ವಲಂತವಾದ ಮತ್ತು ಕಟುವೆನಿಸುವ ಲೇಖನಗಳನ್ನು ಬರೆದನು; ಅದಕ್ಕೆ ಮೊದಲು ಪತ್ರಗಳನ್ನು ಬರೆಯುವದೇ ಮೊದಲಾದ ಕಾರಣಗಳಿಗಾಗಿ ಗದ್ಯವು ಅಣಿಯಾಗುತ್ತಿತ್ತು. ಅವನು ಇಡಿಯ 'ಶಬ್ದಕೋಶ'ವೊಂದನ್ನು ಏಕಾಕಿಯಾಗಿ ರಚಿಸಿ, ಯಾರಾದರೂ ಆ ಗೈಮೆಯಿಂದ ಅಭಿಮಾನಪಡುವಂತೆ ಆದನು. ಗುಜರಾತೀ ಭಾಷೆಯಲ್ಲಿ ಮೊದಲಾಗಿ ಚರಿತ್ರೆಯ ವಿಷಯದ ಮೊದಲ ಗ್ರಂಥವನ್ನು ಬರೆದನು. ಅವನು ಬರೆದ ಧರ್ಮವಿಷಯಕವಾದ ವಿಚಾರಪೂರ್ಣ ಲೇಖನಗಳು ವಿವಾದಕ್ಕೆ ಕಾರಣವಾದರೂ ಅವನು ಅದರಲ್ಲಿ ಬಳಸಿದ ಗದ್ಯವು ೧೮೫೦-೫೫ ರ ಒರಟು ಸರಕು ಆಗಿರಲಿಲ್ಲ. ತನ್ನ ಭಾಷೆಯಲ್ಲಿ ಮೊದಲನೆಯ ಆತ್ಮಚರಿತ್ರೆಯನ್ನು ಬರೆದ ಶ್ರೇಯಸ್ಸು ಅವನದಾಯಿತು. ಅದು ಹರಕುಹರಕಾಗಿ ಮತ್ತು ಅಪೂರ್ಣವಾಗಿ ಇದ್ದರೂ ಇಂದಿನ

ಮಿತಿಗೆ ಕೂಡ ಆ ನುಡಿಯಲ್ಲಿ ಪ್ರಕಟವಾದ ಅತ್ಯುತ್ತಮ ಆತ್ಮಕಥೆಯೆನಿಸಿದೆ. ನರ್ಮದಾಶಂಕರನ ವ್ಯಕ್ತಿತ್ವ ಮತ್ತು ಮನೋಭಾವನೆಗಳನ್ನು ಅಭ್ಯಸಿಸಲಿಕ್ಕೆ ಅವನ ವಿದ್ಯಾರ್ಥಿಗಳಿಗೆ ಅದರಲ್ಲಿ ತುಂಬ ಆಸ್ಥೆಯು ಕುದುರುವಂತಿದೆಯಷ್ಟೆ ಅಲ್ಲದೆ ಅದರಲ್ಲಿ ಆಗಾಗ್ಗೆ ಹೃದ್ಯವಾದ ಮತ್ತು ಸುಭಗವಾದ ಗದ್ಯವು ನೋಡಲಿಕ್ಕೆ ದೊರೆಯುವದು. ಅವನು ಇಂತಹ ಚಿತ್ತಾಕರ್ಷಕವಾದ ಗದ್ಯವನ್ನು ಬರೆಯಬಲ್ಲ ಎಂಬುದು ಅವನ ಇನ್ನೂ ಅನೇಕ ಗದ್ಯಕೃತಿಗಳಿಂದ ಸಿದ್ಧವಾಗುತ್ತದೆ. ದೃಷ್ಟಾಂತಕ್ಕಾಗಿ ಅವನು ಪದ್ಯ ಮತ್ತು ಗದ್ಯಗಳೆರಡರಲ್ಲೂ ಮಾಡಿದ ಹಾಡುತ್ತಿರುವ ಹೆಂಗಸರ ವರ್ಣನೆಯು ಒಂದೇ ಒಂದು ಯತ್ನವನ್ನು ಪರೀಕ್ಷಿಸಿಕೊಳ್ಳಬಹುದು. ಪದ್ಯರಚನೆಯೇನೊ ಸರಿಯಾಗಿಯೆ ಇದೆ; ಆದರೆ ಗದ್ಯಲೇಖನವು ಅತ್ಯಂತ ರಮ್ಯವಾಗಿದ್ದು ಕೆ. ಎಂ. ಮುನ್ಶಿಯಂತಹ ಗದ್ಯಲೇಖನಗಳ ಪ್ರಭುಗಳು ಕೂಡ ಅಸೂಯೆಪಡುವಂತಾಗಿದೆ. ಅವನ ವಾಕ್ಯ ಸಂಪುಟವನ್ನು ಇಲ್ಲಿ ಉದ್ಧರಿಸಬೇಕು ಎನಿಸುತ್ತದೆಯಾದರೂ ಅದು ಭಾಷಾಂತರದಲ್ಲಿ ತನ್ನ ಮೂಲ ಸೌಂದರ್ಯವನ್ನು ಮತ್ತು ಆಕರ್ಷಣೆಯನ್ನು ಕಳೆದುಕೊಳ್ಳಬಹುದು ಮತ್ತು ವಾಚಕರ ಹೃದಯದಲ್ಲಿ ಇನ್ನೂ ಸ್ಥಿರಸ್ಥಾಯಿಯಾಗಿ ಮೆರೆಯುತ್ತಿರುವ ಭಾವ ನಗರದ "ಹಾಡುತ್ತಿರುವ ಹೆಂಗಸರು" ಕೂಡ ತಮ್ಮ ಶಾಲೀನತೆಗೆ ಎರವಾಗಬಹುದು. ಅಷ್ಟೇ ಅಲ್ಲದೆ ಅವನು ಗದ್ಯದಲ್ಲಿ ಬರೆದ ಕೆಲವು ಲೇಖನಗಳಾದ ಆವಾಹನೆಗಳು ಮತ್ತು ಬೇಡಿಕೆಗಳು ಅತ್ಯಂತ ಪ್ರಭಾವಪೂರ್ಣ ಆಗಿದ್ದು ಸರದಾರ ವಲ್ಲಭಭಾಯಿ ಪಟೇಲರು ಈ ವಿಷಯವಾಗಿ ಮಾಡಿದ ಭಾಷಣಗಳನ್ನು ನಮ್ಮ ನೆನಪಿಗೆ ತಂದು ಕೊಡುವಂತಹವಾಗಿವೆ.

ಅವನ ಕವನಗಳು ಮತ್ತು ಬೇರೆ ಲೇಖನಗಳಲ್ಲಿ ಕಂಡುಬರುವ ಗ್ರಾಮ್ಯ, ಒರಟು, ಸಂಸ್ಕಾರವಿಲ್ಲದ ಜಡತನಗಳು ಮತ್ತು ಅನ್ಯಲಕ್ಷಣಗಳು ಅವನ ಕೆಲವು ಗದ್ಯಲೇಖನಗಳಲ್ಲಿಯೂ ಗೋಚರಿಸುವವು ನಿಜ. ಆದರೆ ಈ ಎಲ್ಲ ಅಂಶಗಳು ಅವನ ವ್ಯಕ್ತಿತ್ವದ ಒಂದು ಭಾಗ, ಅವನು ಬರೆದ ಗದದ್ಯಲ್ಲಿ ಹೆಚ್ಚಿನ ಭಾಗ ಕೇವಲ ಪತ್ರಿಕಾಲೇಖನವಾಗಿದ್ದಿತೇ ಹೊರತು ಸಾಹಿತ್ಯವಾಗಿರಲಿಲ್ಲ ಎಂಬುದನ್ನು ನಾವು ಅರಿತಿದ್ದರೂ, ಅವನು ಗುಜರಾತೀ ಸಾಹಿತ್ಯದಲ್ಲಿ ಗದ್ಯಕ್ಕೆ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟನು ಮತ್ತು ಆನಂತರ ತನ್ನ ಉತ್ಸಾಹ, ಆವೇಶ ಮತ್ತು ವ್ಯಕ್ತಿತ್ವದ ಮಹತಿಯಿಂದ ತಾನೇ ಅದರ ವಿಕಾಸಕ್ಕೆ ತಕ್ಕಷ್ಟು ಕಾರಣನಾದನು ಎಂಬ ಮಾತಿನಲ್ಲಿ ತುಂಬ ಹುರುಳಿದೆ. ಶ್ರೀ ಜೆ. ಇ. ಸಜಾನಾ ಎಂಬ ಪ್ರಖ್ಯಾತ ವಿದ್ವಾಂಸನು ಮತ್ತು ನರ್ಮದಾಶಂಕರನ ವ್ಯಕ್ತಿ ಮತ್ತು ಲೇಖಕ ಎಂಬ ಎರಡೂ ಸಂದರ್ಭಗಳಲ್ಲಿ ಅತ್ಯಂತ ಕಟುವಾದ ಟೀಕಾಕಾರನೆನಿಸಿದವನು ಕೂಡ "ನರ್ಮದನಿಗೆ ಗುಜರಾತೀ ಗದ್ಯಲೇಖಕರಲ್ಲಿ ಪ್ರವರ್ತಕ ಎಂಬ ಅಷ್ಟೇ ಅಲ್ಲದೆ ಪ್ರಪ್ರಥಮ ಲೇಖಕ ಎಂಬ ಗೌರವವು ಸಲ್ಲುತ್ತದೆ" ಎಂದಿದ್ದಾನೆ. ನಾವೂ ಅವರ ಅಭಿಪ್ರಾಯವನ್ನು ಒಪ್ಪಲೇ ಬೇಕು ಎಂದು ಹೇಳಬೇಕಾಯಿತು.

ಈ ಬಗೆಯಾಗಿ ಪದ್ಯ ಮತ್ತು ಗದ್ಯ ಪ್ರಕಾರಗಳ ಲೇಖಕನಷ್ಟೇ ಆಗಿರದೆ ನರ್ಮದನು ವಿದ್ವತ್ತೆಯ ಕ್ಷೇತ್ರದಲ್ಲಿಯೂ ಬುನಾದಿಯ ಕೆಲಸವನ್ನು ಕೈಕೊಂಡಿದ್ದನು. ಛಂದಶ್ಶಾಸ್ತ್ರದ ಪುಸ್ತಕಗಳು ಇಲ್ಲ ಎಂಬುದು ಆತನಿಗೆ ತಿಳಿದಕೂಡಲೆ ಅವನು ಪಿಂಗಳಶಾಸ್ತ್ರದ ಮೇಲೆ ಒಂದು ಇಡಿಯ ಗ್ರಂಥವನ್ನೇ ರಚಿಸಿ ದೇಶೀಮಾತ್ರೆಗಳ ಪರಿಚಯವನ್ನು ಮಾಡಿಕೊಡುವಲ್ಲಿ ಮೊದಲಿಗನಾದನು. ಆ ಗ್ರಂಥಕ್ಕಾಗಿ ಸಾಮಗ್ರಿಯನ್ನು ದೊರಕಿಸುವಾಗ್ಗೆ ಅವನು ಕೈಗೊಂಡ ಶ್ರಮ ಮತ್ತು ಪಟ್ಟ ಕಷ್ಟ ಇವುಗಳ ಬಗ್ಗೆ ಪುಸ್ತಕದ ಮೊದಲ ಭಾಗದಲ್ಲಿ ಕೊಟ್ಟಿರುವ ಕಾರಣ ಇಲ್ಲಿ ಅದನ್ನು ಮತ್ತೆ ಹೇಳುವದೇನು ಬೇಡವಾಗಿದ್ದರೂ ಆ ಮನುಷ್ಯನ ಉದ್ಯೋಗಶೀಲತೆ ಮತ್ತು ವ್ಯಾಸಂಗಪ್ರಿಯತೆಯ ಬಗ್ಗೆ ಅದು ಸಾಕಷ್ಟು ವಿಷಯವನ್ನು ತಿಳಿಸುತ್ತದೆ. ಹಾಗೆ ಒಂದು ಕಾರ್ಯವು ಇನ್ನೊಂದಕ್ಕೆ ದಾರಿಯನ್ನು ತೋರಿಸಿತು. ಪಿಂಗಳದ ಮೇಲೆ ಅವನು ಗ್ರಂಥವನ್ನು ನಿರ್ಮಿಸಿದ ತರುವಾಯ, ಅವನು 'ರಸ-ಪ್ರವೇಶ', 'ನಾಯಿಕಾ ಪ್ರವೇಶ', ಮತ್ತು 'ಅಲಂಕಾರ ಪ್ರವೇಶ'ಗಳಂತ ಪುಸ್ತಕಗಳನ್ನು ಒಂದರ ಮೇಲೆ ಒಂದನ್ನು ರಚಿಸಿದನು. ಈ ವಿಷಯಗಳ ಅಧ್ಯಯನಕ್ಕಾಗಿ ಆತನು ತುಂಬ ಪರಿಶ್ರಮವನ್ನು ವಹಿಸಿದನು ಮತ್ತು ತನ್ನ ಸೀಮಿತವಾದ ಸಾಧನಗಳಲ್ಲಿ ಈ ವಿಷಯಗಳನ್ನು ಅರಿತುಕೊಳ್ಳಲು ಮತ್ತು ಅವುಗಳ ಬಗ್ಗೆ ಬರೆಯಲು ತುಂಬ ಪ್ರವಾಸವನ್ನು ಮತ್ತು ವೆಚ್ಚವನ್ನು ಮಾಡಿದನು. ಆ ಭಾಷೆಯಲ್ಲಿ ಸ್ವಾಭಾವಿಕವಾಗಿಯೆ ಅವು ಮೊದಲ ಪುಸ್ತಕಗಳೆನಿಸಿಕೊಂಡವು. ಅವನು ವ್ಯಾಕರಣದ ಬಗ್ಗೆಯೂ ಒಂದು ಗ್ರಂಥವನ್ನು ಬರೆದು ಅದಕ್ಕೆ 'ವ್ಯಾಕರಣ ಪ್ರವೇಶ' ಎಂಬ ಹೆಸರಿಟ್ಟನು.

ವಿದ್ವನ್ಮಂಡಲಿಗಳಲ್ಲಿ ಈ ಗ್ರಂಥಗಳ ವೈಶಿಷ್ಟ್ಯದ ಬಗ್ಗೆ ಏನೇ ಅಭಿಪ್ರಾಯವಿರಲಿ, ಕಾವ್ಯಶಾಸ್ತ್ರದ, ಸಾಹಿತ್ಯದ ಮತ್ತು ಸಂಸ್ಕೃತಿಯ ವಿಷಯವಾಗಿ ಆ ವ್ಯಕ್ತಿಯ ಹೃದಯದಲ್ಲಿ ಹುದುಗಿದ್ದ ಅಮಿತವಾದ ಉತ್ಸಾಹ, ಮತ್ತು ಅವುಗಳ ಬಗ್ಗೆ ಅವನಲ್ಲಿ ಜಾಜ್ವಲ್ಯವಾಗಿದ್ದ ಅಪ್ರತಿಮ ಪ್ರೇಮ ಇವುಗಳಿಗಾಗಿ ನಮಗೆ ಕೌತುಕವೆನಿಸುತ್ತದೆ.

ವಿದ್ವತ್ತಿನ ವಿಶ್ವದಲ್ಲಿ ಅವನು ಮಾಡಿದ ಕೆಲಸವು ಅಗಾಧವಾಗಿದ್ದರೂ, ಬಹು ಕಾಲ ಬಾಳುವಂತಹದಾಗಿದ್ದರೂ ಅವನು ದುಡಿದ ಈ ಕ್ಷೇತ್ರದಲ್ಲಿ ಅವನ ನಾಮ ನಿರ್ದೇಶವು ಕೂಡ ಆಗುವದಿಲ್ಲ. ಆದರೆ ಆ ಕಾರ್ಯಕ್ಕೆ ತಕ್ಕ ಅರ್ಹತೆಯಿರದಿದ್ದರೆ ಯಾರಿಗೂ ಅಲ್ಲಿ ಕೆಲಸಮಾಡುವದು ಸಾಧ್ಯವಿರಲಿಲ್ಲ ಎಂಬುದನ್ನು ಮರೆಯಬಾರದು. ಅವನು ಅದಕ್ಕಾಗಿ ತನ್ನ ಕ್ಷಮತೆಯನ್ನು ಹೆಚ್ಚುಮಾಡಿಕೊಳ್ಳಲಿಕ್ಕೆ ಎಷ್ಟು ಕಷ್ಟ ಪಟ್ಟನು ಎಂಬುದು ನಮಗೆ ತಿಳಿದಿದೆ. ಅವನೇನು ಸಂಸ್ಕೃತದಲ್ಲಿ ಪರಿಣತನಿರಲಿಲ್ಲ; ಸುತರಾಂ ಇಲ್ಲ. ಆದರೆ ಭಾಂಡಾರಕಾರಂತಹ ವಿದ್ವಾಂಸರ ಸ್ನೇಹವು ಆ ಕ್ಷೇತ್ರದಲ್ಲಿ ಉಡಾಳನಂತೆ ಓಡಾಡುತ್ತಿರುವವರಿಗೇನು ದೊರೆಯುವದು ಸಾಧ್ಯವಿರಲಿಲ್ಲ. ಅದಲ್ಲದೆ ಇಂತಹ ವೈವಿಧ್ಯಮಯ ಕಾರ್ಯವು ಕೇವಲ ಉದ್ಯಮಶೀಲತೆಯಿಂದಷ್ಟೆ ಸಾಧ್ಯ

ವಾಗದು. ಅಂತೆಯೆ ನಾವು ಅವನಿಗೆ ವಿದ್ವಾಂಸ ಎಂದೆನ್ನದಿದ್ದರೂ ಆ ಕ್ಷೇತ್ರದಲ್ಲಿ ಶ್ರಮಪಟ್ಟು ದುಡಿದ ಮತ್ತು ಅನವರತವಾಗಿ ಹೆಣಗಿದ ಒಬ್ಬ ವ್ಯಕ್ತಿಗೆ ಸಲ್ಲಬಹುದಾದ ಗೌರವವನ್ನು ಅರ್ಪಿಸಬಹುದು ; ಯಾಕೆಂದರೆ ಅಂತಹ ವಿಶ್ವದಲ್ಲಿ ಯಾವ ಸಾಮಾನ್ಯ ಮನುಷ್ಯರಿಗೂ ಪ್ರವೇಶಿಸುವ ಧೈರ್ಯವಾಗುವದಿಲ್ಲ.

ಕಾವ್ಯದೇವಿಯು ಅವನೊಡನೆ ಮುನಿದುಕೊಂಡಾಗ್ಗೆ ಆತನು ಆಲಸ್ಯದಲ್ಲಿ ಕಾಲಕಳೆಯದೆ, ಅಥವಾ ತನ್ನ ಹಿಂದಿನ ಹೆಗ್ಗಳಿಕೆಯ ಬಗ್ಗೆ ಕಗ್ಗಗಳನ್ನು ಕಟ್ಟುತ್ತ ನಡೆಯದೆ, ಅರ್ವಾಚೀನ ಮತ್ತು ಪ್ರಾಚೀನ ಕಾಲಗಳೆರಡನ್ನೂ ಸೇರಿದಂತೆ ಪ್ರಪಂಚದ ಚರಿತ್ರೆಯನ್ನು ಬರೆಯಲಿಕ್ಕೆ ಕುಳಿತುಕೊಂಡನು. ಈ ಅದ್ಭುತವಾದ ಕೆಲಸವನ್ನು ಆರಂಭಿಸುವ ಮೊದಲು ತಾನು ಆ ವಿಷಯವಾಗಿ ಇನ್ನೂರು ಗ್ರಂಥ ಗಳನ್ನು ಓದಿದ ಬಗ್ಗೆ ಅವನೇ ಹೇಳುತ್ತಾನೆಯಾದರೂ ಅವನು ಇನ್ನೂ ಅನೇಕ ಪುಸ್ತಕಗಳನ್ನು ಓದಿರಲಿಕ್ಕೆ ಸಾಕು ಎಂದು ನಾವು ಸಹಜವಾಗಿಯೆ ಊಹಿಸಬಹುದು. ಯಾಕೆಂದರೆ ಅಂತಹ ಗಾತ್ರದ ವಿಷಯವನ್ನು ಸಂಪೂರ್ಣವಾಗಿ ಗ್ರಹಿಸಬೇಕಾದರೆ ಅದರಲ್ಲಿ ಸತತವಾಗಿ ಮಗ್ನನಾಗದೆ ಸಾಧ್ಯವಿಲ್ಲ ಎಂಬ ಮಾತು ಸ್ಪಷ್ಟವಾಗಿದೆ. ಅವನು ಅನಂತರ ಬರೆದ ' ಮಹಾಪುರುಷರ ಜೀವನಚರಿತ್ರೆಗಳು " ಎಂಬ ಬೃಹತ್‌ಕೃತಿಯನ್ನು ರಚಿಸುವದರಲ್ಲಿಯೂ ಆತನು ತುಂಬ ಅಧ್ಯಯವನ್ನು ಕೈಕೊಂಡು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕಾಯಿತು. ಈ ಕಾಲದಲ್ಲೆಲ್ಲ ಆತನು ಎಂತಹ ದುರ್ಧರ ಪರಿಸ್ಥಿತಿ ಯಲ್ಲಿ ಹೆಣಗಬೇಕಾಗುತ್ತಿದ್ದಿತು ಎಂಬುದರ ಅರಿವಾದರೆ ಸಾಹಿತ್ಯ ಮತ್ತು ಸಂಸ್ಕೃತಿ ಯಂತಹ ವಿಷಯದಲ್ಲಿ ಅವನು ಎಷ್ಟು ಆಳವಾಗಿ ಆಸಕ್ತನಾಗಿದ್ದನು ಎಂಬುದು ನಮಗೆ ಅರ್ಥವಾಗುವದು.

ಇದು ಮಾತ್ರ ಎಲ್ಲ ಆಗಿರಲಿಲ್ಲ. ಅವನು ಈ ಮಹಾಪುರುಷರ ಜೀವನ ಕಥೆಗಳ ಪುಸ್ತಕವನ್ನು ಪ್ರಕಟಗೊಳಿಸಿದ ವರ್ಷವಾದ ೧೮೭೦ ರಲ್ಲಿ ಆತನು ರಾಮಾಯಣ, ಮಹಾಭಾರತ ಮತ್ತು ಇಲಿಯಡ್‌ಗಳ ಕತೆಗಳನ್ನು ಹೇಳುವ ಗ್ರಂಥ ಗಳನ್ನು ಕೂಡ ಪ್ರಕಟಿಸಿದ್ದನು. ನಮಗೆಲ್ಲರಿಗೆ ತಿಳಿದಂತೆ ಈ ಎಲ್ಲ ಮಹಾ ಕಾವ್ಯಗಳನ್ನು ಓದಿಕೊಳ್ಳುವದೇ ಒಂದು ದೊಡ್ಡ ಕೆಲಸವಾಗಿ ಕೇವಲ ಕೆಲವರು ಮಾತ್ರ ಅವುಗಳನ್ನು ಪೂರ್ಣವಾಗಿ ಓದುವ ತೊಂದರೆಯನ್ನು ತೆಗೆದುಕೊಳ್ಳುವರು. ಆದರೆ ಈ ಮನುಷ್ಯನು ಆ ಮೂರೂ ಕೃತಿಗಳನ್ನು ಬಹಳ ಆಳವಾಗಿ ಪರಿಸಿದನಷ್ಟೇ ಅಲ್ಲದೆ ಅವುಗಳ ಸಾರವನ್ನು ತೆಗೆಯುವಷ್ಟು ಅವುಗಳ ಅಧ್ಯಯನವನ್ನು ಮಾಡಿದನು ಮತ್ತು ಆ ಮೂರು ಮಹಾಕಾವ್ಯಗಳ ಸಂಗ್ರಹ ಎಂದು ಹೆಸರಿಸಿ ಅವುಗಳ ಪ್ರಕಾಶನಕ್ಕೆ ದಾರಿಯನ್ನು ಮಾಡಿಕೊಂಡನು.

ಸಾಹಿತ್ಯಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿ ನರ್ಮದಾಶಂಕರನು ಮಾಡಿದ ಕೃಷಿಯು ಇವುಗಳಿಂದ ಪೂರ್ಣವಾಗುವದಿಲ್ಲ. ಅವನು ಪದ್ಯವನ್ನು ರಚಿಸಿ ದನು ; ಗದ್ಯವನ್ನು ಬರೆದನು ; ಅವನು ಚರಿತ್ರೆಯನ್ನು ಬರೆದನು ; ಜೀವನ

ಚರಿತ್ರೆಗಳನ್ನು ಬರೆದನು ; ಅವನು ರಸ-ಶಾಸ್ತ್ರವನ್ನು ಬರೆದನು ಮತ್ತು ಅವನು ಕಾವ್ಯಶಾಸ್ತ್ರವನ್ನು ರಚಿಸಿದನು. ಅವನು ವ್ಯಾಕರಣದಂತಹ ಕ್ಲಿಷ್ಟ ಮತ್ತು ಶುಷ್ಕ ವಿಷಯಗಳನ್ನು ಪ್ರಕಟಿಸಿದನಷ್ಟೇ ಅಲ್ಲದೆ ಸಂಶೋಧನೆಯಲ್ಲಿಯೂ ಕೆಲಸವನ್ನು ಕೈಕೊಂಡನು. ಹಾಗೆಯೆ ಹಿರಿಯ ಲೇಖಕರ ಕೃತಿಗಳನ್ನು ಸಂಪಾದಕನಾಗಿ ಬೆಳಕಿಗೆ ತಂದನು.

ದಯಾರಾಮನ ಕವನಗಳ ಒಂದು ಸಂಕಲನವನ್ನು ಸಂಪಾದಿಸಿ ನರ್ಮದಾ ಶಂಕರನು ಪ್ರಕಟಿಸಿದ ಸಂಗತಿಯನ್ನು ನಾವು ಈಗಾಗಲೇ ತಿಳಿದಿದ್ದೇವೆ. ಅವನು ಕೈಗೊಂಡ ವಾಡಿಕೆಯ ಅನೇಕ ಪ್ರವಾಸಗಳಲ್ಲಿ ಒಮ್ಮೆ ಆತನು ನರ್ಮದಾ ನದಿಯ ದಂಡೆಯ ಮೇಲಿರುವ ದಾಬೋಯಿ ಎಂಬ ಊರಿಗೆ ಹೋಗಿದ್ದನು. ದಯಾರಾಮನು ತನ್ನದಾದ ಆ ಸ್ಥಳಕ್ಕೆ ನರ್ಮದಾಶಂಕರನನ್ನು ಸ್ವಾಗತಿಸಿದನು. ಅಲ್ಲಿ ಇದ್ದಾಗ್ಗೆ ನರ್ಮದಾಶಂಕರನು ದಯಾರಾಮನ ಜೀವನ ಮತ್ತು ಕಾರ್ಯದ ವಿಷಯವಾಗಿ ಸಾಮಗ್ರಿಗಳನ್ನು ಸಂಗ್ರಹಿಸಲಣಿಯಾದನು. ಆಗ್ಗೆ ದಯಾರಾಮನ ಬಗ್ಗೆ ಪ್ರಚಲಿತ ವಾಗಿದ್ದ ಅವನ ಭೂಮಿಕೆಯು ಸರಿಯಾಗಿರುವಂತೆ ಅವನು ಯತ್ನಿಸಿದನು. ಈ ಎಲ್ಲ ಅಂಶಗಳ ಬಗ್ಗೆ ಈತನು ನಡೆಯಿಸಿದ ಪತ್ರವ್ಯವಹಾರವು ಅತ್ಯಂತ ರಮ್ಯವಾದ ವಿಷಯವೆನಿಸಿದೆ. ದಯಾರಾಮನ ಕವನಗಳನ್ನು ಒಳಗೊಂಡ ಗ್ರಂಥಗಳನ್ನು ಸಂಪಾದಿಸುವದಲ್ಲದೆ ನಲಾಖ್ಯಾನ ಎಂಬ ಹೆಸರಿನ ಕವಿ ಪ್ರೇಮಾನಂದನ ಒಂದು ಪ್ರಖ್ಯಾತ ನೀಳ್ಗವನವನ್ನು ನರ್ಮದಾಶಂಕರನು ಸಂಪಾದಕನಾಗಿ ಪ್ರಕಟಿಸಿದನು. ಈ ಮೊದಲು ನಾವು ಪ್ರೇಮಾನಂದನು ಗುಜರಾತದ ಶ್ರೇಷ್ಠತಮ ಕವಿಯೆಂದು ತಿಳಿದಿದ್ದರೂ ನರ್ಮದಾಶಂಕರನು ಅವನಿಗಿಂತ ತಾನು ಉತ್ತಮ ಕವಿಯೆಂದು ಪ್ರಾಮಾಣಿಕವಾಗಿ ಭಾವಿಸಿದ್ದನು. ಆದರೆ ಅದರಿಂದ ಆ ಹಿರಿಯ ಕವಿಯ ಅರ್ಹತೆಯ ಬಗ್ಗೆ ಅವನೇನು ಅನುಮಾನಿಸಲಿಲ್ಲ. ಆ ಮಹಾಕವಿಯ ಪ್ರಭಾವಪೂರ್ಣವಾದ ಈ ಕವನವನ್ನು ಸಂಪಾದಿಸಿ ಅವನು ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದನು.

ಹೀಗೆ ನರ್ಮದಾಶಂಕರನು ಕೈಕೊಂಡ ಪ್ರಖ್ಯಾತ ಕವಿಗಳ ಕೃತಿಗಳನ್ನು ಸಂಪಾದಿಸಿ ಪ್ರಸಿದ್ಧಗೊಳಿಸುವಷ್ಟು ಮಟ್ಟಿಗೆ ಮಾತ್ರ ಅವನ ಸಂಶೋಧನ ಕಾರ್ಯವು ಸೀಮಿತವಾಗಿರಲಿಲ್ಲ. ಅವನು ನಾಗರ ಸಮಾಜದ ಸದಸ್ಯನಾಗಿದ್ದನು. ಈ ಸಮಾಜದ ಸ್ತ್ರೀಯರು ಅತ್ಯಂತ ರೂಪವತಿಯರಾಗಿದ್ದು ಅವರು ಸಂಗೀತಕಲೆಯನ್ನು ಅರಿತವ ರಾಗಿರುತ್ತಾರೆ. ವಾಸ್ತವಿಕವಾಗಿ ನಾಗರ ಮಗುವಿನ ಪೋಷಣೆಯಲ್ಲಿ ಹಾಡುಗಾರಿಕೆಯು ಪ್ರಮುಖವಾದ ಅಂಶವಾಗಿರುತ್ತದೆ. ನರ್ಮದಾಶಂಕರನು ಈ ಮಹಿಳೆಯರು ಹೇಳುತ್ತಿದ್ದ ಹಾಡುಗಳನ್ನು ಸಂಗ್ರಹಿಸಿ ಅವುಗಳನ್ನು ಸಮರ್ಪಕವಾಗಿ ವರ್ಗೀಕರಿಸಿ ಅವುಗಳ ಸಂಕಲನವೊಂದನ್ನು ಪ್ರಕಟಿಸಿದನು. ಈ ಕಾರ್ಯವು ಕೂಡ ೧೮೭೦ ರಲ್ಲಿಯೆ ಈಡೇರಿತು. ಈ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಲಿಕ್ಕೆ ಆತನು ತನ್ನ ಮಡದಿ ಮತ್ತು ತಮ್ಮ ಪರಿಚಯದ ಅನ್ಯ ವನಿತೆಯರ ಸಹಾಯವನ್ನು ಪಡೆಯಬೇಕಾಯಿತು ;

ಯಾಕೆಂದರೆ ಒಬ್ಬ ಪುರುಷನು ಅವರೆಡೆಗೆ ಬಂದು ಅವರು ಹೇಳುತ್ತಿದ್ದ ಹಾಡುಗಳನ್ನು ಕೇಳಬಯಸಿದರೆ ಹಾಗೆ ಅವರು ಹಾಡುತ್ತಿರಲಿಲ್ಲ—ಆ ದಿನಗಳಲ್ಲಿ! ಅಷ್ಟಾದರೂ ಎಷ್ಟೋ ಜನ ಸ್ತ್ರೀಯರು ಅವನೊಡನೆ ಸಹಕರಿಸಲಿಲ್ಲ; ಇತ್ತ ಆ ಕೆಲಸವು ಮಾತ್ರ ಪೂರ್ಣವಾಗಿ ಅಂತಹ ಒಂದು ಗ್ರಂಥವು ಬೆಳಕನ್ನು ಕಂಡಿತು.

ನಾಗರ ಸಮಾಜದ ಹೆಂಗಸರು ಸುಂದರಿಯರೂ ಸಂಗೀತಪ್ರಿಯರೂ ಆಗಿರುವಂತೆ ಈಗಿನ ಕಾಠಿಯಾವಾಡ-ಸೌರಾಷ್ಟ್ರದ ಸ್ತ್ರೀಯರು ಮತ್ತು ಪುರುಷರು ತಮ್ಮ ಶೌರ್ಯ ಮತ್ತು ಜನಪದ ಸಾಹಿತ್ಯಗಳಿಗಾಗಿ ಪ್ರಖ್ಯಾತರಾಗಿದ್ದಾರೆ. ನರ್ಮದಾಶಂಕರನು ಈ ಲೋಕಸಾಹಿತ್ಯವನ್ನು ಕುರಿತು ವಿಷಯಸಂಗ್ರಹದಲ್ಲಿ ತೊಡಗಿದನು. ಈ ಬಗ್ಗೆ ಅವನು ಕೈಕೊಂಡ ಪತ್ರೋತ್ತರವು ಅವನ ಪ್ರಯತ್ನದ ನಿದರ್ಶನವಾಗಿದೆ ನಿಜ; ಆದರೆ ಅದರ ಫಲವಾಗಿ ಗ್ರಂಥವೊಂದು ಮಾತ್ರ ಪ್ರಕಟವಾಗಲಿಲ್ಲ. ಅದರಿಂದೇನೂ ಅವನು ತಡೆಯಲಿಲ್ಲ. ಆ ಜನಸಾಹಿತ್ಯದ ಒಂದು ಪುಸ್ತಕವನ್ನು ಅವನು ಪ್ರಕಾಶನಕ್ಕೆ ಕೊಡಲಾರದೆ ಹೋದರೂ ಆ ಕ್ಷೇತ್ರದ ಅಧ್ಯಯನವನ್ನೇನೂ ಅವನು ಬಿಟ್ಟು ಕೊಡಲಿಲ್ಲ. ಆ ಅವನ ವ್ಯಾಸಂಗದ ಪರಿಣಾಮವೆಂದು ಅವನು 'ಕಾಠಿಯಾವಾಡ ಸರ್ವಸಂಗ್ರಹ' ಎಂಬ ಹೆಸರಿನ, ಆ ಪ್ರದೇಶದ ವಿಶ್ವಕೋಶವೆನಿಸುವಂತಹ ಗ್ರಂಥವನ್ನು ಪ್ರಕಟಿಸಿದನು.

ಭಾಷೆಯನ್ನು ಬರೆಯುವದು ಹೇಗೆ—ಅಂದರೆ ಅದರ ಭಾಷಾತ್ಮಕ ಅಂಶದಲ್ಲಿ ಅಲ್ಲದೆ ಅದರ ಅಕ್ಷರ-ಯೋಜನೆಯ ವಿಷಯದಲ್ಲಿ ನರ್ಮದಾಶಂಕರನು ಆಸ್ಥೆಯನ್ನು ತಳೆದಿದ್ದನು. ಅವನು ಜರುಗಿಸಿದ ಈ ವಿಷಯದ ಪ್ರಯತ್ನವನ್ನು ಗುಜರಾತೀ ಭಾಷೆಯ ಮೊದಲ ಶ್ರೇಷ್ಠ ಭಾಷಾಶಾಸ್ತ್ರಿಯೂ ಸಾಹಿತ್ಯಪ್ರೇಮಿಯೂ ಎಂದು ಹೆಸರಾದ ದಿವಂಗತ ನರಸಿಂಹರಾವ ದಿವಾಟಿಯಾ ಅವರು ಬಹುವಾಗಿ ಶ್ಲಾಘಿಸಿದ್ದಾರೆ.

ಲೇಖಕನೆಂದು ನರ್ಮದಾಶಂಕರನು ಸಾಹಿತ್ಯಪ್ರಪಂಚಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕಲಾಪಗಳಲ್ಲಿ ಆಸಕ್ತಿಯನ್ನು ವಹಿಸಿದ್ದನಷ್ಟೇ ಅಲ್ಲದೆ ಅವುಗಳಲ್ಲಿ ಆತನು ತುಂಬ ಕಾರ್ಯಶೀಲನಾಗಿದ್ದನು. ವೈಯಕ್ತಿಕ ಜೀವನದಲ್ಲಿ ಅವನು ದುಃಸಹವಾದ ಕಷ್ಟ-ನಷ್ಟಗಳನ್ನು ಎದುರಿಸಬೇಕಾಗಿದ್ದರೂ, ಹಣವನ್ನು ಗಳಿಸುವದಕ್ಕಾಗಿ ಸಂಬಳದ ಯಾವ ಕೆಲಸವನ್ನೂ ಹಿಡಿಯುವಂತಿಲ್ಲ ಎಂಬ ವ್ರತವನ್ನು ತಾನೇ ತನ್ನ ಮೇಲೆ ವಹಿಸಿಕೊಂಡು ಎಲ್ಲ ಭಾರವನ್ನು ಸ್ವತಃ ಹೊತ್ತುಕೊಳ್ಳಬೇಕಾದರೂ ಆತನು ಆ ವಿಷಯದ ಯಾವ ಕ್ಷೇತ್ರವನ್ನೂ ಪ್ರವೇಶಿಸದೆ ಬಿಟ್ಟಿಲ್ಲ. ಈ ಕಾರಣಕ್ಕಾಗಿಯೆ ಅವನ ಭಾಷಾಬಾಂಧವರು ಇಂದು ಅವನಿಗೆ ಕೃತಜ್ಞತೆಯನ್ನು ಸಲ್ಲಿಸಿ ಅವನ ಸೇವೆಯನ್ನು ಹೊಗಳುತ್ತಾರೆ; ಅವನು ಕೈಕೊಂಡ ಪ್ರತಿಯೊಂದು ಕಾರ್ಯದಲ್ಲಿ ಅವನು ಸಮನಾದ ಯಶಸ್ಸನ್ನು ಪಡೆಯಲಿಲ್ಲ ಎಂಬ ಮಾತು ಬೇರೆ.

## ೧೧

ನರ್ಮದಾಶಂಕರನನ್ನು ಲೇಖಕ ಎಂಬ ಸಂಬಂಧದಲ್ಲಿ ಅವಲೋಕಿಸಿದನಂತರ ನಾವು ಅವನೊಬ್ಬ ವ್ಯಕ್ತಿ ಎಂದು ಪರೀಕ್ಷಿಸಹೊರಟರೆ ಅಲ್ಲಿ ಅವನು ಇನ್ನು ಹೆಚ್ಚು ಅಲ್ಲದಿದ್ದರೂ ಅಷ್ಟೆ ಶ್ರೇಷ್ಠನಾಗಿ ನಮಗೆ ಕಂಡುಬರುವನು. ನಿಜವಾಗಿಯೂ ಆತನು ಲೇಖಕ ಎಂಬುದಕ್ಕಿಂತ ವ್ಯಕ್ತಿಯೆಂದು ಹೆಚ್ಚು ಉತ್ಕೃಷ್ಟನಾಗಿದ್ದನು. ಅವನ ಬಾಲ್ಯದಲ್ಲಿ ಮುಂದೆ ಅವನು ಶ್ರೇಷ್ಠ ಮತ್ತು ಧೈರ್ಯಶೀಲ ಮನುಷ್ಯನಾಗಿ ಬೆಳೆಯುವನು ಎಂಬ ಯಾವ ನಿದರ್ಶನವೂ ಸ್ಪಷ್ಟವಾಗಿ ಕಂಡುಬರಲಿಲ್ಲ. ಅವನೇ ನಮಗೆ ಹೇಳುವಂತೆ ಆಗಿನ ದಿನಗಳಲ್ಲಿ ತಾನೊಬ್ಬ ಪುಕ್ಕ ಮತ್ತು ಮುಖಹೀನ ಹುಡುಗನಾಗಿದ್ದನು ಮತ್ತು ವಿವಿಧ ದೇವತೆಗಳ ಕೋಪಕ್ಕೆ ತಾನು ಕಾರಣವಾಗ ಬಹುದು ಎಂಬ ಹೆದರಿಕೆಯಲ್ಲಿಯೂ ಇರುತ್ತಿದ್ದನು ಮತ್ತು ಚಿತ್ತದಲ್ಲಿ ಅವನು ಭಯಾನಕವಾದ ಕನಸುಗಳನ್ನು ಕೂಡ ಪಡೆಯುತ್ತಿದ್ದನು. ಅಂತೆಯೆ ಮುಂದೆ ಆತನ ಬದುಕಿನಲ್ಲಿ ಸಂಕೋಚವನ್ನು ತೊರೆದು ಅಷ್ಟೇ ಅಲ್ಲದೆ ತಾನಾಗಿಯೆ ಮುನ್ನುಗ್ಗಿಹೋಗಿ ಎಂತಹ ಸಂದರ್ಭವನ್ನಾದರೂ ಎದುರಿಸುವ ಧೈರ್ಯವನ್ನು ಪಡೆದು, ಯಾರ ಮುಂದೆಯೆ ಆಗಲಿ ಬಂದು ನಿಲ್ಲಲಿಕ್ಕೆ ಅಥವಾ ಎಷ್ಟೇ ಅಪಥ್ಯ ವಾಗಿರಲಿ, ಬೇಕಾದುದನ್ನು ನುಡಿಯುವಂತೆ ಆದ ಅವನ ಪರಿವರ್ತನೆಯನ್ನು ಕಂಡು ಯಾರಿಗಾದರೂ ವಿಸ್ಮಯವೆನಿಸಬಹುದು. ತಾರುಣ್ಯದಲ್ಲಿ ಅವನು ತಳೆದ ದೇವಲಂಡ ಪ್ರವೃತ್ತಿಯ ವಿಷಯವಾಗಿಯೂ ಅಷ್ಟೆ ಆಶ್ಚರ್ಯವಾಗಬಹುದು. ಆದರೆ ಈ ಸಂದರ್ಭ ದಲ್ಲಿ ಆಧುನಿಕ ಮಾನಸಶಾಸ್ತ್ರವು ಅನೇಕ ಇಂತಹ ನಡವಳಿಕೆಯ ಅರ್ಥವನ್ನು ತಿಳಿಸಬಹುದು ; ಆದರೂ ಆ ವ್ಯಕ್ತಿಯಲ್ಲಿ ಆದ ಬದಲಾವಣೆಯ ಕಾರಣಗಳ ವಿಶ್ಲೇಷಣೆಯನ್ನು ಮಾಡುವ ಸ್ಥಳ ಇದಲ್ಲ. ಮುಂದೆ ಅವನ ಜೀವನದ ಕೊನೆಯ ಭಾಗದಲ್ಲಿ ಅವನ ಸ್ವಭಾವದಲ್ಲಿ ಸಂಭವಿಸಿದ ಪ್ರತಿಮುಖದ ವಿಚಾರಣೆಯು ಕೂಡ ನಮಗೆ ಅರ್ಥವಾಗುವದು.

ಅದನ್ನೆಲ್ಲ ಒಂದು ಬದಿಗೆ ಸರಿಸಿ ನಾವು ನರ್ಮದಾಶಂಕರನು ಒಬ್ಬ ಧೀರಪುರುಷನಾಗಿದ್ದು ಪ್ರಬಲವಾದ ವ್ಯಕ್ತಿತ್ವವುಳ್ಳವನಾಗಿದ್ದನು ಎಂದು ಯಾವ ವಿರೋಧಾಭಿಪ್ರಾಯದ ಭಯವಿಲ್ಲದೆ ಹೇಳಬಹುದು. ಪ್ರಭಾವಪೂರ್ಣ ವ್ಯಕ್ತಿ ನಿಜ ; ನಾವು ಅದರಂತೆಯೆ ಅವನು ಶ್ಲಾಘನೀಯನೂ ಆಗಿದ್ದನು ಎಂಬುದನ್ನು ಅವನ ಅನೇಕ ಅವಗುಣಗಳನ್ನು ಲಕ್ಷಿಸಿಯೂ ಧೈರ್ಯವಾಗಿ ಹೇಳಬಹುದು.

ಹೌದು ! ಆತನಲ್ಲಿ ಅನೇಕ ದೋಷಗಳಿದ್ದವು, ಮತ್ತು ಅವೇನೂ ಅಂತಹ ಕ್ಷುಲ್ಲಕವಾದ ದೋಷಗಳೂ ಆಗಿರಲಿಲ್ಲ. ಅವನು ದುರಭಿಮಾನಿಯಾಗಿದ್ದನು, ಆವೇಗಪರನಾಗಿದ್ದನು. ಸಾಕಷ್ಟು ಕಾರಣವಿಲ್ಲದೆ ಅವನು ಅವಮಾನಿತನಾಗು ತ್ತಿದ್ದನು ಮತ್ತು ಅನ್ಯರಿಗೆ ಅನರ್ಥವಾಗುವಂತೆ ಅವರನ್ನು ಪ್ರತಿಯಾಗಿ ದೋಷಕ್ಕೆ

ಗುರಿಪಡಿಸುತ್ತಿದ್ದನು. ಗುಜರಾತೀ ಭಾಷೆಯಲ್ಲಿ ಮೊದಲನೆಯ ಅಪ್ರತಿಮ ಕಾದಂಬರಿ ಯೆನಿಸಿದ 'ಕರಣ ಘೇಲೊ' ಎಂಬ ಗ್ರಂಥದ ಲೇಖಕನಾದ ನಂದ ಶಂಕರನು ತನಗೆ ಅನ್ಯಾಯ ಮಾಡಿರುವನೆಂಬ ತೋರಿಕೆಯ ಕಾರಣದ ಮೇಲೆ ನರ್ಮದಾ ಶಂಕರನು ಅವನೊಡನೆ ಮಾಡಿದ ಉಗ್ರ ಆರೋಪದ ಪತ್ರವ್ಯವಹಾರವು ಅವನು ಹೆರವರನ್ನು ಅಪಮಾನಗೊಳಿಸುವ ಶಕ್ತಿಯನ್ನು ಪಡೆದಿದ್ದನು ಮತ್ತು ಸತ್ಯವನ್ನು ಕಠೋರ ಹಾಗೂ ನಿಶಿತವಾದ ಸತ್ಯ ಎಂದು ಹೇಳುವುದನ್ನು ಅರಿತಿದ್ದನು ಎಂಬುದರ ನಿದರ್ಶನವಾಗಿದೆ. ದೋಷಾರೋಪಣೆಯ ವ್ಯಂಗ್ಯ ಮತ್ತು ಯಾಸೆ ಮಾತುಗಳು ಅವನ ಪತ್ರಲೇಖನದಲ್ಲಿ ಹೇರಳವಾಗಿದ್ದು ಇದೇ ವಿಷಯದ ಸತ್ಯತೆಯನ್ನು ಎತ್ತಿ ತೋರಿಸುತ್ತವೆ. ಭಾವನಗರದ ಮಿತ್ರರು ಅವನಿಗೆ ಹಣವನ್ನು ಆಶ್ರಯವನ್ನು ಕೊಟ್ಟು ಸಹಾಯ ಮಾಡಲಿಕ್ಕೆ ಪ್ರಯತ್ನಿಸಿದಾಗ್ಗೆ ಅವನು ಅವರ ವಿರುದ್ಧವಾಗಿ ಲೇಖನಗಳನ್ನು ಬರೆದುದಕ್ಕಾಗಿ ಅವನು ಅವರಿಂದ ಕ್ಷಮೆಯನ್ನು ಪಡೆಯಲಿಲ್ಲ. ಆದರೆ ಅವರಲ್ಲಿ ಶ್ರೀ ಹರಿಪ್ರಸಾದ ಸಂತೋಕರಾಮ ದೇಸಾಯಿ ಎಂಬ ವ್ಯಕ್ತಿಯೊಬ್ಬನು ಮಾತ್ರ ಅವನಿಗೆ ರಹಸ್ಯವಾಗಿ ಒಂದು ಸಾವಿರ ರೂಪಾಯಿಗಳ ಕಾಣಿಕೆಯನ್ನು ನೀಡಿ ಹಾಗೆ ದಾನ ಮಾಡಿದವರ ಹೆಸರು ಕೂಡ ನರ್ಮದಾಶಂಕರನಿಗೆ ತಿಳಿಯದಂತೆ ವರ್ತಿಸಿದನು. ಈ ಮೊದಲಿನ ಪ್ರಕರಣವೊಂದರಲ್ಲಿ ನಿವೇದಿಸಿದ ಈ ಘಟನೆಯ ಸ್ಮರಣೆಯು ವಾಚಕರಿಗೆ ಆಗಬಹುದು. ಮನೆಯಲ್ಲಿ ಕೇವಲ ಏಳು ರೂಪಾಯಿಗಳಿದ್ದಾಗ್ಗೆ ಅವನು ಮುದುಕನೊಬ್ಬನಿಗೆ ನೂರು ರೂಪಾಯಿಗಳನ್ನು ಕೊಡುವ ವಚನವನ್ನು ನೀಡಿದ್ದನು. ಆ ವಯಸ್ಕನಿಗೆ ಕೆಲವು ದಿನಗಳ ತರುವಾಯ ಬರುವಂತೆ ಹೇಳಬೇಕಾಯಿತು. ಅವನು ಹಾಗೆ ಬರುವುದಕ್ಕೆ ಮೊದಲು ನರ್ಮದಾಶಂಕರನು ಕೆಲಜನ ಸ್ನೇಹಿತರೊಂದಿಗೆ ಮಾತನಾಡುತ್ತ ಕುಳಿತಾಗ್ಗೆ ಅಂಚೆಯಾಳು ಬಂದು ಒಂದು ಸಾವಿರ ರೂಪಾಯಿಗಳ ನೋಟುಗಳಿದ್ದ ಪಾಕೀಟೊಂದನ್ನು ಕೊಟ್ಟು ಹೋದನು. ಆ ನೋಟುಗಳ ಸಂಗಡ ಇದ್ದ ರಹಸ್ಯಪೂರ್ಣ ಟಿಪ್ಪಣಿಯು "ನಿಮ್ಮ ಶ್ರೇಷ್ಠ ಮಿತ್ರ ಮತ್ತು ಅಭಿಮಾನಿ"ಯಿಂದ ಎಂಬುದಾಗಿತ್ತು. ಈ ಮಿತ್ರ ಮತ್ತು ಅಭಿಮಾನಿಯು ಬೇರೆ ಯಾರೂ ಆಗಿರದೆ ಭಾವನಗರದ ಶ್ರೀ ಹರಿಪ್ರಸಾದ ಸಂತೋಕರಾಮ ದೇಸಾಯಿಯೆ ಇದ್ದು, ಆ ಕ್ಷಣ ಕವಿಯೊಡನೆ ಮಾತನಾಡುತ್ತಾ ಕುಳಿತು ಯಾರಿಗೂ ಅರ್ಥವಾಗದಂತೆ ಆ ದೃಶ್ಯವನ್ನು ಕಂಡು ಸಂತೋಷಪಡುತ್ತಿದ್ದನು. ನರ್ಮದಾಶಂಕರನು ಅವನನ್ನು ಕಡೆಗಣಿಸಿದ್ದರೂ, ಅವನು ಮಾತ್ರ ಕವಿಯ ಉದಾರಹೃದಯದ ಶ್ಲಾಘನೀಯ ಸ್ನೇಹಿತನೂ, ಅಭಿಮಾನಿಯೂ ಆಗಿದ್ದನು.

ನರ್ಮದಾಶಂಕರನ ಸ್ವಭಾವದಲ್ಲಿದ್ದ ಅಸಹನೆ ಮತ್ತು ಅಸೂಯೆಗಳು ಸಜ್ಜನನೂ, ಶಾಂತನೂ ಆಗಿದ್ದ ದಲಪತರಾಮನೊಡನೆ ಆತನು ಇಟ್ಟುಕೊಂಡ ಸಂಬಂಧದಲ್ಲಿ ಸ್ಫುಟವಾಗಿ ಕಂಡುಬರುತ್ತದೆ. ಆ ವಯೋವೃದ್ಧನು ತನ್ನ ಸಂಗಡ ಮೋಸದ ಆಟವನ್ನು ಆಡುತ್ತಿದ್ದ ತನ್ನ ಹೆಗ್ಗಳಿಕೆ ಮತ್ತು ವರ್ಚಸ್ಸನ್ನು ಕಡೆಗಣಿಸಿ

ನಗೆಗೀಡುಮಾಡಲು ಹವಣಿಸುತ್ತಿರುವನು ಎಂದು ನರ್ಮದಾಶಂಕರನು ಯಾವಾಗಲೂ ಸಂಶಯಗ್ರಸ್ತನಾಗಿದ್ದನು. ಅದರಲ್ಲಿ ಕೆಲವಂಶ ನಿಜವಾಗಿರಬಹುದಾದರೂ ಆ ಹಿರಿಯ ಕವಿಯು ನಿಜವಾಗಿಯೂ ತನಗಿಂತ ಉತ್ತಮನಾಗಿದ್ದರೂ ತಾನು ಅವನಿಗೆ ಮಾಡುತ್ತಿದ್ದ ಅನ್ಯಾಯದ ಯೋಚನೆಯೆ ಅವನಿಗೆ ಬರಲಿಲ್ಲ. ಆ ಇಡಿಯ ಕಾಲವೆ ಗುಜರಾತೀ ಭಾಷೆಯ ಸಾಹಿತ್ಯದಲ್ಲಿ ಈ ಇಬ್ಬರೂ ಪಡೆದ ವೈಶಿಷ್ಟ್ಯಕ್ಕಾಗಿ ಅವರ ಹೆಸರಿನಿಂದ ಖ್ಯಾತಿವೆತ್ತ ಯುಗವೆನಿಸಿದಾಗ್ಗೆ ಇದೊಂದು ಅವರಿಬ್ಬರ ಜೀವನ ಚರಿತ್ರೆಗಳಲ್ಲಿಯೆ ವ್ಯಥೆಯಿಂದ ತುಂಬಿದ ಅಧ್ಯಾಯವೆನಿಸಿದೆ. ಗುಜರಾತದ ಜನರು ಅವರಿಬ್ಬರು ಸಾಹಿತ್ಯ-ರಚನೆಯಲ್ಲಿ ತೊಡಗಿದ ಈ ಕಾಲಾವಧಿಗೆ ನರ್ಮದ-ದಲಪತ ಯುಗ ಎಂದು ಗುರುತಿಸುತ್ತಾರೆ. ಆದರೆ ಈ ಬಗೆಯ ಮಾತ್ಸರ್ಯಪೂರ್ಣ ಅಸಹಿಷ್ಣುತೆಯು ಸಾಹಿತ್ಯ ಮತ್ತು ಲಲಿತಕಲೆಗಳ ಇತಿಹಾಸದಲ್ಲಿ ಅಪರಿಚಿತವಾಗಿಲ್ಲ. ಅದೊಂದು ದುರ್ದೈವದ ಸ್ಥಿತಿಯಾಗಿದ್ದು ಇಡಿಯ ಮಾನವಕುಲವು ಈ ದೌರ್ಬಲ್ಯವನ್ನು ಪಡೆದಿರುತ್ತದೆ ಮತ್ತು ಈ ಇಬ್ಬರು ದೀನ ಮನುಷ್ಯರು ಅದಕ್ಕೆ ಅಪವಾದವಾಗಿರಲಿಲ್ಲ.

ಅವನಿಗಿಂತ ಹಿರಿಯನೂ ಹೆಚ್ಚು ವರ್ಚಸ್ವಿಯೂ ಆಗಿದ್ದ ಅವನ ಪ್ರತಿಸ್ಪರ್ಧಿ ದಲಪತರಾಮನ ಬಗ್ಗೆ ನರ್ಮದಾಶಂಕರನು ತಳೆದ ಮಾತ್ಸರ್ಯವನ್ನು ನಾವು ಅರ್ಥಮಾಡಿಕೊಂಡು, ಅದಕ್ಕಾಗಿ ಅವನನ್ನು ಕ್ಷಮಿಸಬಹುದು ; ಆದರೆ ಅವನ ಪ್ರಿಯಮಿತ್ರ ಮತ್ತು ಸಹೋದ್ಯೋಗಿಯಾಗಿದ್ದ ಕರಸನದಾಸ ಮೂಲಜಿ ಅವರ ಜೊತೆಯಲ್ಲಿ ಅವನು ಸಾಮಾಜಿಕ ಸುಧಾರಣೆಯ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದರೂ ಅವನ ಬಗೆಯಾಗಿ ಹೇವಪಡುತ್ತಿದ್ದನು. ಕರಸನದಾಸ ಮೂಲಜಿಯು ಮಹಾರಾಜರ ಮಾನಹಾನಿಯ ಹಿರಿಯ ಮೊಕದ್ದಮೆಯಲ್ಲಿ ಯಶಸ್ಸನ್ನು ಸಂಪಾದಿಸಿ, ಕೀರ್ತಿಯನ್ನು ಪಡೆದಾಗ್ಗೆ ನರ್ಮದಾಶಂಕರನಿಗೇನು ತುಂಬ ಸಂತೋಷವಾಗಲಿಲ್ಲ. ಆ ಪ್ರಕರಣದಲ್ಲಿ ಕರಸನದಾಸನು ಅರ್ಹತೆಗಿಂತ ಹೆಚ್ಚಿನ ಶ್ರೇಯಸ್ಸನ್ನು ಕೆತ್ತಿಕೊಂಡಿರುವನು ಎಂದು ಭಾವಿಸಿದ್ದನು ಮತ್ತು ಆ ಮೇರೆಗೆ ಉಲ್ಲೇಖಿಸಿದನು. ಇದರ ಅರ್ಥವೇನೆಂದರೆ ಆ ಕೀರ್ತಿಯ ಕೆಲವು ಭಾಗವು ತನಗೆ—ನರ್ಮದಾಶಂಕರನಿಗೆ—ನಿಜದಲ್ಲಿ ದೊರೆಯಬೇಕು ಎಂಬುದಾಗಿತ್ತು ; ಆದರೆ ಹಾಗೆ ಅದು ಆತನಿಗೆ ಲಭ್ಯವಾಗುವಂತಿರಲಿಲ್ಲ — ಯಾಕೆಂದರೆ ಅದರ ಕಾರಣ ಎಲ್ಲರಿಗೂ ತಿಳಿಯಬಹುದು.

ಈ ಎಲ್ಲ ಅವನ ದೌರ್ಬಲ್ಯಗಳಿಗೆ ಇನ್ನೊಂದು ಹೆಚ್ಚಿನ ದೋಷವು ಅವನಲ್ಲಿ ಇದ್ದಿತು. ಅದೆಂದರೆ ನರ್ಮದಾಶಂಕರನಿಗೆ ಇದ್ದ ಹೆಂಗಸರ ಚಪಲದ ದೌರ್ಬಲ್ಯ. ವನಿತೆಯರ ವಿಷಯವಾಗಿ ಅವನಿಗೆ ಯಾವ ನೀತಿ ನಿರ್ಬಂಧಗಳೂ ಇರಲಿಲ್ಲ ಮತ್ತು ಅವನು ಸ್ತ್ರೀ-ಪುರುಷರ ಸಮಾನತೆಯ ಬಗ್ಗೆ ಮಾಡುತ್ತಿದ್ದ ಉದ್ದವಾದ ಭಾಷಣಗಳು ಮತ್ತು ಮಹಿಳೆಯರ ಸಲುವಾಗಿ ಅವನಲ್ಲಿ ಹುದುಗಿಕೊಂಡಿರುವ ಗೌರವ ಕಂಡುಬರುತ್ತಿದ್ದರೂ ಅವನು ಹೆಂಗಸರ ವಿಷಯವಾಗಿ ತನ್ನ ಅಂತರಾಳದಲ್ಲಿ ತಳೆದ ಅಭಿಪ್ರಾಯವು

ಆತನು ತನ್ನ ಮಡದಿ ದಹಿಗೌರಿಯೊಡನೆ ಮಾತನಾಡುತ್ತಾ ತನ್ನ ಮನೆಯಲ್ಲಿ ಇನ್ನೊಬ್ಬ ಹೆಂಡತಿಯನ್ನು ತರುವ ಪ್ರಸ್ತಾಪವನ್ನು ಎತ್ತಿದಾಗ್ಗೆ ಆಡಿದ ಮಾತುಗಳಿಂದ ವಿಶದವಾಗುತ್ತದೆ. ಆ ಸಂವಾದದಲ್ಲಿ ಮೂಡಿಬರುವ ಅವನ ಭೂಮಿಕೆಯು ಒಬ್ಬ ಹಳೆಯ ಪದ್ಧತಿಯ ಹಿಂದೂ ಪತಿಯೂ ಕ್ರೂರನಾದ ವ್ಯಕ್ತಿಯೂ ಎಂಬುದಾಗಿ ಕಾಣುತ್ತದೆ. ಅವನ ನಡತೆಯು ಈ ರೀತಿಯಾಗಿದ್ದರೂ, ಅವರ ವೈವಾಹಿಕ ಜೀವನವು ಮೊದಲಿನಂತೆ ಮುಂದುವರಿಯಲಿಕ್ಕೆ ಅವನ ಅರ್ಧಾಂಗಿ ದಹಿಗೌರಿಯ ಘನತೆ ಮತ್ತು ಸೌಜನ್ಯಗಳೇ ಕಾರಣವಾಗಿರುತ್ತವೆ.

ಅವನ ಈ ಅವಗುಣಗಳ ಪಟ್ಟಿಗೆ ಇನ್ನೂ ಎಷ್ಟೋ ದೋಷ ಮತ್ತು ದುರ್ಗುಣಗಳನ್ನು ಸೇರಿಸಬಹುದು ಮತ್ತು ಅವುಗಳಲ್ಲಿ ಕೆಲವಂತೂ ಅಂತಹ ಕಡಿಮೆ ಪ್ರಮಾಣದ ಪ್ರಮಾದಗಳೇನು ಎನಿಸಿಲ್ಲ. ಆದರೆ ಅವುಗಳಿದ್ದರೂ ನರ್ಮದಾಶಂಕರನು ದಿವ್ಯನಾಗಿದ್ದನು ಮತ್ತು ಆ ದಿವ್ಯತೆಯ ಪ್ರಮಾಣವು ಕೂಡ ತನ್ನ ಘನತೆಯನ್ನು ಪಡೆದಿತ್ತು.

ಶ್ರೇಷ್ಠತೆಗೆ ಅನೇಕ ಮುಖಗಳಿರುತ್ತವೆ ಮತ್ತು ಧೈರ್ಯವು ಅವುಗಳಲ್ಲಿ ಪ್ರಧಾನವಾದುದು. ಶೌರ್ಯವು ಮತ್ತು ಅದರೊಡನೆ ಅನಿವಾರ್ಯವಾಗಿ ಬರುವ ಧೈರ್ಯವು ನರ್ಮದಾಶಂಕರನಲ್ಲಿ ವಿಪುಲವಾಗಿದ್ದು ಆ ವಿಷಯದಲ್ಲಿ ಅವನಿಗೆ ಯಾರೂ ಪ್ರತಿಸ್ಪರ್ಧಿಗಳಿರಲಿಲ್ಲ. ಬಾಲ್ಯದಲ್ಲಿ ಅವನೊಬ್ಬ ಪುಕ್ಕ, ಅಂಜಿಕೆ ಮತ್ತು ನಾಚಿಕೆಗಳಿಂದ ತುಂಬಿದ ಹುಡುನಾಗಿದ್ದರೂ ಮುಂದೆ ಅವನಲ್ಲಿ ಮೇಲೆಕಾಣಿಸಿದ ಗುಣಗಳು ಬೆಳೆದು ಬಂದವು. ಅವನು ತನ್ನ ದುರ್ಬಲ ಸ್ವಭಾವವನ್ನು ಎಳೆತನದಲ್ಲಿಯೆ ತಿದ್ದಿಕೊಂಡನು ಮತ್ತು ಹದಿನೇಳು ವರ್ಷಗಳ ಅಪಕ್ವ ವಯಸ್ಸಿನಲ್ಲಿಯೆ ಒಂದು ಸಂಘವನ್ನು ಆತನು ಸ್ಥಾಪಿಸಿದನಲ್ಲದೆ ಅದರ ಅಧ್ಯಕ್ಷನು ಕೂಡ ಆಗಿ ಭಾಷಣವೊಂದನ್ನು ಮಾಡಿದನು ; ಮುಂದೆ ಅದೇ ಆ ಭಾಷೆಯಲ್ಲಿ ಬರೆಯಲಾದ ಮೊದಲನೆಯ ಮಹತ್ವದ ಗದ್ಯಲೇಖನವೆಂದು ಹೆಸರಾಯಿತು. ಇದಕ್ಕೇನು ಶಾರೀರಿಕ ಶಕ್ತಿಯ ಆವಶ್ಯಕತೆಯು, ಸ್ವಾಭಾವಿಕವಾಗಿಯೆ, ಇರಲಿಲ್ಲವಾದರೂ ಈ ಸಂದರ್ಭದಲ್ಲಿ ಅವನು ತೋರ್ಪಡಿಸಿದ ನೈತಿಕ ಬಲ ಮತ್ತು ಆತ್ಮವಿಶ್ವಾಸಗಳು ಇಡಿಯ ಜೀವನದಲ್ಲಿ ಅವನ ಸೊತ್ತಾಗಿದ್ದವು. ಪ್ರಪಂಚದಲ್ಲಿ ತನ್ನ ಸಮಾಜ ಬಾಂಧವರೊಡನೆ ಸಂಭವಿಸಿದ ಸಂಘರ್ಷದಲ್ಲಿ, ಅವನು ಮೊದಲ ಬಾರಿ ಸಮಾಜ ಸುಧಾರಣೆಯ ಕಾರ್ಯವನ್ನು ಆರಂಭಿಸಿದಾಗ ಮೇಲೆ ಕಾಣಿಸಿದ ಧೈರ್ಯಕ್ಕಿಂತ ಹೆಚ್ಚಿನ ಪ್ರಮಾಣದ ಮನೋಬಲವು ಕಂಡುಬಂದಿತ್ತು. ಔದಾರ್ಯದಂತೆ, ಸುಧಾರಣೆಯು ಕೂಡ ಸ್ವಂತದೊಡನೆ ಆರಂಭವಾಗಬೇಕು ಎಂಬ ಮಾತಿನಂತೆ ನರ್ಮದಾಶಂಕರನು ಕೂಡ ತಾನು ಕೈಕೊಳ್ಳಬೇಕಾದ ಕಾರ್ಯದ ಪ್ರಸಂಗವು ಬಂದಾಗ ಅದರಿಂದ ತಪ್ಪಿಸಿಕೊಂಡು ದೂರ ಸರಿಯಲಿಲ್ಲ. ತನ್ನ ಸಮಾಜದ ತನ್ನ ಗುಂಪಿನ ಮಹಿಳೆಯರು ತಮ್ಮ

ವರ್ಗದವರ ಭೋಜನಕೂಟದ ಭೋಜನ ಕಾಲಕ್ಕೆ ರವಕೆಗಳನ್ನು ತೊಟ್ಟುಕೊಳ್ಳಬೇಕು ಎಂಬ ಸನ್ನಿವೇಶವನ್ನು ಇಲ್ಲಿ ಸ್ಮರಿಸಲಾಗಿದೆ. ಆದರೆ ಅದಕ್ಕೆ ಗಟ್ಟಿಗತನ ಮತ್ತು ಒಂದು ಬಗೆಯ ದಾರ್ಢ್ಯವು ಬೇಕೇ ಹೊರತು ನಾವು ಸಾಮಾನ್ಯವಾಗಿ ತಿಳಿದು ಕೊಂಡ ನಿಜವಾದ ಧೈರ್ಯವಲ್ಲ ಎಂದು ಕೆಲವರು ವಾದಿಸಬಹುದು.

ಹೆಚ್ಚಿನ ಧೈರ್ಯವಿಲ್ಲದೆ ಕೇವಲ ಕೆಚ್ಚಿನ ಅಗತ್ಯವೆನಿಸಿದ್ದರೆ ಜದುನಾಥಜಿ ಮಹಾರಾಜರಂತಹ ವೈಷ್ಣವ ಮತದ ವ್ಯಕ್ತಿಯ ಸಂಗಡ ಅವನು ಏಕಾಕಿಯಾಗಿ ಹೂಡಿದ ಸೆಣಸಾಟದಲ್ಲಿ ಅದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಅತ್ಯಂತ ದುರ್ದಮ್ಯವಾದ ಧೈರ್ಯದ ಆವಶ್ಯಕತೆಯಿದ್ದಿತು. ಆ ತುರುಸಿನಲ್ಲಿ ಅವನ ಜೀವಕ್ಕೆ ಕೂಡ ಅಪಾಯವಿದ್ದುದನ್ನು ಆತನು ಅರಿತಿದ್ದನು. ಆ ಸುಧಾರಣೆಯ ಆಂದೋಲನದಲ್ಲಿ ಸಹಭಾಗಿಗಳಾಗಿದ್ದ ಅವನ ಸ್ನೇಹಿತರು ಕೂಡ ತನ್ನ ಕಾರ್ಯವು ಒಂದು ಸಾಹಸ ಎಂದು ಭಾವಿಸಿ ಅದಕ್ಕೆ ಸಮ್ಮತಿಸುತ್ತಿರಲಿಲ್ಲ ಎಂಬುದನ್ನು ಕೂಡ ಆತನು ತಿಳಿದಿದ್ದನು. ಆದರೂ ಅವನು ಆ ಸಭೆಗೆ ಒಬ್ಬನೇ ಹೋದನು ಮತ್ತು ಜೊತೆಗೆಂದು ತನ್ನ ಸಂಗಡ ಕರೆದುಕೊಂಡು ತೆರಳಿದ ಗಟ್ಟಿಗ ಗೆಳೆಯ ಕರಸನದಾಸ ಬಾವಾನನ್ನು ಕೂಡ ಆ ಭವನದಲ್ಲಿ ತನ್ನ ತಂದೆಯನ್ನು ಕಂಡ ಕೂಡಲೇ ಕಳಿಸಿ ಕೊಟ್ಟನು. ತನ್ನ ತಂದೆಯು ತೊಂದರೆಗೀಡಾಗಬಹುದು ಮತ್ತು ಅಲ್ಲಿಂದ ಆತನನ್ನು ಈ ಪ್ರಬಲಪುರುಷನು ಮಾತ್ರ ಕರೆದುಕೊಂಡು ಹೋಗಿ ರಕ್ಷಿಸಬಹುದು ಎಂಬುದನ್ನು ಅವನು ಕಂಡುಕೊಂಡಿದ್ದನು. ಆ ಬಲಿಷ್ಠ ಮಿತ್ರನ ರಕ್ಷಣೆಯನ್ನು ತಾನು ಕಳೆದು ಕೊಂಡರೂ ಅಲ್ಲಿ ತನಗೆ ಅಪಾಯವುಂಟಾಗಬಹುದು ಎಂದು ಅವನು ಎಣಿಸಲಿಲ್ಲ. ಅವನ ಸಂಗಡ ಇದ್ದ ಮಿಕ್ಕ ಜನರು ಮಾತಿಗೆ ಬಾರದವರಾಗಿದ್ದರು.

ದುರ್ದಮ್ಯನೂ ದುರ್ಭೇದ್ಯನೂ ಆಗಿ, ತಲೆಯನ್ನು ಎತ್ತಿಕೊಂಡು ಎದೆ ಯನ್ನು ಸೆಟೆಯಿಸಿಕೊಂಡು ಇಡಿಯ ಜನಸಮ್ಮರ್ದದ ಎದುರಿನಲ್ಲಿ ನಿಂತು ಶಾಸ್ತ್ರಗಳು ದೇವಸಂಕಲ್ಪವಲ್ಲ ಎಂದು ಗುಡುಗುತ್ತಿರುವ ಚಿತ್ರವನ್ನು ನಾವು ನೋಡಬಹುದು. ಅವನು ಆ ಗದ್ದಲದಲ್ಲಿ ಏಟುಗಳನ್ನು ತಿನ್ನಬಹುದಾಗಿದ್ದರೂ ಆತನು ಸುರಕ್ಷಿತ ನಾಗಿಯೂ ಸದೃಢವಾಗಿಯೂ ಅಲ್ಲಿಂದ ಪಾರಾಗಿ ಬರುತ್ತಾನೆ. ಅವನ ಈ ನಡತೆಯು ಅವಿಚಾರವೆನಿಸಿದರೂ ಅದರಲ್ಲಿ ಒಂದು ಬಗೆಯ ಅಪರೂಪದ ಧೈರ್ಯವು ಅಡಕವಾಗಿತ್ತು.

ಅದೇ ಬಗೆಯ ಮನೋಬಲವು ಅವನು ನರ್ಮದಾಗೌರಿಯೆಂಬ ವಿಧವೆ ಯೊಡನೆ ಮಾಡಿಕೊಂಡ ಮದುವೆಯ ಸಮಯದಲ್ಲಿಯೂ ವ್ಯಕ್ತವಾಯಿತು. ಸುಸ್ವಭಾವದವಳಾದ ಮತ್ತು ಶಾಸ್ತ್ರಸಮ್ಮತಳಾದ ಒಬ್ಬ ಮಡದಿಯು ಜೀವದಿಂದ ಇದ್ದಾಗ್ಗೆಯೂ ಈ ಬಗೆಯ ಎರಡನೆಯ ಮದುವೆಯಲ್ಲಿ ದುಮುಕುತ್ತಿರುವ

ಅವನನ್ನು ಯಾರೂ ಮೆಚ್ಚುತ್ತಿರಲಿಲ್ಲ ನಿಜ; ಆದರೆ ಅವನು ಕೈಕೊಂಡ ನಿರ್ಣಯವನ್ನು ಕಾರ್ಯರೂಪಕ್ಕೆ ತರಬೇಕಾದರೆ ಅದೇನು ವಿನೋದದ ಒಂದು ವಿಷಯವಲ್ಲ. ಆ ಕಾರಣಕ್ಕಾಗಿ ಅವನ ಸಮಾಜದವರು ಅವನಿಗೆ ಬಹಿಷ್ಕಾರವನ್ನು ಹಾಕಿದರು ಮತ್ತು ಅವನ ಮಿತ್ರರು ಮತ್ತು ಅಭಿಮಾನಿಗಳು ಅದನ್ನು ಮೆಚ್ಚಲಿಲ್ಲ. ಸಾಮಾನ್ಯವಾಗಿ ಎಲ್ಲ ಜನರು ಅವನ ಈ ವಿಚಿತ್ರವಾದ ವರ್ತನೆಗಾಗಿ ಅವನನ್ನು ವಿರೋಧಿಸಿದರು. ಆದರೆ ಅವನೇನು ಕದಲಲಿಲ್ಲ. ವಿಧವೆಯರು ಪುನರ್ವಿವಾಹವನ್ನು ಮಾಡಿಕೊಳ್ಳಬೇಕು ಎಂದು ತಾನು ಘಂಟಾಘೋಷವಾಗಿ ಸಾರುತ್ತಾ ಬಂದು ಈಗ ತನ್ನ ನುಡಿಯನ್ನು ನಡೆಯಲ್ಲಿ ತರುವ ಸರದಿಯು ತನಗೆ ಬಂದಾಗ್ಗೆ ತಾನು ಅಲ್ಲಿಂದ ಕಾಲ್ದೆಗೆಯುವದು ಸರಿಯಲ್ಲ ಎಂದು ಅವನು ತನ್ನಷ್ಟಕ್ಕೆ ಅಂದುಕೊಂಡನು. ಆ ಪರಿಸ್ಥಿತಿಯಲ್ಲಿ ಮದುವೆಯನ್ನು ಮಾಡಿಕೊಳ್ಳುವದೇ ಅತ್ಯಂತ ಗೌರವದ ಕಾರ್ಯ ಎಂದು ಅವನು ಭಾವಿಸಿದನು. ಅವನಿಗೆ ಎದುರಾದ ಎಲ್ಲ ಅಡೆ-ತಡೆಗಳನ್ನು ದಾಟಿ ಅವನು ಅಂತು ವಿವಾಹಿತನಾದನು.

ಶೌರ್ಯ ಮತ್ತು ಧೈರ್ಯಗಳಲ್ಲದೆ ನರ್ಮದಾಶಂಕರನು ಪಡೆದಿದ್ದ ಇನ್ನೊಂದು ಅತಿ ಪ್ರಿಯವಾದ ಸದ್ಗುಣವೆಂದರೆ ಅವನ ಅಪ್ರತಿಮವಾದ ಔದಾರ್ಯ. ತಪ್ಪನ್ನು ಕೂಡ ಉದಾಸೀನಭಾವದಿಂದ ನೋಡುವಂತಹ ಉದಾರಹೃದಯವು ಅವನದಾಗಿತ್ತು. ಅವನೊಬ್ಬ ದುಂದುಗಾರ ಎಂದು ಜನರು ಅವನ ದೋಷವನ್ನು ಎತ್ತಿ ತೋರಿಸುತ್ತಿದ್ದರು, ಮತ್ತು ಎಷ್ಟೋ ಸಲ ಅವನು ತನ್ನ ಅಳತೆಯನ್ನು ಮೀರಿದ ವೆಚ್ಚವನ್ನು ಮಾಡುತ್ತಿದ್ದನಲ್ಲದೆ, ಅತೀವ ಕೊರತೆಯಿದ್ದ ಸಮಯದಲ್ಲಿ ಕೂಡ ಅವನು ತನ್ನ ಸಲುವಾಗಿ ಯೋಗ್ಯತೆಗಿಂತ ಹೆಚ್ಚು ವ್ಯಯಿಸುತ್ತಿದ್ದನು. ಅದು ಉಚಿತವಾಗಿರಲಿಲ್ಲ ಎಂಬುದನ್ನು ಕೂಡಲೆ ಒಪ್ಪಬಹುದು. ಆದರೆ ಔದಾರ್ಯವು ತನ್ನ ಮಟ್ಟಿಗೆ ಮಾತ್ರ ಸೀಮಿತವಾಗಿದ್ದರೆ ಔದಾರ್ಯವೆನಿಸುವದಿಲ್ಲ. ಸ್ವತಃದ ಪರಿವೆಯಿಲ್ಲದೆ ಅನ್ಯರ ವಿಷಯವಾಗಿ ಮುಕ್ತಹೃದಯಿಯಾಗಿದ್ದರೆ ಅದು ದೊಡ್ಡ ಗುಣವೆನಿಸಿಕೊಳ್ಳುವದು. ಅವನ ಸ್ವಭಾವದಲ್ಲಿದ್ದ ಈ ಗುಣದ ನಿದರ್ಶನವು ನಮಗೆ ಗೊತ್ತಿದ್ದ ಅನೇಕ ದೃಷ್ಟಾಂತಗಳಿಂದ ನರ್ಮದಾಶಂಕರನಲ್ಲಿ ಈ ಔದಾರ್ಯವು ವಿಪುಲವಾದ ಪ್ರಮಾಣದಲ್ಲಿದ್ದಿತು ಎಂಬುದು ಸ್ವಯಂಸಿದ್ಧವಾಗುತ್ತದೆ. ಇಡಿಯ ಮನೆಯಲ್ಲಿ ಏಳು ರೂಪಾಯಿಗಳು ಮಾತ್ರ ಇದ್ದಾಗ್ಗೆ ಅವನ ನೆರವನ್ನು ಅರಸಿಬಂದ ವೃದ್ಧನೊಬ್ಬನಿಗೆ ಒಂದುನೂರು ರೂಪಾಯಿಗಳನ್ನು ಕೊಡುವಂತೆ ಅವನು ತನ್ನ ಕಾರ್ಯದರ್ಶಿಗೆ ಹೇಳುತ್ತಾನೆ— ಪರಿಸ್ಥಿತಿಯ ಪರಿವೆಯಿಲ್ಲದೆ. ಆ ವಯಸ್ಕನ ಕ್ಷಮಾಪಣೆಯನ್ನು ಕೋರಿ ಇನ್ನೊಮ್ಮೆ ಬರುವಂತೆ ಹೇಳಿ ಅವನನ್ನು ತಿರುಗಿ ಕಳಿಸಬೇಕಾಗುತ್ತದೆ. ಅದೆಲ್ಲ ಸರಿಯೆನಿಸಿದರೂ ಮನೆಯಲ್ಲಿ ಹಣವು ಬಂದೊಡನೆ ಆ ಮುದುಕನಿಗಾಗಿ ಒಂದುನೂರು ರೂಪಾಯಿಗಳನ್ನು ತೆಗೆದು ಇಡಲಿಕ್ಕೆ ಮೊದಲು ಅಪ್ಪಣೆಯನ್ನು ವಿಧಿಸಿದನು; ಅದೇನು ಆಗಿನ ಕಾಲದ ಪ್ರಮಾಣದಲ್ಲಿ ಸಣ್ಣ

ಮೊತ್ತವಾಗಿರಲಿಲ್ಲ ಮತ್ತು ದಾನಮಾಡಿದವನ ಸ್ಥಿತಿಯನ್ನು ನೋಡಿದಲ್ಲಿ ಅದು ನಿಜವಾಗಿಯೂ ದೊಡ್ಡ ರಕಮು. ತನ್ನ ಸ್ಥಿತಿಗತಿಗಳನ್ನು ಅವನು ತಿಳಿದು ಕೊಂಡಿರಲಿಲ್ಲ ಎಂದಲ್ಲ; ಆದರೆ ಅವನ ಹೃದಯವೈಶಾಲ್ಯವು ಬೇರೆ ರೀತಿಯಿಂದ ಅವನು ವರ್ತಿಸುವಂತೆ ಅವನನ್ನು ಬಿಡುತ್ತಿರಲಿಲ್ಲ. ಅವನಲ್ಲಿ ಹುದುಗಿಕೊಂಡಿದ್ದ ದಯಾಭಾವವು ಅವನು ಎದುರಿಸುತ್ತಿದ್ದ ಕಠಿಣವಾದ ಆರ್ಥಿಕ ಪರಿಸ್ಥಿತಿಯನ್ನು ತಡೆದು ಕೊಳ್ಳುವ ಶಕ್ತಿಯನ್ನು ತಂದುಕೊಟ್ಟಿತ್ತು ಎನ್ನಬಹುದು. ಬದುಕಿನ ಬಗ್ಗೆ ಆ ದೃಷ್ಟಿಯಿದ್ದ ವ್ಯಕ್ತಿಯು ಮಾತ್ರ ಕಷ್ಟದ ಕಾಲದಲ್ಲಿ ಹತ್ತಿರ ಕೇವಲ ನಾಲ್ಕಾಣೆ ಗಳಿರುವವು ಎಂದು ಅವನಿಗೆ ಹೇಳಿದಾಗ್ಗೆ ನಸುನಕ್ಕು ಆ ಹಣದಿಂದ ಮಂಡಕ್ಕಿ ಯನ್ನು ತರುವಂತೆ ಹೇಳಿ, “ಇದೂ ಜೀವನದ ಒಂದು ಮುಖ” ಎನ್ನಬಹುದು.

ಈ ಸಂದರ್ಭದಲ್ಲಿ ತನ್ನ ಬಾಳಿನ ಮೊದಲಿನ ಭಾಗವನ್ನು ಕವಿಯ ಶಿಷ್ಯನೆಂದು ಅವನೊಡನೆ ಇರುತ್ತಿದ್ದ ರಾಜಾರಾಮಶಾಸ್ತ್ರಿಯು ಹೇಳಿದ ಸನ್ನಿವೇಶವೊಂದನ್ನು ಸ್ಮರಿಸಿ ಕೊಳ್ಳಬಹುದು. ಅವನು “ಕವಿಯ ಕೊನೆಯ ದಿನಗಳು” ಎಂಬ ಲೇಖನದಲ್ಲಿ ಇದನ್ನು ನಿವೇದಿಸುತ್ತಾನೆ. ನರ್ಮದಾಶಂಕರನ ಮರಣದ ಮೊದಲು ಒಂದು ದಿನ ಅವನ ಮಿತ್ರನಾದ ಖಾಪರ್ಡೆಯು ಮುಂಬಯಿ ಸರಕಾರದ ಗಾಜಿಟಿಯರ್‌ಗಾಗಿ ಕವಿಯು ಕೈಕೊಂಡ ಕಾರ್ಯವೊಂದರ ಪ್ರತಿಫಲದ ಹಣವನ್ನು ತಂದಿದ್ದನು. ಆ ಹಣದಿಂದ ಮತ್ತು ಸೂರತದ ತನ್ನ ಮನೆಯನ್ನು ಮಾರಿಬಂದ ಹಣದಿಂದ ನರ್ಮದಾಶಂಕರನು ಮುಂಬಯಿಯ ಇಬ್ಬರು ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡಲಿಕ್ಕೆಂದು ಕೆಲವಂಶ ವನ್ನು ತೆಗೆದು ಇಟ್ಟು, ಪ್ರಭುರಾಮ ಮೆಹತಾ ಎಂಬವನಿಗೆ ತಾನು ಕೊಡಬೇಕಾಗಿದ್ದ ಸಾಲವನ್ನು ತೀರಿಸುವದಕ್ಕಾಗಿ ಸ್ವಲ್ಪಭಾಗವನ್ನು ಮೀಸಲಿಟ್ಟನು. ಹೀಗೆ ಎಲ್ಲ ಋಣದಿಂದ ಅವನು ಮುಕ್ತನಾದ ಮೇಲೆ ವಿಶ್ರಾಂತಿಗಾಗಿ ಒರಗಿಕೊಂಡನು ಮತ್ತು ಅನಂತರ ಶಾಂತನಾಗಿ ಸಾವನ್ನಪ್ಪಿದನು. ಆರ್ಥಿಕವಾಗಿ ಅಂತಹ ಕ್ಷೀಣಸ್ಥಿತಿಯಲ್ಲಿ ತಾನು ಸಾಯುತ್ತಿದರೂ ಇಂತಹ ವಿಷಯಗಳನ್ನು ಯೋಚಿಸುವದು ಕೇವಲ ಉದಾರ ಭಾವದ ಮತ್ತು ವಿಶಾಲಹೃದಯದ ವ್ಯಕ್ತಿಗೆ ಮಾತ್ರ ಸಾಧ್ಯ.

ಅವನು ಮೊದಲು ಪ್ರತಿಪಾದಿಸುತ್ತಿದ್ದ ಸಮಾಜ ಸುಧಾರಣೆಯ ವಿಚಾರಗಳಿಗೆ ವಿರುದ್ಧವಾಗಿ ತನ್ನ ಕೊನೆಯ ಬೃಹತ್ ಕೃತಿಯಾದ ‘ಧರ್ಮ-ವಿಚಾರ’ ಎಂಬ ಗ್ರಂಥದಲ್ಲಿ ಅವನು ತಳೆದ ಪ್ರತಿಮುಖದ ವಿಷಯವಾಗಿ ಮತ್ತು ಧರ್ಮದ ಬಗ್ಗೆ ಅವನು ಅನಂತರ ವ್ಯಕ್ತಗೊಳಿಸಿದ ವಿಚಾರಾಂತರದ ವಿಷಯವಾಗಿ ಅವನ ಮೇಲೆ ಎಷ್ಟೋ ಟೀಕೆಯಾಗಿದೆ ಹಾಗೂ ಆ ಬಗ್ಗೆ ಬಹಳಷ್ಟು ವಿಸ್ಮಯವೂ ವ್ಯಕ್ತವಾಗಿದೆ. ಅವನೇನು ತನ್ನ ನವ-ವಿಚಾರಗಳಿಂದ ವಿಚಲಿತನಾಗಲಿಲ್ಲ ಮತ್ತು ಅವನೇನು ಅವುಗಳನ್ನು ಮುಚ್ಚಿಡಲಿಲ್ಲ. ತದ್ವಿರುದ್ಧವಾಗಿ ಅವನು ತನ್ನಲ್ಲಿ ಸಂಭವಿಸಿದ ಈ ವಿಚಾರ ಪರಿವರ್ತನೆಯನ್ನು ಉಚ್ಚಧ್ವನಿಯಲ್ಲಿ ಘೋಷಿಸಿದನು. ಅವನ ಈ

ಘೋಷಣೆಯು ಅವನು ಜೀವನದಲ್ಲಿ ಮಾಡಿದ ಅತ್ಯಂತ ಧೈರ್ಯಶೀಲ ಮತ್ತು ಗಟ್ಟಿಗತನದ ಕಾರ್ಯ ಎಂದು ಹೇಳಬಹುದು.

ಇಲ್ಲಿ ನಾವು ಅದರ ಕಾರಣವನ್ನು ಹುಡುಕೋಣ. ವೈಷ್ಣವ ಮಹಾರಾಜನ ಪ್ರಕರಣದಲ್ಲಿ ಅವನ ಸಮಾಜಸುಧಾರಕ ಮಿತ್ರರು ಅವನನ್ನು ತೊರೆದು ಓಡಿ ಹೋದಾಗ್ಗೆ ನರ್ಮದಾಶಂಕರನು ಅವರ ವಿಷಯವಾಗಿ ಸಾಶಂಕನಾದನು. ಕಾಲವು ಕ್ರಮಿಸಿದಂತೆ ಅವನ ನಿರಾಸೆಯು ಕಳೆಯುವ ಬದಲಾಗಿ ಬೆಳೆಯಿತು. ಅಂತೆಯೆ ಆ ಭ್ರಮೆಯು ನಿರಸನವಾದ ದೃಷ್ಟಿಯಲ್ಲಿ ಅವನು ತನ್ನ ಗೆಳೆಯರಲ್ಲಿ ಬಹುತರರು ಕೇವಲ ಮಾತುಗಳನ್ನು ಆಡುವದರಲ್ಲಿ ಆಸಕ್ತರಾಗಿದ್ದರೇ ಹೊರತು ಕಾರ್ಯದ ಅನುಷ್ಠಾನದಲ್ಲಿ ಅಲ್ಲ, ಧೈರ್ಯ ಮತ್ತು ತ್ಯಾಗಗಳ ಆವಶ್ಯಕತೆಯಿದ್ದಾಗ್ಗೆ ಅವರು ಜೀವದ ಹಂಗಿಗಾಗಿ ಹೆಣಗುತ್ತಿರುವವರು ಎಂಬುದನ್ನು ಕಂಡನು. ಈ ಸಂಗತಿಗಳಿಗೆ ಸೇರಿದಂತೆ ಸ್ವಂತದ ಜೀವನದಲ್ಲಿ ಅವನು ಎದುರಿಸಿದ ಭ್ರಮನಿರಸನ ಮತ್ತು ನಿರಾಸೆ ಇವುಗಳ ಪರಿಣಾಮವಾಗಿ ತನ್ನ ಜೀವನದ ಉತ್ತರಾರ್ಧದಲ್ಲಿ ಅವನು ಪುನರ್ವಿಚಾರಕ್ಕೆ ತೊಡಗಿದನು. ಮೊದಲಿನ ದಿನಗಳ ತನ್ನ ಸ್ನೇಹಿತರು ಮತ್ತು ತಾನು ಒಂದಾನೊಂದು ಕಾಲದಲ್ಲಿ ತಳೆದ ವಿಚಾರಗಳಲ್ಲಿ ಏನೋ ಘೋರವಾದ ಪ್ರಮಾದವಿದೆ ಎಂದುದನ್ನು ತಿಳಿದು ಅವರಿಗೆ ಆಶ್ಚರ್ಯವಾಯಿತು. ಅಂತೆಯೆ ಪುನರ್ಯೋಚನೆಯಲ್ಲಿ ಬಿದ್ದನು. ಈ ಪುನರ್ವಿಮರ್ಶೆಯ ಫಲವಾಗಿ ಮೊದಲು ಸಾವಕಾಶವಾಗಿ ಮತ್ತು ಅನಂತರ ಸಂಪೂರ್ಣವಾಗಿ ತಾನು ತನ್ನ ಜೀವನದ ಬಹು ಭಾಗದಲ್ಲಿ ಅತ್ಯಂತ ಪ್ರಿಯವೆಂದು ತಿಳಿದು ಅವುಗಳಿಗಾಗಿ ಹೋರಾಡಿದ ವಿಚಾರ ಮತ್ತು ಆದರ್ಶಗಳಿಂದ ವಿಮುಖನಾದನು. ಅದೇನಿಲ್ಲ; ಇನ್ನು ಮೇಲೆ ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಬಾರದು ಎಂದುಕೊಂಡನು ಅವನು. ಪ್ರತಿಯೊಬ್ಬ ಮಹಿಳೆಯ ಶ್ರೇಷ್ಠ ಕರ್ತವ್ಯವು ತಾನು ಮದುವೆಯಾದ ವ್ಯಕ್ತಿಗಾಗಿ ಇರುತ್ತದೆ— ಅವನು ಎಂತಹ ಮನುಷ್ಯನೇ ಆಗಿರಲಿ. ಸನಾತನ ಹಿಂದೂಧರ್ಮಶಾಸ್ತ್ರಗಳಲ್ಲಿ ಹೇಳಿದ ದಿವ್ಯಜ್ಞಾನದಲ್ಲಿ ಅದೊಂದು ಅನುಸರಿಸಬಹುದಾದ ಪರಮ ಸತ್ಯವಾಗಿದೆ. ತಾನೇ ಸ್ವತಃ ಹೇಳಿದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ಮಾತುಗಳು ಮತ್ತು ಅವುಗಳ ಮೂಲಕ ಮಾತ್ರ ಪ್ರಪಂಚದ ಸ್ಥಿತಿಯನ್ನು ಎತ್ತಿ ಹಿಡಿಯುವ ವಿಚಾರಗಳೆಲ್ಲ ಪೊಳ್ಳುಪೊದೆಗಳಾಗಿವೆ. ಶಾಸ್ತ್ರಗಳು ವಿಧಿಸಿದಂತೆ ಪ್ರತಿಯೊಬ್ಬ ಹಿಂದುವೂ ಭೋಜನ-ಪಾನೀಯಗಳ ನಿಯಮಗಳನ್ನು ಪಾಲಿಸಬೇಕೇ ಹೊರತು ತಾನು ಒಮ್ಮೆ ನಡೆಯಿಸಿದ ಸ್ವಚ್ಛಂದ ಜೀವನವಲ್ಲ.

ನರ್ಮದಾಶಂಕರನು ಈ ಸಿದ್ಧಾಂತಕ್ಕೆ ಬಂದ ಕೂಡಲೆ, ಅವು ಸತ್ಯವಾದ ವಿಚಾರಗಳಾಗಿದ್ದ ಕಾರಣ ತಾನು ಅವುಗಳ ವಿಷಯವಾಗಿ ಮೌನದಿಂದ ಇರದೆ ತನ್ನ ಶಕ್ತಿ ಸರ್ವಸ್ವದಿಂದ ಅವುಗಳನ್ನು ಘೋಷಿಸಬೇಕು ಎಂದುಕೊಂಡನು. ಹಾಗೆ

ಅವನು ಪೂರ್ಣ ಬಲದಿಂದ ಮತ್ತು ಅನಿಶ್ಚಿತವಲ್ಲದ ಮಾತುಗಳಲ್ಲಿ ಇವುಗಳನ್ನು ವ್ಯಕ್ತಗೊಳಿಸಿದನು. ಅವನ ಈ ಪ್ರತಿ–ವಿಚಾರಗಳಿಗಾಗಿ ಜನರು ಅವಾಕ್ಕಾದರು. ಎಷ್ಟೋ ಜನರು ಹಾಸ್ಯಮಾಡಿದರು. ಇನ್ನೂ ಅನೇಕರು ಅವನನ್ನು ಬಯ್ದರು. ಆದರೆ ನರ್ಮದಾಶಂಕರನು ಮೊದಲು ಸಾರುತ್ತಿದ್ದ ವಿರುದ್ಧದ ವಿಚಾರಗಳನ್ನು ವಿವರಿಸಿದ ಧೈರ್ಯದಿಂದಲೇ ಇವುಗಳನ್ನು ವಾದಿಸುತ್ತ ನಿರ್ಭಯವಾಗಿದ್ದನು. ಹಾಗೆಯೆ ಅವನು ಆ ಬಗೆಯಲ್ಲಿ ಪಶ್ಚಾತ್ತಾಪವನ್ನು ಅನುಭವಿಸಲಿಲ್ಲ.

ಕೆಲವರು ಸೂಚಿಸುವಂತೆ ಈ ಬಗೆಯ ಅವನ ಪ್ರತಿಕ್ರಿಯೆಯು ತಾನು ಲೋಕಪ್ರಿಯನಾಗಿ ಉಳಿಯಬೇಕು ಎಂಬ ವಿಚಾರದಿಂದ ಪ್ರೇರಿತವಾಗಿರುತ್ತದೆ. ಯಾಕೆಂದರೆ ಅಷ್ಟರಲ್ಲಿ ಜನತೆಯು ಸುಧಾರಣೆಗಳಿಂದ ವಿಮುಕ್ತರಾಗಿರುತ್ತಿದ್ದರು ಎಂಬ ಮಾತಿನಲ್ಲಿ ತಥ್ಯವಿಲ್ಲ. ಮೊದಲಿನ ಉತ್ಸಾಹ ಮತ್ತು ಉಗ್ರವಾದ ಆವೇಶದ ಆಂದೋಲನವು ಈಗ ಸುಧಾರಣೆಗಳ ವಿಷಯವಾಗಿ ಸೌಮ್ಯ ವಿಚಾರಗಳು ಮತ್ತು ಶಾಂತವಾದ ಉಪಾಯಗಳಿಗೆ ಎಡೆಯನ್ನು ಮಾಡಿಕೊಟ್ಟದ್ದರೂ ಸುಧಾರಣೆಗಳ ಯೋಚನೆಯೇನೂ ತಣ್ಣಗಾಗಿರಲಿಲ್ಲ. ಅದು ಹೆಚ್ಚು ಸುಸಂಘಟಿತವಾಗಿತ್ತು ಮತ್ತು ಮುಂಬಯಿ ವಿಶ್ವವಿದ್ಯಾನಿಲಯದ ಮೊದಲ ಸ್ನಾತಕರು ಸಾಹಿತ್ಯ ಹಾಗೂ ಸಮಾಜ ಜೀವನದ ವಿವಿಧ ವಲಯಗಳಲ್ಲಿ ಪ್ರವೇಶಿಸುತ್ತಿದ್ದವರು ಇದಕ್ಕಾಗಿ ಉಚಿತವಾದ ಹಿನ್ನೆಲೆಯನ್ನು ನಿರ್ಮಿಸುತ್ತಿದರು. ತರುಣ ನರಸಿಂಹರಾವ ದಿವೇಟಿಯಾ ನರ್ಮದಾಶಂಕರನು ಒಂದು ಕಾಲಕ್ಕೆ ಬರೆಯುತ್ತಿದ್ದ ಆವೇಶದಿಂದಲೇ ವಿಧವೆಯರ ಬಾಳಿನ ಗೋಳನ್ನು ಕುರಿತು ಕಾವ್ಯಕಲೆಯ ಮೇಲಿನ ಹೆಚ್ಚು ಪ್ರಭುತ್ವದಿಂದ ಕವನಗಳನ್ನು ರಚಿಸುತ್ತಿದ್ದನು. ಗೋವರ್ಧನರಾಮ ತ್ರಿಪಾಠಿಯು ತನ್ನ ಮಹಾಕೃತಿಯಾದ 'ಸರಸ್ವತೀಚಂದ್ರ'ವನ್ನು ಬರೆಯುವ ಸಿದ್ಧತೆಯಲ್ಲಿದ್ದನು; ಅದೇನು ಸಾಂಪ್ರದಾಯಿಕತೆಯ ಪವಿತ್ರ ಗ್ರಂಥವೆನಿಸಲಿಲ್ಲ. ಪ್ರಖ್ಯಾತ ಕವಿ, ವಿದ್ವಾಂಸ ಮತ್ತು ಮೇಧಾವಿಯಾದ ಮಣೀಪಾಲ ನಭುಭಾಯಿಯು ಪರಂಪರೆಯ ದೃಷ್ಟಿಯುಳ್ಳವನಾಗಿದ್ದರೂ ಅನ್ಯ ಅನೇಕರಂತೆ ಮತಾಂಧನಾಗಿರಲಿಲ್ಲ. ಇವರೆಲ್ಲರೂ ಸಮಾಜದಲ್ಲಿ ವರ್ಚಸ್ವಿಗಳಾಗಿದ್ದ ನವೀನ ಜನರಾಗಿದ್ದರು. ನರ್ಮದಾಶಂಕರನ ಪ್ರಿಯಮಿತ್ರನಾದ ನವಲರಾಮನು ಅಷ್ಟರಲ್ಲಿ ಟೀಕಾಕಾರನೆಂದು ಹೆಸರನ್ನು ಗಳಿಸಿಕೊಂಡಿದ್ದು ಆಗ್ಗೆ ಪ್ರಚಲಿತ ಪದ್ಧತಿಯಾಗಿದ್ದ ಬಾಲ್ಯವಿವಾಹವನ್ನು ಬಲವಾಗಿ ಟೀಕಿಸಿ ವ್ಯಂಗ್ಯಕಾವ್ಯವೊಂದನ್ನು ರಚಿಸಿ ಪ್ರಖ್ಯಾತಗೊಳಿಸಿದ್ದನು. ಸಮಾಜ ಸುಧಾರಣೆಯ ಬಗ್ಗೆ ಈ ರೀತಿ ಹಬ್ಬಿದ ಸುಜ್ಞಾನದ ವಾತಾವರಣದಲ್ಲಿ ನರ್ಮದಾಶಂಕರನು ಬದಲಿಸಿದಂತೆ ತನ್ನ ವಿಚಾರಗಳನ್ನು ಬದಲಿಸಲಿಕ್ಕೇನು ಕಡಿಮೆ ಧೈರ್ಯವು ಬೇಕಾಗಿರಲಿಲ್ಲ. ತಪ್ಪಿರಲಿ, ಸರಿಯಿರಲಿ, ಹಾಗೆ ನೋಡಿದರೆ ನಿಜವಾಗಿಯೂ ಅವನು ಪ್ರಮಾದವನ್ನೆ ಮಾಡಿದ್ದರೂ ತನ್ನ ವಿಚಾರಗಳ ಬಗ್ಗೆ ಆತನಿಗೆ ದೃಢವಿಶ್ವಾಸವಿದ್ದುದಕ್ಕೆ ಅವನು ಎಲ್ಲರ ಗೌರವಕ್ಕೆ ಪಾತ್ರನಾಗುತ್ತಾನೆ.

ವಿದ್ವಾಂಸರನ್ನು ಸೇರಿಸಿ ಅನೇಕ ಜನರು ನರ್ಮದಾಶಂಕರನ ಈ ಪ್ರತಿ-ಮುಖದ ಬಗ್ಗೆ ಅಚ್ಚರಿಗೊಳಗಾಗಿದ್ದಾರೆ ಮತ್ತು ಅದು ಹಾಗೆ ಸಾಧ್ಯವಾಗಲಿಕ್ಕೆ ಮನೋವೈಜ್ಞಾನಿಕ ಮತ್ತು ಬೇರೆ ಕಾರಣಗಳ ಬಗ್ಗೆ ಊಹಾಪೋಹ ಮಾಡಿದ್ದಾರೆ. ದುರ್ದೈವದಿಂದ ಅವನ ಜೀವನದ ಉತ್ತರಾರ್ಧದ ಅವಧಿಯ ಬಗ್ಗೆ ಸಂಪೂರ್ಣ ಉಲ್ಲೇಖಗಳು ಇರದ ಮೂಲಕ ಈ ಪರಿವರ್ತನೆಯ ನಿಜವಾದ ಕಾರಣವನ್ನು ಬೆದಕಿ ತೆಗೆಯುವದು ಯಾರಿಗೂ ಸಾಧ್ಯವಾಗದಿದ್ದರೂ ಆ ವ್ಯಕ್ತಿಯ ಆವೇಶಯುಕ್ತ ಸ್ವಭಾವ ಮತ್ತು ಮನಃಸ್ಥಿತಿಯು ಅದರ ಪ್ರಮುಖವಾದ ಕಾರಣವಾಗಿದ್ದು ಯಾವಾಗಲೂ ಆತನು ಅತಿರೇಕದ ಅಭಿಪ್ರಾಯಗಳತ್ತ ನುಗ್ಗುತ್ತಿರುವದು ಆ ಮನೋಭಾವದ ರೂಢಿಯಾಗಿದೆ. ನಮಗೆ ಈಗಾಗಲೇ ತಿಳಿದಿರುವಂತೆ, ತನ್ನ ಬಾಲ್ಯ ಜೀವನದಲ್ಲಿ, ಅವನು ಅತ್ಯಂತ ಧಾರ್ಮಿಕ, ಆದೇಕೆ ಅಂಧವಿಶ್ವಾಸವುಳ್ಳವನಾಗಿದ್ದನು. ಅದಕ್ಕೆ ವ್ಯತಿರಿಕ್ತವಾದ ಉದ್ವೇಗದಲ್ಲಿ, ಇಂಗ್ಲಿಶ್ ಶಿಕ್ಷಣ ಮತ್ತು ಮುಂಬಯಿಯಲ್ಲಿ ಅವನು ಮಾಡಿಕೊಂಡ ಅನೇಕ ಜನ ವಿದ್ಯಾವಂತರ ಸ್ನೇಹ ಇವುಗಳ ಪ್ರಭಾವದಲ್ಲಿ ಅವನು ಮೊದಲಿನ ಧಾರ್ಮಿಕ ವಿಚಾರಗಳನ್ನು ತೊರೆದೊಗೆದು ಇನ್ನೊಂದು ಅತಿರೇಕದತ್ತ ಹೊರಳಿ ಅಧರ್ಮವನ್ನೇ ತನ್ನ ಧರ್ಮವನ್ನಾಗಿ ಮಾಡಿಕೊಂಡನು. ಅವನ ಜೀವನದ ಉತ್ತರಭಾಗದಲ್ಲಿ ಅವನ ವಿಚಾರಗಳು ಇನ್ನೊಂದು ತುದಿಯನ್ನು ತಲಪಿದವು. ಅದಕ್ಕೆ ಕಾರಣಗಳು ಎಷ್ಟೋ ಇದ್ದವು. ಅವುಗಳಲ್ಲಿ ಪ್ರಮುಖ ಕಾರಣವು ಮೊದಲಿನ ತನ್ನ ಗೆಳೆಯರು ಸಮಾಜ ಸುಧಾರಕರಾಗಿದ್ದು ಪ್ರತ್ಯಕ್ಷ ಕಾರ್ಯಾಚರಣೆಯ ಸಮಯವು ಬಂದಾಗ್ಗೆ ಹೆದರಿ ಅವನಿಂದ ದೂರವಾಗಿ, ಅವನ ಸಂಬಂಧವನ್ನು ಕಡಿದುಕೊಂಡ ಸನ್ನಿವೇಶವಾಗಿದೆ. ಆದರೆ ಈ ಕಾರಣವು ಹೆಚ್ಚು ಕಡಿಮೆ ತೋರಿಕೆಯದಾಗಿದ್ದು ಯಾರನ್ನಾದರೂ ತಪ್ಪು ಅಭಿಪ್ರಾಯದತ್ತ ಎಳೆದೊಯ್ಯಬಹುದು. ಅದರ ನಿಜವಾದ ಕಾರಣವೆಂದರೆ ಈ ಎಲ್ಲ ವರ್ಷಗಳಲ್ಲಿ ಅವರಿಗೆ ವಿಪುಲವಾದ ಅನುಭವವು ಬಂದು ಅವನು ತನ್ನ ನಿರ್ಣಯ ಮತ್ತು ಮನೋಭಾವದಲ್ಲಿ ಹೆಚ್ಚಿನ ಪಕ್ವತೆಯನ್ನು ಪಡೆದುದೇ ಆಗಿದೆ. ಅವನು ಹೇರಳವಾಗಿ ಓದಿದ ಧಾರ್ಮಿಕ ಮತ್ತು ಐತಿಹಾಸಿಕ ಗ್ರಂಥಗಳು, ಭಾರತದ ಮಹಾಕೃತಿಗಳಲ್ಲಿ ಅವನು ಮಾಡಿದ ವ್ಯಾಸಂಗ, ಮತ್ತು ಪ್ರತಿಯೊಂದು ವಿಷಯವನ್ನು ತಾನೇ ಆಮೂಲಾಗ್ರವಾಗಿ ಯೋಚಿಸುವ ಅವನ ಅಭ್ಯಾಸ, ಇವೆಲ್ಲ ಅವನ ಮನೋಭಾವದಲ್ಲಿ ಆದ ಅಮೋಘವಾದ ಪರಿವರ್ತನೆಯನ್ನು ಉಂಟುಮಾಡಿವೆ. ಅವನನ್ನು ಈ ಹೊಸ ದೃಷ್ಟಿಯು ಆವರಿಸಿಕೊಂಡ ಕೂಡಲೆ ಅವನ ಸಮಕಾಲೀನರು ಅದು ಸಹಜ ಸಾಧ್ಯ ಎಂದು ಭಾವಿಸಿದುದಕ್ಕಿಂತ ಹೆಚ್ಚಿನ ಶಕ್ತಿಯಿಂದ ಅವನು ತನ್ನ ಮೊದಲಿನ ಭೂಮಿಕೆಯಿಂದ ಪುಟಿದೆದ್ದನು. ಮನುಷ್ಯನ ಜಟಿಲವಾದ ಆಚರಣೆಗೆ ಸರಲವಾದ ಅರ್ಥವನ್ನು ಅರಸಲೆಳಸುವ ಜನರಿಗೆ ಇದೊಂದು ಒಗಟು ಎನಿಸಬಹುದು ; ಆದರೆ ಮಾನವನ ಮನಸ್ಸಿನ ವಿದ್ಯಾರ್ಥಿಗಳಾದವರಿಗೆ, ನರ್ಮದಾಶಂಕರನಂತಹ ಮನಃಸ್ಥಿತಿ

ಯಾವರಿಗೆ ಈ ರೀತಿಯ ಪ್ರತಿ-ವರ್ತನೆಯು ಸಹಜಶುದ್ಧವಾದ ಅರ್ಥವನ್ನು ಕೂಡ ಪ್ರತಿಭಟಿಸುವಷ್ಟು ಘನವಾದ ಪ್ರಮೇಯವೆಂದೇನು ಅದು ತೋರುವದಿಲ್ಲ.

ಇಲ್ಲಿಯವರೆಗೆ ಹೇಳಿದ ಮಾತುಗಳಿಂದ ವಿಶದವಾದಂತೆ ನರ್ಮದಾಶಂಕರನು, ತನ್ನ ಮಿತಿಗಳಲ್ಲಿಯೆ ಒಬ್ಬ ದ್ರಷ್ಟಾರನಾಗಿದ್ದನು ಮತ್ತು ಆ ದೃಷ್ಟಿಯು ಕೇವಲ ಸಾಮಾಜಿಕ ವಲಯಗಳಿಗೆ ಸೀಮಿತವಾಗಿರಲಿಲ್ಲ. ಅವನು ರಾಜಕಾರಣದಲ್ಲಿ ಪ್ರತ್ಯಕ್ಷವಾಗಿ ಎಂದೂ ಭಾಗವಹಿಸದಿದ್ದರೂ, ಆ ದಿನಗಳಲ್ಲಿ ಕೂಡ ಅವನಿಗೆ ಇತರರಂತೆ ಬ್ರಿಟಿಶ್ ಆಡಳಿತವು ಭಾರತಕ್ಕೆ ಒದಗಿಸಿಕೊಟ್ಟ ಮಹತ್ತರವಾದ ಸೌಕರ್ಯಗಳಿಗಾಗಿ ಅದನ್ನು ಹೊಗಳುತ್ತಿದ್ದರೂ, ಸ್ವಾತಂತ್ರ್ಯವಿಲ್ಲದೆ—ಅದರಲ್ಲಿಯೂ ಸಾಮಾಜಿಕ ಶೃಂಖಲೆಗಳಿಂದಷ್ಟೇ ಅಲ್ಲದೆ, ಭಾರತವು ತನ್ನ ಸಂಪೂರ್ಣ ವಿಕಾಸವನ್ನು ಪಡೆಯಲಾರದು ಎಂಬುದನ್ನು ಕಂಡುಕೊಳ್ಳುವ ದೃಷ್ಟಿಯನ್ನು ಪಡೆದಿದ್ದನು. ತನಗೆ ತೋಚಿದನ್ನು ಸಾರಿ ಹೇಳುವ ದಿಟ್ಟತನವೂ ಅವನಲ್ಲಿದ್ದಿತು. ಈ ವಿಷಯವಾಗಿ ಅವನ ವಿಚಾರಗಳು ಹೇಗೆ ಇದ್ದವು ಎಂಬುದನ್ನು ತಿಳಿಯಬೇಕಾದರೆ ಅವನ ಗ್ರಂಥಗಳನ್ನು ಓದಿಕೊಳ್ಳಬೇಕು. ಅವನ ಈ ದೇಶಪ್ರೇಮದ ಭಾವನೆಯ ಮೂಲಕವಾಗಿಯೆ ಅವನು ಗುಜರಾತೀ ಭಾಷೆಯಲ್ಲಿ "ಸ್ವದೇಶಾಭಿಮಾನಿ" ಎಂಬ ಪದವನ್ನು ಬಳಸಿದ ಮೊದಲ ವ್ಯಕ್ತಿಯಾದನು. "ಸ್ವರಾಜ್ಯ" ಎಂಬ ಶಬ್ದವನ್ನು ಅವನು ತನ್ನ ಕಾಲೇಜಿನ ಪೂಜ್ಯ ಗುರುಗಳೂ, ಭಾರತದ ದಿವ್ಯ ವೃದ್ಧಪಿತಾಮಹರೂ ಆಗಿದ್ದ ದಾದಾಭಾಯಿ ನವರೋಜಿಯವರು ಕಲ್ಕತ್ತೆಯಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ಉಪಯೋಗಿಸಿ, ಭಾರತದ ಆಶೋತ್ತರಗಳು ಕೇಂದ್ರ ಬಿಂದುವೆಂದು ಸಾರುವದಕ್ಕಿಂತ ಇಪ್ಪತ್ತು ವರ್ಷ ಮೊದಲು ಬಳಕೆಯಲ್ಲಿ ತಂದಿದ್ದನು. ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಉಪಯೋಗಿಸಬೇಕು ಎಂದು ಮಹಾತ್ಮಾ ಗಾಂಧಿಯವರು ರಾಜಕೀಯದಲ್ಲಿ ದುಮುಕುವದಕ್ಕಿಂತ ಬಹಳ ಮುಂಚಿತವಾಗಿ ಪ್ರತಿಪಾದಿಸಿದ್ದರು. "ಹಿಂದುವೋನಿ ಪಡತಿ" (ಹಿಂದುಗಳ ಪತನ) ಎಂಬ ಹೆಸರಿನ ರಾಷ್ಟ್ರಭಕ್ತಿಯ ಭಾವನೆಗಳಿಂದ ತುಂಬಿ ತುಳುಕುವ ಉಜ್ವಲವಾದ ಕವನವೊಂದನ್ನು ಆತನು ರಚಿಸಿದ್ದನು. ಈ ಕವಿತೆಯು ಹಿಂದುಗಳ ಅವನತಿಯನ್ನು ಕುರಿತು ಬರೆದುದಾಗಿದ್ದರೂ, ಅದನ್ನು ಓದಿದವರಿಗೆ ಹಿಂದು ಎಂಬ ಪದವು ಒಂದು ಸಮುದಾಯವನ್ನು ಸೂಚಿಸುತ್ತಿರದೆ ಭಾರತದ ಜನತೆಯನ್ನು ನಿದರ್ಶಿಸುತ್ತಿದೆ ಎಂಬ ಮಾತು ಸ್ಪಷ್ಟವಾಗುತ್ತದೆ.

ಅವನ ಬರೆಹಗಳಲ್ಲಿ ಹಿಂದು ಶಬ್ದವು ಅನೇಕ ಬಾರಿ ಕಂಡುಬರುವುದರಿಂದ ಅವನೊಬ್ಬ ಹಿಂದೂ ಮತಾಂಧನೆಂದು ಸಾರುವ ಎಷ್ಟೋ ಪ್ರಯತ್ನಗಳು ನಡೆದವು. ನರ್ಮದಾಶಂಕರನ ಬಗ್ಗೆ ಬರೆಯುವಾಗ್ಗೆ ಉತ್ತಮ ವಿದ್ವಾಂಸರೆನಿಸಿಕೊಂಡ ದಿವಂಗತ ಜೆ. ಇ. ಸಂಜನಾ ಅವರು ಈ ಮಾತನ್ನು ಬೆಳಸಿ ಹೇಳಿದ್ದಾರೆ. ಅವರು, ನನ್ನ

ಅಭಿಪ್ರಾಯದಂತೆ, ನರ್ಮದಾಶಂಕರನಿಗೆ ಅನ್ಯಾಯವನ್ನು ಮಾಡಿದ್ದಾರೆ ಮತ್ತು ನರ್ಮದಾಶಂಕರನು ಜೀವಿಸಿದ ಮತ್ತು ಒಡನಾಡಿದ ಕಾಲದ ವಾತಾವರಣ ಮತ್ತು ವಿಚಾರಪ್ರಣಾಲಿಯನ್ನು ಸಂಪೂರ್ಣವಾಗಿ ಗಮನಿಸಿಲ್ಲ. ಇತ್ತ ಇದೇ ಕಾರಣವಾಗಿ ನರ್ಮದಾಶಂಕರನನ್ನು ಬೇರೆ ಯಾವ ಲೇಖಕನಾಗಲಿ ವಿಮರ್ಶಕನಾಗಲಿ ದೋಷಿಸಿಲ್ಲ ಎಂಬುದೊಂದು ಸುದೈವದ ವಿಷಯ.

ಹೀಗೆ ಅವನೊಬ್ಬ ವ್ಯಕ್ತಿ ಮತ್ತು ಲೇಖಕನಾಗಿದ್ದು ಅವನ ದೋಷಗಳನ್ನೆಲ್ಲ ನಾವು ಮರೆತುದಾದರೆ ಅವನೊಬ್ಬ ಉದ್ಯಮಶೀಲ ಮತ್ತು ಪ್ರಾಮಾಣಿಕ ಮನುಷ್ಯ ನಾಗಿದ್ದ ಎಂಬ ಮಾತು ಸ್ಪಷ್ಟವಾಗುತ್ತದೆ ಮತ್ತು ನಮಗೆ ಪ್ರಭಾವಪೂರ್ಣವಾಗಿ ಹೊಳೆಯುತ್ತದೆ. ಈ ಲೇಖಕನ ಜೀವನ-ಚರಿತ್ರೆಯ ಕೊನೆಯ ಅಧ್ಯಾಯವನ್ನು ಮುಗಿಸುವಾಗ್ಗೆ ಹಿರಿಯ ಫ್ರೆಂಚ್ ಚಿತ್ರಕಾರ ತೋಲಸ್ ಲೌಟ್ರಿಕ್‌ನು ಮರಣ ಕಾಲಕ್ಕೆ ತನ್ನ ತಾಯಿಗೆ ಹೇಳಿದ "ತಾಯಿ! ನಾನು ಹಾದರವನ್ನು ಮಾಡಿದ್ದೇನೆ, ಮದ್ಯವನ್ನು ಕುಡಿದಿದ್ದೇನೆ, ಆದರೆ ಚಿತ್ರಗಳನ್ನು ಬರೆದಿದ್ದೇನೆ" ಎಂಬ ಮಾತನ್ನು ಇಲ್ಲಿ ನಾವು ನೆನಸಿಕೊಳ್ಳುವದಕ್ಕಿಂತ ಹೆಚ್ಚು ಉತ್ತಮವಾದುದನೇನನ್ನೂ ಮಾಡ ಲಾರೆವು. ನರ್ಮದಾಶಂಕರನ ವಿಷಯವಾಗಿಯೂ ನಾವು ಹಾಗೆಯೆ ಸತ್ಯವಾಗಿ, ಅವನು ವ್ಯಭಿಚಾರದಲ್ಲಿ ತೊಡಗಿದ್ದನು, ಅವನು ಹೆಂಡವನ್ನು ಕುಡಿದಿದ್ದನು ಆದರೆ ತನ್ನ ಭಾಷೆ ಮತ್ತು ಸಾಹಿತ್ಯಗಳು ಸಮೃದ್ಧವಾಗಲಿ ಎಂದು, ತನ್ನ ಸಮಾಜ ಮತ್ತು ದೇಶ ಸುಖಮಯ ಆಗಲಿ ಎಂದು ಅವನು ಶ್ರಮವಹಿಸಿ ದುಡಿದನು, ಅತ್ಯಂತ ಪರಿಶ್ರಮದಿಂದ ತನ್ನ ಕೊನೆಯ ದಿನಗಳವರೆಗೆ ಹೆಣಗಿದನು ಎಂದು ನಾವು ಹೇಳಬಹುದು.

ಅಂತೆಯೆ ಅವನ ಭಾಷೆಯನ್ನು ಆಡುವ ಮತ್ತು ಅದರಲ್ಲಿ ಬರೆಯುವ ಜನರು ಅವನ ವಿಷಯವಾಗಿ ಇಷ್ಟೊಂದು ಬರೆದಿದ್ದಾರೆ, ಮಾತನಾಡಿದ್ದಾರೆ— ಕೃತಜ್ಞತಾಪೂರ್ವಕವಾಗಿ! ಗುಜರಾತೀ ಸಾಹಿತ್ಯದಲ್ಲಿ ಶ್ರೇಷ್ಠ ಲೇಖಕರಲ್ಲೊಬ್ಬರಾದ ಶ್ರೀ ಕೆ. ಎಂ. ಮುನಷಿಯವರು ನರ್ಮದಾಶಂಕರನನ್ನು "ಆಧುನಿಕರಲ್ಲಿ ಪ್ರಥಮ" ಎಂದು ಕರೆದಿದ್ದಾರೆ. ಅವನ ಚರಿತ್ರಕಾರನೂ, ಮಿತ್ರನೂ ಆಗಿದ್ದ ಉತ್ತಮ ಲೇಖಕ ನವಲರಾಮನು "ತನ್ನ ಕಾಲದ ದಿವ್ಯಚೇತನ" ಎಂದು ಅವನನ್ನು ಉಲ್ಲೇಖಿಸಿದ್ದಾನೆ. ಇನ್ನೊಬ್ಬ ಉನ್ನತ ವಿದ್ವಾಂಸನಾದ ವಿಶ್ವನಾಥ ಭಟ್ಟನು ಅವನನ್ನು "ವೀರ ನರ್ಮದ" ಎಂದು ಸಂಬೋಧಿಸಿದ್ದಾನೆ. ಇನ್ನೊಬ್ಬ ಹಿರಿಯ ರೆನಸಿದ ರಾಮನಾರಾಯಣ ಪಾಠಕ ಅವರು ನರ್ಮದಾಶಂಕರನ ಲೇಖನದ ಒಂದು ಮುಖವನ್ನು ಕುರಿತು ಇಡಿಯ ಪುಸ್ತಕವೊಂದನ್ನು ಬರೆದಿದ್ದಾರೆ. ಪ್ರಸ್ತುತ ಲೇಖಕನು, ಈ ಮೊದಲು ಪ್ರಕಟಗೊಳಿಸಿರುವ ಸುಸಂದರ್ಭದಲ್ಲಿ ಬರೆದ ಒಂದು ಹೊತ್ತಗೆಯಲ್ಲಿ ಅವನನ್ನು "ಕವಿ–ರಾಷ್ಟ್ರಭಕ್ತ–ಪ್ರವರ್ತಕ–ಗದ್ಯಲೇಖಕ" ಎಂದು ನಿರ್ದೇಶಿಸಿದ್ದಾನೆ. ಗುಜರಾತೀ ಸಾಹಿತ್ಯದಲ್ಲಿ ಎಷ್ಟಾದರೂ ಹೆಸರುಗಳಿಸಿದ

ಯಾವುದೇ ವ್ಯಕ್ತಿಯು ಕಳೆದ ತೊಂಬತ್ತು ವರ್ಷಗಳಿಗಿಂತ ಹೆಚ್ಚಿನ ಕಾಲಾವಧಿಯಲ್ಲಿ ಹೇರಳವಾಗಿ ಬರೆದಿದ್ದು ಆ ಭಾಷೆಯಲ್ಲಿ ಒಬ್ಬನಾದರೂ ಒಂದಿಲ್ಲೊಂದು ಸಂದರ್ಭದಲ್ಲಿ ಅವನನ್ನು ಹೊಗಳಿ ಬರೆಯದೆ ಇಲ್ಲ. ಅದಷ್ಟೆ ಈಗ ಸಾಕಷ್ಟು ಪ್ರಶಂಸೆಯೆನಿಸುವ ಕಾರಣ ಆ ವಿಷಯವಾಗಿ ಇಲ್ಲಿ ಹೆಚ್ಚಿಗೆ ಬರೆಯಬೇಕಾಗಿಲ್ಲ; ನಮ್ಮ ಕವಿಗಳಲ್ಲಿ ಒಬ್ಬರು ಹೇಳುವಂತೆ "ವೀರ ನರ್ಮದ, ನೀನು ಈ ಜೀವನ-ಸಂಗ್ರಾಮದಲ್ಲಿ ವಿಜಯಿಯಾಗಿರುವೆ" ಎಂಬುದು ನಿಜ. ನರ್ಮದಾಶಂಕರನು ತನ್ನ ನಿರ್ಗಮನದ ವಿಷಯವಾಗಿ ಬರೆದ ತನ್ನ ಒಂದು ಕವನದಲ್ಲಿ "ನನಗಾಗಿ ಶೋಕಿಸುವದೇ. ಬೇಡ" ಎಂದು ತನ್ನ ಜನರನ್ನೇ ಕೇಳಿಕೊಂಡಿದ್ದಾನೆ.

ನಾವು ಅವನ ಆಣತಿಯನ್ನು ಮನ್ನಿಸಿ, ದುಃಖಿಸದೆ ನಮ್ಮ ಸಂತೋಷವನ್ನು ವ್ಯಕ್ತಗೊಳಿಸಿ ಇಂತಹ ವ್ಯಕ್ತಿಯೊಬ್ಬನು ನಮ್ಮ ಮಧ್ಯದಲ್ಲಿ ಬಾಳಿ, ನಮ್ಮ ಪವಿತ್ರ ಶಕ್ತಿಯೆಂದೂ ನಮ್ಮೆಲ್ಲರಿಗೂ ಉತ್ಕೃಷ್ಟವಾದ ಪ್ರೇರಣೆಯಾಗಲಿ ಎಂದೂ ಸಾಹಿತ್ಯ ಸೇವೆಯಲ್ಲಿ ತನ್ನ ಇಡಿಯ ಜೀವನವನ್ನು ಧಾರೆಯೆರೆದ ಬಗ್ಗೆ ಹೆಮ್ಮೆಪಡಬೇಕಾಗಿದೆ.

ನರ್ಮದಾಶಂಕರನು ೧೮೮೬ ರಲ್ಲಿ ನಿಧನ ಹೊಂದಿದನು. ೧೮೮೭ ರಲ್ಲಿ ಗುಜರಾತೀ ಸಾಹಿತ್ಯದಲ್ಲಿ ಯುಗಪ್ರವರ್ತಕ ಘಟನೆಗಳೆರಡು ಜರುಗಿದವು. ಅದರಲ್ಲಿ ಒಂದು ಗೋವರ್ಧನರಾಮ ತ್ರಿಪಾಠಿಯವರ ಅಮರ ಮಹಾಕೃತಿ 'ಸರಸ್ವತೀಚಂದ್ರ' ವಾಗಿದೆ; ಇನ್ನೊಂದು ನರಸಿಂಹರಾವ ದಿವೇಟಿಯಾ ಅವರ ಕವನಸಂಗ್ರಹ 'ಕುಸುಮ ಮಾಲಾ' ಎಂಬ ಪ್ರಕಟನೆಯಾಗಿದೆ. ಮೊದಲನೆಯದು ಗದ್ಯವಾಗಿದ್ದರೆ ಎರಡನೆಯದು ಪದ್ಯವಾಗಿದೆ. ಆಧುನಿಕ ಗುಜರಾತೀ ಸಾಹಿತ್ಯವು ಈ ಎರಡು ಗ್ರಂಥಗಳ ಪ್ರಕಾಶನಕ್ಕಾಗಿ ಅಪಾರವಾಗಿ ಋಣಿಯಾಗಿದೆ. ಈ ಎರಡು ಕೃತಿಗಳು ಅಥವಾ ಅದರಲ್ಲಿ ಒಂದು ಕೂಡ ಅವುಗಳ ಆಧುನಿಕ ರೂಪದಲ್ಲಿ ಪ್ರಕಟವಾಗುವದು, ಆ ಕ್ಷೇತ್ರದಲ್ಲಿ ಬುನಾದಿಯ ಭದ್ರಕಾರ್ಯವನ್ನು ಪ್ರವರ್ತಕನಾಗಿ ಕೈಕೊಂಡ ನರ್ಮದಾಶಂಕರನು ಇರದಿದ್ದರೆ ಸಾಧ್ಯವಾಗಬಹುದಿತ್ತೆ? ಇದಕ್ಕೆ ಉತ್ತರವನ್ನು ನಾವು ಅರಿಯೆವು; ಆದರೆ ಅವನ ಪ್ರಯತ್ನಗಳೇನೂ ನಿಷ್ಫಲವಾಗಲಿಲ್ಲ ಎಂದು ಮಾತ್ರ ನಾವು ಭಾವಿಸಿ ಮೇಲೆ ಕಾಣಿಸಿದ ಪಂಕ್ತಿಗಳಲ್ಲಿ ಅವನು "ನನಗಾಗಿ ದುಃಖಿಸುವದು ಬೇಡ" ಎಂಬ ಉಪದೇಶವನ್ನು ಶಿರಸಾ ವಹಿಸಿ ಸಂತೋಷಪಡುತ್ತೇವೆ. ಅವನು ಈ ತನ್ನ ಸಾಲನ್ನು ಶಿಲೆಯಲ್ಲಿ ಕೊರೆಯಿಸಬೇಕು ಎಂದು ಬಯಸಿದ್ದನು. ಅದನ್ನು ಹಾಗೆ ಕೊರೆಯಿಸಲಾಗಲಿಲ್ಲ ನಿಜ. ಆದರೆ ಅದು ಶಾಶ್ವತವಾಗಿ ಅವನ ದೇಶಬಾಂಧವರ ಹೃದಯಗಳಲ್ಲಿ ಕೆತ್ತಲಾಗಿದೆ.

# ಗ್ರಂಥ ಸೂಚಿ

## ನರ್ಮದಾಶಂಕರನ ಪುಸ್ತಕಗಳು

| ಕ್ರಮಾಂಕ | ವರ್ಷ | ಪ್ರಕಟನೆಯ ಹೆಸರು |
|---|---|---|
| ೧ | ೧೮೫೦–೫೧ | ಮಂಡಲಿ ಮಾಲವತಿ ತಥಾ ಲಾಭ |
| ೨ | ೧೮೫೬ | ವ್ಯಭಿಚಾರ ನಿಷೇಧಕ |
| ೩ | ೧೮೫೬ | ಮುವ ಪಛವಡೇ ರೋವಾ ಕುಟವಾನಿ ಫೇಲಾಯಿ |
| ೪ | ೧೮೫೬ | ಸ್ವದೇಶಾಭಿಮಾನ |
| ೫ | ೧೮೫೬ | ನಿರಾಶ್ರಿತ ಪ್ರತ್ಯೈ ಶ್ರೀಮಂತನಾ ಧರ್ಮ |
| ೬ | ೧೮೫೭ | ಪಿಂಗಳ ಪ್ರವೇಶ |
| ೭ | ೧೮೫೭ | ಸ್ತ್ರೀನಾ ಧರ್ಮ |
| ೮ | ೧೮೫೭ | ಗುರು ಅನೇ ಸ್ತ್ರೀ |
| ೯ | ೧೮೫೮ | ನರ್ಮಕವಿತಾ ೧–೨ |
| ೧೦ | ೧೮೫೮ | ಅಲಂಕಾರ ಪ್ರವೇಶ |
| ೧೧ | ೧೮೫೮ | ರಸ ಪ್ರವೇಶ |
| ೧೨ | ೧೮೫೮ | ಗರಿಭಾಯಿ ವಿಷೇ ಭಿಕಾರಿದಸನೊ ಸಂವಾದ |
| ೧೩ | ೧೮೫೮ | ಕವಿ ಅನೇ ಕವಿತಾ |
| ೧೪ | ೧೮೫೯ | ಸಂಪ |
| ೧೫ | ೧೮೫೯ | ವಿಷಯೀ ಗುರು |
| ೧೬ | ೧೮೫೯ | ಗುರೂನೀ ಸತ್ತಾ |
| ೧೭ | ೧೮೫೯ | ನರ್ಮಕವಿತಾ, ೩, ೪, ೫, ೬, ೭, ೮ |
| ೧೮ | ೧೮೬೦ | ನರ್ಮಕವಿತಾ, ೯, ೧೦ |
| ೧೯ | ೧೮೬೦ | ದಯಾರಾಮಕೃತ ಕಾವ್ಯಸಂಗ್ರಹ |
| ೨೦ | ೧೮೬೦ | ಪುನರ್ವಿವಾಹ |
| ೨೧ | ೧೮೫೦ | ಲಗ್ನ ತಥಾ ಪುನರ್ಲಗ್ನ |
| ೨೨ | ೧೮೬೦ | ಭಕ್ತಿ |
| ೨೩ | ೧೮೬೧ | ಸಾಕಾರ |
| ೨೪ | ೧೮೬೦ | ಮನಹರ ಪದ (ಮನೋಹರ ಸ್ವಾಮೀನಾ ಪದ) |
| ೨೫ | ೧೮೫೯–೬೩ | ತುಳಜಿ ವೈಧವ್ಯ ಚಿತ್ರ (ಸಂವಾದ ರೂಪದಲ್ಲಿ) |
| ೨೬ | ೧೮೬೧ | ನರ್ಮ ಕೋಶ – ೧ |
| ೨೭ | ೧೮೬೧ | ಋತುವರ್ಣನ |

| ಕ್ರಮಾಂಕ | ವರ್ಷ | ಪ್ರಕಟನೆಯ ಹೆಸರು |
|---|---|---|
| ೨೮ | ೧೮೬೨ | ನರ್ಮಕವಿತಾ–ಸಂ. ೧ (ಕಳೆದ ಏಳು ವರ್ಷಗಳ ಕವನಸಂಗ್ರಹ) |
| ೨೯ | ೧೮೬೨ | ನರ್ಮ ಕೋಶ–೧ |
| ೩೦ | ೧೮೬೩ | ನರ್ಮಕವಿತಾ–ಸಂ. ೨ |
| ೩೧ | ೧೮೬೪ | ಹಿಂದುವ್ಹೋನಿ ಪಡತಿ |
| ೩೨ | ೧೮೬೪ | ನರ್ಮಕವಿತಾ (ಸಮಗ್ರ ಸಂಪುಟ) |
| ೩೩ | ೧೮೬೪ | ದಂಡಿಯೊ (ಪತ್ರಿಕೆಯ ಆರಂಭ) |
| ೩೪ | ೧೮೬೪ | ನರ್ಮ ಕೋಶ – ೩ |
| ೩೫ | ೧೮೬೪ | ರನಮಾನ ಪಥಾ ಪಾಗಲನ ನ ಕರವಾ ವಿಷೇ |
| ೩೬ | ೧೮೬೫ | ನರ್ಮಗದ್ಯ |
| ೩೭ | ೧೮೬೫ | ಕವಿಚರಿತ್ರ |
| ೩೮ | ೧೮೬೫ | ದಯಾರಾಮಕೃತ ಕಾವ್ಯಸಂಗ್ರಹ |
| ೩೯ | ೧೯೬೫ | ನರ್ಮ ವ್ಯಾಕರಣ–ಸಂಪುಟ ೧ |
| ೪೦ | ೧೮೬೫ | ಸುರತನೀ ಮುಕ್ತೇಸರ ಹಕೀಕತ |
| ೪೧ | ೧೮೬೫ | ನರ್ಮ ವ್ಯಾಕರಣ–ಸಂಪುಟ ೨, ಭಾಗ ೧ |
| ೪೨ | ೧೮೬೫ | ನರ್ಮ ಕೋಶ – ೪ |
| ೪೩ | ೧೮೬೬ | ನಾಯಿಕಾ ವಿಷಯ ಪ್ರವೇಶ |
| ೪೪ | ೧೮೬೭ | ಮೇವಾಡಕಿನೀ ಹಕೀಕತ |
| ೪೫ | ೧೮೬೮ | ಸಜೀವಾರೋಪಣ |
| ೪೬ | ೧೮೬೮ | ಸ್ತ್ರೀ ಕೇಳವಣೀ |
| ೪೭ | ೧೮೬೯–೬೯ | ಗುಜರಾತಿಯೋನಿ ಸ್ಥಿತಿ |
| ೪೮ | ೧೮೬೮ | ಕೇಳವಣೀ ವಿಷೆ |
| ೪೯ | ೧೮೬೯ | ಕುಲ ಮೋಟಪ |
| ೫೦ | ೧೮೬೯ | ಉದ್ಯೋಗ ತಥಾ ವೃದ್ಧಿ |
| ೫೧ | ೧೮೬೯ | ಸುಖ |
| ೫೨ | ೧೮೭೦ | ರಾಮಾಯಣನೋ ಸಾರ |
| ೫೩ | ೧೮೭೦ | ಮಹಾಭಾರತನೋ ಸಾರ |
| ೫೪ | ೧೮೭೦ | ಇಲಿಯಡ್‌ನೋ ಸಾರ |
| ೫೫ | ೧೮೭೦ | ಮಹಾಪುರುಷೋನಾ ಚರಿತ್ರ |
| ೫೬ | ೧೮೭೦ | ನರ್ಮ ಕಥಾಕೋಶ |

| ಕ್ರಮಾಂಕ | ವರ್ಷ | ಪ್ರಕಟನೆಯ ಹೆಸರು |
|---|---|---|
| ೫೭ | ೧೮೭೦ | ನಾಗರ ಸ್ತ್ರೀಯೋಮಾ ಗವತನ ಗೀತ |
| ೫೮ | ೧೮೭೨ | ಪ್ರೇಮಾನಂದಕೃತ ದಶಮ ಸ್ಕಂಧ |
| ೫೯ | ೧೮೭೩ | ನರ್ಮ ಕೋಶ (ಸಂಪೂರ್ಣ) |
| ೬೦ | ೧೮೭೪ | ಮಹಾದರ್ಶನ (ಜಗತನಾ ಪ್ರಾಚೀನ ಇತಿಹಾಸನು ಸಮಗ್ರ ದರ್ಶನ) |
| ೬೧ | ೧೮೭೪ | ರಾಜ್ಯರಂಗ–೧ (ಜಗತನಾ ಪ್ರಾಚೀನ ತಥಾ ಅರ್ವಾಚೀನ ಇತಿಹಾಸ) |
| ೬೨ | ೧೮೭೫ | ಪ್ರೇಮಾನಂದಕೃತ ನಲಾಖ್ಯಾನ |
| ೬೩ | ೧೮೭೬ | ರಾಮ ಜಾನಕೀ ದರ್ಶನ |
| ೬೪ | ೧೮೭೮ | ಶ್ರೀ ದ್ರೌಪದೀ ದರ್ಶನ ನಾಟಕ |
| ೬೫ | ೧೮೭೯ | ಸೀತಾಹರಣ ನಾಟಕ (ಅಪ್ರಕಟಿತ) |
| ೬೬ | ೧೮೮೫ | ಶ್ರೀ ಸರ್ಶಕುಂತಲ |
| ೬೭ | ೧೮೮೩ | ಬಾಲಕೃಷ್ಣ ವಿಜಯ ನಾಟಕ |
| ೬೮ | ೧೮೮೬ | ಧರ್ಮವಿಚಾರ |
| ೬೯ | ೧೮೮೯ | ಕಾಠಿಯಾವಾಡ ಸರ್ವಸಂಗ್ರಹ |

## ದಿನಾಂಕ ಹಾಕದ ಗ್ರಂಥಗಳು

| | | |
|---|---|---|
| ೭೦ | | ರಾಜ್ಯರಂಗ–ಸಂಪುಟ ೨ |
| ೭೧ | | ಆರ್ಯದರ್ಶನ |
| ೭೨ | | ಕೃಷ್ಣಕುಮಾರಿ ನಾಟಕ |
| ೭೩ | | ಶ್ರೀಮದ್ ಭಗವದ್ಗೀತಾ |
| ೭೪ | | ಗುಜರಾತ ಸರ್ವಸಂಗ್ರಹ |
| ೭೫ | | ದೇಶ ವ್ಯಾವಹಾರ ವ್ಯವಸ್ಥ |
| ೭೬ | | “ಮಾರೀ ಹಕೀಕತ್” ಎಂಬ ಆತನ ಆತ್ಮ ಚರಿತ್ರೆಯು ಅವನಿಂದ ೧೮೬೬ ರಲ್ಲಿ ಪೂರ್ಣವಾಗಿದ್ದರೂ ಅವನ ಜನ್ಮಶತಾಬ್ದಿಯ ವರ್ಷವಾದ ೧೯೩೩ ರಲ್ಲಿ ಪ್ರಕಟವಾಯಿತು. |

## ನರ್ಮದಾಶಂಕರನ ಬಗ್ಗೆ ಪ್ರಕಟವಾದ ಕೆಲವು ಗ್ರಂಥಗಳು

**ಗುಜರಾತಿಯಲ್ಲಿ**

| ಕ್ರಮಾಂಕ | ಪುಸ್ತಕದ ಹೆಸರು | ಲೇಖಕ |
| --- | --- | --- |
| ೧ | ಕವಿಜೀವನ | ನವಲರಾಮ ಲಕ್ಷ್ಮೀರಾಮ |
| ೨ | ವೀರ ನರ್ಮದ | ವಿಶ್ವನಾಥ ಮಗನಲಾಲ ಭಟ್ಟ |
| ೩ | ನರ್ಮದ ಶತಾಬ್ದಿ ಗ್ರಂಥ | ಮುಂಬಯಿ ನರ್ಮದ ಶತಾಬ್ದಿ ಸಮಿತಿ |
| ೪ | ಕವಿ ನರ್ಮದ ಶತಾಬ್ದಿ ಸ್ಮಾರಕ ಚಿತ್ರಾವಲಿ | ಗುಜರಾತೀ ಸಾಹಿತ್ಯ ಪರಿಷದ |
| ೫ | ನರ್ಮದ ಅರ್ವಾಚಿನೋಮಾ ಆದ್ಯ | ಕೆ. ಎಂ. ಮುನಸಿ |
| ೬ | ನರ್ಮದಾಶಂಕರ ಕವಿ | ರಾಮನಾರಾಯಣ, ವಿ. ಪಾಠಕ |
| ೭ | ನರ್ಮದ-ಅರ್ವಾಚೀನ ಗದ್ಯ ಪದ್ಯಯಿ ಆದ್ಯ ಪ್ರಣೇತಾ | ಆನಿಪಾಠಕ |
| ೮ | ನವಯುಗನೊ ಪ್ರಹರಿ—ನರ್ಮದ | ಭೋಗೀಲಾಲ ಗಾಂಧಿ |

**ಇಂಗ್ಲಿಷ್‌ನಲ್ಲಿ :** ' ನರ್ಮದಾಶಂಕರ—ಕವಿ—ರಾಷ್ಟ್ರಭಕ್ತ—ಗದ್ಯಲೇಖಕ '
(ಗುಲಾಬದಾಸ ಬ್ರೋಕರ)

ಭಾರತೀಯ ಸಾಹಿತ್ಯದ ನಿರ್ಮಾಣಕಾರರು: ಈ ಪ್ರಬಂಧಗಳಲ್ಲಿ ಭಾರತದ ಪ್ರಾಚೀನ ಇಲ್ಲವೆ ಅರ್ವಾಚೀನ ಸಾಹಿತ್ಯದಲ್ಲಿಯ ಮಹತ್ವದ ಮೈಲುಗಲ್ಲುಗಳಿಗೆ ಕಾರಣಪುರುಷರಾಗಿರುವವರ ಪರಿಚಯವನ್ನು ಮಾಡಿಕೊಳ್ಳಲಾಗುವುದು.

ರಾಜಾರಾಮ ಮೋಹನರಾಯ: ಸೌಮ್ಯೇಂದ್ರನಾಥ ಟಾಗೋರ। ಕೇಶವ ಸುತರು: ಪ್ರಭಾಕರ ಮಾಚ್ವೆ। ಇಳಂಗೋ ಅಡಿಗಳ್: ಎಂ. ವರದರಾಜನ್। ಲಕ್ಷ್ಮೀನಾಥ ಬೇಜ್ ಬರುವಾ: ಹೇಮ ಬರೂವ। ಕಬೀರ: ಪ್ರಭಾಕರ ಮಾಚ್ವೆ। ತೋರುದತ್: ಪದ್ಮಿನೀ ಸೇನ್‌ಗುಪ್ತ। ಪ್ರೇಮಚಂದ್: ಪ್ರಕಾಶ ಚಂದ್ರಗುಪ್ತ। ವಿರೇಶಲಿಂಗಂ: ವಿ. ಆರ್. ನಾರ್ಲ। ವೇಮನ: ವಿ. ಆರ್. ನಾರ್ಲ। ಪೋತನ: ಡಿ. ವೆಂಕಟಾವಧಾನಿ। ಗಾಲಿಬ್: ಎಂ. ಮುಜೀಬ್। ಮೀರಾಬಾಯಿ: ಉಷಾ ನಿಲ್ಸನ್। ಷಾಲತೀಫ: ಕಲ್ಯಾಣ್ ಬಿ. ಅದ್ವಾನಿ। ಈಶ್ವರಚಂದ್ರ ವಿದ್ಯಾಸಾಗರ್: ಹಿರಣ್ಮಯ ಬ್ಯಾನರ್ಜಿ। ಚಂಡೀದಾಸ: ಸುಕುಮಾರ್‌ಸೇನ್। ಪ್ರಮಥ ಚೌಧರಿ: ಅ. ಮುಖ್ಯೋಪಾಧ್ಯಾಯ। ಭಾರತೇಂದು ಹರಿಶ್ಚಂದ್ರ: ಮದನ್ ಗೋಪಾಲ್। ಜೀವನಾನಂದ ದಾಸ್: ಚಿ. ದಾಸ್‌ಗುಪ್ತ। ಕುಮಾರನ್ ಆಶಾನ್: ಕೆ. ಎಂ. ಜಾರ್ಜ್। ಕಾಜೀನಜರುಲ್ ಇಸ್ಲಾಮ್: ಗೋ. ಹಾಲ್ದಾರ್। ನಜೀರ್ ಅಕಬರಾಬಾದಿ: ಮುಹಮ್ಮದ್ ಹಸನ್। ಕಂಬನ್: ಎಸ್. ಮಹಾರಾಜನ್। ಜಯದೇವ: ಸುನಿತ್ ಕುಮಾರ್ ಚಾಟರ್ಜಿ। ಚಂದು ಮೆನನ್: ಟಿ. ಸಿ. ಎಸ್. ಮೆನನ್। ಮಹರ್ಷಿ ದೇವೇಂದ್ರನಾಥ ಠಾಕೂರ್: ನಾ. ಚೌಧರಿ। ನಮ್ಮಾಳ್ವಾರ್: ಅ. ಶ್ರೀನಿವಾಸ ರಾಘವನ್। ಬಾಣ ಭಟ್ಟ: ಕೆ. ಕೃಷ್ಣಮೂರ್ತಿ। ನಾನಾಲಾಲ: ಯು. ಎಂ. ಮಣಿಯಾರ್। ಬಂಕಿಮಚಂದ್ರ ಚಟರ್ಜಿ: ಸುಬೋಧಚಂದ್ರ ಸೆನ್‌ಗುಪ್ತ। ಶ್ರೀ ಅರವಿಂದರು: ಮನೋಜ್‌ದಾಸ್। ಭಾರತಿ: ಪ್ರೇಮಾ ನಂದಕುಮಾರ್। ಮಾಣಿಕ್ಯ ವಾಚಕರು: ಜಿ. ವನ್ಮೀಕನಾಥನ್। ಫಕೀರ ಮೋಹನ ಸೇನಾಪತಿ: ಮಾಯಾಧರ್ ಮಾನ್‌ಸಿನ್ಹಾ। ಮಾಣಿಕ ವಂದ್ಯೋಪಾಧ್ಯಾಯ: ಸರೋಜ ಮೋಹನ ಮಿತ್ರ। ಸರೋಜಿನಿ ನಾಯಿಡು: ಪದ್ಮಿನಿ ಸೇನ್‌ಗುಪ್ತ। ಪುರಂದರ ದಾಸರು: ಡಾ. ಡಿ. ವರದರಾಜರಾವ್। ಭವಭೂತಿ: ಜಿ. ಕೆ. ಭಟ್। ಗೋವರ್ಧನ ರಾಮ: ರಮಣಲಾಲ್ ಜೋಷಿ। ಪಂಜೆ ಮಂಗೇಶರಾವ್: ವಿ. ಸೀತಾರಾಮಯ್ಯ। ಸರಳದಾಸ: ಕೃಷ್ಣಚಂದ್ರ ಪಾಣಿಗ್ರಾಹಿ.

(ಇವು ಕನ್ನಡದಲ್ಲಿಯೂ ದೊರೆಯುತ್ತವೆ)

117248
10.12.04

ನರ್ಮದಾಶಂಕರ ಲಾಲಶಂಕರ ದವೆ (೧೮೩೩-೧೮೮೬) ಅವರು ನರ್ಮದ ಎಂದು ಜನಪ್ರಿಯರಾಗಿದ್ದಾರೆ. ಅವರ ಸಾಹಿತ್ಯಿಕ ಕಾರ್ಯಕಲಾಪಗಳು ಸೃಜನಾತ್ಮಕ ಮತ್ತು ವಿಮರ್ಶಾತ್ಮಕ ಗದ್ಯ-ಪದ್ಯಗಳಲ್ಲಿ ಹೊಸ ಮತ್ತು ವಿವಿಧ ದಿಸೆಗಳಲ್ಲಿ ಹರಡಿಕೊಂಡಿವೆ.

ನರ್ಮದಾಶಂಕರರು ಸೂರತದಲ್ಲಿ ಹುಟ್ಟಿ ಅಲ್ಲಿಯೆ ಪ್ರಾಥಮಿಕ ಶಿಕ್ಷಣವನ್ನು ಮತ್ತು ಮುಂಬಯಿಯಲ್ಲಿ ಉಚ್ಚಶಿಕ್ಷಣವನ್ನು ಪಡೆದರು. ಸಾಮಾಜಿಕ ಸುಧಾರಣೆ ಗಳ ಆಂದೋಳನದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದರು. ಅವರು "ಬುದ್ಧಿವರ್ಧಕ–ಸಂಘ"ದ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಸಮಾಜ ಸುಧಾರಣೆಯ ಕಾರ್ಯದಲ್ಲಿ ಸಹಾಯಕ ಸಾಧನವೆಂದು ಅವರು ತಮ್ಮ ಸಾಹಿತ್ಯಕಾರ್ಯವನ್ನು ಆರಂಭಿಸಿದರು. ಅನಂತರ ಅವರು ಲೇಖನವನ್ನು ತಮ್ಮ ಪ್ರಮುಖ ವೃತ್ತಿಯೆಂದು ಕೈಗೊಳ್ಳುವಂತೆ ನಿರ್ಧರಿಸಿದರು.

ನರ್ಮದಾಶಂಕರರು ಗುಜರಾತೀ ಸಾಹಿತ್ಯದಲ್ಲಿ ಆಧುನಿಕ ಪದ್ಯ ಮತ್ತು ಗದ್ಯಗಳ ಜನಕರೆಂದು ಖ್ಯಾತರಾಗಿದ್ದಾರೆ. ಯಾಕೆಂದರೆ ಅವರ ಕಾವ್ಯ ಮತ್ತು ಗದ್ಯ ಕೃತಿಗಳಲ್ಲಿ ಆಧುನಿಕ ಪದ್ಯ ಮತ್ತು ಗದ್ಯ ರಚನೆಯ ಎಲ್ಲ ಲಕ್ಷಣಗಳೂ ಮೊದಲ ಬಾರಿಗೆ ವಿಪುಲವಾಗಿ ಕಂಡುಬರುತ್ತವೆ.

ಸುಪ್ರಸಿದ್ಧ ಗುಜರಾತೀ ಲೇಖಕರಾದ ಶ್ರೀ ಗುಲಾಬದಾಸ ಬ್ರೋಕರ್ ಅವರು ಈ ಪುಸ್ತಕದಲ್ಲಿ ನರ್ಮದಾಶಂಕರರ ಸಾಹಿತ್ಯ ಮತ್ತು ಜೀವನಗಳಿಗೆ ಸಂಬಂಧಿಸಿದ ಸಕಲ ಅಂಶಗಳನ್ನು ತಮ್ಮ ಪ್ರಭಾವಪೂರ್ಣ ರೀತಿಯಲ್ಲಿ ವಿವರಿಸಿದ್ದಾರೆ. ನರ್ಮದರ ಜೀವನ ಮತ್ತು ಗುಜರಾತೀ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಕಾಣಿಕೆಯ ಸ್ಫುಟವಾದ ಗಣನೆಯನ್ನು ಇಲ್ಲಿ ನೀಡಿದ್ದಾರೆ.

ಮುಖಪತ್ರ ರಚನೆ: ಸತ್ಯಜಿತ್ ರಾಯ್.

SAHITYA AKADEMI
REVISED PRICE Rs. 15-00

Library IIAS, Shimla
K 891.471 809 2 N 167 R
00117248

ಕಲಾಲಿಪಿ ಮತ್ತು ಚಿತ್ರ: ಸೌಜನ್ಯ: ರವಿಶಂಕರ್ ರಾವಲ್.